ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೂತನ ಪಕ್ಷ ಸ್ಥಾಪಿಸಿದ ಕೆಸಿಆರ್ ಪುತ್ರಿ ಕೆ.ಕವಿತಾ ೦೨

ಉಷ್ಣಾಂಶ ಏರಿಕೆ ಹಿನ್ನೆಲೆ ಐಎಂಡಿ ಮಾರ್ಗಸೂಚಿ ೦೨



ಮಂಗಳೂರು
ಭಾನುವಾರ, 26 ಏಪ್ರಿಲ್ 2026
ಸಂಪುಟ 48, ಸಂಚಿಕೆ 38, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com Hosadigantha Digital

ಸರ್ಕಾರದ ನಿರ್ಧಾರಕ್ಕೆ ಬಿಜೆಪಿ ಟೀಕೆ
ಒಳಮೀಸಲು: ಜಗಳ ಹಚ್ಚುವ ತೀರ್ಮಾನ

ಬೆಂಗಳೂರು: ಒಳಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ವಿಪಕ್ಷ ಬಿಜೆಪಿ ಟೀಕಿಸಿದ್ದು, ಸರ್ಕಾರದ ಈ ತೀರ್ಮಾನ ಒಳಜಾತಿಗಳ ನಡುವೆಯೇ ಜಗಳ ಹಚ್ಚುವ ತೀರ್ಮಾನವಾಗಿದೆ



ಎಂದು ಹರಿಹಾಯ್ದಿದೆ. ನ್ಯಾ. ನಾಗಮೋಹನ್ ದಾಸ್ ಹಾಗೂ ಮುಖ್ಯ ಕಾರ್ಯದರ್ಶಿ ನೀಡಿರುವ ವರದಿ ಅವೈಜ್ಞಾನಿಕ ಎಂದು ಒಪ್ಪಿಕೊಂಡಿದ್ದೀರಾ ಎಂದು ಬಿಜೆಪಿ ಮುಖಂಡರು ಪ್ರಶ್ನಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ನಾಯಕರು ಸರ್ಕಾರದ ತೀರ್ಮಾನವನ್ನು ಟೀಕಿಸಿದ್ದಾರೆ. ಸಿದ್ದರಾಮಯ್ಯ ಅವರೇ ನೀವೇ ನೇಮಿಸಿದ ನ್ಯಾ.ನಾಗಮೋಹನ್‌ದಾಸ್ ಅವರ ವರದಿ ಅವೈಜ್ಞಾನಿಕ ಎಂಬ ಕಾರಣಕ್ಕೆ ತಿರಸ್ಕರಿಸಿದ್ದೀರಾ ಎಂದು ಪ್ರಶ್ನಿಸಿರುವ ಸಂಸದ ಗೋವಿಂದ ಕಾರಜೋಳ ಅವರು, ನೀವೇ ರಚಿಸಿದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ವರದಿ ವೈಜ್ಞಾನಿಕ ಎಂದು ಒಪ್ಪಿಕೊಂಡಿದ್ದೀರಾ ಎಂದು ಸ್ಪಷ್ಟಪಡಿಸಲು ಒತ್ತಾಯಿಸಿದರು. ➡ಪುಟ ೪

ವರ್ಷಾರಂಭಕ್ಕೆ ಮೊದಲ ಮಾದರಿ
ಬುಲೆಟ್ ಬೋಗಿಗಳ ಉತ್ಪಾದನೆಗೆ ಚಾಲನೆ

ಬೆಂಗಳೂರು: ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ಐಸಿಎಫ್) ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಸಹಯೋಗದಲ್ಲಿ ಬುಲೆಟ್ ರೈಲು ಬಿ28 ಬೋಗಿಗಳನ್ನು ವಿನ್ಯಾಸಗೊಳಿಸಲಾಗುತ್ತಿದ್ದು, ಇದು



ಆತ್ಮನಿರ್ಭರ ಭಾರತದ ಸ್ವದೇಶಿ ಬುಲೆಟ್ ರೈಲು ಆಗಿರಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಬೆಂಗಳೂರಿನ ಬಿಇಎಂಎಲ್‌ನಲ್ಲಿ ನಿರ್ಮಿಸಲಾಗಿರುವ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರ ಉದ್ಘಾಟಿಸಿದ ಅವರು, ಬಿಇಎಂಎಲ್‌ನ ಆದಿತ್ಯ ಘಟಕದಲ್ಲಿ ಬುಲೆಟ್ ರೈಲು ಬಿ28 ಬೋಗಿಗಳ ಉತ್ಪಾದನೆ ನಡೆಯಲಿದೆ. ಮುಂದಿನ ವರ್ಷದ ಆರಂಭದಲ್ಲಿ ಮೊದಲ ಮಾದರಿ ನಿರೀಕ್ಷಿಸಲಾಗಿದ್ದು, 2027ರ ಅಂತ್ಯಕ್ಕೆ ಸಂಪೂರ್ಣವಾಗಿ ಸಿದ್ಧಗೊಳ್ಳಲಿದೆ ಎಂದರು. ಹೈಸ್ಪೀಡ್ ರೈಲುಗಳು ದೊಡ್ಡ ಪರಿವರ್ತನೆ ತರಲಿದ್ದು, ಈಗಾಗಲೇ ಘೋಷಣೆಯಾಗಿರುವ ಬೆಂಗಳೂರು-ಚೆನ್ನೈ ರೈಲು ಪ್ರಯಾಣದ ಸಮಯ ಕೇವಲ 73 ನಿಮಿಷವಾಗಿರಲಿದೆ. ➡ಪುಟ ೪

ಟೀಕಾಪ್ರಹಾರಗೈದ ಸ್ವಾತಿ ಮಲಿವಾಲ್
ಹರಿದ ಪ್ಯಾಂಟ್‌ನ ಕೇಜ್ರಿ 100 ಕೋಟಿ ಒಡೆಯ!

ಹೊಸದಿಲ್ಲಿ: ಒಂದು ಕಾಲದಲ್ಲಿ ಹರಿದ ಪ್ಯಾಂಟ್ ಧರಿಸುತ್ತಿದ್ದ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್, ಮುಖ್ಯಮಂತ್ರಿಯಾದ ನಂತರ 100 ಕೋಟಿ ರೂ. ಮೌಲ್ಯದ ಶೀಶ್‌ಮಹಲ್ ಕಟ್ಟಿದರು ಎಂದು ಶುಕ್ರವಾರ ಆಪ್‌ನ ಇತರ ಆರು ಸಂಸದರೊಂದಿಗೆ ಬಿಜೆಪಿ ಸೇರಿರುವ ಆಪ್‌ನ ಮಾಜಿ ಸಂಸದೆ ಸ್ವಾತಿ



ಮಲಿವಾಲ್ ಆರೋಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಗುಣಗಾನ ಮಾಡಿರುವ ಸಂಸದೆ, ತಾನು ಸ್ವಯಂಪ್ರೇರಣೆಯಿಂದ ಬಿಜೆಪಿ ಸೇರಲು ನಿರ್ಧರಿಸಿದೆ. ರಚನಾತ್ಮಕ ರಾಜನೀತಿ ಬಯಸುವ ಪ್ರತಿಯೊಬ್ಬರಿಗೂ ಬಿಜೆಪಿ ಸೂಕ್ತ ಪಕ್ಷವೆಂದು ಹೊಗಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಪ್ರತಿ ನಿರ್ಧಾರವೂ ಚಾರಿತ್ರಿಕ. ಮೋದಿಯವರ ನಾಯಕತ್ವದಲ್ಲಿ ತನಗೆ ತುಂಬು ನಂಬಿಕೆ ಮತ್ತು ತಾನು ಬಿಜೆಪಿ ಸೇರಲು ಕೂಡ ಇದೇ ಪ್ರೇರಣೆಯೇ ವಿನಾ ಯಾರ ಒತ್ತಡದಿಂದಲ್ಲ. ➡ಪುಟ ೪

ಸೋಲಿಗೆ ಕೇಜ್ರಿ, ಬಂಗಲೆ ಕಾರಣ! ಪುಟ ೨

ಸ್ಥಳೀಯ ಸಂಸ್ಥೆ ಚುನಾವಣೆಗೆ ಅನ್ವಯ
ಪ್ರಮಾಣಪತ್ರ ಸಲ್ಲಿಕೆ ಅಭ್ಯರ್ಥಿಗೆ ಕಡ್ಡಾಯ

ಅರವಿಂದ ಬಿರಾದಾರ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇನ್ನು ಮುಂದೆ ನಾಮಪತ್ರ ಜತೆಗೆ ಪ್ರಮಾಣಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದ್ದು,



ಪ್ರಮುಖವಾಗಿ ಪ್ರಮಾಣಪತ್ರವು ಪ್ರಥಮ ದರ್ಜೆ ನ್ಯಾಯಾಧೀಶರು, ನೋಟರಿ, ಉಪ ವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್ ಅವರ ಸಹಿ ಹಾಗೂ ಮೊಹರುಗಳನ್ನು ಒಳಗೊಂಡಿರಬೇಕು ಎಂದು ಆದೇಶಿಸಿದೆ. ರಾಜ್ಯ ಚುನಾವಣಾ ಆಯೋಗ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಪಟ್ಟಂತೆ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣಪತ್ರದಲ್ಲಿ ಕೆಲವು ಆಮೂಲಾಗ್ರ ಬದಲಾವಣೆ ಹಾಗೂ ಕೆಲವು ಅಂಶಗಳನ್ನು ಸೇರ್ಪಡೆ ಮಾಡಿ ಆದೇಶಿಸಿದೆ. ಯಾವುದೇ ಶಾಸನಬದ್ಧ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಅಡಿಯಲ್ಲಿ ನಾನು ಅನರ್ಹಗೊಂಡಿಲ್ಲ ಅಥವಾ ಅನರ್ಹಗೊಂಡಿದ್ದು, ಅನರ್ಹತಾ ಅವಧಿಯೂ ಪೂರ್ಣಗೊಂಡಿರುತ್ತದೆ ಎನ್ನುವ ಅಂಶಗಳನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸಲು ಸೂಚಿಸಿದೆ. ➡ಪುಟ ೪

ಐತಿಹಾಸಿಕ ದಾಖಲೆ ಬರೆದ ಕನ್ನಡಿಗ

ದಿಲ್ಲಿಯಲ್ಲಿ ರಾಹುಲ್ ದರ್ಬಾರ್



ಐಪಿಎಲ್ ಇತಿಹಾಸದಲ್ಲಿ ಎಂದೂ ಮರೆಯಲಾಗದ ದಾಖಲೆಗಳನ್ನು ಕನ್ನಡಿಗ ಕೆ.ಎಲ್. ರಾಹುಲ್ ಮಾಡಿದರು. ಪಂಜಾಬ್ ಕಿಂಗ್ಸ್ ಹಾಗೂ ದಿಲ್ಲಿ ಕ್ಯಾಪಿಟಲ್ಸ್ ನಡುವೆ ನಡೆದ ಪಂದ್ಯದಲ್ಲಿ ದಿಲ್ಲಿ ಮೊದಲು ಬ್ಯಾಟಿಂಗ್ ಮಾಡಿತು. ಅಲ್ಲಿ ಆರಂಭಿಕ ರಾಹುಲ್ 67 ಬಾಲ್‌ಗಳಲ್ಲಿ 152* ರನ್ ಗಳಿಸಿದರು. ಈ ಇನ್ನಿಂಗ್ಸ್‌ನಲ್ಲಿ 16 ಬೌಂಡರಿ 9 ಸಿಕ್ಸರ್ ಸೇರಿವೆ.

- ಟಿ20ಯಲ್ಲಿ ಭಾರತೀಯನಿಂದ ಅತಿ ಹೆಚ್ಚು ರನ್(ಒಂದೇ ಇನ್ನಿಂಗ್ಸ್‌ನಲ್ಲಿ)
- ಐಪಿಎಲ್‌ನ 3ನೇ ಅತಿ ಹೆಚ್ಚು ವೈಯಕ್ತಿಕ ರನ್
- 150 ರನ್ ದಾಟಿದ ಮೂರನೇ ಬ್ಯಾಟರ್
- ಟಿ20ಯಲ್ಲಿ 150ಕ್ಕೂ ಅಧಿಕ ರನ್ ಬಾರಿಸಿದ ಮೊದಲ ಬ್ಯಾಟರ್

ವಿವರ ಕ್ರೀಡಾಪುಟ

ಶಾಂತಿ ಸಭೆ ಅನಿಶ್ಚಿತತೆ ಕುರಿತು ಸಭೆ
ಅರಾಘ್ಚಿ-ಷರೀಫ್ ಶಾಂತಿಗಾಗಿ ಚರ್ಚೆ

ಇಸ್ಲಾಮಾಬಾದ್: ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶನಿವಾರ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್‌ರನ್ನು ಭೇಟಿಯಾಗಿ ಅಮೆರಿಕ ಜತೆಗಿನ ದ್ವಿತೀಯ ಸುತ್ತಿನ ಶಾಂತಿ ಮಾತುಕತೆ ಅನಿಶ್ಚಿತತೆ ಬಗ್ಗೆ ಚರ್ಚೆ ನಡೆಸಿದ್ದಾರೆ. ಈ ಸಭೆಯಲ್ಲಿ ಪಾಕ್ ಉಪಪ್ರಧಾನಿ ಇಶಾಕ್ ದಾರ್



ಮತ್ತು ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಸಹ ಇದ್ದರು.

ಪಾಕ್ ಪ್ರಧಾನಿ ಭೇಟಿಗೂ ಮುನ್ನ ಆಸಿಮ್ ಮುನೀರ್ ಮತ್ತು ಇಶಾಕ್ ದಾರ್ ಅವರನ್ನು ಅರಾಘ್ಚಿ ಭೇಟಿಯಾಗಿದ್ದರು. ಸಭೆಯಲ್ಲಿ ಇರಾನ್-ಪಾಕ್ ನಡುವಿನ ದ್ವಿಪಕ್ಷೀಯ ಸಂಬಂಧ ಹಾಗೂ ಮಧ್ಯಪ್ರಾಚ್ಯ ಪ್ರಾದೇಶಿಕ ಅಸ್ಥಿರತೆಯ ಕುರಿತು ಚರ್ಚೆ ನಡೆಸಲಾಗಿದೆ.

ಶಾಂತಿ ಸಭೆ ಕುರಿತು ಚರ್ಚೆ: ಅಮೆರಿಕದೊಂದಿಗಿನ ಶಾಂತಿ ಮಾತುಕತೆಗಳ ಕುರಿತಾಗಿ ಪಾಕ್ ಸೇನಾ ಮುಖ್ಯಸ್ಥ ಮುನೀರ್‌ರೊಂದಿಗೆ ಇರಾನ್ ವಿದೇಶಾಂಗ ಸಚಿವ ಅರಾಘ್ಚಿ ಚರ್ಚಿಸಿದ್ದಾರೆ. ➡ಪುಟ ೪

ಬಿಜೆಪಿ ಆರೋಪ ಬೆಂಬಲಿಸಿದ ಚಡ್ಡಾ
ಸೋಲಿಗೆ ಕೇಜ್ರಿ ಬಂಗಲೆ ಕಾರಣ!

ಹೊಸದಿಲ್ಲಿ: ರಾಜಧಾನಿಯಲ್ಲಿ ಎರಡನೇ ಶೀಶ್ ಮಹಲ್ ಪತ್ತೆಯಾಗಿರುವುದೇ ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಆಪ್) ಸೋಲಿಗೆ ಪ್ರಮುಖ ಕಾರಣವೆಂದು ಆಪ್ ತೊರೆದು 6 ಸಂಸದರ ಜತೆ ಬಿಜೆಪಿ ಸೇರಿದ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಆರೋಪಿಸಿದ್ದಾರೆ.

ಕಾಮನ್ ಮ್ಯಾನ್ ವ್ಯಕ್ತಿತ್ವವನ್ನು ತೋರಿಸಿಕೊಳ್ಳುವ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಲೋದಿ ಎಸ್ಟೇಟ್‌ನಲ್ಲಿರುವ ಅಧಿಕೃತ ನಿವಾಸವನ್ನು ಐಷಾರಾಮಿಯಾಗಿ ನವೀಕರಣ ಮಾಡಿಸಿಕೊಂಡಿದ್ದಾರೆ. ಅಲ್ಲದೆ, ಈ ನವೀಕರಣಕ್ಕಾಗಿ



ಸಾರ್ವಜನಿಕರ ಹಣ ಬಳಸಲಾಗಿದೆ ಎಂದು ದಿಲ್ಲಿ ಉಪ ಮುಖ್ಯಮಂತ್ರಿ ಮತ್ತು ಬಿಜೆಪಿ ನಾಯಕ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ ಇತ್ತೀಚೆಗೆ ಆರೋಪಿಸಿದ್ದರು. ಬಿಜೆಪಿ ಗಂಭೀರ ಆರೋಪದ ಬಳಿಕ ರಾಘವ್ ಚಡ್ಡಾ ಆರೋಪ ಮಾಡಿದ್ದಾರೆ.

ಆಪ್‌ನಲ್ಲಿ ಆತ್ಮಾವಲೋಕನೆ ಅಗತ್ಯ: ದಿಲ್ಲಿಯಲ್ಲಿ ಶೀಶ್ ಮಹಲ್ 2 ಬೆಳಕಿಗೆ ಬಂದಿದೆ. ಕೆಲವು ಚಿತ್ರಗಳು ಹರಿದಾಡುತ್ತಿವೆ. ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಸೋಲಿಗೆ ಇದೇ ಪ್ರಮುಖವಾದ ಕಾರಣ ಎಂದು ರಾಘವ್ ಚಡ್ಡಾ ಆರೋಪಿಸಿದ್ದಾರೆ. ಕೇಜ್ರಿವಾಲ್ ವಿರುದ್ಧದ ಬಿಜೆಪಿ ಆರೋಪವನ್ನು ಸಂಪೂರ್ಣ ಬೆಂಬಲಿಸಿದ ಚಡ್ಡಾ, ಚುನಾವಣೆ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರು ಹೇಗೆ ಪ್ರತಿಕ್ರಿಯಸಬೇಕು? ಪಕ್ಷ ಆತ್ಮಾವಲೋಕನೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಚಡ್ಡಾ ಹೇಳಿದ್ದಾರೆ.

ಚುನಾವಣಾ ಸಮಯದಲ್ಲಿ ಪಕ್ಷದ, ಪಕ್ಷದ ಅಗ್ರಗಣ್ಯ ನಾಯಕನ ಮೇಲೆ ಇಂತಹ ಆರೋಪಗಳು ಬಂದಾಗ ಪಕ್ಷದಲ್ಲಿರುವ ಕೆಲವು ಪ್ರಾಮಾಣಿಕ ಕಾರ್ಯಕರ್ತರು ಬೀದಿಯಲ್ಲಿ ಪ್ರಚಾರಕ್ಕೆ ತೆರಳುವಾಗ ಸಾರ್ವಜನಿಕರ ಪ್ರಶ್ನೆಗಳಿಗೆ ಹೇಗೆ ಪ್ರತಿಕ್ರಿಯೆ ನೀಡುವುದು ಸಾಧ್ಯ? ಆಮ್ ಆದ್ಮಿ ಪಕ್ಷದಲ್ಲಿ ಆತ್ಮಾವಲೋಕನೆಯ ಅವಶ್ಯಕತೆ ಇದೆ ಎಂದು ಚಡ್ಡಾ ಕಡ್ಡಿ ಮುರಿದಂತೆ ಹೇಳಿದ್ದಾರೆ.



ಶೀಶ್ ಮಹಲ್ 2 ಫೋಟೋ ಬಿಡುಗಡೆ

ಭಾರತೀಯ ಜನತಾ ಪಕ್ಷ (ಬಿಜೆಪಿ) ಶನಿವಾರ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಸಾರ್ವಜನಿಕರ ಹಣದಿಂದ ಅರಮನೆಯಂತಹ ದೊಡ್ಡ ಮನೆ ಕಟ್ಟಿಸಿಕೊಂಡ ಗಂಭೀರ ಆರೋಪ ಮಾಡಿದ್ದು, ಇದನ್ನು ಶೀಶ್ ಮಹಲ್ 2ನೇ ಭಾಗ ಎಂದು ಹೇಳಿದೆ. ಪಂಜಾಬ್‌ನಲ್ಲಿ ಈ ಹಿಂದೆ ಇಂತಹದ್ದೇ ಶೀಶ್ ಮಹಲ್ ಕೇಜ್ರಿವಾಲ್ ಪಡೆದುಕೊಂಡಿದ್ದರು. ಪತ್ರಿಕಾಗೋಷ್ಠಿ ಕರೆದಿದ್ದ ಪರ್ವೇಶ್, ಶೀಶ್ ಮಹಲ್ 2 ಐಷಾರಾಮಿ ಬಂಗಲೆಯ ಚಿತ್ರಗಳನ್ನು ಬಿಡುಗಡೆಗೊಳಿಸಿದರು.

ಧುರಂಧರ್ ಸಿನಿಮಾ 2ನೇ ಭಾಗ ಬಿಡುಗಡೆಯಾದಂತೆ ಶೀಶ್ ಮಹಲ್ 2ನೇ ಭಾಗವನ್ನೂ ಬಿಡುಗಡೆ ಮಾಡಿದ್ದೇವೆ. ಹೀಗಾಗಿ ಕೇಜ್ರಿವಾಲ್ ಅವರನ್ನು ದಿಲ್ಲಿಯ ರೆಹಮಾನ್ ಡಕಾಯಿತ್ ಹಿಂದಿ ಸಿನಿಮಾ ಹೆಸರಿನಿಂದ ಕರೆಯಬಹುದು. ಹಳೆಯ ಶೀಶ್ ಮಹಲನ್ನು ಇನ್ನಷ್ಟು ಐಷಾರಾಮಿಯಾಗಿ ನವೀಕರಣ ಮಾಡಿದ್ದಾರೆ. ಮೂಲ ಶೀಶ್ ಮಹಲನ್ನು ನಗರವೇ ಕೋವಿಡ್ ವಿರುದ್ಧ ಹೋರಾಡುತ್ತಿದ್ದಾಗ, ದಿಲ್ಲಿ ಜನರು ಔಷಧ ಕೇಳುತ್ತಲೇ ಸಾಯುತ್ತಿದ್ದಾಗ ಕೇಜ್ರಿ ಅರಮನೆ ಕಟ್ಟಿದ್ದಾರೆ.

■ **ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ,** ದಿಲ್ಲಿ ಉಪ ಮುಖ್ಯಮಂತ್ರಿ

ದೇಗುಲಗಳು ಸರ್ಕಾರದ ಸುಪರ್ದಿಗೆ ಸುಪ್ರೀಂ ನಿಲುವೇನು?

ಧಾರ್ಮಿಕ ಸಂಸ್ಥೆಗಳನ್ನು ಸರ್ಕಾರ ನೇರವಾಗಿ ನಿರ್ವಹಿಸಬಾರದು ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸಿರುವ ಕೇಂದ್ರ ಸರ್ಕಾರ, ದೇವಾಲಯಗಳ ಮೇಲೆ ಸರ್ಕಾರ ಹತೋಟಿ ಹೊಂದಿರುವುದನ್ನು ತಾನು ಬೆಂಬಲಿಸುವುದಿಲ್ಲ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಜಾತ್ಯತೀತ ನಿರ್ವಹಣೆ ಮತ್ತು ಧಾರ್ಮಿಕ ಸ್ವಾಯತ್ತತೆಯ ನಡುವೆ ಕಟ್ಟುನಿಟ್ಟಾದ ವ್ಯತ್ಯಾಸವಿರಬೇಕು ಎಂದ ಸುಪ್ರೀಂ



ಕೇಂದ್ರ ಸರ್ಕಾರದ ನಿಲುವು ಏನು?

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ನ್ಯಾಯಾಧೀಶರ ಸಂವಿಧಾನ ಪೀಠದ ಮುಂದೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಈ ವಿಷಯ ಮಂಡಿಸಿದರು. ಶಬರಿ ಮಲೆ ದೇವಾಲಯ ಕುರಿತ ಮರುಪರಿಶೀಲನಾ ಅರ್ಜಿಗಳಿಂದ ಉದ್ಭವಿಸಿದ ಸಂವಿಧಾನದ 25 ಮತ್ತು 26 ನೇ ವಿಧಿಗಳ ವಿಸ್ತಾರದ ಕುರಿತ ಗೊಂದಲವನ್ನು, ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯನ್ನು ಈ ಪೀಠ ಪರಿಶೀಲಿಸುತ್ತಿದೆ. ಜಾತ್ಯತೀತ ನಿರ್ವಹಣೆ ಮತ್ತು ಧಾರ್ಮಿಕ ಸ್ವಾಯತ್ತತೆಯ ನಡುವೆ ಕಟ್ಟು ನಿಟ್ಟಾದ ವ್ಯತ್ಯಾಸವಿರಬೇಕು ಎಂದು ಕೇಂದ್ರದ ನಿಲುವು ಪ್ರತಿಪಾದಿಸಿದೆ. 25(2) ನೇ ವಿಧಿ, ಹಣಕಾಸಿನಂತಹ ಜಾತ್ಯತೀತ ಅಂಶಗಳನ್ನು ನಿಯಂತ್ರಿಸಲು ರಾಜ್ಯಕ್ಕೆ ಅವಕಾಶ ನೀಡಿದರೂ, ಇದು ದೇವಾಲಯಗಳ ಶಾಶ್ವತ ಸರ್ಕಾರಿ ಸ್ವಾಧೀನಕ್ಕೆ ದಾರಿಯಾಗಬಾರದು. ಹಿಂದು ಧರ್ಮ ಹಲವು ಅನನ್ಯತೆ ಮತ್ತು ಬಹುತ್ವ ಹೊಂದಿದೆ. ಹೊಸ ನಿಯಮಗಳನ್ನು ಬಲವಂತವಾಗಿ ಹೇರಬಾರದು, ಎಂದು ಕೇಂದ್ರ ಸರ್ಕಾರ ವಾದಿಸಿದೆ. ಸಂವಿಧಾನಾತ್ಮಕ ವ್ಯಾಖ್ಯಾನಗಳು ಎಲ್ಲಾ ಧರ್ಮಗಳಿಗೂ ಸಮಾನವಾಗಿರಬೇಕು ಎಂದು ಸಾಲಿಸಿಟರ್ ಜನರಲ್ ಒತ್ತಿಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಅವಲೋಕನ

ಧಾರ್ಮಿಕ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಅಪಾಯಗಳ ಬಗ್ಗೆ ಒಂಬತ್ತು ನ್ಯಾಯಾಧೀಶರ ಪೀಠ ಕಳವಳ ವ್ಯಕ್ತಪಡಿಸಿದೆ. ನಿರ್ದಿಷ್ಟ ಪಂಗಡಗಳಿಂದ ಇತರರನ್ನು ಹೊರಗಿಡುವ ಸಂಪೂರ್ಣ ಅಧಿಕಾರ ನೀಡಿದರೆ, ಅದು ಸಮಾಜವನ್ನು ವಿಭಜಿಸಬಹುದು ಮತ್ತು ಹಿಂದು ಧರ್ಮದ ಅಂತರ್ಗತ ಸ್ವರೂಪದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂದು ನ್ಯಾಯಾಲಯ ಎಚ್ಚರಿಸಿದೆ. ಪ್ರತಿಯೊಬ್ಬರಿಗೂ ಪ್ರತಿ ದೇವಾಲಯ ಮತ್ತು ಮಠಕ್ಕೆ ಪ್ರವೇಶ ಇರಬೇಕು ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಗಮನಿಸಿದರು. ಸಾಮಾಜಿಕ ಸುಧಾರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ತಾರತಮ್ಯವನ್ನು ತಡೆಯಲು 25(2) (ಬಿ) ವಿಧಿಯಲ್ಲಿ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬಹುದು ಎಂದು ಅವರು ತಿಳಿಸಿದ್ದಾರೆ. ದೇವಾಲಯದ ಹಣ ದೇವರಿಗೆ ಸೇರಿದ್ದು ಮತ್ತು ಅದನ್ನು ದೇವಾಲಯದ ಹಿತಾಸಕ್ತಿಗಳಿಗಾಗಿ ಮಾತ್ರ ಬಳಸಬೇಕು ಎಂದು ನ್ಯಾಯಾಲಯ ಈ ಹಿಂದಿನ ತೀರ್ಪುಗಳ ನಿಲುವನ್ನು ಕಾಯ್ದುಕೊಂಡಿದೆ.

ದೇವಾಲಯಗಳ ಒಳಹೊರಗು

- **ಕೇಂದ್ರದ ವಿರೋಧ:** ಧಾರ್ಮಿಕ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿ ಬೇಡ.
- **ನ್ಯಾಯಾಲಯದ ಕಳವಳ:** ಸಂಪೂರ್ಣ ಸ್ವಾತಂತ್ರ್ಯ ಸಮಾಜವನ್ನು ವಿಭಜಿಸಬಹುದು.
- **ಸಾಂವಿಧಾನಿಕ ನಿಯಮ:** ಆರ್ಥಿಕ ನಿಯಂತ್ರಣಕ್ಕೆ ಅವಕಾಶವಿದೆ, ಆಚರಣೆಗಳಿಗಲ್ಲ.
- **ಸಮಾನ ಪ್ರವೇಶ:** ಎಲ್ಲರಿಗೂ ದೇವಾಲಯ ಪ್ರವೇಶವಿರಬೇಕು ಎಂದ ನ್ಯಾಯಾಲಯ
- **ನಿಧಿ ಬಳಕೆ:** ದೇವಾಲಯದ ಹಣ ದೇವರಿಗೆ ಮತ್ತು ದೇವಾಲಯದ ಅಭಿವೃದ್ಧಿಗೆ ಮಾತ್ರ.

ಸಾಂವಿಧಾನಿಕ ಮತ್ತು ಕಾನೂನು ಚೌಕಟ್ಟು

ಸಂವಿಧಾನದ 25(2) ನೇ ವಿಧಿ, ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಆರ್ಥಿಕ ಮತ್ತು ಜಾತ್ಯತೀತ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. 26ನೇ ವಿಧಿ, ಧಾರ್ಮಿಕ ಪಂಗಡಗಳಿಗೆ ತಮ್ಮದೇ ಆದ ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಹಕ್ಕನ್ನು ನೀಡುತ್ತದೆ. 1954 ರ ಶಿರೂರು ಮಠದ ಪ್ರಕರಣದಲ್ಲಿ, ರಾಜ್ಯ ಜಾತ್ಯತೀತ ಅಂಶಗಳನ್ನು ನಿಯಂತ್ರಿಸಬಹುದಾದರೂ ಧಾರ್ಮಿಕ ವಿಧಿವಿಧಾನಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. 2014 ರ ಚಿದಂಬರಂ ನಟರಾಜ ದೇವಾಲಯದ ಪ್ರಕರಣದಲ್ಲಿ, ದುರ್ಬಳಕೆ ಸರಿಪಡಿಸಲು ಸರ್ಕಾರಿ ಸ್ವಾಧೀನ ಸೀಮಿತ ಅವಧಿಗೆ ಮಾತ್ರ ಇರಬೇಕು ಎಂದು ನ್ಯಾಯಾಲಯ ಒತ್ತಿಹೇಳಿತ್ತು.

ಸುದ್ದಿ ಸಮಗ್ರ

ಪ್ರಸ್ತುತ ಆಡಳಿತಾತ್ಮಕ ಪರಿಸ್ಥಿತಿ



ಭಾರತದಾದ್ಯಂತ ದೇವಾಲಯದ ಆಡಳಿತದಲ್ಲಿ ಸರ್ಕಾರದ ವ್ಯಾಪಕ ಭಾಗವಹಿಸುವಿಕೆಯ ಹಿನ್ನೆಲೆಯಲ್ಲಿ ಈ ಚರ್ಚೆ ನಡೆಯುತ್ತಿದೆ. ತಮಿಳುನಾಡಿನಲ್ಲಿ ಹಿಂದು ಧಾರ್ಮಿಕ ಮತ್ತು ದತ್ತಿ (ಎಚ್‌ಆರ್ ಮತ್ತು ಸಿಇ) ಇಲಾಖೆ, 30,000 ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ವಹಿಸುತ್ತಿದೆ. ಕೇರಳದಲ್ಲಿ ಸುಮಾರು 3,000 ದೇವಾಲಯಗಳು ರಾಜ್ಯದ ಮೇಲ್ವಿಚಾರಣೆಯ ದೇವಸ್ವಂ ಮಂಡಳಿಗಳ ಅಡಿಯಲ್ಲಿವೆ. ಆಂಧ್ರಪ್ರದೇಶದಲ್ಲಿ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಮಂಡಳಿ, ರಾಜ್ಯದ ಮೇಲ್ವಿಚಾರಣೆಯಲ್ಲಿ ಬಾಲಾಜಿ ದೇವಾಲಯವನ್ನು ನಿರ್ವಹಿಸುತ್ತದೆ.

ಪರ ಮತ್ತು ವಿರೋಧ ವಾದಗಳು

ಸರ್ಕಾರಿ ಮೇಲ್ವಿಚಾರಣೆಯ ಪರವಾಗಿರುವವರು, ಇದು ಉತ್ತರದಾಯಿತ್ವ ಮತ್ತು ಸಾಮಾಜಿಕ ಸಮಾನತೆಯನ್ನು ಖಚಿತಪಡಿಸುತ್ತದೆ ಎಂದು ವಾದಿಸಿದ್ದಾರೆ. ಎಲ್ಲಾ ಜಾತಿಗಳಿಗೂ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಮತ್ತು ವಂಶಪಾರಂಪರ್ಯ ಅರ್ಚಕತ್ವವನ್ನು ಪ್ರಶ್ನಿಸಲು ಸರ್ಕಾರದ ಹಸ್ತಕ್ಷೇಪ ಮುಖ್ಯವಾಗುತ್ತದೆ ಎನ್ನುತ್ತಾರೆ. ಮತ್ತೊಂದೆಡೆ, ಈ ವ್ಯವಸ್ಥೆಯನ್ನು ಟೀಕಿಸುವವರು, ಪ್ರಸ್ತುತ ವ್ಯವಸ್ಥೆ ತಾರತಮ್ಯದಿಂದ ಕೂಡಿದೆ, ಎಂದು ಅಭಿಪ್ರಾಯಪಟ್ಟಿದ್ದಾರೆ. ಮಸೀದಿ ಮತ್ತು ಚರ್ಚ್‌ಗಳು ಸ್ವಯಂ-ನಿರ್ವಹಣೆಯಲ್ಲಿದ್ದರೆ, ಹಿಂದು ದೇವಾಲಯಗಳು ಮಾತ್ರ ಸರಕಾರಿ ನಿಯಂತ್ರಣಕ್ಕೆ ಒಳಪಟ್ಟಿವೆ ಎಂಬುದು ಅವರ ಅಭಿಪ್ರಾಯ. ದೇವಾಲಯದ ಆದಾಯವನ್ನು ಧಾರ್ಮಿಕೇತರ ಸರ್ಕಾರಿ ಯೋಜನೆಗಳಿಗೆ ಬಳಸುವುದನ್ನು ಭಕ್ತರು ವಿರೋಧಿಸಿದ್ದಾರೆ.

ಮುಂದಿನ ಹಾದಿ ಏನು?

ಧಾರ್ಮಿಕ ಮುಖಂಡರು ಮತ್ತು ತಜ್ಞರನ್ನೊಳಗೊಂಡ ಸ್ವತಂತ್ರ ಟ್ರಸ್ಟ್‌ಗಳನ್ನು ರಚಿಸುವುದು ಒಂದು ಪರಿಹಾರ ಎನಿಸಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೇರಳದ ದೇವಸ್ವಂ ಮಾದರಿಯನ್ನು ಸುಧಾರಿಸಿ, ಪಾರದರ್ಶಕತೆ ಹೆಚ್ಚಿಸುವ ಬಗ್ಗೆಯೂ ಸಲಹೆಗಳು ಬಂದಿವೆ. ಆಚರಣೆಗಳು ಮತ್ತು ಹಬ್ಬಗಳ ಬಗ್ಗೆ ಸಲಹೆ ನೀಡಲು ಸ್ಥಳೀಯ ಭಕ್ತರ ಮಂಡಳಿಗಳನ್ನು ಸ್ಥಾಪಿಸುವುದು ಧಾರ್ಮಿಕ ಸಮುದಾಯಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ, ಎಂಬ ಸಲಹೆಗಳು ಕೇಳಿಬಂದಿವೆ. ಈ ಸರ್ವೋಚ್ಚ ನ್ಯಾಯಾಲಯದ ಮುಂದಿನ ನಡೆ ಏನಿರಬಹುದು ಎಂಬುದು ಕುತೂಹಲ ಮೂಡಿಸಿದೆ.

ಎಪ್ಸ್ಟೀನ್ ಫೈಲ್ಸ್ ವಿಡಿಯೋ ಪ್ರಸಾರ

ವಾಷಿಂಗ್ಟನ್: ಶ್ವೇತಭವನದ ಅತ್ಯಂತ ಪ್ರಮುಖ ಮಾಧ್ಯಮ ಸಭೆ ಭಾನುವಾರ ನಡೆಯಲಿದೆ. ಇದಕ್ಕೆ ಕೇವಲ ಒಂದು ದಿನ ಮೊದಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭಾರೀ ಮುಜುಗರ ತರುವ ಸನ್ನಿವೇಶ ಎದುರಾಗಿದೆ.



ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿರುವ ಹಿಲ್ಟನ್ ಕಟ್ಟಡದ ಮೇಲೆ ಇಡೀ ಜಗತ್ತನ್ನು ತಲ್ಲಣಗೊಳಿಸಿರುವ ಅಪ್ರಾಪ್ತ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಎಪ್ಸ್ಟೀನ್ ಫೈಲ್ಸ್‌ನ ವಿಡಿಯೋವನ್ನು ಪ್ರದರ್ಶಿಸಲಾಗಿದೆ. ಹಿಲ್ಟನ್ ಕಟ್ಟದ ಮೇಲೆ ಪ್ರದರ್ಶಿಸಲಾದ ವಿಡಿಯೋದಲ್ಲಿ, ಲೈಂಗಿಕ ಹಗರಣದ ರೂವಾರಿ ಜೆಫ್ರಿ ಎಪ್ಸ್ಟೀನ್ ಮತ್ತು ಡೊನಾಲ್ಡ್ ಟ್ರಂಪ್ ತುಂಬಾ ಆತ್ಮೀಯವಗಿ ಮಾತನಾಡುತ್ತಿರುವ ದೃಶ್ಯಗಳಿವೆ.

ಈ ವಿಡಿಯೋ ಎಪ್ಸ್ಟೀನ್ ಮತ್ತು ಟ್ರಂಪ್ ಸಂಬಂಧಗಳು ಮತ್ತು ಈ ಲೈಂಗಿಕ ಹಗರಣದಲ್ಲಿ ಟ್ರಂಪ್ ಭಾಗಿಯಾಗಿದ್ದಾರೆ ಎನ್ನುವ ಕುರಿತು ಸ್ಪಷ್ಟ ಸಾಕ್ಷಿಯಾಗಿದ್ದು, ಡೊನಾಲ್ಡ್ ಟ್ರಂಪ್ ಈಗಲಾದರೂ ಸತ್ಯ ಒಪ್ಪಿಕೊಳ್ಳಬೇಕು ಎಂದು ಕೊನೆಯಲ್ಲಿ ಆಗ್ರಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಿರುಸುದ್ದಿ

ನೀತಿ ಆಯೋಗ ಪುನಾರಚನೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿಯವರು ದೇಶದ ನೀತಿ ನಿಲುಮೆಗಳ ನಿರೂಪಕ ನೀತಿ ಆಯೋಗವನ್ನು ಪುನಾರಚಿಸಿದ್ದು, ದೇಶದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅಶೋಕ್ ಕುಮಾರ್ ಲಾಹಿರಿ ಅವರನ್ನು ಉಪಾಧ್ಯಕ್ಷರನ್ನಾಗಿ ಮತ್ತು ಖ್ಯಾತ ಅರ್ಥ ಶಾಸ್ತ್ರಜ್ಞ ಕೆ.ವಿ.ರಾಜು, ಏಐಐಎಂಎಸ್‌ನ ನಿರ್ದೇಶಕ ಎಂ.ಶ್ರೀನಿವಾಸ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಅಭಯ್ ಕರಾಂಡಿಕಾರ್, ಖ್ಯಾತ ವಿಜ್ಞಾನಿ ಗೋವರ್ಧನ್ ದಾಸ್, ಮಾಜಿ ಸಂಪುಟ ಕಾರ್ಯದರ್ಶಿ, ಆಡಳಿತ ತಜ್ಞರಾಗಿರುವ ರಾಜೀವ್ ಗೌಬ ಸೇರಿದಂತೆ ತಮ್ಮ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆಗೈದ ಐವರು ಸಾಧಕರನ್ನು ಪೂರ್ಣಾವಧಿ ಸದಸ್ಯರನ್ನಾಗಿ ನೇಮಿಸಿದೆ. ಪ್ರಧಾನಿ ಮೋದಿಯವರು ಈ ಆಯೋಗದ ಅಧ್ಯಕ್ಷರಾಗಿರುತ್ತಾರೆ. ಈ ಮೇಧಾವಿಗಳ ಅಧಿಕಾರಾವಧಿಯು ಅತ್ಯಂತ ಉತ್ಪಾದಕ ಮತ್ತು ಪರಿಣಾಮಕಾರಿಯಾಗುವಂತಾಗಲಿ ಎಂದು ಪ್ರಧಾನಿ ನರೇಂದ್ರ ಮೋದಿಯವರು ಅವರಿಗೆ ಶುಭಕೋರಿದ್ದಾರೆ.ಭಾರತದ ನೀತಿ ನಿರೂಪಣೆಯ ವಾಸ್ತುಶಿಲ್ಪದ ಆಧಾರಸ್ತಂಭವಾಗಿ ಮೂಡಿಬಂದಿರುವ ನೀತಿ ಆಯೋಗವು ದೇಶದ ಸಹಕಾರ ಒಕ್ಕೂಟತತ್ವವನ್ನು ಪೋಷಿಸುತ್ತದೆ.ಇನ್ನಷ್ಟು ಸುಧಾರಣೆಗಳ ಮೂಲಕ ಜನರ ಬದುಕನ್ನು ಸುಲಲಿತಗೊಳಿಸಲು ನೆರವಾಗಲಿದೆ. ಹಾಗೆಯೇ ದೇಶದ ಜನಜೀವನದ ಎಲ್ಲ ಕ್ಷೇತ್ರಗಳಲ್ಲೂ ನಾವೀನ್ಯತೆ ಮತ್ತು ದೀರ್ಘಕಾಲೀನ ವ್ಯೂಹಾತ್ಮಕ ಚಿಂತನೆಗೆ ಒಂದು ಕ್ರಿಯಾಶೀಲ ವೇದಿಕೆಯನ್ನು ಒದಗಿಸುತ್ತಿರುವುದನ್ನು ಮೋದಿಯವರು ಶ್ಲಾಘಿಸಿದರು. ಅಶೋಕ್ ಲಾಹಿರಿ ಅವರು ಭಾರತದ ಅತ್ಯಂತ ಅನುಭವೀ ಮತ್ತು ಹಿರಿಯ ಆರ್ಥಿಕ ತಜ್ಞರಾಗಿದ್ದು, ನಾಲ್ಕು ದಶಕಗಳ ಕಾಲ ದೇಶದ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ.ಅವರು ಪ್ರಸಕ್ತ ಪ.ಬಂ.ದ ಬಿಜೆಪಿ ಶಾಸಕರಾಗಿದ್ದು, ಈ ಬಾರಿ ಅವರಿಗೆ ಚುನಾವಣಾ ಸ್ಪರ್ಧೆಗೆ ಟಿಕೆಟ್ ನೀಡಿರಲಿಲ್ಲ. ಭಾರತ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದ ಮತ್ತು 15ನೇ ಹಣಕಾಸು ಆಯೋಗದ ಸದಸ್ಯರಾಗಿದ್ದ ಇವರ ಅನುಭವವನ್ನು ಅತ್ಯುನ್ನತ ಮಟ್ಟದಲ್ಲಿ ದೇಶಕ್ಕೆ ಲಭ್ಯವಾಗುವಂತೆ ಮಾಡಲು ಪ್ರಧಾನಿ ಮೋದಿಯವರು ಅವರಿಗೆ ನೀತಿ ಆಯೋಗದ ಉಪಾಧ್ಯಕ್ಷ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ದಾಸ್ ಅವರು ಭೋಪಾಲ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರೀಸರ್ಚ್ ನ ನಿರ್ದೇಶಕರು.ದಿಲ್ಲಿಯ ಜವಹರಲಾಲ್ ನೆಹರೂ ವಿವಿಯ ಸ್ಪೆಷಲ್ ಸೆಂಟರ್ ಫಾರ್ ಮೊಲೆಕ್ಯುಲರ್ ಮೆಡಿಸಿನ್‌ನ ಪ್ರೊಫೆಸರ್ ಮತ್ತು ಅಧ್ಯಕ್ಷರಾಗಿದ್ದರು. ಇಂದು ನನ್ನ ಜೀವನದ ಅತ್ಯಂತ ಮಹತ್ವದ ದಿನ.ನಾನೊಬ್ಬ ಸಾಮಾನ್ಯ ರೈತ ಕುಟುಂಬದ ದಲಿತ ವರ್ಗಕ್ಕೆ ಸೇರಿದ ಮತ್ತು ಪ.ಬಂ.ದ ಕುಗ್ರಾಮದಿಂದ ಬಂದವನಾಗಿದ್ದೂ, ನನಗೆ ಇಂತಹ ಒಂದು ಮಹತ್ವದ ಹೊಣೆ ನೀಡಿದ ಪ್ರಧಾನಿಯವರಿಗೆ ಧನ್ಯವಾದಗಳು ಎಂದು ಗೋವರ್ಧನ್ ದಾಸ್ ಹೇಳಿದ್ದಾರೆ.

ಉಷ್ಣಾಂಶ ಏರಿಕೆ ಹಿನ್ನೆಲೆ ಐಎಂಡಿ ಮಾರ್ಗಸೂಚಿ

ಹೊಸದಿಲ್ಲಿ: ದೇಶದ ಹಲವೆಡೆ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೂಲಂಕುಶವಾಗಿ ಬಿಸಿಗಾಳಿ ಮಾರ್ಗಸೂಚಿಗಳು ಮತ್ತು ಸಲಹೆಗಳನ್ನು ಶನಿವಾರ ಬಿಡುಗಡೆಗೊಳಿಸಿದೆ. ಐಎಂಡಿ ಬಿಡುಗಡೆಗೊಳಿಸಿದ ಮಾರ್ಗಸೂಚಿಯಲ್ಲಿ ಸೂರ್ಯನ ಕಿರಣಕ್ಕೆ ಹೆಚ್ಚು ಹೊತ್ತು ನಿಲ್ಲದಿರಲು, ಅದರಲ್ಲೂ ಮಧ್ಯಾಹ್ನದ ಸಮಯದಲ್ಲಿ ಹೆಚ್ಚು ಹೊರಗಡೆ ಇರುವುದು, ಆದಷ್ಟು ನೀರು ಕುಡಿಯುವುದು, ಹಗುರವಾದ ಮತ್ತು ಉಸಿರಾಡಲು ಸುಲಭವಾಗುವಂತಹ ಬಟ್ಟೆ ಧರಿಸುವುದು ಮತ್ತು ಅತಿ ಉಷ್ಣಾಂಶದಲ್ಲಿ ಹೊರಗೆ ಹೆಚ್ಚು ಕೆಲಸ ಮಾಡದಿರುವುದು ಇತ್ಯಾದಿ ಸಲಹೆ ನೀಡಿದೆ.

ಈಗಾಗಲೇ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಮಕ್ಕಳು, ಹಿರಿಯ ನಾಗರಿಕರು ಮತ್ತು ಇತರರು ತಮ್ಮ ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಬೇಕೆಂದು ಐಎಂಡಿ ತಿಳಿಸಿದೆ. ತಾಪಮಾನದಿಂದ ಶರೀರದಲ್ಲಿ ಬಳಲಿಕೆ, ಸ್ಟ್ರೋಕ್ ಸಂಬಂಧಿತ ಸಾಧ್ಯತೆಗಳನ್ನು ಕಡಿಮೆಗೊಳಿಸಲು ಜಾಗೃತಿ ಮೂಡಿಸುವ ಪ್ರಯತ್ನ ಮತ್ತು ತಡೆಗಟ್ಟುವ ಕ್ರಮಗಳನ್ನು ಇಲಾಖೆ ತೆಗೆದುಕೊಳ್ಳಲಿದೆ ಎಂದು ತಿಳಿಸಿದೆ. ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಗರಿಷ್ಠ 44.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಉಳಿದಂತೆ ದೇಶದಲ್ಲಿ 40ರಿಂದ 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್, ಹರ್ಯಾಣ, ಚಂಡೀಗಢ, ದಿಲ್ಲಿ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಧ್ಯ ಭಾರತದ ಹಲವೆಡೆಗಳಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ. ಕೇರಳ, ಕರ್ನಾಟಕದಂತಹ ಕರಾವಳಿ ರಾಜ್ಯಗಳಲ್ಲಿ ಬಿಸಿಗಾಳಿ ಇರಲಿದೆ.

ನೂತನ ಪಕ್ಷ ಸ್ಥಾಪಿಸಿದ ಕೆಸಿಆರ್ ಪುತ್ರಿ ಕೆ.ಕವಿತಾ

ಹೈದರಾಬಾದ್: ತೆಲಂಗಾಣ ಜಾಗೃತಿ ಅಧ್ಯಕ್ಷೆ ಕೆ. ಕವಿತಾ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎಂಬ ಹೊಸ ರಾಜಕೀಯ ಪಕ್ಷವನ್ನು ಘೋಷಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗೆ ನಾಂದಿ ಹಾಡಿದ್ದಾರೆ.

ಹೈದರಾಬಾದ್‌ನ ಹೊರವಲಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಕ್ಷವನ್ನು ಅನಾವರಣಗೊಳಿಸಿದ ಕವಿತಾ, ಆಡಳಿತಾರೂಢ ಕಾಂಗ್ರೆಸ್, ಬಿಜೆಪಿ ಮತ್ತು ತಮ್ಮ ತಂದೆ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ನೇತೃತ್ವದ ಬಿಆರ್‌ಎಸ್ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಈ ಮೂರೂ ಪಕ್ಷಗಳು ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣದಿಂದ ಕೂಡಿವೆ ಎಂದು ಅವರು ಆರೋಪಿಸಿದರು. ಅಧಿಕಾರಕ್ಕೆ ಬಂದ ನಂತರ ಬಿಆರ್‌ಎಸ್ ತನ್ನ ಮೂಲ ಸ್ವರೂಪ ಕಳೆದುಕೊಂಡಿದೆ ಎಂದು ಟೀಕಿಸಿದರು. ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಕೆಸಿಆರ್ ಮೌನ ವಹಿಸಿದ್ದಾರೆ ಎಂದು ದೂರಿದರು.

ಕವಿತಾ ಪಾಂಚಜನ್ಯ ಎಂಬ ಐದು ಪ್ರಮುಖ ಭರವಸೆಗಳನ್ನು ಘೋಷಿಸಿದರು. ಇದರಲ್ಲಿ ಉಚಿತ ಶಿಕ್ಷಣ, ಆರೋಗ್ಯ, ರೈತರಿಗೆ ಉಚಿತ ವಿದ್ಯುತ್ ಮತ್ತು ಬೆಂಬಲ ಸೇರಿದೆ.

ಒಂದೇ ಅಧಿಸೂಚನೆಯ ಮೂಲಕ ನಾಲ್ಕು ಲಕ್ಷ ಉದ್ಯೋಗಗಳ ನೇಮಕಾತಿ ಮತ್ತು ಶಾಸಕಾಂಗ ಸ್ಥಾನಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ.50 ರಷ್ಟು ಮೀಸಲಾತಿ ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ. 2028 ರ ವಿಧಾನಸಭಾ ಚುನಾವಣೆಯ ನಂತರ ತಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ದಾವೂದ್‌ನ ಶಂಕಿತ ಸಹಚರ ಸಲೀಮ್ ಸೆರೆ

ಇಸ್ತಾಂಬುಲ್: ಭೂಗತ ದೊರೆ ದಾವೂದ್ ಇಬ್ರಾಹಿಂನ ಶಂಕಿತ ಸಹಚರ ಹಾಗೂ ಭಾರತೀಯ ಮಾದಕವಸ್ತು ದಂಧೆಯ ಕಿಂಗ್‌ಪಿನ್ ಸಲೀಮ್ ದೋಲಾ ಇಸ್ತಾಂಬುಲ್‌ನಲ್ಲಿ ಸೆರೆಯಾಗಿದ್ದಾನೆ. ಟರ್ಕಿ ಅಧಿಕಾರಿಗಳು ನಡೆಸಿದ ಮಾದಕವಸ್ತು ವಿರೋಧಿ ಪ್ರಮುಖ ಅಂತಾರಾಷ್ಟ್ರೀಯ ಕಾರ್ಯಾಚರಣೆಯಲ್ಲಿ ಸಲೀಮ್ ಬಂಧನಕ್ಕೆ ಒಳಗಾಗಿದ್ದಾನೆ. ಈತನಿಗೂ ದಾವೂದ್‌ಗೂ ನಿಕಟ ಸಂಪರ್ಕವಿದೆ ಎಂಬ ಶಂಕೆಯಿದೆ.

ಹಲವು ವರ್ಷಗಳಿಂದ ಅಂತಾರಾಷ್ಟ್ರೀಯ ನಾರ್ಕೋಟಿಕ್ಸ್ ವ್ಯವಹಾರ ನಡೆಸುತ್ತಿರುವ ದೋಲಾ ಕೊನೆಗೂ ಸಿಕ್ಕಿಬಿದ್ದಿದ್ದಾನೆ. ಆರಂಭದಲ್ಲಿ ಮುಂಬೈನಿಂದ ಡ್ರಗ್ಸ್ ಜಾಲವನ್ನು ನಿಯಂತ್ರಿಸುತ್ತಿದ್ದ ದೋಲಾ ತನ್ನ ಜಾಲವು ವಿಸ್ತರಿಸುತ್ತಿದ್ದಂತೆ ದುಬೈಯಲ್ಲಿ ತಲೆಮರೆಸಿಕೊಂಡಿದ್ದ. ಮುಂಬೈ ಪೊಲೀಸ್ ದಾಖಲಿಸಿದ ಪ್ರಕರಣಗಳ ಆಧಾರದಲ್ಲಿ ಕೇಂದ್ರ ತನಿಖಾ ದಳ(ಸಿಬಿಐ) ಮನವಿ ಮೇರೆಗೆ ಇಂಟರ್‌ಪೋಲ್ ಈತನ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸಿತ್ತು. ದೋಲಾ ಬಂಧನವಾಗಿರುವುದು ಅಂತಾರಾಷ್ಟ್ರೀಯ ಡ್ರಗ್ ಮಾಫಿಯಾಗೆ ದೊಡ್ಡ ಹೊಡೆತವೆಂದು ಮುಂಬೈ ಪೊಲೀಸ್ ಹಿರಿಯ ಅಧಿಕಾರಿ ಹೇಳಿದ್ದಾರೆ. ಸಲೀಮ್‌ನ ಡ್ರಗ್ ಕಾರ್ಟೆಲ್, ತನ್ನ ಮಾದಕದ್ರವ್ಯ ಕಳ್ಳಸಾಗಣೆ ಸಂಪರ್ಕಜಾಲದ ಮೂಲಕ ರೂ. 5,000 ಕೋಟಿಗಿಂತ ಅಧಿಕ ಆದಾಯವನ್ನು ಮಾಡುತ್ತಿತ್ತು. ಕಳೆದ ವರ್ಷ ಸಲೀಮ್ ಪುತ್ರ ತಾಹಿರ್ ದೋಲಾ ಯುಎಇನಲ್ಲಿ ಸೆರೆಯಾಗಿದ್ದ. ಯುಎಇನಲ್ಲಿ ಸ್ಥಳೀಯ ಪೊಲೀಸ್ ಮತ್ತು ಇಂಟರ್‌ಪೋಲ್ ನಡೆಸಿದ್ದ ಕಾರ್ಯಾಚರಣೆಯಲ್ಲಿ ಬಂಧಿಸಲ್ಪಟ್ಟಿದ್ದ. 2025ರ ಜೂನ್‌ನಲ್ಲಿ ಜೂ. ದೋಲಾನನ್ನು ಭಾರತಕ್ಕೆ ಯಶಸ್ವಿಯಾಗಿ ಗಡೀಪಾರು ಮಾಡಲಾಗಿತ್ತು.

ಮಾಲಿಯಲ್ಲಿ ಉಗ್ರ ದಾಳಿ

ಬಮಾಕೊ: ಸಶಸ್ತ್ರ ಗುಂಪುಗಳು ಮಾಲಿಯಾದ್ಯಂತ ಸಂಘಟಿತ ದಾಳಿಗಳನ್ನು ನಡೆಸಿದ್ದು, ಬಮಾಕೊ ಮತ್ತು ಇತರ ಹಲವಾರು ನಗರಗಳಲ್ಲಿನ ಮಿಲಿಟರಿ ನೆಲೆಗಳು ಹಾಗೂ ಆಯಕಟ್ಟಿನ ಸ್ಥಳಗಳನ್ನು ಗುರಿಯಾಗಿಸಿಕೊಂಡಿವೆ.

ಬಮಾಕೊ ನಗರದ ಹೊರವಲಯದಲ್ಲಿರುವ ಕಟಿ ಮಿಲಿಟರಿ ನೆಲೆ ಮತ್ತು ಮೊಡಿಬೊ ಕೀಟಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಸೂಕ್ಷ್ಮ ಪ್ರದೇಶಗಳ ಮೇಲೆ ಮುಂಜಾನೆ 6 ಗಂಟೆಗೆ ಮೊದಲು ದಾಳಿಕೋರರು ದಾಳಿ ನಡೆಸಿದ್ದಾರೆ ಎಂದು ಮಾಲಿ ಸಶಸ್ತ್ರ ಪಡೆಗಳು ವರದಿ ಮಾಡಿವೆ. ದಾಳಿಕೋರರನ್ನು ಹತ್ತಿಕ್ಕಲು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಿವೆ. ಉತ್ತರ ನಗರಗಳಾದ ಗಾವೊ ಮತ್ತು ಕಿದಾಲ್ ಹಾಗೂ ಮಧ್ಯದ ನಗರವಾದ ಸೆವಾರೆಯಲ್ಲಿಯೂ ಏಕಕಾಲದಲ್ಲಿ ಸಂಘರ್ಷ ನಡೆದಿದೆ. ಅಜಾವಾದ್ ಲಿಬರೇಶನ್ ಫ್ರಂಟ್ ತನ್ನ ಪಡೆಗಳು ಗಾವೊ ಮತ್ತು ಕಿದಾಲ್‌ನಲ್ಲಿನ ಸ್ಥಾನಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡಿವೆ.

ಪ.ಬಂಗಾಳದಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ : ಬಿಸ್ವಾ
ನುಸುಳುಕೋರರಿಂದ ಜನಸಂಖ್ಯೆ ಹೆಚ್ಚಳ

ಕೋಲ್ಕತ್ತಾ: ಪಶ್ಚಿಮ ಬಂಗಾಳ ಮತ್ತು ನೆರೆಯ ರಾಜ್ಯಗಳಲ್ಲಿ ಬಾಂಗ್ಲಾದೇಶದ ನುಸುಳು ಕೋರರು ಜನಸಂಖ್ಯಾ ಚಿತ್ರಣವೇ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬ ಭಾರತೀಯನ ಹಿತಾಸಕ್ತಿಯೂ ಅಡಗಿದೆ ಎಂದು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಕೋಲ್ಕತ್ತಾದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಶರ್ಮಾ, ಅಸ್ಸಾಂನ 126 ಸ್ಥಾನಗಳಲ್ಲಿ 100ಕ್ಕೂ ಹೆಚ್ಚು ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಭವಿಷ್ಯ ನುಡಿದರು. ಪಶ್ಚಿಮ ಬಂಗಾಳದ ಚುನಾವಣೆ ಕೇವಲ ಸಾಮಾನ್ಯ ಚುನಾವಣೆಯಲ್ಲ. ಇದು ಇಡೀ ರಾಷ್ಟ್ರದ ಮೇಲೆ ನಾಗರಿಕ ಪರಿಣಾಮ ಬೀರುವ ಸ್ಪರ್ಧೆ ಎಂದು ಅವರು ಬಣ್ಣಿಸಿದರು. ನುಸುಳುವಿಕೆಯನ್ನು ತಡೆಯದಿದ್ದರೆ ಪಶ್ಚಿಮ ಬಂಗಾಳ ಬಾಂಗ್ಲಾದೇಶದ



ವಿಸ್ತೃತ ಭಾಗವಾಗುವ ಅಪಾಯವಿದೆ ಎಂದು ಅವರು ಎಚ್ಚರಿಸಿದರು.

ಗಡಿ ಭದ್ರತೆ ಮತ್ತು ಅಡೆತಡೆಗಳು: ಭಾರತ ಬಾಂಗ್ಲಾದೇಶದೊಂದಿಗೆ ಹೊಂದಿರುವ ಒಟ್ಟು ಗಡಿಯಲ್ಲಿ ಪಶ್ಚಿಮ ಬಂಗಾಳ ಶೇ. 54ರಷ್ಟು ಪಾಲನ್ನು ಹೊಂದಿದೆ ಎಂದು ಶರ್ಮಾ ಹೇಳಿದರು. ಅಸ್ಸಾಂನಲ್ಲಿ ಶೇ. 100 ರಷ್ಟು ಗಡಿ ಬೇಲಿ ನಿರ್ಮಾಣ ಪೂರ್ಣಗೊಂಡಿದ್ದರೆ, ಪಶ್ಚಿಮ ಬಂಗಾಳ ಸರ್ಕಾರ ತನ್ನ ಮತಬ್ಯಾಂಕ್ ಮತ್ತು ಆರ್ಥಿಕ ಹಿತಾಸಕ್ತಿಗಳಿಗಾಗಿ ಬೇಲಿ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿದೆ, ಎಂದು ಅವರು ಆರೋಪಿಸಿದರು. ಗಡಿ ಜಿಲ್ಲೆಗಳಲ್ಲಿ ಮತದಾರರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವುದರ ಕುರಿತು ಅವರು ಬೆಳಕು ಚೆಲ್ಲಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ನುಸುಳುವಿಕೆ ತಡೆಯಲು ಐದು ಗಡಿ ರಾಜ್ಯಗಳ ಮುಖ್ಯಮಂತ್ರಿಗಳನ್ನೊಳಗೊಂಡ ಜಂಟಿ ಕಾರ್ಯಪಡೆ ರಚಿಸುವಂತೆ ಕೇಂದ್ರ ಗೃಹ ಸಚಿವರಿಗೆ ಮನವಿ ಮಾಡುವುದಾಗಿ ಶರ್ಮಾ ತಿಳಿಸಿದರು. ಅಲ್ಲದೆ, 1948 ರ ಕಾನೂನುಬಾಹಿರ ವಲಸಿಗರ ಹೊರಹಾಕುವಿಕೆ ಕಾಯಿದೆಯನ್ನು ಎಲ್ಲಾ ಗಡಿ ರಾಜ್ಯಗಳಿಗೆ ವಿಸ್ತರಿಸುವಂತೆ ಅವರು ಒತ್ತಾಯಿಸಿದರು. ಎರಡು ವರ್ಷಗಳಲ್ಲಿ ಅಸ್ಸಾಂನ ತಲಾ ಆದಾಯ ಪಶ್ಚಿಮ ಬಂಗಾಳವನ್ನು ಮೀರಿಸಲಿದೆ ಎಂದು ಅವರು ತಿಳಿಸಿದರು.

ನನ್ನ ಪುಸ್ತಕದ ಅಂತಿಮ ಪ್ರತಿ ನನಗೆ ದೊರಕಿಲ್ಲ: ಜ.ನರವಣೆ

ಹೊಸದಿಲ್ಲಿ: ಕೇಂದ್ರದ ನರೇಂದ್ರ ಮೋದಿ ಸರಕಾರವನ್ನು ತರಾಟೆಗೆತ್ತಿಕೊಳ್ಳಲು ಕಾಂಗ್ರೆಸ್‌ನ ರಾಹುಲ್‌ಗಾಂಧಿ ಸಂಸತ್ತಿನ ಹೊರಗಡೆ ಪ್ರದರ್ಶಿಸಿದ್ದ ಪುಸ್ತಕ ಅಥವಾ ದಾಖಲೆ ಯಾವುದು ಮತ್ತು ಎಲ್ಲಿಂದ ಬಂತು? ಅದ್ಯಾವ ಪುಸ್ತಕವೆಂಬುದು ನನಗಂತು ಗೊತ್ತೇ ಇಲ್ಲ. ಲೇಖಕನಾದ ನಾನೇ ನನ್ನ ಪುಸ್ತಕ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿಯ ಅಂತಿಮ ಕಾಪಿಯನ್ನು ಕೂಡ ನೋಡಿಲ್ಲ. ನನ್ನ ಅಪ್ರಕಟಿತ ಪುಸ್ತಕದ ಆವೃತ್ತಿ ಇನ್ನೂ ನನಗೆ ಸಿಕ್ಕಿಲ್ಲ. ವಾಸ್ತವ ಇದಾಗಿರುವಾಗ ನನ್ನ ಪುಸ್ತಕ ಸಾರ್ವಜನಿಕ ಪ್ರಸರಣಕ್ಕೆ ತಲುಪಲು ಸಾಧ್ಯವೇ ಇಲ್ಲ. ನನ್ನ ಪುಸ್ತಕ ಪ್ರಕಟವೇ ಆಗಿಲ್ಲವೆಂದ ಮೇಲೆ ರಾಹುಲ್ ಸಂಸತ್ತಿನ ಹೊರಗಡೆ ಪ್ರದರ್ಶಿಸಿದ್ದು ಯಾವುದನ್ನು ಎಂದು ಭಾರತೀಯ ಸೇನಾಪಡೆಯ ಮಾಜಿ ಮುಖ್ಯಸ್ಥ ಜ. ಮನೋಜ್ ಮುಕುಂದ್ ನರವಣೆ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ. ಜ. ನರವಣೆ ಹೊರಗೆಡವಿರುವ ಸತ್ಯವು ರಾಜಕೀಯ ವಲಯದಲ್ಲಿ ಸಹಜವಾಗೇ ಬಿರುಗಾಳಿ ಎಬ್ಬಿಸಿದೆ ಮಾತ್ರವಲ್ಲ, ರಾಹುಲ್ ಗಾಂಧಿ ಪ್ರದರ್ಶಿಸಿದ್ದ ದಾಖಲೆ ಸತ್ಯಾಸತ್ಯತೆ ಬಗ್ಗೆ ಗಂಭೀರ ಸವಾಲುಗಳನ್ನು ಹುಟ್ಟುಹಾಕಿದೆ. ರಾಹುಲ್ ನೇತೃತ್ವದ ವಿಪಕ್ಷ ಕಾಂಗ್ರೆಸ್ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರದ ವಿರುದ್ಧ ಅಪಪ್ರಚಾರ ಮಾಡಲು ಯಾವೆಲ್ಲ ಕಪಟ ಮತ್ತು ಅಸತ್ಯದ ಹಾದಿ ಹಿಡಿದಿದೆ ಎಂಬ ಸತ್ಯವೂ ಜ.ನರವಣೆ ಅವರ ಆಘಾತಕಾರಿ ಹೇಳಿಕೆಯಿಂದ ಬಯಲಾಗಿದೆ.

ಪುಸ್ತಕ ಪ್ರಸರಣದಲ್ಲಿಲ್ಲ,ಪ್ರಕಾಶಕರ ಹೇಳಿಕೆ: ನನ್ನ ಕೃತಿಯ ಮುದ್ರಣ ಆಗಿಲ್ಲ. ಇದರ ಹಾರ್ಡ್‌ಕಾಪಿ ಅಥವಾ ಸಾಫ್ಟ್ ಕಾಪಿ ಕೂಡ ಪ್ರಸರಣದಲ್ಲಿಲ್ಲವೆಂದು ಪುಸ್ತಕವನ್ನು ಪ್ರಕಟಿಸಬೇಕಿದ್ದ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಕೂಡ ಖಡಾಖಂಡಿತ ನೆಲೆಯಲ್ಲಿ ಮಾಹಿತಿ ನೀಡಿದೆ ಎಂದು ಜ.ನರವಣೆ ಗಮನ ಸೆಳೆದಿದ್ದಾರೆ.

ಕಿರುಸುದ್ದಿ

ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ





ಪುತ್ತೂರು: ಇಲ್ಲಿನ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ (ಸ್ವಾಯತ್ತ) ಕಾಲೇಜ್ ಪದವಿ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ನಡೆಸಿದ ಪಡೀಲು ಶಂಕರ ಭಟ್ಟ ಸಂಸ್ಮರಣೆಯ 'ಡಾ.ಕೆ. ಶಿವರಾಮ ಕಾರಂತರ ಬೆಟ್ಟದ ಜೀವ ಕಾದಂಬರಿಯಲ್ಲಿ ಪ್ರಕೃತಿಯ ವರ್ಣನೆ' ವಿಷಯದ ಮೇಲೆ ಏರ್ಪಡಿಸಿದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮ ಮೇ 2ರ ಶನಿವಾರ ಕಾಲೇಜಿನ ಸುವರ್ಣ ಮಹೋತ್ಸವ ಸಭಾಭವನದಲ್ಲಿ ನಡೆಯಲಿದೆ. ಪ್ರಬಂಧ ಸ್ಪರ್ಧೆಯಲ್ಲಿ ಆಳಿಕೆಯ ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜಿನ ಧನ್ವಿತಾ ಕಾರಂತ ಪ್ರಥಮ, ಉತ್ತರ ಕನ್ನಡದ ಕುಮಟಾದ ಡಾ.ಎ.ವಿ. ಬಾಳಿಗ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿನಾಯಕ ರಮೇಶ ನಾಯ್ಕ ದ್ವಿತೀಯ ಹಾಗೂ ಸುಬ್ರಹ್ಮಣ್ಯದ ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜಿನ ಸಾಕ್ಷಿ ಕೆ. ತೃತೀಯ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಅವರಿಗೆ ಪ್ರಮಾಣ ಪತ್ರ ಮತ್ತು ನಗದು ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಕಾಲೇಜಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಏ.28ರಂದು ಧಾರವಾಡದ ಸಾಹಿತ್ಯ ಗಂಗಾ ಸಂಸ್ಥೆಯಿಂದ ಪ್ರಶಸ್ತಿ ಪ್ರದಾನ, ವಿಚಾರಗೋಷ್ಠಿ

ಕಾಸರಗೋಡು: ಧಾರವಾಡದ ಸಾಹಿತ್ಯ ಗಂಗಾ ಸಂಸ್ಥೆ ವತಿಯಿಂದ ಸುನಂದಾ ಬೆಳಗಾಂವಕರ ಕಾದಂಬರಿ ಪ್ರಶಸ್ತಿ ಮತ್ತು ಮಹಾಶ್ವೇತಾದೇವಿ ಕಥಾ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ವಿಚಾರಗೋಷ್ಠಿಯು ಏ.28ರಂದು ಮಂಜೇಶ್ವರದ ಗೋವಿಂದ ಪೈ ಸ್ಮಾರಕ ಸರ್ಕಾರಿ ಕಾಲೇಜಿನಲ್ಲಿ ನಡೆಯಲಿದೆ.

2025ನೇ ಸಾಲಿನ ಸುನಂದಾ ಬೆಳಗಾಂವಕರ ಕಾದಂಬರಿ ಪ್ರಶಸ್ತಿಯು ಡಾ.ಟಿ.ಗೋವಿಂದರಾಜು ಅವರ ಕೃಷ್ಣಯ್ಯನ ಕೊಳಲು ಎಂಬ ಕಾದಂಬರಿಗೆ ಮತ್ತು ಮಹಾಶ್ವೇತಾದೇವಿ ಜನ್ಮಶತಮಾನೋತ್ಸವ ಕಥಾ ಪ್ರಶಸ್ತಿ ಶ್ರೀ ಲಿಂಗರಾಜ ಸೊಟ್ಟಪ್ಪನವರ ಅವರ ಕೆಂಪು ನದಿ ಕಥಾಸಂಕಲನಕ್ಕೆ ದೊರಕಿದೆ. ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆಯವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಇದೇ ದಿನ ಹಿರಿಯ ಲೇಖಕಿ ಡಾ.ಮಹೇಶ್ವರಿ ಯು. ಅವರ ಅಧ್ಯಕ್ಷತೆಯಲ್ಲಿ ಸುನಂದಾ ಬೆಳಗಾಂವಕರ ಮತ್ತು ಮಹಾಶ್ವೇತಾದೇವಿಯವರ ಸಾಹಿತ್ಯವನ್ನು ಕುರಿತ ವಿಚಾರಗೋಷ್ಠಿ ನಡೆಯಲಿದೆ. ಪ್ರೊ.ಶಿವಶಂಕರ ಪಿ., ಡಾ.ಸುಭಾಷ್ ಪಟ್ಟಾಜೆ, ವಿಕಾಸ ಹೊಸಮನಿ, ಡಾ.ರತ್ನಾಕರ ಕುನಗೋಡು, ರೇಷ್ಮಾ ಭಟ್, ಸೌಮ್ಯಾ ಪ್ರವೀಣ್, ಕಲ್ಲಚ್ಚು ಮಹೇಶ ನಾಯಕ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ.

ಏ.28: ಕಲ್ಲಡ್ಕ ಕಾಲೇಜಿನಲ್ಲಿ ಪ್ರತಿಭಾ ದಿನೋತ್ಸವ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಐಕಿಉಇ ಸಹಯೋಗದಲ್ಲಿ 'ಆಕರ್ಷ 2k6-ಪ್ರತಿಭಾ ಪುರಸ್ಕಾರ, ಪ್ರತಿಭಾ ದಿನೋತ್ಸವ" ಕಾರ್ಯಕ್ರಮವು ಏ.28 ರಂದು ನಡೆಯಲಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ. ಲಕ್ಷ್ಮೀ ಜಿ ಪ್ರಸಾದ್ ಬೆಂಗಳೂರು, ರಂಗಕಲಾವಿದ ಚೇತನ್ ರೈ ಮಾಣಿ, ಯಕ್ಷಗಾನ ಕಲಾವಿದ ದಿನೇಶ್ ಶೆಟ್ಟಿ ಕಾವಳಕಟ್ಟೆ, ಚಿತ್ರನಟಿ ವೆನ್ಯಾ ರೈ ಅವರು ಅಭ್ಯಾಗತರಾಗಿ ಆಗಮಿಸಲಿದ್ದಾರೆ. ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ ಹಾಗೂ ಸಂಚಾಲಕ ವಸಂತಮಾಧವ ಗೌರವ ಉಪಸ್ಥಿತರಿರುವರು, ಬೆಳಿಗ್ಗೆ 9.15ರಿಂದ ಪ್ರತಿಭಾ ಪುರಸ್ಕಾರ ಹಾಗೂ 10.45ರಿಂದ ಪ್ರತಿಭಾ ದಿನೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಾಂಶುಪಾಲ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಪೊರೇಟ್ ಜಿಹಾದ್, ಮತಾಂತರ ಖಂಡಿಸಿ ಬೃಹತ್ ಪ್ರತಿಭಟನೆ

ಜನ ಜಾಗೃತಿ ಅನಿವಾರ್ಯ

ಪುತ್ತೂರು: ದೇಶದ ನಾನಾ ರಾಜ್ಯಗಳಲ್ಲಿ ಇತ್ತೀಚಿನ ದಿನಗಳಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದು, ನಾಸಿಕ್‌ನ ಕಂಪನಿಯೊಂದರಲ್ಲಿ ಕಾರ್ಪೊರೇಟ್ ಜಿಹಾದ್ ಮತ್ತು ಮತಾಂತರ ಘಟನೆ ನಡೆದಿರುವುದನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ನೇತೃತ್ವದಲ್ಲಿ ಶುಕ್ರವಾರ ಸಂಜೆ ಪುತ್ತೂರಿನ ದರ್ಬೆ ವೃತ್ತದ ಬಳಿ ಪ್ರತಿಭಟನಾ ಸಭೆ ನಡೆಯಿತು.

ಬಜರಂಗದಳ ಮುಖಂಡ ಮುರಳಿಕೃಷ್ಣ ಹಸಂತಡ್ಕ ಮಾತನಾಡಿ, ಲವ್ ಜಿಹಾದ್ ಮತ್ತು ಮತಾಂತರ ಇತ್ತೀಚಿನ ದಿನಗಳಲ್ಲಿ ಜನ ಸಾಮಾನ್ಯರ ನಡುವಿನಿಂದ ಕಾರ್ಪೊರೇಟ್ ಕಂಪನಿಗಳನ್ನು ಪ್ರವೇಶಿಸಿದೆ. ಇದನ್ನು ನಿಯಂತ್ರಿಸಲು ಸರಕಾರಗಳು, ಇಲಾಖೆಗಳು ಕಾರ್ಯ ಪ್ರವೃತ್ತರಾಗದೇ ಹೋದಲ್ಲಿ ಮುಂದಿನ ದಿನಗಳಲ್ಲಿ ಇಡೀ ಸಮಾಜ ಎದ್ದು ನಿಲ್ಲುವ ಪರಿಸ್ಥಿತಿ ಬರಬಹುದು. ಹಿಂದೂಗಳು ಎಚ್ಚೆತ್ತುಕೊಳ್ಳದೇ ಹೋದಲ್ಲಿ ಸಮಾಜಕ್ಕೆ ಬಹುದೊಡ್ಡ ಗಂಡಾಂತರ ಕಾದಿದೆ ಎಂದರು.

ಜಾಗೃತಿ ಮೂಡಿಸುವ ಕಾರ್ಯವಾಗಲಿ

ಸಮಾಜದಲ್ಲಿ ಇಂಥ ಕೃತ್ಯಗಳು ಮುಂದುವರಿದರೆ ನಾವು ಅದಕ್ಕೆ ತಕ್ಕ ಉತ್ತರ ಕೊಡುವ ಕೆಲಸ ಮಾಡುತ್ತೇವೆ. ಯಾವುದೇ ಕಂಪನಿಗಳು ಮತಾಂತರ ಮತ್ತು ಲವ್ ಜಿಹಾದ್‌ನಂಥ ಕೆಲಸಕ್ಕೆ ಬೆಂಬಲ ನೀಡುವ ಕೆಲಸ ಮಾಡಿದರೆ ಅದು ಎಷ್ಟೇ ದೊಡ್ಡ ಕಂಪನಿಯೇ ಆಗಲಿ, ಎಷ್ಟೇ ದೊಡ್ಡ ವ್ಯಕ್ತಿಯಾದರೂ ನಾವು ತೊಡೆ ತಟ್ಟಿ ನಿಲ್ಲುವ ಕೆಲಸ ಮಾಡುತ್ತೇವೆ ಎಂದು ಹೇಳಿದ ಅವರು, ಸಮಾಜ ಜಾಗೃತರಾಗಬೇಕು. ಸಂಘಟನೆಗಳು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕು ಎಂದರು.

ವಿಶ್ವ ಹಿಂದೂ ಪರಿಷತ್ ಪುತ್ತೂರು ಜಿಲ್ಲಾಧ್ಯಕ್ಷ ಡಾ.ಕೃಷ್ಣಪ್ರಸನ್ನ ಮಾತನಾಡಿ, ಭಾರತದಲ್ಲಿ ಸನಾತನ ಹಿಂದೂ ಧರ್ಮದ ಮೇಲೆ 1200 ವರ್ಷಗಳಿಂದ ದಾಳಿ, ದಬ್ಬಾಳಿಕೆ ಮಾಡಿಕೊಂಡು ಬರಲಾಗುತ್ತಿದೆ. ವಿದೇಶದಿಂದ ಬಂದ ಅನ್ಯಮತೀಯರು ಬಲ ಪ್ರಯೋಗದ ಮೂಲಕ ಆರಂಭಿಸಿದ ಈ ದಬ್ಬಾಳಿಕೆ, ಬಳಿಕ ದೇಶದೊಳಗೆ ಬೇರು ಬಿಟ್ಟ ಮತೀಯ ಶಕ್ತಿಗಳಿಂದ ನಡೆಯಲಾರಂಭಿಸಿತು. ಆದರೂ ಹಿಂದೂ ಧರ್ಮ ನಾಶವಾಗಿಲ್ಲ. ಹಾಗೆಂದ ಮಾತ್ರಕ್ಕೆ ಸವಾಲು ಎದುರಿಸದೆ ಸುಮ್ಮನೆ ಕೂರುವ ಸ್ಥಿತಿಯಲ್ಲಿ ಇಲ್ಲ. ಸವಾಲು ಎದುರಿಸುವ ಶಕ್ತಿ ಹಿಂದೂ ಸಮಾಜಕ್ಕಿದೆ. ಸಹನೆ ಎನ್ನುವುದಕ್ಕೂ ಒಂದು ಮಿತಿ ಇದೆ ಎಂದರು.



> **ಮಹಾರಾಷ್ಟ್ರದ ನಾಸಿಕ್‌ನ ಕಾರ್ಪೊರೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ 300 ಯುವತಿಯರ ಪೈಕಿ 40 ಯುವತಿಯರನ್ನು ಮತಾಂತರ ಮಾಡಲು ಯತ್ನಿಸಿರುವುದು ಬೆಳಕಿಗೆ ಬಂದಿದೆ. ಒಬ್ಬಳು ಹಿಂದೂ ಹೆಣ್ಣುಮಗಳ ದಿನಚರಿಯಲ್ಲಾದ ಬದಲಾವಣೆಯಿಂದ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಈ ಜಾಲದ ಹಿಂದೆ ಅನ್ಯ ಧರ್ಮಕ್ಕೆ ಸೇರಿದ, ಆ ಕಂಪನಿಯ ಮಹಿಳಾ ಎಚ್‌ಆರ್ ಕೈವಾಡ ಇರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಪೊಲೀಸ್ ತನಿಖೆ ನಡೆಯುತ್ತಲೇ ಮಹಿಳಾ ಎಚ್‌ಆರ್ ತಪ್ಪಿಸಿಕೊಂಡಿದ್ದಾಳೆ. ಎನ್‌ಐಎ ಬಂಧಿಸಿದ್ದ ಒಬ್ಬ ಭಯೋತ್ಪಾದಕನ ಜತೆ ಆ ಮಹಿಳಾ ಎಚ್.ಆರ್.ಗೆ ಸಂಪರ್ಕ ಇರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಹಾಗಾದರೆ ನಮ್ಮ ದೇಶ ಎತ್ತ ಸಾಗುತ್ತಿದೆ?**
>
> ■ **ಮುರಳಿಕೃಷ್ಣ ಹಸಂತಡ್ಕ, ಬಜರಂಗದಳ ಮುಖಂಡರು**

ಸಾಮೂಹಿಕ ಮತಾಂತರ ಯತ್ನ ಆತಂಕಕಾರಿ

ಲವ್ ಜಿಹಾದ್ ಹಿಂದೂ ಸಮಾಜಕ್ಕೆ ಅತಿ ದೊಡ್ಡ ಸವಾಲಾಗಿದೆ. ಅಮಾಯಕ ಹಿಂದೂ ಹೆಣ್ಣು ಮಕ್ಕಳನ್ನು ನಂಬಿಸಿ ಅವರನ್ನು ಮೋಸದ ಬಲೆಗೆ ಸಿಲುಕಿಸಿ ಮತಾಂತರ ಮಾಡಲಾಗುತ್ತದೆ. ದೈಹಿಕವಾಗಿ ಅವರನ್ನು ದುರ್ಬಳಕೆ ಮಾಡಿಕೊಂಡು ಬಳಿಕ ಮತಾಂತರ ಮಾಡುವುದು ನಡೆಯುತ್ತಿದೆ. ಈ ಕೂಪಕ್ಕೆ ಬಿದ್ದ ಹಿಂದೂ ಹೆಣ್ಣು ಮಕ್ಕಳ ಬದುಕು ನರಕವಾಗಿ ಬದಲಾಗುತ್ತದೆ ಎಂದ ಅವರು, ನಾಸಿಕ್‌ನಲ್ಲಿ ಕಾರ್ಪೊರೇಟ್ ಕಂಪನಿಯೊಂದರಲ್ಲಿ ನಡೆದ ಸಾಮೂಹಿಕ ಮತಾಂತರ ಯತ್ನ ಆತಂಕಕಾರಿ ಬೆಳವಣಿಗೆಯಾಗಿದೆ. ಈ ಹೊಸ ಸವಾಲಿನ ವಿಚಾರದಲ್ಲಿ ದೇಶದ ಎಲ್ಲ ಹಿಂದೂಗಳು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದರು.

ಪ್ರತಿಭಟನೆಯಲ್ಲಿ ಹಿಂದೂ ಸಂಘಟನೆಗಳ ಮಾರ್ಗದರ್ಶಕರಾದ ಡಾ.ಎಂ.ಕೆ. ಪ್ರಸಾದ್ ಭಂಡಾರಿ, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರ್, ನಗರ ಮಂಡಲ ಅಧ್ಯಕ್ಷ ಪಿ.ಬಿ. ಶಿವಕುಮಾರ್, ಮುಖಂಡರಾದ ನಾಗೇಶ್ ಟಿ.ಎಸ್., ನಾಗೇಂದ್ರ ಬಾಳಿಗ, ದಿನೇಶ್ ಪಂಜಿಗ, ಚಂದ್ರಶೇಖರ್ ರಾವ್ ಬಪ್ಪಳಿಗೆ ರಾಜೇಶ್ ಬನ್ನೂರು, ನಿತೀಶ್ ಕುಮಾರ್ ಶಾಂತಿವನ, ಸತೀಶ್ ನ್ಯಾಕ್ ಪರ್ಲಡ್ಕ ಮತ್ತಿತರರು ಉಪಸ್ಥಿತರಿದ್ದರು. ದಾಮೋದರ್ ಪಾಟಾಳಿ ಸ್ವಾಗತಿಸಿದರು. ಶ್ರೀಧರ್ ತೆಂಕಿಲ ಕಾರ್ಯಕ್ರಮ ನಿರ್ವಹಿಸಿದರು.

ಕುದ್ಮುಲ್ ರಂಗರಾವ್ ಪುರಭವನದಲ್ಲಿ

ಏ.27 ರಂದು ಕೃತಜ್ಞತಾ ಸಮರ್ಪಣಾ ಸಮಾರಂಭ

ಮಂಗಳೂರು: ಎಂಸಿಸಿ ರಿಜಿಸ್ಟರ್ಡ್ ಡಿಪ್ಲೊಮಾ ಸಿವಿಲ್ ಎಂಜಿನಿಯರ್ಸ್ ಹಾಗೂ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಮಂಗಳೂರು ಕೇಂದ್ರದ ಸಹಯೋಗದೊಂದಿಗೆ ಕೃತಜ್ಞತಾ ಸಮರ್ಪಣಾ ಸಮಾರಂಭ ಏ.27ರಂದು ಸಂಜೆ 4.30ರಿಂದ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ.

2017ರ ಸರ್ಕಾರಿ ಅಧಿಸೂಚನೆ ಪ್ರಕಾರ ಕರ್ನಾಟಕದ ವೃತ್ತಿಪರ ಡಿಪ್ಲೊಮಾ ಸಿವಿಲ್ ಎಂಜಿನಿಯರ್ಸ್‌ಗಳ ಅರ್ಹತೆ ಮತ್ತು ಸಾಮರ್ಥ್ಯದಲ್ಲಿ ಆದ ಅನ್ಯಾಯದ ವಿರುದ್ಧ ಹೋರಾಟದಲ್ಲಿ ನಮ್ಮೊಂದಿಗೆ ಸಂಪೂರ್ಣವಾಗಿ ಕೈಜೋಡಿಸಿ, ಅಧಿಸೂಚನೆಗೆ ತಿದ್ದುಪಡಿ ಮಾಡುವಲ್ಲಿ ಹಾಗೂ ಈ ಹಿಂದಿನ ಸ್ಥಾನಮಾನವನ್ನು ಪುನರ್‌ಸ್ಥಾಪಿಸಿ ನ್ಯಾಯ ಒದಗಿಸಿಕೊಡುವಲ್ಲಿ ಸಹಕರಿಸಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ಶಾಸಕ ಡಿ.ವೇದವ್ಯಾಸ ಕಾಮತ್ ಹಾಗೂ ಸಹಕರಿಸಿದವರಿಗೆ ಕೃತಜ್ಞತಾ ಸಮರ್ಪಣಾ ಸಮಾರಂಭ ನಡೆಯಲಿದೆ ಎಂದು ಡಿಸಿಇ ಸಂಚಾಲಕ ಜಿ.ಯೋಗೀಶ್ ಪೈ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಸಂಜೆ 4ರಿಂದ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ರಸಪ್ರಶ್ನೆ, 4.45ರಿಂದ ಸುಗಮ ಸಂಗೀತ ಮತ್ತು ಗಝುಲ್ ನಡೆಯಲಿದೆ. 5.30ರಿಂದ ಎಂಸಿಸಿ ರಿಜಿಸ್ಟರ್ಡ್ ಡಿಪ್ಲೊಮಾ ಸಿವಿಲ್ ಎಂಜಿನಿರ್ಸ್ ಸಂಚಾಲಕ ಜಿ.ಯೋಗೀಶ್ ಪೈ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ವಿಧಾನ ಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ಶಾಸಕ ಡಿ.ವೇದವ್ಯಾಸ ಕಾಮತ್ ಅವರಿಗೆ ಕೃತಜ್ಞತಾ ಗೌರವ ಸಮರ್ಪಣೆ ನಡೆಸಲಾಗುವುದು. ಮನಪಾ ಆಯುಕ್ತ ರವಿಚಂದ್ರ ನಾಯಕ್, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮೊಹಮ್ಮದ್ ನಜೀರ್, ಎಸಿಸಿಇಐ ಕೇಂದ್ರ ಕಚೇರಿ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಕಲ್ಬಾವಿ, ಮಂಗಳೂರು ಕೇಂದ್ರ ಎಸಿಸಿಇಐ ಅಧ್ಯಕ್ಷ ಅರುಣ್ ರಾಜ್, ಕರ್ನಾಟಕ ರಾಜ್ಯ ಡಿಪ್ಲೊಮಾ ಸಿವಿಲ್ ಎಂಜಿನಿಯರ್ಸ್ ಒಕ್ಕೂಟ ಸಂಚಾಲಕ ಪ್ರಶಾಂತ್ ಲೋಕಾಪುರ್ ಭಾಗವಹಿಸುವರು. ಪ್ರಮುಖರಾದ ಮನೋಜ್ ಕುಮಾರ್, ಅನಿಲ್ ಕುಮಾರ್, ಜಯರಾಜ್ ಕೆ.ವಿ., ಶಂಕರ್ ನಾಡಿಗ್ ಹಾರ್ನಹಳ್ಳಿ, ಗುರುಪ್ರಸಾದ್ ಎ.ಬಿ., ಶರತ್ ಗೌಡ ಡಿ.ಎಸ್., ರಘು ಜಿ.ಆರ್., ಕಿರಣ್ ಕುಮಾರ್, ಸತೀಶ ಭಟ್, ಬಾಲಕೃಷ್ಣ ಗೌಡ ಮೊದಲಾದವರನ್ನು ಗೌರವಿಸಲಾಗುವುದು. ಮಂಗಳೂರು ಕರ್ನಾಟಕ ಪಾಲಿಟೆಕ್ನಿಕ್ ಕಾಲೇಜಿನ ನೂತನ ಸಭಾಭವನ ನಿರ್ಮಾಣಕ್ಕೆ ದೇಣಿಗೆ ಸಮರ್ಪಣೆ ನಡೆಯಲಿದೆ ಎಂದರು.

ಸಮಿತಿಯ ಪ್ರಮುಖರಾದ ಮಹಮ್ಮದ್ ಇಕ್ಬಾಲ್, ರವಿಶಂಕರ್ ಎ.ಎನ್., ಧೀರಜ್, ಪ್ರೇಮಾನಂದ ಸಾಲಿಯಾನ್, ಭರತ್ ಉಪಸ್ಥಿತರಿದ್ದರು.

> **▸▸ ವೃತ್ತಿಪರ ಡಿಪ್ಲೊಮಾ ಸಿವಿಲ್ ಎಂಜಿನಿಯರ್ಸ್‌ಗಳ ಅರ್ಹತೆ ಮತ್ತು ಸಾಮರ್ಥ್ಯದಲ್ಲಿ ಆದ ಅನ್ಯಾಯದ ವಿರುದ್ಧ ಹೋರಾಟದಲ್ಲಿ ಸಹಕರಿಸಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ಶಾಸಕ ಡಿ.ವೇದವ್ಯಾಸ ಕಾಮತ್ ಹಾಗೂ ಸಹಕರಿಸಿದವರಿಗೆ ಕೃತಜ್ಞತಾ ಸಮರ್ಪಣಾ ಸಮಾರಂಭ**

ಮಧ್ಯಪ್ರಾಚ್ಯ ಯುದ್ಧ ನಿಲ್ಲಲಿ, ವಿಶ್ವದಾದ್ಯಂತ ಶಾಂತಿ ನೆಲೆಸಲಿ

ಧರಣಿ ಕುಳಿತು ಉಪನ್ಯಾಸಕ ಹೋರಾಟ

ಕುಂದಾಪುರ : ಇರಾನ್ - ಇಸ್ರೇಲ್ ನಡುವೆ ನಡೆಯುತ್ತಿರುವ ಜಾಗತಿಕ ಯುದ್ಧ ಕೂಡಲೇ ನಿಲ್ಲಬೇಕು. ವಿಶ್ವದಾದ್ಯಂತ ಶಾಂತಿ ನೆಲೆಸಬೇಕು. ಮಾನವೀಯ ಸಂಬಂಧಗಳ ಬಿರುಕು ಹೋಗಲಾಡಿಸಬೇಕು ಎಂದು ಆಗ್ರಹಿಸಿ, ಸಾಮಾಜಿಕ ಹೋರಾಟಗಾರ, ರಂಗಕರ್ಮಿ, ಉಪನ್ಯಾಸಕ ರಾಮಾಂಜಿ ನಮ್ಮಭೂಮಿ ಅವರು ಕುಂದಾಪುರದ ಶಾಸ್ತ್ರಿ ವೃತ್ತದ ಎದುರು ಏಕಾಂಗಿಯಾಗಿ ಶನಿವಾರ ಬೆಳಗ್ಗೆಯಿಂದ ಸಂಜೆಯವರೆಗೆ ಧರಣಿ ಕುಳಿತು ಹೋರಾಟ ನಡೆಸಿದರು.

ಪ್ರತಿಭಟನೆಗೆ ಮುನ್ನ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಯುದ್ಧದಲ್ಲಿ ಮಡಿದವರಿಗೆ ಮೌನವಾಗಿ ಅವರು ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರು ತನ್ನ ಜೊತೆಗೆ ಮಗುವಿನ ರೂಪಕವನ್ನೂ ಪ್ರತಿಭಟನೆಯಲ್ಲಿ ಪ್ರತಿಬಿಂಬಿಸಿ, ಸಂಪೂರ್ಣ ಯುದ್ಧ ನಿಲ್ಲಬೇಕು. ಯುದ್ಧ ಜಗತ್ತಿಗೇ ಮಾರಕ. ಪ್ರಕೃತಿ ಉಳಿಯಬೇಕು. ಮಾನವ ಸಂಪನ್ಮೂಲ ಉಳಿಯಬೇಕು. ಪ್ರಕೃತಿ ಸಂಪನ್ಮೂಲ ಮುಂದಿನಪೀಳಿಗೆಗೆವರ್ಗವಾಗಬೇಕು. ನಾವು ಬದುಕಬೇಕು. ಇತರರು ಬದುಕಬೇಕು. ಕುಂದಾಪುರದಿಂದ ವಿಶ್ವಕ್ಕೆ ಶಾಂತಿಯ ಸಂದೇಶ ನೀಡಬಯಸುತ್ತೇನೆ ಎಂದರು.



ಇವರ ಧರಣಿ ನಿರತ ಸ್ಥಳಕ್ಕೆ ಆಗಮಿಸಿ, ಬೆಂಬಲ ವ್ಯಕ್ತಪಡಿಸಿದ ಮಾಜಿಸಂಸದಕೆ.ಜಯಪ್ರಕಾಶ್ ಹೆಗ್ಡೆ ಮಾತನಾಡಿ, ರಾಮಾಂಜಿಯವರ ಹೋರಾಟ ಉದ್ದೇಶವನ್ನು ಶ್ಲಾಘಿಸಿದರಲ್ಲದೆ, ಯುದ್ಧದ ಬಗೆಗಿನ ಭಾವನೆ ಬದಲಾಗಬೇಕು. ಮಾನವೀಯ ಸಂಬಂಧಗಳ ಬಗೆಗಿನ ಮೌಲ್ಯ ಯುವ ಜನರಲ್ಲಿ ಇನ್ನಷ್ಟು ಹೆಚ್ಚಾಗಬೇಕು ಎಂದವರು ಕಿವಿಮಾತು ಹೇಳಿದರು.


ಮೊರಾರ್ಜಿ ದೇಸಾಯಿ ಶಾಲೆ: ಎಸ್ಸೆಸೆಲ್ಸಿ ಶೇ.100% ಫಲಿತಾಂಶ

ಮಂಗಳೂರು: 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಮೊರಾರ್ಜಿ ದೇಸಾಯಿ ಒಟ್ಟು 11 ಶಾಲೆಯಲ್ಲಿ ಶೇ 100% ರಷ್ಟು ಫಲಿತಾಂಶದೊಂದಿಗೆ ವಿದ್ಯಾರ್ಥಿಗಳು ತೇರ್ಗಡೆಯನ್ನು ಹೊಂದಿರುತ್ತಾರೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿಯ ಬಿಎನ್‌ವೈಎಸ್ ಪರೀಕ್ಷೆ

ಶಾರದಾ ಯೋಗ-ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳ ಅಮೋಘ ಸಾಧನೆ

ತಲಪಾಡಿ: ಇಲ್ಲಿನ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಡೆಸಿದ ಬಿ.ಎನ್.ವೈ.ಎಸ್. ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.


ಟಾಪರ್‌ಗಳ ಸಾಧನೆ

ಪ್ರಥಮ ವರ್ಷದ ಬಿಎನ್‌ವೈಎಸ್ ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿನಿ ಸಂಜನಾ ಕನಿವಿಮಠ್ ಅವರು ಶೇ. 86 ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಅದೇ ರೀತಿ, ದ್ವಿತೀಯ ವರ್ಷದ ಬಿಎನ್‌ವೈಎಸ್ ಪರೀಕ್ಷೆಯಲ್ಲಿ ಅನುಶ್ರೀ ಪಿ.ಜಿ. ಮತ್ತು ಸಂಪದ ರಾವ್ ಅವರು ತಲಾ ಶೇ. 85 ಅಂಕಗಳನ್ನು ಗಳಿಸಿ ಜಂಟಿಯಾಗಿ ಅಗ್ರಸ್ಥಾನವನ್ನು ಹಂಚಿಕೊಂಡಿದ್ದಾರೆ.

ಡಿಸ್ಟಿಂಕ್ಷನ್ ಸಾಧಕರು

ವಿದ್ಯಾರ್ಥಿಗಳು ಶೈಕ್ಷಣಿಕ ಪಠ್ಯಕ್ರಮದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದು, ಪ್ರಥಮ ವರ್ಷದ ಬಿಎನ್‌ವೈಎಸ್ ವಿಭಾಗದಲ್ಲಿ 15 ವಿದ್ಯಾರ್ಥಿಗಳು ಮತ್ತು ದ್ವಿತೀಯ ವರ್ಷದ ವಿಭಾಗದಲ್ಲಿ 11 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ (ವಿಶೇಷ ಶ್ರೇಣಿ) ಪಡೆದು ಉತ್ತೀರ್ಣರಾಗಿದ್ದಾರೆ.

ಅಭಿನಂದನೆ

ವಿದ್ಯಾರ್ಥಿಗಳ ಈ ಅದ್ಭುತ ಸಾಧನೆಗೆ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ.ಪುರಾಣಿಕ್, ನಿರ್ದೇಶಕ ಸಮೀರ್ ಪುರಾಣಿಕ್, ಕಾಲೇಜಿನ ಪ್ರಾಂಶುಪಾಲರು ಹಾಗೂ ಬೋಧಕ ವೃಂದದವರು ಹರ್ಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಶ್ರಮ ಮತ್ತು ಶೈಕ್ಷಣಿಕ ಶಿಸ್ತಿನ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ಆಡಳಿತ ಮಂಡಳಿ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ.

ಆಯೋಧ್ಯೆ ಪುಣ್ಯಭೂಮಿಯಲ್ಲಿ ಕನ್ಯಾಡಿ ಶಾಖಾಮಠ

ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿ ನಳಿನ್‌ಕುಮಾರ್ ಕಟೀಲ್ ನೇಮಕ



ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ಕನ್ಯಾಡಿ ನಿತ್ಯಾನಂದ ನಗರದ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನದ ಜಗದ್ಗುರು ಪೀಠಾಧೀಶ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಅವರು ಅಯೋಧ್ಯೆಯಲ್ಲಿ ನಿರ್ಮಿಸುತ್ತಿರುವ ಶಾಖಾ ಮಠದ ನಿರ್ಮಾಣ ಸಮಿತಿ ಅಧ್ಯಕ್ಷರನ್ನಾಗಿ ಶಾಖಾ ಮಠಕ್ಕೆ ರಾಷ್ಟ್ರ-ಅಂತಾರಾಷ್ಟ್ರ ಮಟ್ಟದಲ್ಲಿ ಶಿಷ್ಯರನ್ನು ಹೊಂದಿರುವ ಪರಮ ಪವಿತ್ರ ದೈವೀ ಸಾನಿಧ್ಯ ಹೊಂದಿರುವ ಸಂಸ್ಥೆಗೆ ಮಾಜಿ ಸಂಸದ, ಮಠದ ಪರಮಾಪ್ತ ಶಿಷ್ಯ ನಳಿನ್ ಕುಮಾರ್ ಕಟೀಲ್ ಸರ್ವಸಮರ್ಥರೆಂದು ಮನಗಂಡು ಅವರನ್ನು ನೇಮಕ ಗೊಳಿಸಲಾಗಿದೆ ಎಂದು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ನುಡಿದರು.

ಅವರು ಏ 25 ರಂದು ಶ್ರೀರಾಮ ಕ್ಷೇತ್ರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ನಳಿನ್ ಕುಮಾರ್ ಕಟೀಲ್ ಅವರಿಗೆ ಆದೇಶ ಪತ್ರ ನೀಡಿ ,ಸಮ್ಮಾನಿಸಿ ಅಯೋಧ್ಯೆ ಶಾಖಾ ಮಠದ ನಿರ್ಮಾಣ ಕಾಮಗಾರಿಯ ಪ್ರಗತಿಯ ಕುರಿತು ಮಾಹಿತಿ ನೀಡಿದರು.

ಶ್ರೀರಾಮ ಕ್ಷೇತ್ರದ 9 ಶಾಖಾಮಠಗಳನ್ನು ಸ್ಥಾಪಿಸುವ ಕನಸು, ಕಲ್ಪನೆಯ ಆಶಯದಂತೆ 5 ನೇ ಶಾಖಾ ಮಠವನ್ನು ಅಯೋಧ್ಯೆಯಲ್ಲಿ ನಿರ್ಮಿಸಲು 2025ರಲ್ಲಿ ಕಾರ್ಯಪ್ರವೃತ್ತರಾಗಿದ್ದು ಪಂಚಾಂಗದ ಕೆಲಸ, ಸುತ್ತ ಕಾಂಪೌಂಡ್ ವಾಲ್, ಬೋರ್ ವೆಲ್ ನಿರ್ಮಿಸಲಾಗಿದ್ದು 50 ಸಾವಿರ ಚ.ಅಡಿ ವಿಸ್ತೀರ್ಣದಲ್ಲಿ ಸುಮಾರು ರೂ 20 ಕೋಟಿ ವೆಚ್ಚದಲ್ಲಿ ಶಾಖಾ ಮಠ ಮತ್ತು ಸಭಾಭವನ ನಿರ್ಮಿಸಲಾಗುತ್ತದೆ ಎಂದು ತಿಳಿಸಿದರು.

> **ಶ್ರೀಗಳವರ ನಿ ರಂತರ ಮಾರ್ಗದರ್ಶನ, ಕಷ್ಟ ಸುಖಗಳಲ್ಲಿ ಆಶೀರ್ವಾದ ಪಡೆದವನು ನಾನು. ಅಯೋಧ್ಯೆ ಮಠ ನಿರ್ಮಾಣ ಕಾರ್ಯದ ಆದೇಶವನ್ನು ಶಿರಸಾವಹಿಸಿ ಕಾಯಾ ವಾಚಾ ಮನಸಾ ದುಡಿಯುತ್ತೇನೆ. ಶ್ರೀರಾಮ ದಕ್ಷಿಣೋತ್ತರವನ್ನು ಒಂದುಗೂಡಿಸಿದಂತೆ ಮಠದ ಮೂಲಕ ದಕ್ಷಿಣ ಉತ್ತರವನ್ನು ಸೇರಿಸುವ ಕಾರ್ಯದಲ್ಲಿ ಶ್ರಮಿಸುತ್ತೇನೆ.**
>
> ■ **ನಳಿನ್ ಕುಮಾರ್ ಕಟೀಲು**

2026ರ ಜು 28 ರಂದು ತಮ್ಮ ಚಾತುರ್ಮಾಸ್ಯ ವ್ರತಾಚರಣೆಯನ್ನು ಬೈಂದೂರಿನಲ್ಲಿ ಹಾಗೂ 2027 ರ ಚಾತುರ್ಮಾಸ್ಯ ವ್ರತವನ್ನು ಕುಂಭಮೇಳ ನಡೆಯಲಿರುವ ನಾಸಿಕ್‌ನಲ್ಲಿ ನಡೆಸಲಾಗುವುದೆಂದು ಅವರು ತಿಳಿಸಿದರು.

ಗುರುದೇವ ಮಠದ ಟ್ರಸ್ಟಿ ಪೀತಾಂಬರ ಹೆರಾಜೆ, ಜಯಂತ ಕೋಟ್ಯಾನ್, ವಿಕಾಸ್ ಪುತ್ತೂರು ಮಾತನಾಡಿದರು.

ವೇದಿಕೆಯಲ್ಲಿ ನಾಗೇಶ್ ಕುಮಾರ್ ಗೌಡ, ರಾಜೇಶ್ ಪೈ, ತಿಮ್ಮಪ್ಪ ಗೌಡ ಬೆಳಾಲು, ರವೀಂದ್ರ ಪೂಜಾರಿ ಅರ್ಲ, ಕೃಷ್ಣಪ್ಪ ಗುಡಿಗಾರ್, ಶಿವಕಾಂತ ಗೌಡ, ರತ್ನಾಕರ ಬುಣ್ಣನ್ , ರಾಜೇಶ್ ಪೂಜಾರಿ, ಸುನಿಲ್ ಕನ್ಯಾಡಿ, ಕೇಶವ ಬಂಗೇರ, ಹರೀಶ್ ಸುವರ್ಣ, ಯತೀಶ್ ಸುವರ್ಣ, ವಿನೋಬಾ ಕಾರಂತ್, ಪುರುಷೋತ್ತಮ ಪೂಜಾರಿ, ತುಕಾರಾಮ ಸಾಲಿಯಾನ್, ಕೃಷ್ಣಪ್ಪ ಪೂಜಾರಿ ಕಲ್ಲಡ್ಕ ಉಪಸ್ಥಿತರಿದ್ದರು. ಕೇಶವ ಗೌಡ ನಿರೂಪಿಸಿದ ಕಾರ್ಯಕ್ರಮದಲ್ಲಿ ಸಂಪತ್ ಸುವರ್ಣ ವಂದಿಸಿದರು.

ಕುದ್ರೋಳಿಯಲ್ಲಿ ಬೆಳ್ಳಂಬೆಳಗ್ಗೆ ಒಂದು ಗಂಟೆ ಮಾತ್ರ ನೀರು | ನೀರಿಗಾಗಿ ಜನತೆಯ ಪರದಾಟ

ಕೊನೆಯ ಸ್ಥಳಗಳಿಗೆ ನೀರು ತಲುಪುವುದೇ ಇಲ್ಲ

ದಿಗಂತ ವಾಟರ್ ಚೆಕ್

▸ **ಹರೀಶ ಕುಲ್ಕುಂದ**

ಮಂಗಳೂರು: ಫಲ್ಗುಣಿ ನದಿ ಬದಿಯಲ್ಲಿ ವ್ಯಾಪಿಸಿಕೊಂಡಿರುವ ಕುದ್ರೋಳಿ ವಾರ್ಡ್‌ನ ಬಹುತೇಕ ಕಡೆಗಳಲ್ಲಿ ನೀರಿನ ಸಮಸ್ಯೆ ಭಾರಿ ಪ್ರಮಾಣದಲ್ಲಿ ಇದೆ.

ಬರ್ಕೆಯಿಂದ ಬೊಕ್ಕಪಟ್ಣ ಚರ್ಚ್, ಭಾರತ್ ಶಾಲೆ ಹಿಂಭಾಗ, ಕುದ್ರೋಳಿ ಪ್ರದೇಶ, ಕಂಡತ್‌ಪಳ್ಳಿ ಶಾಲೆ, ಮೊಯಿದೀನ್ ನಗರ, ಟಿಪ್ಪು ಸುಲ್ತಾನ್ ನಗರ, ಅಲ್ ಅಮೀನ್ ನಗರ, ಕುದ್ರೋಳಿ ಮುಖ್ಯರಸ್ತೆ ಒಳಗೊಂಡಿರುವ ಕುದ್ರೋಳಿ ವಾರ್ಡ್‌ನಲ್ಲಿ ಶಾಲೆ, ದೇವಸ್ಥಾನ, ಮಸೀದಿಗಳಿದ್ದು, ನೀರಿನ ಸಮಸ್ಯೆ ಬಹುವಾಗಿ ಕಾಡುತ್ತಿದೆ.

ಈ ವಾರ್ಡ್‌ನ ರಹಮತ್ ನಗರ, ಅಲ್ ಅಮೀನ್ ನಗರ, ಕುದ್ರೋಳಿ ಮುಖ್ಯರಸ್ತೆ, ಸಿಪಿಸಿ ಕಂಪೌಂಡ್, ಜಾಮೀಯಾ ನಗರ, ದೋಗು ಕಂಪೌಂಡ್, ಕರ್ಬಲ ಕಂಪೌಂಡ್ ಪ್ರದೇಶಗಳಿಗೆ ಮನಪಾ ಪೈಪ್‌ಲೈನ್‌ನಲ್ಲಿ ನೀರು ಬರುತ್ತಿಲ್ಲ, ನೀರು ಪೂರೈಕೆಗೊಂಡರೂ ಪ್ರಮಾಣ ಕಡಿಮೆ ಎಂಬ ದೂರುಗಳಿವೆ. ಉರ್ದು ಶಾಲೆ ಬಳಿ ನೀರಿನ ತೀವ್ರ ಸಮಸ್ಯೆಯಿದೆ.

ಕುದ್ರೋಳಿ ವಾರ್ಡ್‌ಗೆ ಬೆಂದೂರ್‌ವೆಲ್ ಟ್ಯಾಂಕ್‌ನಿಂದ ನೀರು ಸರಬರಾಜು ಆಗುತ್ತಿದೆ. ಪ್ರತಿದಿನ ಬೆಳಗ್ಗೆ ಒಂದೂವರೆ ಗಂಟೆಗಳ ಕಾಲ ಮಾತ್ರ ನೀರು ಬರುತ್ತದೆ. ಸಂಜೆ ನೀರು ಬಂದರೆ ಬಂತು, ಇಲ್ಲವಾದರೆ ಇಲ್ಲ. ಮಂಗಳೂರು ಮಹಾನಗರ ಪಾಲಿಕೆಯ ಬೆಂದೂರ್ ವೆಲ್ ಟ್ಯಾಂಕ್‌ನಿಂದ ನೀರು ಪೂರೈಸುವ ಪೈಪ್‌ಲೈನ್‌ಗೆ ಕುದ್ರೋಳಿ ಕೊನೆಯ ವಾರ್ಡ್ ಆಗಿದೆ. ಪೈಪ್‌ಲೈನ್‌ನಕೊನೆಯಸ್ಥಳವಾದಕಾರಣ ಉಳಿದ ವಾರ್ಡ್‌ಗಳಿಗೆ ನೀರು ಪೂರೈಕೆಗೊಂಡು ಬಳಿಕ ಕುದ್ರೋಳಿ ವಾರ್ಡ್‌ಗೆ ನೀರು ಬರುತ್ತದೆ. ಹೀಗಾಗಿ ಇಲ್ಲಿಗೆ ಪೂರೈಕೆಯಾಗುವ ನೀರಿನ ಪ್ರಮಾಣವೇ ಕಡಿಮೆ. ನೀರು ಪೂರೈಕೆಯಲ್ಲಿ ಪ್ರೆಶರ್ ಕೊರತೆ ಇದೆ. ಇದರಿಂದಾಗಿ ಕುದ್ರೋಳಿ ವಾರ್ಡ್ ನಿವಾಸಿಗಳಿಗೆ ಅಗತ್ಯ ಇರುವಷ್ಟು ನೀರು ಲಭ್ಯವಾಗುತ್ತಿಲ್ಲ. ಕೊನೆಯ ಸ್ಥಳಗಳಿಗೆ ನೀರು ತಲುಪುವುದೇ ಇಲ್ಲ ಎನ್ನುವುದು ಇಲ್ಲಿನ ನಿವಾಸಿಗಳ ಅಳಲು.

ನೀರಿನಕೊರತೆ ಬಾಧಿಸುತ್ತಿರುವ ಕುದ್ರೋಳಿ ವಾರ್ಡ್‌ಗೆ ಮನಪಾ ಟ್ಯಾಂಕರ್ ನೀರು ಪೂರೈಕೆ ಅಪರೂಪ. ಶಾಲೆಗಳಿಗೆ ಮನಪಾ ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ.



ಕುದ್ರೋಳಿ ವಾರ್ಡ್‌ನಲ್ಲಿ ಶನಿವಾರ ರಾಜಕಾಲುವೆ ಹೂಳು ತೆಗೆಯಲಾಯಿತು

> **ಕುದ್ರೋಳಿ ಪರಿಸರದಲ್ಲಿ ಪ್ರತಿದಿನ ಮುಂಜಾನೆ ನೀರು ಪೂರೈಕೆ ಆಗುತ್ತಿದೆ. ಆದರೆ,ಪ್ರೆಶರ್ ಸಮಸ್ಯೆ. ಬೆಳಗ್ಗಿನ ವೇಳೆ ಪ್ರೆಶರ್ ಇಲ್ಲದೆ ನೀರಿನ ತೊಟ್ಟಿ ತುಂಬುತ್ತಿಲ್ಲ. ಸಪೂರವಾಗಿ ನೀರು ಬರುತ್ತಿದ್ದು, ನಿತ್ಯದ ಅಗತ್ಯಕ್ಕೆ ಸಾಕಾಗುತ್ತಿಲ್ಲ. ನೀರಿನ ಸಮಸ್ಯೆ ಬಗ್ಗೆ ಸಂಬಂಧಪಟ್ಟವರಿಗೆ ಒತ್ತಡ ಹಾಕಿದರೆ ಒಂದೆರಡು ದಿನಗಳ ಕಾಲ ಸಮರ್ಪಕವಾಗಿ ನೀರು ಬರುತ್ತದೆ. ಮತ್ತೆ ಹಿಂದಿನಂತೆಯೇ ಪ್ರೆಶರ್ ಇರುವುದಿಲ್ಲ. ಈಗ ನಾವು ನೀರಿಗಾಗಿ ಪಕ್ಕದ ಮನೆಯವರ ಬಾವಿಯನ್ನು ಅವಲಂಬಿಸಿದ್ದೇವೆ. ಪ್ರತಿದಿನ ಪಕ್ಕದ ಮನೆಯವರ ಬಳಿ ನೀರಿಗಾಗಿ ವಿನಂತಿಸುವುದು ಸರಿ ಕಾಣುವುದಿಲ್ಲ. ದಯವಿಟ್ಟು ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಮನಸ್ಸು ಮಾಡಬೇಕು.**
>
> ■ **ಸುರೇಖಾ, ಕುದ್ರೋಳಿ ಕೊಯನಾ ಕಂಪೌಂಡ್ ನಿವಾಸಿ**

ಆದರೆ, ಮನಪಾ ನೀರಿನ ಟ್ಯಾಂಕರ್ ಸೂಕ್ತ ಸಮಯಕ್ಕೆ ಅಗತ್ಯ ಇರುವ ಕಡೆಗೆ ತಲುಪುತ್ತಿಲ್ಲ. ತಡವಾಗಿ ಆಗಮಿಸುತ್ತದೆ ಎನ್ನುವುದು ಸ್ಥಳೀಯರ ದೂರು.

ಜಲಸಿರಿ ಯೋಜನೆ ಕಾಮಗಾರಿಗಳು ಮೊದಲು ಕುದ್ರೋಳಿ ವಾರ್ಡ್‌ನಲ್ಲಿ ಆರಂಭಗೊಂಡಿತ್ತು. ಮೈನ್ ಪೈಪ್ ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, ಜಲಸಿರಿಯ ಶೇ.90ರಷ್ಟು ಕೆಲಸಗಳು ಆಗಿವೆ.

> **ನಮ್ಮಲ್ಲಿ ಕಳೆದ ಎರಡು ತಿಂಗಳಿ ನಿಂದ ಮನಪಾ ಪೈಪ್‌ಲೈನ್‌ನಲ್ಲಿ ಒಂದು ತೊಟ್ಟು ನೀರು ಬರುತ್ತಿಲ್ಲ. ಪ್ರತಿನಿತ್ಯ ನೀರಿಗಾಗಿ ಪರದಾಡುವಂತಾಗಿದೆ. ಸಮರ್ಪಕವಾಗಿ ನೀರು ಪೂರೈಸುವಂತೆ ಸಂಬಂಧಪಟ್ಟವರಿಗೆ ತಿಳಿಸಿ ಸಾಕಾಯಿತು. ಬೋರ್‌ವೆಲ್ ನೀರು ಉಪ್ಪಾಗಿದ್ದು, ಕುಡಿಯಲು ಸಾಧ್ಯವಾಗುತ್ತಿಲ್ಲ. ಕನಿಷ್ಠ ಎರಡು ದಿನಕ್ಕೆ ಒಮ್ಮೆಯಾದರೂ ಅಗತ್ಯ ಪ್ರಮಾಣದಲ್ಲಿ ನೀರು ಪೂರೈಸಲು ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.**
>
> ■ **ಮೊಹಮ್ಮದ್ ಸಲೀಂ, ಕುದ್ರೋಳಿ ಉರ್ದು ಶಾಲೆ ಬಳಿಯ ನಿವಾಸಿ**



> **ಕುದ್ರೋಳಿ ವಾರ್ಡ್‌ಗೆ ಮನಪಾ ಪೈಪ್‌ಲೈನ್‌ನಲ್ಲಿ ಸರಬರಾಜು ಆಗುವ ನೀರಿನ ಪ್ರಮಾಣವೇ ಕಡಿಮೆ. ಪ್ರೆಶರ್ ಇಲ್ಲದೆ ಇಲ್ಲಿಗೆ ನೀರು ತಲುಪುತ್ತಿಲ್ಲ. ನಮ್ಮ ವಾರ್ಡ್ ಎತ್ತರ ತಗ್ಗು ಪ್ರದೇಶ ಒಳಗೊಂಡಿಲ್ಲ. ಆದರೂ, ಇಲ್ಲಿಗೆ ನೀರು ಬರುತ್ತಿಲ್ಲ. ಅಗತ್ಯ ಇರುವವರಿಗೆ ವೈಯಕ್ತಿಕ ನೆಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಉತ್ತಮ ಪ್ರೆಶರ್‌ನೊಂದಿಗೆ ಪ್ರತಿದಿನ ಮೂರ್‍ನಾಲ್ಕು ಗಂಟೆಗಳ ಕಾಲವಾದರೂ ನೀರು ನೀಡಿದರೆ ನಮ್ಮ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಕಾಣಿಸದು. ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ನಡೆಸಲಾಗಿದೆ. ಕುದ್ರೋಳಿ ಮುಖ್ಯರಸ್ತೆ ಅಗಲೀಕರಣ ಕಾರ್ಯ ನಡೆಯುತ್ತಿದ್ದು, ನಾಲ್ಕು ಕೋಟಿ ರೂ.ವೆಚ್ಚದ ಕಾಮಗಾರಿ ಆಗಿದೆ. ಈ ರಸ್ತೆಯಲ್ಲಿ 25 ಮನೆಗಳನ್ನು ಭಾಗಶಃ ತೆರವುಗೊಳಿಸಿ, ಮತ್ತೆ ಕಟ್ಟಿಕೊಡಲಾಗಿದೆ. ಟಿಪ್ಪು ಸುಲ್ತಾನ್ ನಗರ, ಮೊಯಿದೀನ್ ನಗರ, ಸಿಪಿಸಿ ಕಂಪೌಂಡ್, ಕರ್ಬಲ ಕಂಪೌಂಡ್, ದೋಗು ಕಂಪೌಂಡ್ ಮಿಷನ್ ಕಂಪೌಂಡ್ ಮುಂತಾದ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿಗೊಳಿಸಿ ಕಾಂಕ್ರೀಟ್ ಅಳವಡಿಸಲಾಗಿದೆ. ಭಾರತ್ ಶಾಲೆ ಬಳಿ ಕಾಂಕ್ರೀಟ್, ಪೈಪ್‌ಲೈನ್ ಕಾಮಗಾರಿ ನಡೆದಿದೆ. ಕಂಡತ್‌ಪಳ್ಳಿ-ಕಸಾಯಿಖಾನೆ ರಸ್ತೆ ಡಾಂಬರೀಕರಣ ಆಗಿದೆ. ಸ್ಮಾರ್ಟ್ ಸಿಟಿ ಯೋಜನೆಯಿಂದ ಎಲ್‌ಇಡಿ ಲೈಟ್ ಹಾಕಲಾಗಿದೆ.**
>
> ■ **ಸಂಶುದ್ದೀನ್, ಕುದ್ರೋಳಿ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್**

ಸಾರ್ವಜನಿಕ ಬಾವಿ ಶುಚಿಗೊಳಿಸಿ

ಕುದ್ರೋಳಿ ವಾರ್ಡ್‌ನಲ್ಲಿ ಸಾರ್ವಜನಿಕ ಕೊಳವೆಬಾವಿ ಇಲ್ಲ. ರಹಮತ್ ನಗರದಲ್ಲಿ ಸರಕಾರಿ ಬಾವಿ ಇದ್ದು, ಕಸ ತುಂಬಿಕೊಂಡಿದೆ. ಅದನ್ನು ಮನಪಾ ವತಿಯಿಂದ ಶುಚಿಗೊಳಿಸಿದರೆ ನೀರು ಉಪಯೋಗಿಸಬಹುದು. ಮಳೆಗಾಲದಲ್ಲಿ ಭಾರಿ ಮಳೆ ಬಂದಾಗ ಕಂಬ್ಳ ಪರಿಸರದಲ್ಲಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಕುದ್ರೋಳಿ ದೇವಸ್ಥಾನ ಹಿಂಭಾಗ, ಬರ್ಕೆ ಬಳಿ ರಾಜಕಾಲುವೆ ಇದ್ದು, ಹೂಳು ತೆಗೆಯುವ ಕೆಲಸ ನಡೆಯುತ್ತಿದೆ.

ಮುಂದಿನ ವಾರ್ಡ್ -44
ಬಂದರ್ ಪರಿಸರದ ಸ್ಥಿತಿಗತಿ

ಕಾಂಗ್ರೆಸ್ ಮಹಿಳಾ ವಿರೋಧಿ: ಜೋಶಿ ಆಕ್ರೋಶ

ಹುಬ್ಬಳ್ಳಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮೀಸಲಾತಿಯನ್ನು ಹಿಂದಿನ ಪ್ರಧಾನಿಗಳಾದ ನೆಹರೂ ಹಾಗೂ ರಾಜೀವ ಗಾಂಧಿ ವಿರೋಧಿಸಿದ್ದರು. ಈಗ ಮಹಿಳಾ ಮೀಸಲಾತಿಯನ್ನು ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಧಿಕ್ಕರಿಸುವ ಮೂಲಕ ಕಾಂಗ್ರೆಸ್ ಮೀಸಲಾತಿ ಮತ್ತು ಮಹಿಳಾವಿರೋಧಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹರಿಹಾಯ್ದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2011ರ ಜನಗಣತಿ ಆಧಾರಿತವಾಗಿ ಕ್ಷೇತ್ರ ಮನರ್ ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿ ಎರಡನ್ನೂ ಕೇಂದ್ರ ಸರ್ಕಾರ ಒಟ್ಟೊಟ್ಟಿಗೆ ತೆಗೆದುಕೊಂಡಿದೆ. ಆದರೆ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಜನಗಣತಿ ಆಧಾರಿತವಾಗಿ ಕ್ಷೇತ್ರ ಮನರ್ ವಿಂಗಡಣೆ ಮಾಡಿದರೆ ದಕ್ಷಿಣ ರಾಜ್ಯಗಳಿಗೆ, ಸಣ್ಣ ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬುದು ಮೊಂಡವಾದವಾಗಿದೆ. ಪದೇ ಪದೆ

ದಕ್ಷಿಣ ಭಾರತ, ಉತ್ತರ ಭಾರತ ಎಂದೆನೆಸುತ್ತ, ಈಗ ಡಿಲಿಮಿಟೇಷನ್ ವಿಚಾರದಲ್ಲೂ ಅದೇ ವರ್ತನೆ ತೋರುತ್ತಿದೆ. ಡಿಲಿಮಿಟೇಷನ್ ವಿಚಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಸ್ಯೆ ಇದ್ದದ್ದೇ ನಿಜವಾದರೆ, ಬಿಬಿಎಂಪಿಯನ್ನೇಕೆ ಡಿಲಿಮಿಟೇಷನಗ್ ಮಾಡಿದ್ದೀರಿ ಎಂದು ಪ್ರಶ್ನಿಸಿದರು. ಲೋಕಸಭೆ ಸ್ಥಾನಗಳು 543 ಇರಲಿ, 850 ಆಗಲಿ ಮತದಾರರು ಮಾತ್ರ ಅವರೇ ಇರುತ್ತಾರೆ. ಒಂದೊಂದು ಕ್ಷೇತ್ರದಲ್ಲಿ 40-50 ಲಕ್ಷ ಮತದಾರರಿದ್ದಾರೆ. ಇಷ್ಟು ಜನಸಂಖ್ಯೆಗೆ ಒಬ್ಬ ಸಂಸದರು ಎಲ್ಲರನ್ನೂ ತಲುಪಲು ಸಾಧ್ಯವಿಲ್ಲ. ಕಾಂಗ್ರೆಸ್ ಇದರ ಅರಿವಿಲ್ಲವೇ. ಇದೇನು



ಖರ್ಗೆಯಿಂದ ಕೆಳಮಟ್ಟದ ಹೇಳಿಕೆ

ಮಲ್ಲಿಕಾರ್ಜುನ ಖರ್ಗೆ ತಮ್ಮ ಇಡೀ ರಾಜಕೀಯ ಜೀವನವನ್ನೇ ವಿಧಾನಸಭೆ, ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಕಳೆದಿದ್ದಾರೆ. ಹೀಗಿದ್ದರೂ ತೀರ ಕೆಳಮಟ್ಟಕ್ಕಿಳಿದಿರುವ ಖರ್ಗೆ, ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆದಿದ್ದಾರೆ ಎಂದು ಜೋಶಿ ಬೇಸರ ವ್ಯಕ್ತಪಡಿಸಿ, 2011ರ ಜನಗಣತಿ ಆಧಾರಿತವಾಗಿ ಕ್ಷೇತ್ರ ಮನರ್ ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿ ಎರಡನ್ನೂ ಕೇಂದ್ರ ಸರ್ಕಾರ ಒಟ್ಟೊಟ್ಟಿಗೆ ತೆಗೆದುಕೊಂಡಿದೆ. ಆದರೆ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ ಎಂದು ಆರೋಪಿಸಿದರು.

ಮುಂದಿನ ಹೋರಾಟದ ಬಗ್ಗೆ ಚರ್ಚೆ ನಡೆಯುತ್ತಿದೆ. ವಿಶೇಷ ಅವಕಶ ನೀಡಲು, ಮೀಸಲಾತಿ ಅವಶ್ಯ. ಡಿಲಿಮಿಟೇಷನ್ ಏನೇ ಆದರೂ ಕಾಂಗ್ರೆಸ್ ಸೋಲುವುದು ಖಚಿತ ಎಂದು ಹೇಳಿದರು. ಮೇಯರ್ ಜ್ಯೋತಿ ಪಾಟೀಲ್, ಜಿಲ್ಲಾ ಅಧ್ಯಕ್ಷೆ ಸೀಮಾ ಲದ್ವಾ, ಅಕ್ಕಮ್ಮ ಹೆಗಡೆ, ಉಮಾ, ನಾಗರತ್ನ ಬಳ್ಳಾರಿ, ಶಾಂತಾ ನಿರವಣೆ ಇದ್ದರು.

ಅರಾಘ್ಚಿ-ಷರೀಫ್ ಶಾಂತಿಗಾಗಿ ಚರ್ಚೆ

ಪುಟ ೧➡ **ಫಲಪ್ರದ ಭೇಟಿ, ಪಾಕ್ ಪ್ರಧಾನಿ:** ಪರಸ್ಪರ ಹಿತಾಸಕ್ತಿ ವಿಚಾರಗಳು, ಪಾಕಿಸ್ತಾನ-ಇರಾನ್ ನಡುವಿನ ದ್ವಿ ಪಕ್ಷೀಯ ಸಂಬಂಧ ಬಲಗೊಳಿಸುವ ನಿಟ್ಟಿನಲ್ಲಿ ಸ್ನೇಹಮಯ, ಫಲಪ್ರದವಾದ ಮಾತುಕತೆ ನಡೆಸಿದ್ದೇವೆ ಎಂದು ಪಾಕ್ ಪ್ರಧಾನಿ ಷರೀಫ್ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಶಾಂತಿ ಮಾತುಕತೆ ಸದ್ಯಕ್ಕಿಲ್ಲ: ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ನೇರ ಮಾತುಕತೆ ಯಾವಾಗ ನಡೆಯಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟತೆಯಿಲ್ಲ. ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಮಾತುಕತೆ ಯೋಜನೆ ಇರಲಿಲ್ಲ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯ್ ಹಮಾನೆ ಶನಿವಾರ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ನಿಯೋಗವು ಪಾಕಿಸ್ತಾನಕ್ಕೆ ತೆರಳುತ್ತಿರುವ ಸಂದರ್ಭ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ಇರಾನ್ ನಿಯೋಗವು ಶನಿವಾರ ಇಸ್ಲಾಮಾಬಾದ್‌ನಿಂದ ಮಸ್ಕತ್‌ನತ್ತ ಪ್ರಯಾಣ ಬೆಳೆಸಿದ್ದು, ಅಮೆರಿಕ-ಇರಾನ್ ನಡುವಿನ ದ್ವಿತೀಯ ಸುತ್ತಿನ ಸಭೆ ಸದ್ಯಕ್ಕಿಲ್ಲ ಎಂಬುದು ಸ್ಪಷ್ಟವಾಗಿದೆ. ಅರಾಘ್ಚಿ ಪಾಕ್ ಭೇಟಿಗೂ ಮುನ್ನ ಮಸ್ಕತ್ ಮತ್ತು ಮಾಸ್ಕೋ ಭೇಟಿ ನೀಡುವುದಾಗಿ ಈ ಮೊದಲೇ ತಿಳಿಸಿದ್ದರು.

ಶಾಂತಿ, ಸ್ಥಿರತೆ ಮರುಸ್ಥಾಪನೆಗೆ ಯತ್ನ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆ ಮರುಸ್ಥಾಪನೆಗಾಗಿ ಅಮೆರಿಕ-ಇರಾನ್ ನಡುವೆ ಎರಡನೇ ಸುತ್ತಿನ ಶಾಂತಿ ಮಾತುಕತೆಯ ಆತಿಥ್ಯ ವಹಿಸಲು ಪಾಕಿಸ್ತಾನ ತನ್ನೆಲ್ಲಾ ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಲಿದೆ ಎಂದು ಪಾಕ್ ಉಪಪ್ರಧಾನಿ ಇಶಾಕ್ ದಾರ್ ಶನಿವಾರ ಹೇಳಿದ್ದಾರೆ.

ವಿಟ್ಕಾಫ್, ಕುಶ್ನರ್ ಪಾಕ್ ಪ್ರವಾಸ ರದ್ದು: ಟ್ರಂಪ್

ಅಮೆರಿಕ ನಿಯೋಗದ ಪಾಕ್ ಭೇಟಿಗೂ ಮುನ್ನ ಇರಾನ್ ನಿಯೋಗವು ಇಸ್ಲಾಮಾಬಾದ್ ತೊರೆದಿರುವ ಹಿನ್ನೆಲೆಯಲ್ಲಿ ಯುಎಸ್ ಸಂಧಾನಕಾರ ಸ್ಟೀವ್ ವಿಟ್ಕಾಫ್ ಮತ್ತು ಅಳಿಯ ಜರೇದ್ ಕುಶ್ನರ್ ನೇತೃತ್ವದ ನಿಯೋಗದ ಪಾಕ್ ಪ್ರವಾಸವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಗೊಳಿಸಿದ್ದಾರೆ. ಇರಾನಿಯನ್ನರು ಅಗತ್ಯ ಮಾತನಾಡಬೇಕೆಂದರೆ ಅಮೆರಿಕಕ್ಕೆ ಯಾವುದೇ ಕ್ಷಣದಲ್ಲಿ ದೂರವಾಣಿ ಕರೆ ಮಾಡಬಹುದು ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದು, ಪಾಕ್ ಮಧ್ಯಸ್ಥಿಕೆಯ ಪಾತ್ರವನ್ನು ನೇರವಾಗಿ ಕಡೆಗಣಿಸಿದ್ದಾರೆ. ನಮ್ಮ ನಿಯೋಗದ ಸದಸ್ಯರು ಪಾಕ್‌ಗೆ ತೆರಳುವವರಿದ್ದರು, ನಾನೇ ತಡೆದಿದ್ದೇನೆ ಎಂದು ಟ್ರಂಪ್ ಹೇಳಿದ್ದಾರೆ.

ಇಸ್ರೇಲ್ ದಾಳಿ: 15 ಹೆಜ್ಬೊಲ್ಲಾಗಳ ಹತ್ಯೆ

ಲೆಬನಾನ್: ಇಸ್ರೇಲ್-ಲೆಬನಾನ್ ಕದನ ವಿರಾಮವನ್ನು 3 ವಾರಗಳ ಕಾಲ ವಿಸ್ತರಣೆ ಮಾಡಿರುವ ಹೊರತಾಗಿಯೂ, ದಕ್ಷಿಣ ಲೆಬನಾನ್‌ನಲ್ಲಿ ಶುಕ್ರವಾರ ಮತ್ತು ಶನಿವಾರಗಳ ನಡುವೆ 15 ಹೆಜ್ಬೊಲ್ಲಾ ಬಂಡುಕೋರರನ್ನು ಇಸ್ರೇಲ್ ರಕ್ಷಣಾ ಪಡೆಗಳು ಹತ್ಯೆಗೈದಿವೆ.

ಸಾಮಾಜಿಕ ಮಾಧ್ಯಮದಲ್ಲಿ ನೀಡಿದ ಹೇಳಿಕೆಯಲ್ಲಿ, ದಕ್ಷಿಣ ಲೆಬನಾನ್‌ನಲ್ಲಿ ಶಸ್ತ್ರಾಸ್ತ್ರಗಳೊಂದಿಗೆ ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದ ಮೂವರು ಹೆಜ್ಬೊಲ್ಲಾ ಸದಸ್ಯರನ್ನು ಹೊಡೆದುರುಳಿಸಿದ್ದೇವೆ ಎಂದು ಐಡಿಎಫ್ ಹೇಳಿದೆ. ಐಡಿಎಫ್ ಪಡೆಗಳು ಆಕ್ರಮಿಸಿಕೊಂಡಿರುವ ಇಸ್ರೇಲ್ ಗಡಿಯಲ್ಲಿರುವ ಲೆಬನಾನಿನ ಭೂಪ್ರದೇಶದ ಆಳವಾದ ಪ್ರದೇಶವಾದ ಫಾರ್ವರ್ಡ್ ಡಿಫೆನ್ಸ್ ಲೈನ್‌ನಲ್ಲಿ ದಕ್ಷಿಣಕ್ಕೆ ಮೋಟಾರ್ ಸೈಕಲ್‌ನಲ್ಲಿ ಸವಾರಿ ಮಾಡುತ್ತಿದ್ದ ಮತ್ತೋರ್ವ ಹೆಜ್ಬೊಲ್ಲಾ ಸದಸ್ಯನನ್ನು ಕೊಂದಿದೆ ಎಂದು ಐಡಿಎಫ್ ಹೇಳಿದೆ. ಲಿಟಾನಿ ಪ್ರದೇಶದಲ್ಲಿ ವಾಯುದಾಳಿಯಲ್ಲಿ ಇನ್ನೂ ಇಬ್ಬರು ಹೆಜ್ಬೊಲ್ಲಾ ಸದಸ್ಯರು ಮೃತಪಟ್ಟಿದ್ದಾರೆ ಎಂದು ಐಡಿಎಫ್ ಹೇಳಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಘೆ

ದಿನದ ಮಾತು

ಸತ್ಯವು ಮನುಷ್ಯನ ಘನತೆ, ಗೌರವವನ್ನು ಹೆಚ್ಚಿಸುತ್ತದೆ.

▲ಮಹಾವೀರ

ಕಿಡಿ ನುಡಿ

◆ವಾಸುದೇವರಾವ್ ಕಕ್ಕೆನೇಜಿ

◈ ಗುಜರಾತ್ ಜನಗಳು ಅನಕ್ಷರಸ್ಥರು, ಹೀಗಾಗಿ ನರೇಂದ್ರ ಮೋದಿಯವರು ಅವರನ್ನು ಸುಲಭವಾಗಿ ಮೂರ್ಖರನ್ನಾಗಿಸುತ್ತಾರೆ

- ಮಲ್ಲಿಕಾರ್ಜುನ ಖರ್ಗೆ

- ಅನಕ್ಷರಸ್ಥರೆಲ್ಲ ಅಜ್ಞಾನಿಗಳಲ್ಲ, ಅಕ್ಷರಸ್ಥ ಅಹಂಕಾರಿಗಳಿಗೆ ದೃಷ್ಟಿದೋಷದಿಂದ ಹಾಗೆ ಕಂಡರೆ ಅನಕ್ಷರಸ್ಥರು ಜವಾಬ್ದಾರಿಯಲ್ಲ!

ದಿನ ಭವಿಷ್ಯ

ಮೇಷ
ವೈಯಕ್ತಿಕ ಗುರಿ ಸಾಧಿಸಲು ಹೆಚ್ಚು ಆದ್ಯತೆ ಕೊಡುವಿರಿ. ಆದರೆ ಆಂಶಿಕ ಸಫಲತೆ. ಸ್ವಲ್ಪ ಮಟ್ಟಿನ ಹತಾಶೆ, ಅಸಹನೆ ಉಂಟಾದೀತು.

ವೃಷಭ
ಸಾಧನೆಯ ದಿನ. ಯೋಚಿಸಿದ ಕಾರ್ಯದಲ್ಲಿ ಸಫಲತೆ. ಕೌಟುಂಬಿಕ ಇಷ್ಟಾರ್ಥ ಪೂರೈಸಲಿದೆ. ಆದರೆ ಗೆಳೆತನದಲ್ಲಿ ಮುನಿಸು ಮೂಡೀತು.

ಮಿಥುನ
ಸಂಬಂಧದಲ್ಲಿ ನಿಮ್ಮ ತಾಳ್ಮೆ ಪರೀಕ್ಷಿಸುವ ಬೆಳವಣಿಗೆ. ಕ್ಷುಲ್ಲಕ ವಿಷಯವೆಂದು ಕಡೆಗಣನೆ ಬೇಡ. ಸಂಘರ್ಷಕ್ಕೆ ಇಳಿಯಬೇಡಿ.

ಕಟಕ
ಕ್ಲಿಷ್ಟಕರ ಪರಿಸ್ಥಿತಿ ಉದ್ಭವಿಸಿದರೂ ಬಳಿಕ ಶಮನವಾಗಲಿದೆ. ಶ್ಲಾಘನೆ ಪಡೆಯುವಿರಿ. ಪ್ರೀತಿಯಲ್ಲಿ ಯಶಸ್ಸು. ಬಂಧುವೊಬ್ಬರು ಮುನಿಸಿಕೊಳ್ಳಬಹುದು.

ಸಿಂಹ
ಇತರರ ಜತೆ ವ್ಯವಹರಿಸುವಲ್ಲಿ ತೊಡಕು ಕಾಣಿಸಲಿದೆ. ಇದರಿಂದ ಮನಸ್ತಾಪ ಸಂಭವ. ಲಘು ಅನಾರೋಗ್ಯ ಕಾಡಬಹುದು.

ಕನ್ಯಾ
ದಿನವಿಡೀ ಕೆಲಸದ ಒತ್ತಡ. ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ಸಣ್ಣ ಲೋಪ ಗಂಭೀರ ಪರಿಣಾಮ ಬೀರೀತು. ಕೌಟುಂಬಿಕ ಒತ್ತಡ.

ತುಲಾ
ಸಂತೋಷದ ದಿನ. ಖಾಸಗಿ ಬದುಕಿನಲ್ಲಿ ಪ್ರೀತಿ, ಸಾಮರಸ್ಯ. ವೃತ್ತಿ ವ್ಯವಹಾರ ಸುಲಲಿತ. ಇಂದು ಸಾಲ ಕೊಟ್ಟ ಹಣ ಮರಳಿ ಸಿಗದು.

ವೃಶ್ಚಿಕ
ವೈಯಕ್ತಿಕ ವಿಚಾರದಲ್ಲಿ ಕೆಲವು ಚಿಂತೆ ಕಾಡುವುದು. ಬೆಂಬಲದ ಕೊರತೆ. ಅನ್ಯರ ಮೇಲಿನ ದ್ವೇಷ ಬಿಡಿ, ಸಹಕಾರಕ್ಕೆ ಮನ ಮಾಡಿ. ಧನವ್ಯಯ.

ಧನು
ನಿರಾಳ ಮನಸ್ಸು. ಹೊಸ ಯೋಜನೆಗೆ ಕೈಹಚ್ಚಲು ಕಾಲ ಸೂಕ್ತ. ಕೆಲಸದಲ್ಲಿ ಬಡ್ತಿ ಸಂಭವ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ.

ಮಕರ
ಯಾರದೋ ಜಗಳ ಸರಿಪಡಿಸಲು ಹೋಗಿ ನೀವು ಕಷ್ಟಕ್ಕೆ ಸಿಲುಕಬಹುದು. ಎಚ್ಚರ ಇರಲಿ. ಕೌಟುಂಬಿಕ ಸಹಕಾರ ಕಡಿಮೆ.

ಕುಂಭ
ಕೆಲಸ ಸುಗಮವಾಗಿ ಸಾಗದು. ಅಡ್ಡಿಗಳು, ಮಾನಸಿಕ ಒತ್ತಡ, ಅಸಹನೆ ಕಾಡುವುದು. ಹಣದ ವಿಷಯದಲ್ಲಿ ಪ್ರಮುಖ ನಿರ್ಧಾರ ತಾಳದಿರಿ.

ಮೀನ
ಖಾಸಗಿ ಬದುಕಲ್ಲಿ ಒತ್ತಡ ನಿವಾರಣೆ. ಯಾವುದೇ ಸಮಸ್ಯೆ ತಾತ್ಕಾಲಿಕ ಎಂಬುದು ಅರಿವಿರಲಿ. ಮುಖದಲ್ಲಿ ಸದಾ ನಗುವಿರಲಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 6,2,5,8

ಇಂದು ರೋಡ್ ಶೋ

ಬೆಂಗಳೂರು: ರಾಜಸ್ಥಾನವನ್ನು ಕೃಷಿ ನಾವೀನ್ಯತೆ ಮತ್ತು ಕೃಷಿ ತಂತ್ರಜ್ಞಾನ ವಲಯದ ಹೂಡಿಕೆ ತಾಣವಾಗಿಸುವ ನಿಟ್ಟಿನಲ್ಲಿ ರಾಜಸ್ಥಾನ ಸರ್ಕಾರದ ಕೃಷಿ ಇಲಾಖೆಯಿಂದ ಆಯೋಜಿಸಲಿರುವ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್-2026ರ ರೋಡ್ ಶೋ ಏ.26ರಂದು ಮಧ್ಯಾಹ್ನ 12 ಗಂಟೆಯಿಂದ ನಗರದ ಹೋಟೆಲ್ ಲಲಿತ್ ಅಶೋಕದಲ್ಲಿ ಆಯೋಜಿಸಲಿದೆ. ಮುಖ್ಯ ಅತಿಥಿಯಾಗಿ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೃಷಿ ಮತ್ತು ತೋಟಗಾರಿಕೆ ಸಚಿವ ಡಾ. ಕಿರೋಡಿ ಲಾಲ್ ಮೀನಾ ಭಾಗವಹಿಸಲಿದ್ದಾರೆ. ತಂತ್ರಜ್ಞಾನ ಆಧಾರಿತ ಕೃಷಿಯ ಮೂಲಕ ಹೂಡಿಕೆ ಸ್ನೇಹಿ ಪರಿಸರ ಸೃಷ್ಟಿಸುವ ಜತೆಗೆ ವಲಯದ ಮುಂದಿನ ಬೆಳವಣಿಗೆಯ ಹಾದಿಯನ್ನು ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಕರ್ನಾಟಕದ ಉದ್ಯಮಿಗಳಿಗೆ ವಿವರಿಸಲಿದ್ದಾರೆ.

ಕ್ರೈಸ್: ಎಸ್ಸೆಸ್ಸೆಲ್ಸಿ ಫಲಿತಾಂಶ ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚು

ಶೇ.8.37 ಹೆಚ್ಚಳ: ಸಚಿವ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಶಾಲೆಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಳೆದ ವರ್ಷಕ್ಕಿಂತ ಶೇ.8.37 ರಷ್ಟು ಹೆಚ್ಚಳವಾಗಿದೆ, ರಾಜ್ಯದ ಫಲಿತಾಂಶಕ್ಕಿಂತ ಶೇ.5.31 ರಷ್ಟು ಹೆಚ್ಚಳವಾಗಿದೆ ಎಂದು ಸಚಿವ ಡಾ.ಎಚ್.ಸಿ ಮಹದೇವಪ್ಪ ತಿಳಿಸಿದ್ದಾರೆ.

ಫಲಿತಾಂಶದ ಕುರಿತು ಶನಿವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾಹಿತಿ ಹಂಚಿಕೊಂಡ ಅವರು, 788 ವಸತಿ ಶಾಲೆಗಳಲ್ಲಿ ಒಟ್ಟು 35,014 ವಿದ್ಯಾರ್ಥಿಗಳು ಹಾಜರಾಗಿದ್ದು, ಶೇ.99.41ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 655 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಹೇಳಿದರು.

ಶೇ.89ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಡಿಸ್ಟಿಂಗ್ಷನ್ ಮತ್ತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಕೇವಲ 5 ವಿದ್ಯಾರ್ಥಿ ಗಳು ಶೇ.33 ರಿಂದ 35 ರಷ್ಟು ಫಲಿತಾಂಶ ಪಡೆದಿದ್ದಾರೆ. ಪರೀಕ್ಷೆಗೆ ಹಾಜರಾದ 14,836 ಗಂಡು ಮಕ್ಕಳಲ್ಲಿ 14,734 ಉತ್ತೀರ್ಣರಾಗಿದ್ದು, ಪರೀಕ್ಷೆ ಬರೆದ 20,178 ಹೆಣ್ಣು ಮಕ್ಕಳಲ್ಲಿ 20,075 ಮಕ್ಕಳು ಉತ್ತೀರ್ಣರಾಗಿದ್ದಾರೆ. ಒಟ್ಟು ಶೇ.99.41ರಷ್ಟು ಫಲಿತಾಂಶವಾಗಿದೆ ಎಂದು ತಿಳಿಸಿದರು.

ಕ್ರೈಸ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಇಂದಿರಾ ಗಾಂಧಿ ವಸತಿ ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 104 ಆಂಗ್ಲ ಮಾಧ್ಯಮ ವಸತಿ ಕಾಲೇಜುಗಳಲ್ಲಿ ಪ್ರವೇಶಕ್ಕೆ ಚಾಲನೆ ನೀಡಲಾಗಿದೆ. ಪ್ರತಿ ತರಗತಿಗೆ 80 ರಂತೆ, ಒಟ್ಟು 8,320 ಸೀಟುಗಳು ಲಭ್ಯವಿವೆ. ಅರ್ಜಿಗಳನ್ನು ವೆಬ್‌ಸೈಟ್ ಮೂಲಕ www.kreis.karnataka.gov.in ಸಲ್ಲಿಸಬಹುದೆಂದು ತಿಳಿಸಿದರು.

ಮಕ್ಕಳ ಕಲಿಕಾ ಸಮಸ್ಯೆಗಳನ್ನು ಪತ್ತೆ ಮಾಡಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಉತ್ತಮ ಫಲಿತಾಂಶ ಬಂದಿದೆ. ವಸತಿ ಶಾಲೆಗಳ ಮೂಲಸೌಕರ್ಯ ಉತ್ತಮವಿದ್ದು, ಪರಿಶೀಲನೆಗೆ ತಂಡ ರಚಿಸಲಾಗಿದೆ. ಕರ್ನಾಟಕ ವಸತಿ ಶಾಲೆಗಳು ದೇಶದಲ್ಲೇ ನಂ.1 ಇದೆ. ಪ್ರವೇಶ ಸಂಖ್ಯೆಯನ್ನು ಹೆಚ್ಚಳ ಮಾಡುವುದಿಲ್ಲ ಎಂದು ತಿಳಿಸಿದರು.

600ಕ್ಕಿಂತ ಹೆಚ್ಚು ಅಂಕ ಗಳಿಸಿದ 1,274 ವಿದ್ಯಾರ್ಥಿಗಳು



625ಕ್ಕೆ 622 ಅಂಕಗಳನ್ನು 7 ವಿದ್ಯಾರ್ಥಿಗಳು, 621 ಅಂಕಗಳನ್ನು 5 ವಿದ್ಯಾರ್ಥಿಗಳು 620 ಅಂಕಗಳನ್ನು 8 ವಿದ್ಯಾರ್ಥಿಗಳು ಹಾಗೂ ಒಟ್ಟಾರೆ 1274 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ. 6803 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾರೆ. ಕ್ರೈಸ್‌ನ ಎಲ್ಲಾ ವಿದ್ಯಾರ್ಥಿಗಳು ಶೇ.78 ರಷ್ಟು ಸರಾಸರಿ ಅಂಕ ಪಡೆದಿದ್ದಾರೆ ಎಂದು ವಿವರಿಸಿದರು.

ಡಿಆರ್‌ಡಿಒನಿಂದ ಶಸ್ತ್ರಸಜ್ಜಿತ 2 ಟ್ಯಾಂಕ್ ಲೋಕಾರ್ಪಣೆ

ಹೊಸದಿಲ್ಲಿ: ಮಾನವರಹಿತ, ಟ್ಯಾಂಕ್ ನಿರೋಧಕ ಕ್ಷಿಪಣಿ ದಾಳಿ ಹಾಗೂ ನೆಲ-ಜಲ ಸಂಚಾರ ಸಾಮರ್ಥ್ಯದ ಎರಡು ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅನಾವರಣಗೊಳಿಸಿದೆ. ಇವುಗಳು ಟ್ರ್ಯಾಕ್‌ಗಳು ಮತ್ತು ಚಕ್ರಗಳಿರುವ ಅತ್ಯಾಧುನಿಕ ಶಸ್ತ್ರಸಜ್ಜಿತ ಸೇನಾ ವಾಹನಗಳಾಗಿವೆ.

ಮಹಾರಾಷ್ಟ್ರದ ಅಹಿಲ್ಯಾನಗರ್‌ನಲ್ಲಿನ ಡಿಆರ್‌ಡಿಒ ಘಟಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿಆರ್‌ಡಿಒ ವಾಹನ ಸಂಶೋಧನೆ, ಅಭಿವೃದ್ಧಿ ವಿಭಾಗ ಅಭಿವೃದ್ಧಿಪಡಿಸಿದ ಎರಡು ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳನ್ನು ರಕ್ಷಣಾ ಇಲಾಖೆ (ಸಂಶೋಧನೆ ಮತ್ತು ಅಭಿವೃದ್ಧಿ) ಕಾರ್ಯದರ್ಶಿ ಮತ್ತು ಡಿಆರ್‌ಡಿಒ ಅಧ್ಯಕ್ಷ ಡಾ.ಸಮೀರ್ ವಿ ಕಾಮತ್ ಅನಾವರಣಗೊಳಿಸಿದ್ದಾರೆ.

ಅತ್ಯಾಧುನಿಕ ಬಂದೂಕು, ಕ್ಷಿಪಣಿ ವ್ಯವಸ್ಥೆ: ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳಲ್ಲಿ 30 ಎಂ.ಎಂ. ಮಾನವರಹಿತವಾಗಿ ಕಾರ್ಯಾಚರಿಸಬಲ್ಲ ಬಂದೂಕು ಮತ್ತು 7.62 ಎಂಎಂ ಪಿಕೆಟಿ ಬಂದೂಕು ಹೊಂದಿರಲಿದ್ದು, ಇದು ಟ್ಯಾಂಕ್ ನಿರೋಧಕ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಸಾಮರ್ಥ್ಯ ಹೊಂದಿದೆ.

ಶೇ.65 ಆತ್ಮನಿರ್ಭರ: ರಕ್ಷಣಾ ಕ್ಷೇತ್ರದ ಉತ್ಪಾದನೆಯಲ್ಲಿ ಆತ್ಮನಿರ್ಭರತೆ (ಸ್ವಾವಲಂಬನೆ) ಸಾಧಿಸುವ ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಗುರಿಯನ್ನು ಬೆನ್ನಟ್ಟುವ ಭಾರತ ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳಲ್ಲಿ ಶೇ.65ರಷ್ಟು ದೇಸಿ ಉಪಕರಣಗಳನ್ನೇ ಅಳವಡಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಇವುಗಳಲ್ಲಿ ಶೇ.90ರಷ್ಟು ದೇಸಿ ಉಪಕರಣಗಳನ್ನೇ ಅಳವಡಿಸಿಕೊಂಡು ವಿಸ್ತೃತ ಆವೃತ್ತಿ ಪರಿಚಯಿಸುವುದು ಡಿಆರ್‌ಡಿಒ ಮತ್ತು ರಕ್ಷಣಾ ಇಲಾಖೆಯ ಗುರಿಯಾಗಿದೆ.

ಅತ್ಯುನ್ನತ ಕಾರ್ಯಕ್ಷಮತೆ, ತಡೆರಹಿತ ಸಂಚಾರ! ಅತ್ಯುನ್ನತ ಶಕ್ತಿ, ಕಾರ್ಯಕ್ಷಮತೆಯ ಎಂಜಿನ್ ಮತ್ತು ಸ್ವಯಂಚಾಲಿತ ಗಿಯರ್ ವ್ಯವಸ್ಥೆ ಜೊತೆಗೆ ಸಂಯೋಜಿಸಲ್ಪಟ್ಟಿರುವ ಸೇನಾ ವಾಹನವು ಹೆಚ್ಚಿನ ಶಕ್ತಿ-ತೂಕ ಅನುಪಾತ ಹೊಂದಿದೆ. ಅತಿ ವೇಗದ ಸಂಚಾರ ಸಾಮರ್ಥ್ಯ, ಅತಿ ಎತ್ತರದ ಭೂಪ್ರದೇಶಗಳಲ್ಲೂ, ಯಾವುದೇ ರೀತಿಯ ಅಡೆತಡೆಗಳನ್ನು ದಾಟಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿವೆ.

- ಮಾನವರಹಿತ, ಟ್ಯಾಂಕ್ ನಿರೋಧಕ ಕ್ಷಿಪಣಿ ದಾಳಿ
- ನೆಲ-ಜಲ ಎರಡರಲ್ಲೂ ಸಂಚರಿಸುವ ಸಾಮರ್ಥ್ಯ

ಬುಲೆಟ್ ಬೋಗಿಗಳ ಉತ್ಪಾದನೆಗೆ ಚಾಲನೆ



> ಬೆಂಗಳೂರು ಉಪನಗರ ರೈಲು ಯೋಜನೆಯ ಕೆಲಸಗಳು ಸಹ ಪ್ರಗತಿಯಲ್ಲಿವೆ. ರಾಜ್ಯ ಸರ್ಕಾರದಿಂದ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉತ್ತಮ ಪ್ರಗತಿ ಕಂಡುಬಂದಿದೆ. ಪ್ರಧಾನಿ ಮೋದಿಯವರು ಈ ಯೋಜನೆಯ ಪ್ರಗತಿ ಪರಿಶೀಲಿಸಿ, ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
> ■ **ಅಶ್ವಿನಿ ವೈಷ್ಣವ್,** ಕೇಂದ್ರ ಸಚಿವ

ಪುಟ ೧➡ ಇದು ಎರಡು ನಗರಗಳ ನಡುವಿನ ಸಂಪರ್ಕದ ಜಾಲವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರ ಜೊತೆಗೆ ಬೆಂಗಳೂರು-ಮುಂಬೈ ಮಾರ್ಗದಲ್ಲಿ ಎರಡು ಸೂಪರ್ ಫಾಸ್ಟ್ ರೈಲುಗಳ ಕಾರ್ಯಾರಂಭ ಪ್ರಗತಿಯಲ್ಲಿದೆ. ಒಂದು ಹುಬ್ಬಳ್ಳಿ-ಧಾರವಾಡ ಮಾರ್ಗವಾಗಿ ಸಂಚರಿಸಲಿದ್ದು, ಇದು ಸೂಪರ್ ಫಾಸ್ಟ್ ಸೇವೆಯಾಗಿರಲಿದೆ. ಮತ್ತೊಂದು ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಲು ಸಹ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಬೆಂಗಳೂರು-ಮಂಗಳೂರು ವಂದೇ ಭಾರತ್ ಶೀಘ್ರ: ಬೆಂಗಳೂರಿನಿಂದ ಮಂಗಳೂರು ಮಾರ್ಗವಾಗಿ ಮಡಗಾಂವ್ ವರೆಗೆ ರೈಲು ಸೇವೆಯನ್ನು ಯೋಜಿಸಲಾಗಿದೆ. ಪ್ರಸ್ತುತ ಹಾಸನ-ಮಂಗಳೂರು ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ಅತಿ ಶೀಘ್ರದಲ್ಲಿ ವಂದೇ ಭಾರತ್ ರೈಲು ಸಂಚರಿಸಲಿದೆ. ಈ ಮೂಲಕ ಕರಾವಳಿ ಪ್ರದೇಶಕ್ಕೆ ವಂದೇ ಭಾರತ್ ರೈಲು ಸೇವೆ ಲಭಿಸಲಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದರು.

ಪ್ರಸ್ತುತ ಸೇವೆಯಲ್ಲಿರುವ ವಂದೇ ಭಾರತ ಸ್ಲೀಪರ್ ರೈಲಿನ ಕುರಿತು ಪ್ರತಿಕ್ರಿಯಿಸಿದ ಸಚಿವರು, ಗುವಾಹಟಿ-ಕೊಲ್ಕತಾ ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ಸ್ಲೀಪರ್ ರೈಲಿಗೆ ಪ್ರತಿದಿನ ಶೇ.80-90 ಅತ್ಯುತ್ತಮ ಪ್ರತಿಕ್ರಿಯೆ ಪ್ರಯಾಣಿಕರಿಂದ ವ್ಯಕ್ತವಾಗುತ್ತಿದೆ ಎಂದು ಕೇಂದ್ರ ಸಚಿವರು ತಿಳಿಸಿದರು.

ಬಿಇಎಂಎಲ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಚಿವರು ಬಿಇಎಂಎಲ್‌ನ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ರೈಲ್ವೆ ಬೋಗಿ, ಮೆಟ್ರೋ ರೈಲುಗಳ ಉತ್ಪಾದನೆ, ಕಾರ್ಯಪ್ರಗತಿಯ ಕುರಿತು ಮಾಹಿತಿ ಪಡೆದುಕೊಂಡರು. ಈ ವೇಳೆ ರೈಲ್ವೆ ಬೋರ್ಡ್‌ನ ಅಧ್ಯಕ್ಷ ಸತೀಶ್ ಕುಮಾರ್, ಬಿಇಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಒಳಮೀಸಲು: ಜಗಳ ಹಚ್ಚುವ ತೀರ್ಮಾನ

ಪುಟ ೧➡ ನ್ಯಾ. ನಾಗಮೋಹನ್‌ದಾಸ್ ಅವರ ವರದಿಯಲ್ಲಿ ಶೇ.17 ಎಂದಿದ್ದರೂ ಶೇ.15ಕ್ಕೆ ಸೀಮಿತ ಮಾಡಿ ಕೊಡಬಹುದಾಗಿತ್ತು. ಯಾಕೆ ಕೊಟ್ಟಿಲ್ಲ? ಶುಕ್ರವಾರ ಬೆಟ್ಟ ಅಗೆದು ಇಲಿ ಹುಡುಕಿದಂತೆ ಸಿದ್ದರಾಮಯ್ಯ ಅವರು ಒಳಮೀಸಲಾತಿಯನ್ನು ಜಾರಿ ನಿರ್ಧಾರ ಪ್ರಕಟಿಸಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ ಎಂದು ಟೀಕಿಸಿದರು.

ಸಾವಿರಾರು ಕೋಟಿ ಖರ್ಚು ಮಾಡಿ ವರದಿ ಈ ವರದಿಯನ್ನು ತಯಾರಿಸಿದ್ದೀರಿ. ಕಾಂತರಾಜ್ ವರದಿ, ಜಯಪ್ರಕಾಶ್ ಹೆಗ್ಡೆ ಅವರ ವರದಿ ಮೂಲೆಗುಂಪಾಗಿದೆ. ಮಧುಸೂದನ ನಾಯಕ್ ವರದಿ ಹೊರಗೆ ಬರಲೇ ಇಲ್ಲ ಎಂದು ಆಕ್ಷೇಪಿಸಿದರು. ಎಸ್‌ಸಿ ಉಪ ಜಾತಿಗಳಲ್ಲಿ ಹೊಡೆದಾಟ ಹಚ್ಚುವುದು, ಕೋರ್ಟಿನಲ್ಲಿ ಬಿದ್ದು ಹೋಗಬೇಕೆಂಬ ಉದ್ದೇಶ ನಿಮ್ಮದು. ನಾನು ಮಾಡಿದ್ದೆ; ಕೋರ್ಟಿನಲ್ಲಿ ನಿಲ್ಲಲಿಲ್ಲ ಮುನಿಯಪ್ಪ; ಮಹದೇವಪ್ಪ ಎನ್ನುವುದು. ಇಂಥ ಮೋಸದಾಟವನ್ನು ಅವರು ಬಿಡಲಿ ಎಂದು ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಒಳ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲರನ್ನೂ ಬೀದಿಯಲ್ಲಿ ನಿಲ್ಲಿಸಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕೆಂಬ ರೀತಿಯ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ವಾಗ್ದಾಳಿ ನಡೆಸಿದರು. ಈ ಒಂದು ತೀರ್ಮಾನಕ್ಕೆ ಬರಲು ಇವರಿಗೆ 3 ವರ್ಷ ಬೇಕಾಗಿದೆ. ಮೂರೇ ತಿಂಗಳಲ್ಲಿ ಮಾಡಬಹುದಿತ್ತಲ್ಲವೇ? ನಾಲ್ಕು ಲಕ್ಷ ಹುದ್ದೆ ತುಂಬಲು ಒಳ ಮೀಸಲಾತಿ ಆಗಬೇಕಿತ್ತು. ಎರಡು ಗಂಡಾಂತರಕ್ಕೆ ಸರ್ಕಾರ ಸಿಕ್ಕಿಹಾಕಿಕೊಂಡಿತ್ತು. ಒಂದು ಖಾಜಿ ನ್ಯಾಯದ ತೀರ್ಮಾನ ಇದು; ಪರಿಶಿಷ್ಟ ಜಾತಿಗಳು ಬೀದಿಗೆ ಬಿದ್ದ ಹಾಗಾಗಿದೆ ಎಂದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಮಾತನಾಡಿ, ಸಿದ್ದರಾಮಯ್ಯ ಅವರು ಅನೇಕ ಆಯೋಗ ರಚಿಸಿ, ವರದಿ ಪಡೆದು ಅವೆಲ್ಲವನ್ನೂ ತಿರಸ್ಕರಿಸಿದ ದಾಖಲೆ ಬರೆದ ಮುಖ್ಯಮಂತ್ರಿ.ಯಾವುದೇ ನ್ಯಾಯಮೂರ್ತಿಗಳು ಈ ಸರ್ಕಾರದ ಆಯೋಗದ ಹುದ್ದೆಯನ್ನು ಸ್ವೀಕರಿಸಬಾರದು. ಒಳ ಮೀಸಲಾತಿ ವಿಚಾರಕ್ಕೆ ಕೊನೆ ಮೊಳೆಯನ್ನು 3 ವರ್ಷಗಳ ಬಳಿಕ ಹೊಡೆದಿದ್ದಾರೆ. ದಲಿತರ ದಿಕ್ಕು ತಪ್ಪಿಸುವ ತೀರ್ಮಾನ ಮಾಡಿದ್ದಾರೆ. ಇದನ್ನು ವಿರೋಧಿಸಿ ಬಿಜೆಪಿ ಹೋರಾಟ ಮಾಡಲಿದೆ ಎಂದು ತಿಳಿಸಿದರು.



> ಹಿಂದೆ ನಮ್ಮ ಸರ್ಕಾರವಿದ್ದಾಗ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದ್ದೆವು. ಅಲ್ಲಿಂದ 4 ಶೈಕ್ಷಣಿಕ ವರ್ಷಗಳಲ್ಲಿ ಎಸ್‌ಸಿ, ಎಸ್‌ಟಿ ಮಕ್ಕಳಿಗೆ ಇಂಜಿನಿಯರಿಂಗ್, ಮೆಡಿಕಲ್ ಸೀಟುಗಳು ಹೆಚ್ಚುವರಿ ಮೀಸಲಾತಿ ಆಧಾರದಲ್ಲಿ ಲಭಿಸಿವೆ ಎಂದು ಗಮನಕ್ಕೆ ತಂದರು. ಉದ್ಯೋಗ ಮೀಸಲಾತಿಗೆ ಇದ್ದ ತಡೆಯಾಜ್ಞೆ ತೆರವಿಗೆ ನೀವೇನು ಪ್ರಯತ್ನ ಮಾಡಿದ್ದೀರಿ.
> ■ **ಎನ್. ಮಹೇಶ್,** ರಾಜ್ಯ ಉಪಾಧ್ಯಕ್ಷ

ಪ್ರಮಾಣಪತ್ರ ಸಲ್ಲಿಕೆ ಅಭ್ಯರ್ಥಿಗೆ ಕಡ್ಡಾಯ

ಪುಟ ೧➡ **ವಿವರಗಳು ಈ ಕೆಳಕಂಡಂತಿವೆ.** ಅ) ಯಾವ ಕಾಯ್ದೆಯ ಪ್ರಕರಣದ ಅಡಿಯಲ್ಲಿ ಅನರ್ಹಗೊಳಿಸಲಾಗಿತ್ತು, ಪ್ರಕರಣದ ದಾಖಲಾತಿ, ಅನರ್ಹತೆ ವಿವರ,

- ಆ) ಅನರ್ಹಗೊಳಿಸಲಾದ ಪ್ರಾಧಿಕಾರದ ವಿವರ
- ಇ) ಪ್ರಕರಣ ಸಂಖ್ಯೆ
- ಈ) ಹೊರಡಿಸಿದ ಅನರ್ಹತೆ ಆದೇಶದ ದಿನಾಂಕ

ಈ ಮೇಲಿನ ನಾಲ್ಕು ಪ್ರಮುಖ ಅಂಶಗಳನ್ನು ಪ್ರಮಾಣ ಪತ್ರದಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ. ಅಲ್ಲದೇ, ಅಭ್ಯರ್ಥಿಯು ನಾನು ಯಾವುದೇ ಶಾಸನಬದ್ಧ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರ ಹೊರಡಿಸಿರುವ ಆದೇಶದ ಅಡಿಯಲ್ಲಿ ಅನರ್ಹಗೊಂಡಿಲ್ಲ ಅಥವಾ ಯಾವುದೇ ಅನರ್ಹತೆಯ ಆದೇಶವನ್ನು ಅನುಭವಿಸಿಲ್ಲ ಎಂಬುದನ್ನು ನಮೂದಿಸಬೇಕಾಗಿದೆ.

> ಚುನಾವಣಾ ಆಯೋಗ ಹೊರಡಿಸಿರುವ ಈ ಆದೇಶವನ್ನು ಕಡ್ಡಾಯವಾಗಿ ಸ್ಥಳೀಯ ಚುನಾವಣೆಗೆ ಸ್ಪರ್ಧಿಸುವ ಎಲ್ಲ ಅಭ್ಯರ್ಥಿಗಳು ಕಡ್ಡಾಯವಾಗಿ ಪಾಲನೆ ಮಾಡಬೇಕಾಗಿರುವುದು ಕರ್ತವ್ಯ. ಈ ಹಿಂದೆ ಕೆಲವರು ತಮ್ಮ ಮೇಲಿನ ಕೆಲವು ಕ್ರಿಮಿನಲ್ ಆರೋಪಗಳನ್ನು ಮುಚ್ಚಿಟ್ಟು ಚುನಾವಣೆಗೆ ಸ್ಪರ್ಧಿಸಿರುವ ಉದಾಹರಣೆಗಳಿವೆ.
> ■ **ಕೆ. ಶ್ರೀನಿವಾಸಾಚಾರಿ,** ನಿವೃತ್ತ ಆಯುಕ್ತರು, ರಾಜ್ಯ ಚುನಾವಣಾ ಆಯೋಗ

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಪ್ರಮಾಣೀಕರಣ

1. ಪ್ರಮಾಣ ಪತ್ರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸೃಷ್ಟಿಸಲಾಗಿರುವ 05 ನಗರ ಪಾಲಿಕೆ / ಮಹಾನಗರ ಪಾಲಿಕೆ/ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ / ಜಿಲ್ಲಾ ಪಂಚಾಯಿತಿ / ತಾಲ್ಲೂಕು ಪಂಚಾಯಿತಿಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಪ್ರಮಾಣಪತ್ರ ಶುಲ್ಕ ನೀಡಿ ಬ್ಯಾಂಕುಗಳಿಂದ ಪಡೆದ ದಸ್ತಾವೇಜು ಹಾಳೆಯಲ್ಲಿ ಪ್ರಮಾಣೀಕರಿಸುವುದು.
2. ಗ್ರಾಮ ಪಂಚಾಯಿತಿಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಬಿಳಿ ಹಾಳೆಯ ಮೇಲೆ ಮಾಹಿತಿಗಳನ್ನು ಸಿದ್ಧಪಡಿಸಿ ಚುನಾವಣೆ ಅಧಿಕಾರಿ ಮುಂದೆ ಸಹಿ ಹಾಕುವುದು. ಇದಕ್ಕೆ ಯಾವುದೇ ಶುಲ್ಕವಿರುವುದಿಲ್ಲ.
3. ಪೂರ್ಣ ವಿವರಗಳನ್ನು ಖುದ್ದಾಗಿ ಓದಿ / ಓದಿಸಿಕೊಂಡು, ಅರ್ಥ ಮಾಡಿಕೊಂಡು, ಸಮುಚಿತವಾದ ವಿವರಗಳನ್ನು ಮಾತ್ರ ಸಿದ್ಧಪಡಿಸಿ ಪ್ರಮಾಣೀಕರಿಸುವುದು ಅಥವಾ ಘೋಷಣೆ ಮಾಡುವುದು. ಅಲ್ಲದೆ, ಪ್ರಮುಖವಾಗಿ ನ್ಯಾಯಾಲಯವು ಅಪಾದನೆ ಹೊರಿಸಿ/ ದಾಖಲಿಸಿ ಹೊರಡಿಸಿದ ಆದೇಶದ ದಿನಾಂಕ, ಆಪಾದನೆ ಹೊರಿಸಿದ/ದಾಖಲಿಸಿದ ಆದೇಶದ ವಿರುದ್ಧ ದಾಖಲಾದ ಅಪೀಲು / ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳ ಸಂಪೂರ್ಣ ವಿವರ ಒದಗಿಸಲು ಆದೇಶಿಸಿದೆ.

ಹರಿದ ಪ್ಯಾಂಟ್‌ನ ಕೇಜ್ರಿ 100 ಕೋಟಿ ಒಡೆಯ!

ಪುಟ ೧➡ 2024ರಲ್ಲಿ ಕೇಜ್ರಿವಾಲ್ ತಮ್ಮ ಆಪ್ತ ಸಹಾಯಕ ಬಿಭವ್ ಕುಮಾರ್‌ರಿಂದ ತನಗೆ ಹೊಡೆಸಿದ ಬಗ್ಗೆ ಉಲ್ಲೇಖಿಸಿ, ತಾನು ಬಿಜೆಪಿ ಸೇರಲು ಆ ನೋವಿನ ಹಿನ್ನೆಲೆ ಕೂಡ ಕಾರಣ ಎಂದರು.

ಪಂಜಾಬ್ ಆಪ್‌ನ ವೈಯಕ್ತಿಕ ಎಟಿಎಂ: ಆಪ್ ಈಗ ಅಧಿಕಾರದಲ್ಲಿರೋದು ಪಂಜಾಬ್‌ನಲ್ಲಿ ಮಾತ್ರ. ಆ ರಾಜ್ಯವನ್ನು ತನ್ನ ವೈಯಕ್ತಿಕ ಎಟಿಎಂ ಆಗಿ ಆಪ್ ಬಳಸಿಕೊಳ್ಳುತ್ತಿದೆ. ಯಾರು ಪಕ್ಷದ ವಿರುದ್ಧ ಧ್ವನಿ ಎತ್ತುವರೋ ಅವರು ಎಫ್‌ಐಆರ್ ಎದುರಿಸಬೇಕಾಗುತ್ತೆ. ಕೇಜ್ರಿವಾಲ್ ಬರೇ ಭ್ರಷ್ಟಾಚಾರ ಮತ್ತು ಗೂಂಡಾಗಿರಿಗೆ ಕುಖ್ಯಾತರು. ಇದೇ ವೇಳೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಜಗತ್ತಿನಲ್ಲೇ ಜನಪ್ರಿಯ ನಾಯಕ. ಶತ್ರುಗಳ ನೆಲೆಗಳಿಗೇ ನುಗ್ಗಿ ಅವರನ್ನು ಸದೆಬಡಿದ ಆಪರೇಶನ್ ಸಿಂದೂರ್ ಇರಲಿ, ದೇಶವನ್ನು ಕಾಡಿದ್ದ ನಕ್ಸಲ್ ಪಿಡುಗಿನ ಅಂತ್ಯವಿರಲಿ ಅಥವಾ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆಯೇ ಆಗಿರಲಿ, ದೇಶದ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ತಳೆದ ನಿರ್ಧಾರಗಳು ಐತಿಹಾಸಿಕ ಎಂದು ಮಲಿವಾಲ್ ಪ್ರಶಂಸೆಯ ನುಡಿಯಾಡಿದ್ದಾರೆ.

ಕೇಜ್ರಿವಾಲ್ ದೇಶದ್ರೋಹಿ: ತಾನು ಹಾಗೂ ತನ್ನ ಜತೆ ಬಿಜೆಪಿ ಸೇರಿರುವ ಆಪ್‌ನ ಇತರ ಆರು ಸಂಸದರಲ್ಲ, ಬದಲಾಗಿ ಕೇಜ್ರಿವಾಲ್ ಸ್ವಯಂ ನೈಜ ದೇಶದ್ರೋಹಿ ಎಂದು ಮಲಿವಾಲ್ ಆಪ್‌ನ ಪ್ರಸ್ತುತ ಆರೋಪಗಳಿಗೆ ತಿರುಗೇಟು ನೀಡಿದರು. 2011ರಲ್ಲಿ ಕೇಜ್ರಿವಾಲ್ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ನಾಂದಿ ಹಾಡುವ ಸಂದರ್ಭದಲ್ಲಿ ಹರಿದ ಪ್ಯಾಂಟ್ ಧರಿಸುತ್ತಿದ್ದರು. 2ರೂ. ಮೌಲ್ಯದ ಪೆನ್ ಬಳಸುತ್ತಿದ್ದರು ಮತ್ತು ತೀರಾ ಗುಜರಿಯಾದ ಕಾರಿನಲ್ಲಿ ಅಡ್ಡಾಡುತ್ತಿದ್ದರು. ಈಗ ಅವರದು ಐಷಾರಾಮಿ ಜೀವನ ಎಂದು ಮಲಿವಾಲ್ ಸರಣಿಯೋಪಾದಿಯಲ್ಲಿ ಆರೋಪಿಸಿದರು.

ಅಧಿಕಾರ ಸಿಕ್ಕಾಗ ವೈಭವೋಪೇತ ಜೀವನ: ಕೇಜ್ರಿವಾಲ್‌ರಿಂದ ದೇಶದಲ್ಲಿ ಪರಿವರ್ತನೆಯಾಗುವುದೆಂದು ನಾವೆಲ್ಲ ನಿರೀಕ್ಷೆ ಹೊಂದಿದ್ದೆವು. ಆಂದೋಲನ ಸಂದರ್ಭ ಇಡೀ ದೇಶಕ್ಕೆ ಭಾರೀ ಭರವಸೆಗಳು, ಸುಂದರ ಕನಸು ನೀಡಿ ಎಲ್ಲರೂ ಪ್ರಭಾವಿತರಾಗುವಂತೆ ಮಾಡಿದ್ದರು. ಆದರೆ ಅವರು ಮಾಡಿದ್ದೇನು? ಅಧಿಕಾರ ಕುರ್ಚಿ ದೊರೆಯುತ್ತಲೇ ಒಂದೆರಡಲ್ಲ, ಬರೋಬ್ಬರಿ ನೂರು ಕೋಟಿ ರೂ.ಮೌಲ್ಯದ ಅತ್ಯಾಧುನಿಕ ಬಂಗಲೆ ನಿರ್ಮಿಸಿಕೊಂಡರು. ಜತೆಗೊಂದು ಬಾರ್ ಸೇರ್ಪಡೆಯಾಯಿತು. ಕೋಟಿಗಟ್ಟಲೆ ಮೌಲ್ಯದ ಕಾರ್ಪೆಟ್ ಅಳವಡಿಸಿದರು. ಲಕ್ಷಾಂತರ, ಕೋಟ್ಯಂತರ ಮೌಲ್ಯದ ರೆಫ್ರಿಜರೇಟರ್, ವೈಭವದ ಪ್ರತೀಕವಾದ ಸೋಫಾ ಹೀಗೆ ವೈಭವೋಪೇತ ಜೀವನಕ್ಕೆ ಬೇಕಾದ ಸೌಲಭ್ಯಗಳನ್ನು ಸ್ವಂತಕ್ಕೆ ಮಾಡಿಕೊಂಡರು ಎಂದು ಮಲಿವಾಲ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಕೇಜ್ರಿ ಜತೆ ಯಾರೂ ಕೆಲಸ ಮಾಡಲಾಗದು

ಕೇಜ್ರಿವಾಲ್ ಜತೆ ಒಳ್ಳೆಯವರಾರೂ ಕೆಲಸ ಮಾಡಲಾಗದು. ಆಪ್ ಹಿಂದಿನ ಆಪ್ ಆಗಿ ಉಳಿದಿಲ್ಲ, ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕೂಡ ಹಿಂದಿನ ಕೇಜ್ರಿವಾಲ್ ಅಲ್ಲ ಎಂದು ಟೀಕಾಪ್ರಹಾರ ಮಾಡಿರುವ ಆಪ್‌ನ ಮಾಜಿ ಸಂಸದೆ ಸ್ವಾತಿ ಮಲಿವಾಲ್, ಪ್ರಧಾನಿ ನರೇಂದ್ರ ಮೋದಿಯವರ ಗುಣಗಾನ ಮಾಡಿದ್ದಾರೆ. ಆಮ್ ಆದ್ಮಿ ಪಕ್ಷವೀಗ ಸುಳ್ಳು, ಭ್ರಷ್ಟಾಚಾರ ಮತ್ತು ಗೂಂಡಾಗಿರಿಗೆ ಕುಖ್ಯಾತವಾಗಿದೆ. ಆಪ್ ಪಕ್ಷವು ತನ್ನ ಹಿಂದಿನ ಎಲ್ಲಾ ಸಿದ್ಧಾಂತಗಳಿಗೆ ತಿಲಾಂಜಲಿ ಹೇಳಿದೆ. ನಾನು ನನ್ನ ಮನೆ ತೊರೆದು ಸುಮಾರು ಏಳು ವರ್ಷ ಕೊಳಗೇರಿಗಳಲ್ಲಿ ಜೀವಿಸಿದ್ದೆ. ನನ್ನ ಹುದ್ದೆ ತೊರೆದು ಆಪ್‌ನ ಪ್ರತಿ ಹೋರಾಟಗಳಿಗೆ ಕೈಜೋಡಿಸಿದ್ದೆ. ಪ್ರತಿಫಲವಾಗಿ ಮುಖ್ಯಮಂತ್ರಿ ಕೇಜ್ರಿವಾಲ್ ನಿವಾಸದಲ್ಲೇ ಅವರ ಗೂಂಡಾ ಗಳು ನನ್ನನ್ನು ತಾರಾಮಾರ ಥಳಿಸಿಬಿಟ್ಟರು ಎಂದು ದೂರಿದರು.

ಒಳಮೀಸಲಾತಿ ಘೋಷಣೆ ಐತಿಹಾಸಿಕ ನಿರ್ಧಾರ: ಸತೀಶ

ಬೆಳಗಾವಿ: ದಶಕಗಳ ಬೇಡಿಕೆಯಾಗಿದ್ದ ಒಳಮೀಸಲಾತಿಯನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಘೋಷಿಸಿದ್ದು, ಇದೊಂದು ಐತಿಹಾಸಿಕ ನಿರ್ಧಾರ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶನಿವಾರ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಎಲ್ಲ ಸಚಿವರ, ಸಮುದಾಯದ ಸಚಿವರ ಸಮ್ಮುಖದಲ್ಲಿಯೇ ಒಳ ಮೀಸಲಾತಿಯನ್ನು ಘೋಷಿಸಿದ್ದೇವೆ. ಎಲ್ಲಾ ಸಮುದಾಯದವರು ಖುಷಿ ಇದ್ದಾರೆ. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಸರ್ವಾನುಮತದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.



ಒಳಮೀಸಲಾತಿ ಹಂಚಿಕೆ ಬಗ್ಗೆ ಬಿಜೆಪಿಯವರು ವಿರೋಧಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ವಿರೋಧ ಪಕ್ಷಗಳು ಸರ್ಕಾರದ ಪ್ರತಿಯೊಂದು ನಿರ್ಧಾರದಲ್ಲೂ ಲೋಪದೋಷ ಹುಡುಕುವುದು ಸಹಜ. ಆದರೆ, ಜನಹಿತಕ್ಕಾಗಿ ತೆಗೆದುಕೊಂಡ ಈ ಐತಿಹಾಸಿಕ ನಿರ್ಧಾರಕ್ಕೆ ಜನರ ಬೆಂಬಲವಿದೆ ಎಂಬುದು ಸರ್ಕಾರದ ನಿಲುವು. ಆದರೆ, ವಿರೋಧ ಪಕ್ಷದವರು ತಮ್ಮ ಅಸ್ತಿತ್ವಕ್ಕಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಾರೆಂದು ತಿರುಗೇಟು ನೀಡಿದರು. ಕಾಂಗ್ರೆಸ್ ಪಕ್ಷದ ಒಳಗಿನ ನಾಯಕತ್ವ ಗೊಂದಲ ಬಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಪಕ್ಷದ ಒಳಗಿನ ಗೊಂದಲಗಳಿಗೆ ಹೈಕಮಾಂಡ್ ಶೀಘ್ರದಲ್ಲೇ ತೆರೆ ಎಳೆಯಲಿದೆ ಎಂದು ಹೇಳಿದ್ದಾರೆ.

ಡಿಕೆಶಿ ದಿಲ್ಲಿಗೆ ಹೋಗುವುದು ಹೊಸದಲ್ಲ: ಡಿ.ಕೆ.ಶಿವಕುಮಾರ ಅವರು ಎರಡು ಪ್ರಮುಖ ಖಾತೆಗಳನ್ನು ಹೊಂದಿದ್ದಾರೆ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿದ್ದಾರೆ. ದಿಲ್ಲಿ ಭೇಟಿಯನ್ನೇ ನಾಯಕತ್ವ ಬದಲಾವಣೆಯ ಸೂಚನೆ ಎಂದು ಅರ್ಥೈಸುವುದು ಸರಿಯಲ್ಲ. ಪ್ರತಿ ಭೇಟಿಗೂ ರಾಜಕೀಯ ಉದ್ದೇಶ ಕಲ್ಪಿಸಬಾರದು ಎಂದು ತಿಳಿಸಿದರು.

ಆರೋಗ್ಯ ವಿಚಾರಣೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಕಾಂಗ್ರೆಸ್ ಹಿರಿಯ ನಾಯಕ ರೆಹಮಾನ್ ಖಾನ್ ಅವರನ್ನು ಜಯನಗರದ ಅವರ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಸಚಿವರಾದ ಜಮೀರ್ ಅಹಮದ್, ಭೈರತಿ ಸುರೇಶ್ ಇದ್ದರು.

ಪಾಲಿಕೆ ಚುನಾವಣೆ ನಡೆಸಲು ಹಣವಿಲ್ಲ: ಸುಪ್ರೀಂಗೆ ಅರ್ಜಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ 5 ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ತಮ್ಮ ಬಳಿ ಹಣವಿಲ್ಲ ಮತ್ತು ಸಿಬ್ಬಂದಿ ಕೊರತೆ ಇದೆ ಎಂದು ರಾಜ್ಯ ಚುನಾವಣಾ ಆಯೋಗ ಸುಪ್ರೀಂಗೆ ಅರ್ಜಿ ಸಲ್ಲಿಸಿದೆ. ಈ ಹಿಂದೆ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, 2026ರ ಜನವರಿ 12ರಂದು ಮಹತ್ವದ ಆದೇಶ ನೀಡಿತ್ತು. ಯಾವುದೇ ಕಾರಣಕ್ಕೂ 2026ರ ಜೂ. 30ರೊಳಗೆ 5 ನಗರ ಪಾಲಿಕೆಗಳ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ರಾಜ್ಯ ಚು.ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಅಲ್ಲದೆ, ಮಾರ್ಚ್ 16ರೊಳಗೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವುದಾಗಿ ಆಯೋಗ ನೀಡಿದ್ದ ಭರವಸೆಯನ್ನೂ ನ್ಯಾಯಾಲಯ ದಾಖಲಿಸಿಕೊಂಡಿತ್ತು.

ಸರ್ಕಾರದ ಅಸಹಕಾರ ಮತ್ತು ವಿಳಂಬದ ಕಾರಣಗಳು: ಚುನಾವಣಾ ಆಯೋಗವು ಏಪ್ರಿಲ್ 18ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿ ಸಜ್ಜಾಗಿದ್ದರೂ, ರಾಜ್ಯ ಸರ್ಕಾರವು ಚುನಾವಣೆಯನ್ನು ಮುಂದೂಡುವಂತೆ ಒತ್ತಡ ಹೇರುತ್ತಿದೆ. ಅಲ್ಲದೆ ಚುನಾವಣೆ ನಡೆಸಲು ತಮ್ಮ ಬಳಿ ಹಣವಿಲ್ಲ, ಸಿಬ್ಬಂದಿಯ ಕೊರತೆ ಇದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಎಲ್ಲಾ ಆಡಳಿತಾತ್ಮಕ ಸಿಬ್ಬಂದಿ ಇದರಲ್ಲಿ ಕಾರ್ಯನಿರತರಾಗಿರುತ್ತಾರೆ ಎಂದಿದೆ.

ಮುಂದೇನು? ಸ್ವತಃ ಆಯೋಗವೇ ಕಾಲಾವಕಾಶ ಕೋರಿದರೆ ನ್ಯಾಯಾಲಯದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ, ಸರ್ಕಾರದ ನಿಲುವನ್ನು ನ್ಯಾಯಾಲಯಕ್ಕೆ ತಿಳಿಸಿ, ಸೂಕ್ತ ನಿರ್ದೇಶನ ನೀಡುವಂತೆ ಆಯೋಗವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ರಾಜ್ಯ ಸರ್ಕಾರವು ಚುನಾವಣೆಗೆ ಸಹಕರಿಸಲು ಹಿಂಜರಿಯುತ್ತಿರುವುದು ಮತ್ತು ನಿಧಿಯ ಬಿಡುಗಡೆಗೆ ವಿಳಂಬ ಮಾಡುತ್ತಿರುವುದು ಚುನಾವಣಾ ಪ್ರಕ್ರಿಯೆಗೆ ಅಡ್ಡಿಯಾಗಿದೆ ಎಂದು ಆಯೋಗ ಹೇಳಿದೆ. ಈಗ ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಇದ್ದು, ಜೂನ್ 30ರ ಗಡುವನ್ನು ವಿಸ್ತರಿಸುತ್ತದೆಯೇ ಅಥವಾ ನಿಗದಿತ ಸಮಯದಲ್ಲಿ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ಚಾಟಿ ಬೀಸುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಕಿರುಸುದ್ದಿ

ಜಲಮಂಡಲಿ ಹುದ್ದೆಗೆ ನಾಳೆಯಿಂದ ಲಿಖಿತ ಪರೀಕ್ಷೆ

ಬೆಂಗಳೂರು: ಕೆಎಸ್ಎಸ್ಐಡಿಸಿ ಮತ್ತು ಬೆಂಗಳೂರು ಜಲಮಂಡಲಿಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್, ವ್ಯವಸ್ಥಾಪಕರು ಮತ್ತು ಸಹಾಯಕ ವ್ಯವಸ್ಥಾಪಕರ ಹುದ್ದೆಗಳಿಗೆ ಏ.26 ಮತ್ತು 27ರಂದು ಲಿಖಿತ ಪರೀಕ್ಷೆ ನಡೆಯಲಿದ್ದು, ಇದಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಗಿ ಕ್ರಮಗಳನ್ನು ಮಾಡಿದೆ. ಉಳಿಕ ಮೂಲ ವೃಂದದ ಅಭ್ಯರ್ಥಿಗಳಿಗೆ ಏ.26ರಂದು ಬೆಂಗಳೂರಿನ 11 ಮತ್ತು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗೆ ಏ.27ರಂದು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿನ ಚಲನವಲನಗಳನ್ನು ಬೆಂಗಳೂರಿನ ಕೆಇಎ ಕಚೇರಿಯಲ್ಲಿ ಸ್ಥಾಪಿಸಿರುವ ಕಮಾಂಡ್ ಸೆಂಟರ್‌ನಿಂದಲೇ ನಿಗಾ ವಹಿಸಲಾಗುವುದು. ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಶಿಕ್ಷಕರ ಕೊರತೆಯಿದ್ದರೂ 94% ಬಂದಿದ್ದು ಹೇಗೆ?: ವಿಶ್ವನಾಥ್

ಮೈಸೂರು: ರಾಜ್ಯದ ಅನೇಕ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಆದರೂ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94 ಫಲಿತಾಂಶ ಬಂದಿದ್ದು ಹೇಗೆ?. ಹಠಕ್ಕೆ ಬಿದ್ದು ಸರ್ಕಾರವೇ ಈ ಪರಿಯಾಗಿ ವಿದ್ಯಾರ್ಥಿಗಳನ್ನು ಪಾಸ್ ಮಾಡಿದೆ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆರೋಪಿಸಿದರು. ಶನಿವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಜ್ಯದ ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಯಾದಗಿರಿ ಜಿಲ್ಲೆಯಲ್ಲಿ 41%, ಬಳ್ಳಾರಿ 31%, ಬೀದರ್ 21% ಶಿಕ್ಷಕರ ಕೊರತೆ ಇದೆ. ಹೀಗೆ ಎಲ್ಲಾ ಜಿಲ್ಲೆಗಳಲ್ಲೂ ಶಿಕ್ಷಕರ ಕೊರತೆ ಇದೆ. ಆದರೂ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94ರಷ್ಟು ಫಲಿತಾಂಶ ಬಂದಿದೆ. ಇದು ಹೇಗೆ ಸಾಧ್ಯ ಇದು ಯಾವ ರೀತಿಯ ಸಾಧನೆ? ಸಾಮೂಹಿಕ ನಕಲು ಮಾಡಿಸಲಾಗಿದೆ. ಹಠಕ್ಕೆ ಬಿದ್ದು ಪಾಸ್ ಮಾಡಿದ್ದಾರೆ. ಮಕ್ಕಳಿಗೆ ಗುಣಮಟ್ಟದ ಬೋಧನೆ, ಶಿಕ್ಷಕರ ನೇಮಕಾತಿ, ಶಾಲೆಗಳಿಗೆ ಸೌಲಭ್ಯ ಒದಗಿಸುವುದರಲ್ಲಿ ಈ ಹಠ ಇರಬೇಕಿತ್ತು ಎಂದು ಕಿಡಿಕಾರಿದರು.



ಮಹಿಳಾ ಮೀಸಲಾತಿಗೆ ಸೋಲು ದುರ್ದೈವ: ಬಸವ ಮಹಾಂತ ಶ್ರೀ

ಬೆಳಗಾವಿ: ಬಸವಣ್ಣನವರು ಅನುಭವ ಮಂಟಪದಲ್ಲಿ 12 ನೂರು ವರ್ಷಗಳ ಹಿಂದೆಯೇ ಮಹಿಳೆಯರಿಗೆ ಸಮಾನ ಮೀಸಲಾತಿ ನೀಡಿ ಜಗತ್ತಿಗೆ ಮಾದರಿಯಾಗಿದ್ದರು. ಅಂತಹ ನಾಡಿನ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಗೆ ಸೋಲಾಗಿದ್ದು ದುರ್ದೈವದ ವಿಚಾರ ಎಂದು ಶಿರಸಂಗಿ ಮಹಾಲಿಂಗೇಶ್ವರ ಮಠದ ಶ್ರೀ ಬಸವ ಮಹಾಂತ ಮಹಾಸ್ವಾಮೀಜಿ ಖೇದ ವ್ಯಕ್ತಪಡಿಸಿದರು. ಅವರು ಜಾಗತಿಕ ಲಿಂಗಾಯಿತ ಮಹಾ ಸಭಾ ಜಿಲ್ಲಾ ಘಟಕವು ನಾಗನೂರು ರುದ್ರಾಕ್ಷಿ ಮಠದ ಸಹಯೋಗದೊಂದಿಗೆ ವಿಶ್ವಗುರು ಬಸವಣ್ಣನವರ ಜಯಂತಿ ಉತ್ಸವ ಅಂಗವಾಗಿ ಎರಡು ದಿನಗಳ ವಚನ ದರ್ಶನ ಪ್ರವಚನ, ಇಷ್ಟ ಲಿಂಗಪೂಜೆ, ಪ್ರಾತ್ಯಕ್ಷಿಕೆ, ಹಾಗೂ ವಚನ ಪಠಣ ಕಾರ್ಯಕ್ರಮ ಉದ್ಘಾಟಿಸಿ ಪ್ರವಚನ ನೀಡಿದರು. ಫ.ಗು.ಹಳಕಟ್ಟಿಯವರ ಕ್ರಿಯಾಶೀಲ ವ್ಯಕ್ತಿತ್ವ ಅವರು ಸಮಸ್ತ ಸಮಾಜಕ್ಕೆ ನೀಡಿದ ಕೊಡುಗೆಗಾಗಿ ಅವರಿಗೆ ಕೃತಜ್ಞರಾಗಿರಬೇಕು ಎಂದು ಹೇಳಿದರು.

ಒಳ ಮೀಸಲಾತಿ ಹಂಚಿಕೆ ಉತ್ತಮ ನಿರ್ಧಾರ: ಸಚಿವ ಮಹದೇವಪ್ಪ

ಯಾವುದೇ ಗೊಂದಲವಿಲ್ಲ

ಬೆಂಗಳೂರು: ಒಳ ಮೀಸಲಾತಿ ಹಂಚಿಕೆ ಉತ್ತಮ ನಿರ್ಧಾರವಾಗಿದ್ದು, ಎಲ್ಲಾ ಸಮುದಾಯಗಳು ಸಂತೋಷ ಪಡದೆ ಇದ್ದರೂ ಕೂಡಾ ಅಸಮಾಧಾನ ಉಂಟು ಮಾಡಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

ತಮ್ಮ ನಿವಾಸದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಬಿಜೆಪಿಗರಿಗೆ ರಾಜಕೀಯ ಬೇಕು, ಮತ ಬೇಕು ಸಾಮಾಜಿಕ ನ್ಯಾಯಕ್ಕೆ ಬದ್ಧರಿಲ್ಲ. 17ರಷ್ಟು ಮೀಸಲಾತಿ ಶಡ್ಯೂಲ್-9 ತಿದ್ದುಪಡಿ ಪಡಿಸಲಿ, ದಲಿತರನ್ನು ಇಬ್ಭಾಗ ಮಾಡಲು ಯತ್ನಿಸುತ್ತಿದ್ದಾರೆ. ಸರ್ಕಾರದಲ್ಲಿ ಸದ್ಯಕ್ಕೆ ಯಾವುದೇ ಗೊಂದಲವಿಲ್ಲ. ಸಂಪುಟ ವಿಸ್ತರಣೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಡಿ.ಕೆ. ಶಿವಕುಮಾರ್ ದಿಲ್ಲಿಗೆ ಹೋಗಿದ್ದಾರೆ, ವರಿಷ್ಠರನ್ನು ಭೇಟಿ ಮಾಡಿದರೆ ತಪ್ಪೇನು ಎಂದು ಹೇಳಿದರು.

ಒಳ ಮೀಸಲಾತಿ ಹಂಚಿಕೆ ಸ್ವಾಗತ: ಒಳ ಮೀಸಲಾತಿ ಹಂಚಿಕೆಯನ್ನು ಸ್ವಾಗತಿಸಿರುವ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ನೇತೃತ್ವದ ನಿಯೋಗವು ಶನಿವಾರ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕೃತಜ್ಞತೆ ಅರ್ಪಿಸಿತು. ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಸರ್ವ ಜನಾಂಗ ಒಪ್ಪುವಂತೆ ಮಾಡಿ, ಎಲ್ಲಾ ಸಂಪುಟ ಸಚಿವರ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ನಮ್ಮ ಸಮುದಾಯಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಚಿತ್ರದುರ್ಗದ ಪರಿಶಿಷ್ಟ ಜಾತಿಯ ಮಹಾ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಮಾತಿನಂತೆ ಇಂದು ಆ ಭರವಸೆ ಈಡೇರಿದೆ. ಮಾತು ಕೊಟ್ಟರೆ ನೆರವೇರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ, ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗ್ರೂಪ್‌ಎಗೆ ಶೇ. 5.25ರಷ್ಟು, ಗ್ರೂಪ್ ಬಿಗೆ ಶೇ.5.25ರಷ್ಟು ಹಾಗೂ ಗ್ರೂಪ್ ಸಿಗೆ ಶೇ.4.5ರಷ್ಟು ಒಳಮೀಸಲಾತಿ ಹಂಚಿಕೆ ಮಾಡುವ ಮೂಲಕ ಸರ್ಕಾರ ಸಾಮಾಜಿಕ ನ್ಯಾಯದ ದಾರಿಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಇದು ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಯ ಎಲ್ಲಾ 101 ಸಮುದಾಯಗಳ ಬಹುದಿನದ ಬೇಡಿಕೆಗೆ ನ್ಯಾಯ ಒದಗಿಸಿದ ಐತಿಹಾಸಿಕ ನಿರ್ಧಾರವಾಗಿದೆ ಎಂದು ಅವರು ಹೇಳಿದ್ದಾರೆ.



ಶನಿವಾರ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಚಿವ ಆರ್.ಬಿ ತಿಮ್ಮಾಪುರ ನೇತೃತ್ವದ ನಿಯೋಗವು ಒಳಮೀಸಲಾತಿ ಹಂಚಿಕೆಯನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

> ನಮ್ಮ ಇಡೀ ಸಮುದಾಯ ಸಿದ್ದರಾಮಯ್ಯ ಅವರನ್ನ ನೆನಪಿಟ್ಟುಕೊಳ್ಳಲಿದೆ. ಇಡೀ ಸಮುದಾಯ ಅವರಿಗೆ ಕೃತಜ್ಞರಾಗಲಿದೆ.
> ■ ಆರ್.ಬಿ.ತಿಮ್ಮಾಪುರ, ಅಬಕಾರಿ ಸಚಿವ

40 ವರ್ಷಗಳ ನೋವು, ಹೋರಾಟದ ಗೆಲುವು: ಮುನಿಯಪ್ಪ

ರಾಜ್ಯ ಸರ್ಕಾರವು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಒಳಮೀಸಲಾತಿ ಅನುಷ್ಠಾನದ ತೀರ್ಮಾನವನ್ನು ಸಚಿವ ಕೆ.ಎಚ್. ಮುನಿಯಪ್ಪ ಸ್ವಾಗತಿಸಿದ್ದಾರೆ. ಇದು ಕೇವಲ ಒಂದು ತೀರ್ಮಾನ ಅಲ್ಲ ಇದು 40 ವರ್ಷಗಳ ನೋವು, ಹೋರಾಟದ ಗೆಲುವು ಎಂದು ತಿಳಿಸಿದ್ದಾರೆ.

101 ಜಾತಿಗಳಿಗೂ ಅನ್ಯಾಯ: ರಾಜೀವ್

ಬೆಂಗಳೂರು: ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಜಾತಿಯ 101 ಜಾತಿಗಳಿಗೂ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದ್ದಾರೆ.



ಈ ಸರ್ಕಾರವು 50 ಸಾವಿರಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಆಗಬಾರದೆಂಬ ದುರುದ್ದೇಶದಿಂದ ಮೇಲಿಂದ ಮೇಲೆ ತಪ್ಪು ಮಾಡುತ್ತಿದೆ ಎಂದು ದೂರಿದರು. ಸರ್ಕಾರ ನೇಮಕಾತಿ ಮಾಡಲು ಸಿದ್ಧವಿತ್ತು. ಆದರೆ, ಕೋರ್ಟಿನ ತಡೆಯಾಜ್ಞೆ ಇದ್ದುದರಿಂದ ನೇಮಕಾತಿ ಆಗಿಲ್ಲ ಎಂದು ಯುವ ಜನತೆಗೆ ತಿಳಿಸಲು ಸರ್ಕಾರ ಯೋಜಿಸಿದಂತಿದೆ. 50 ಸಾವಿರಕ್ಕೂ ಹೆಚ್ಚು ಹುದ್ದೆಗೆ ನೇಮಕಾತಿ ಪ್ರಕಟಿಸಿದ್ದರೂ ವೇತನ ಕೊಡಲು ಹಣವನ್ನು ಬಜೆಟ್‌ನಲ್ಲಿ ಇಟ್ಟಿಲ್ಲ ಎಂದು ಆಕ್ಷೇಪಿಸಿದರು.

ಮಧ್ಯಂತರ ತಡೆಯಾಜ್ಞೆ ಇದ್ದಾಗಲೇ ಅಧಿವೇಶನದಲ್ಲಿ ಮಸೂದೆ ಅಂಗೀಕಾರ ಮಾಡಿದ್ದಾರೆ. ಆಗ ಇವರ ತಲೆಯಲ್ಲಿ ಮೆದುಳು ಇರಲಿಲ್ಲವೇ? ಶೇ.17 ಮೀಸಲಾತಿ ಮಾಡುವುದಾಗಿ ಹೇಳಿದ್ದರು. ಶುಕ್ರವಾರ ಶೇ.15ಕ್ಕೆ ಇಳಿಸಿದ್ದಾರೆ. ಹಾಗಿದ್ದರೆ ಸದನದ ಗೌರವ ಏನು ಉಳಿಯಿತು ಎಂದು ರಾಜಿವ್ ಪ್ರಶ್ನಿಸಿದರು.

ಬಸವರಾಜ ಬೊಮ್ಮಾಯಿ ಅವರ ಸರ್ಕಾರವು ಮಾಧುಸ್ವಾಮಿ ನೇತೃತ್ವದ ಉಪ ಸಮಿತಿ ವರದಿಯನ್ನು ಆಧರಿಸಿ ವೈಜ್ಞಾನಿಕವಾಗಿ ಹಂಚಿಕೆ ಮಾಡಿತ್ತು. ಅವೆಲ್ಲವನ್ನೂ ಕಡಿಮೆ ಮಾಡಿದ್ದಾರೆ. ಎಡ, ಬಲ ಸೇರಿ ಎಲ್ಲರಿಗೂ ಅನ್ಯಾಯ ಮಾಡಿದ್ದಾರೆ. ಬೊಮ್ಮಾಯಿ ಅವರ ಸರ್ಕಾರವು ಅಲೆಮಾರಿಗಳ ಪ್ರತ್ಯೇಕ ಗುಂಪು ಮಾಡಿದ್ದರು. ಇಲ್ಲಿ ಆ ಪ್ರತ್ಯೇಕ ಗುಂಪನ್ನು ಉಳಿಸಿಲ್ಲ. ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರವೇ ಮಾಡಿ ಮುಗಿಸಬೇಕೆಂದು ಒತ್ತಾಯಿಸಿದರು. ಪತ್ರಕಾಗೋಷ್ಠಿಯಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಶಾಸಕ ಮಾನಪ್ಪ ಡಿ.ವಜ್ಜಲ್ ಇದ್ದರು.

ಸರ್ಕಾರದ ತೀರ್ಮಾನ ಒಪ್ಪಲು ಅಸಾಧ್ಯ

ಸರ್ಕಾರದ ನಿರ್ಣಯದಿಂದ ಪರಿಶಿಷ್ಟ ಜಾತಿ, ಪಂಗಡಗಳ ಮೇಲೆ ಪೆಟ್ಟು ಬೀಳಲಿದೆ. ಭೋವಿ, ಬಂಜಾರ ಸಮುದಾಯಕ್ಕೂ ಅನ್ಯಾಯ ಆಗಲಿದೆ. ಬೋವಿ, ಬಂಜಾರ, ಕೊರಮ, ಕೊರಚ ಸಮುದಾಯದ ಜಿಲ್ಲಾ ಮುಖಂಡರು ಮುಂದಿನ ಪೀಳಿಗೆಗೂ ಇದರಿಂದ ಅನ್ಯಾಯ ಆಗಲಿದ್ದು, ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ. ನಮ್ಮದೂ ಇದಕ್ಕೆ ಬೆಂಬಲವಿದೆ ಎಂದು ಶಾಸಕ ಮಾನಪ್ಪ ವಜ್ಜಲ್ ತಿಳಿಸಿದರು. ಕಾಂಗ್ರೆಸ್ ಸರ್ಕಾರದ ತೀರ್ಮಾನವನ್ನು ಒಪ್ಪಲು ಸಾಧ್ಯವಿಲ್ಲ. ಕೋರ್ಟ್ ಆದೇಶವನ್ನೂ ಬದಿಗಿಟ್ಟು ಸರ್ಕಾರ ತೀರ್ಮಾನ ಮಾಡಿದೆ ಎಂದು ಟೀಕಿಸಿದರು.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ನಾಳೆ ಶಿಕ್ಷೆ ಪ್ರಮಾಣ ಪ್ರಕಟ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ (ಐಇಡಿ) ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯ ಏ.27ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ.



ಈ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರೀಕ್ ವಿರುದ್ಧ ಶನಿವಾರ ನಡೆದ ವಿಚಾರಣೆಯಲ್ಲಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನಕುಮಾರ್ ಅವರು, ಆರೋಪಿಗೆ ಅಂತಿಮವಾಗಿ ಕಠಿಣ ಶಿಕ್ಷೆ ವಿಧಿಸುವಂತೆ ನ್ಯಾಯಾಲಯದಲ್ಲಿ ವಾದ ಮಂಡಿಸಿದರು. ವಾದ ಆಲಿಸಿದ ನ್ಯಾಯಾಲಯ ಏ.27ಕ್ಕೆ ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ತಿಳಿಸಿತು.

ಕಳೆದ 3 ತಿಂಗಳ ಹಿಂದೆಯೇ ಆರೋಪಿ ಶಾರೀಕ್ ತಾನು ಕೃತ್ಯ ಎಸಗಿದ್ದಾಗಿ ತಪ್ಪೊಪ್ಪಿಕೊಂಡು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಕೂಡ ಸಲ್ಲಿಸಿದ್ದನು. ಈ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದ್ದು, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸಿ, 2024ರಲ್ಲಿ ಆರೋಪಿಗಳಾದ ಶಾರೀಕ್ ಮತ್ತು ಸೈಯದ್ ಯಾಸೀನ್ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ನ.19ರಂದು ಸಂಜೆ 4.40 ಸುಮಾರಿಗೆ ಶಾರೀಕ್ ಆಟೋದಲ್ಲಿ ತೆರಳುವಾಗ ಕುಕ್ಕರ್ ಸ್ಫೋಟಗೊಂಡಿತ್ತು. ಪ್ರಕರಣದಲ್ಲಿ ಶಂಕಿತ ಉಗ್ರ ಶಾರೀಕ್ ಬಂಧನದಲ್ಲಿದ್ದು, ತನಿಖೆಯನ್ನು ಎನ್‌ಐಎ ನಡೆಸಿತ್ತು. ಆರೋಪಿಗಳು ದೇಶದ ಭದ್ರತೆಗೆ ಧಕ್ಕೆಯುಂಟು ಮಾಡುವ ಉದ್ದೇಶದಿಂದ ಸ್ಫೋಟಕ್ಕೆ ಸಂಚು ರೂಪಿಸಿದ್ದರು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ.

ತಾಪಮಾನ ಪರಿಣಾಮ ತಡೆಗೆ ಕ್ರಮ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಧಿಕ ತಾಪಮಾನ ದಾಖಲಾಗುತ್ತಿದ್ದು, ತಾಪಮಾನದ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಮತ್ತು ತಗ್ಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಜಿಲ್ಲಾ ಪಂಚಾಯ್ತಿಗಳ ಸಿಇಒ, ತಾಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ತಾಪಮಾನದ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಮತ್ತು ತಗ್ಗಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಜನರಲ್ಲಿ ವ್ಯಾಪಕವಾದ ಅರಿವು ಮೂಡಿಸಬೇಕು. ತಿಳುವಳಿಕೆ ಭಿತ್ತಿಪತ್ರಗಳನ್ನು ಎಲ್ಲಾ ಗ್ರಾಮ ಪಂಚಾಯ್ತಿಗಳು ದೊಡ್ಡ ಅಳತೆಯಲ್ಲಿ ಮುದ್ರಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ಸಾರ್ವಜನಿಕರಲ್ಲಿ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸಬೇಕು ಎಂಬ ನಿರ್ದೇಶನವನ್ನು ನೀಡಿದ್ದಾರೆ.

ಅಂಗನವಾಡಿ ಮತ್ತು ಕೂಸಿನ ಮನೆಗಳಲ್ಲಿ ಮಕ್ಕಳಿಗೆ ಬಿಸಿಲಿನ ತಾಪಮಾನದ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಆವರಣವು ತಂಪಾಗಿರುವಂತೆ ನೋಡಿಕೊಳ್ಳಬೇಕು ಸೂಚಿಸಿದ್ದಾರೆ. ಜಿಲ್ಲೆ, ತಾಲೂಕು ಮತ್ತು ಗ್ರಾಪಂಗಳಿಗೆ ತಮ್ಮ ಕೆಲಸಗಳಿಗಾಗಿ ಭೇಟಿ ನೀಡುವ ಜನರಿಗೆ ಹಾಗೂ ಗ್ರಾಪಂ ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಹಾಗೂ ಆಸನ ವ್ಯವಸ್ಥೆ ಮಾಡಬೇಕು, ಸರ್ಕಾರಿ ಶಾಲೆಗಳು, ಅಂಗನವಾಡಿ, ಕೂಸಿನ ಮನೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ಲಭ್ಯವಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ಸಚಿವರು ಸೂಚಿಸಿದ್ದಾರೆ.

ತುರ್ತು ನೀರಿನ ಅಭಾವಕ್ಕೆ ₹4.5 ಕೋಟಿ

2026-27ನೇ ಸಾಲಿನ ರಾಜ್ಯ ಯೋಜನೆಯಲ್ಲಿ ಗ್ರಾಮೀಣ ಪ್ರದೇಶಗಳ ಜನರಿಗೆ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಎದುರಾದಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಹಾಗೂ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆಯಲು ಹಾಗೂ ಇತರೆ ತುರ್ತು ಕ್ರಮಗಳಿಗೆ 45 ಕೋಟಿ ರೂ. ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಅಗತ್ಯನುಸಾರ ಹಂಚಿಕೆ ಮಾಡಲಾಗಿದೆ ಎಂದರು.



ಮೀಸಲಾತಿ ನಿಗದಿಯಲ್ಲೂ ಮೋಸ: ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದಲೂ ಹಿಂದುಳಿದವರು, ದಲಿತರಿಗೆ ಮೋಸ ಮಾಡುತ್ತಲೇ ಬಂದಿದ್ದು, ಈಗ ಒಳಮೀಸಲಾತಿ ನಿಗದಿ ಮಾಡಿರುವುದರಲ್ಲಿಯೂ ಮತ್ತೊಂದು ಮೋಸವಾಗಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು.



ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಒಳ ಮೀಸಲಾತಿ ನಿಗದಿಯಲ್ಲಿ ನ್ಯಾಯಾಲಯ ಹೇಳಿದಂತೆಯೂ ಮಾಡಿಲ್ಲ. ತಜ್ಞರ ಸಮಿತಿ ಶಿಫಾರಸ್ಸನ್ನು ಪಾಲಿಸಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮದೇ ಒಂದು ಸೂತ್ರದಲ್ಲಿ ಒಳ ಮೀಸಲಾತಿ ನಿಗದಿ ಮಾಡಿದ್ದಾರೆ. ಯಾರಾದರೂ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿದರೆ ಉಳಿಯುವುದಿಲ್ಲ ಎಂದರು.

ಅನೇಕ ದಲಿತ ಮುಖಂಡರು ಒಳಮೀಸಲಾತಿ ವಿರುದ್ಧ ದನಿ ಎತ್ತಿದ್ದಾರೆ. ತಮ್ಮ ಅವಧಿಯಲ್ಲಿ ಒಳಮೀಸಲಾತಿಯ ಘೋಷಣೆ ಮಾಡಿದ್ದೇನೆಂದು ತೋರ್ಪಡಿಕೆಗೆ ಕ್ರೆಡಿಟ್ ಪಡೆಯಲು ಸರಿಯಾದ ಮಾನದಂಡ ಇಲ್ಲದ ಇದನ್ನು ಘೋಷಣೆ ಮಾಡಿ ಮುಖ್ಯಮಂತ್ರಿಗಳು ಸಿಹಿ ತಿಂದಿದ್ದಾರೆ. ಅವರೇ ನಾಲ್ಕು ಜನ ಕುಳಿತುಕೊಂಡು ಮಾಡಿದ ಈ ಘೋಷಣೆಯನ್ನು ದಲಿತ ಮುಖಂಡರೇ ಸ್ವೀಕಾರ ಮಾಡುತ್ತಿಲ್ಲ ಎಂದು ದೂರಿದರು.

ಸರ್ಕಾರಿ ಕಚೇರಿಯಲ್ಲಿ ಜ್ಞಾನ ದಾಸೋಹ | ಸಮಾಜ ಕಲ್ಯಾಣ ಇಲಾಖೆಯ ಅಪರೂಪದ ಕಾರ್ಯಕ್ಕೆ ಮೆಚ್ಚುಗೆ

ಕಚೇರಿಗೆ ಬರುವ ಜನರಿಗೆ ಸಿಗುತ್ತಿದೆ ತಂಪು ಮಜ್ಜಿಗೆ!

ಪರಶುರಾಮ ಶಿವಶರಣ

ವಿಜಯಪುರ: ರಣಭಯಂಕರ ಬಿಸಿಲಿನಲ್ಲಿ ಬಸವಳಿದು ಬರುವ ಸಾರ್ವಜನಿಕರ ಉದರಕ್ಕೆ ತಂಪು, ಮಸ್ತಕಕ್ಕೆ ಅಕ್ಷರದ ಕಂಪು ಹರಿಸುವ ಕಾರ್ಯಕ್ಕೆ ಗುಮ್ಮಟ ನಗರದ ಸರ್ಕಾರಿ ಕಚೇರಿಯೊಂದರ ಅಧಿಕಾರಿಗಳು ಮುಂದಾಗಿರುವುದು ಅಪರೂಪದ ಸಂಗತಿ.

ದಿಗಂತ ವಿಶೇಷ

ಬಯಲು ಸೀಮೆಯ ಬಿಸಿಲೂರಿನಲ್ಲಿ ಸದ್ಯ ಪ್ರಖರ ಬಿಸಿಲಿಗೆ ಜನರು ತತ್ತರಿಸುವಂತಾಗಿದ್ದು, ಸರ್ಕಾರಿ ಕಚೇರಿಗಳ ಕೆಲಸದ ಅವಧಿ ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಏತನ್ಮಧ್ಯೆ ಸಾರ್ವಜನಿಕರು ತಮ್ಮ ಕೆಲಸ, ಕಾರ್ಯಕ್ಕಾಗಿ ನಗರದ ಸಮಾಜ ಕಲ್ಯಾಣ ಇಲಾಖೆಗೆ ತೆರಳಿದಲ್ಲಿ, ಸಾರ್ವಜನಿಕರ ಮೈಮನ ತಣಿಸಲು ಅಧಿಕಾರಿಗಳು ತಂಪು ಮಜ್ಜಿಗೆ ವಿತರಿಸುವ ವಿಶೇಷ ಸೇವೆಗೆ ಮುಂದಾಗಿದ್ದಾರೆ.

ಪ್ರತಿದಿನ 40 ಲೀಟರ್ ಮಜ್ಜಿಗೆ: ಇಲ್ಲಿನ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಬರುವ ಸಾರ್ವಜನಿಕರಿಗಾಗಿಯೇ ಉಚಿತವಾಗಿ ತಂಪು ಮಜ್ಜಿಗೆಯನ್ನು ವಿತರಿಸಲಾಗುತ್ತಿದ್ದು, ಸಾರ್ವಜನಿಕರು ಯಾರೇ ಕಚೇರಿಗೆ ಬರಲಿ, ಇಲ್ಲಿನ ಜವಾನರು ತಂಪು ಮಜ್ಜಿಗೆ ನೀಡಿ, ಸೇವಿಸುವಂತೆ ಕೋರುತ್ತಾರೆ. ಪ್ರಖರ ಬಿಸಿಲಿನಲ್ಲಿ ಬಸವಳಿದು ಬಂದ ವ್ಯಕ್ತಿಯ ಹೊಟ್ಟೆಯೊಳಗೆ ತಂಪು ಮಜ್ಜಿಗೆ ಇಳಿದಾಗ, ಮೈಮನ ತಂಪುಗೊಂಡು, ಕ್ಷಣಹೊತ್ತು ಆ ವ್ಯಕ್ತಿ ಆರಾಮದಿಂದ ಕೂಡುವಂತಾಗುತ್ತದೆ. ಕಚೇರಿಗೆ ಬರುವ ಸಾರ್ವಜನಿಕರಿಗಾಗಿ ಪ್ರತಿ ದಿನ 40 ಲೀಟರ್ ಮಜ್ಜಿಗೆ ವಿತರಿಸಲಾಗುತ್ತಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ನಿಮಿತ್ತ ಏಪ್ರಿಲ್ ತಿಂಗಳ ಆರಂಭದಿಂದಲೂ ಮಜ್ಜಿಗೆ ವಿತರಿಸುವ ಸೇವೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಅಧಿಕಾರಿಗಳ ಮಾದರಿಯ ಈ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ತುಂಬಾ ಮೆಚ್ಚುಗೆ ವ್ಯಕ್ತವಾಗಿದೆ.



> ಸುಡುವ ಬಿಸಿಲಿನಲ್ಲಿ ನಮ್ಮ ಕಚೇರಿಗೆ ಬರುವ ಸಾರ್ವಜನಿಕರನ್ನು ತಣಿಸಲು ತಂಪು ಮಜ್ಜಿಗೆ ವಿತರಣೆ ಸೇವೆ ಮಾಡಲಾಗುತ್ತಿದೆ. ಈ ಕಾರ್ಯಕ್ಕೆ ಜನರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಡಾ.ಬಿ.ಆರ್. ಅಂಬೇಡ್ಕರ್ ಹೆಸರಲ್ಲಿ ಸಣ್ಣದೊಂದು ಗ್ರಂಥಾಲಯ ಮಾಡಿದ್ದು, ಪುಸ್ತಕಗಳ ಜೊತೆಗೆ ದಿನಪತ್ರಿಕೆಗಳು ಕೂಡ ಸಿಗುವಂತೆ ಮಾಡಲಾಗಿದೆ.
> ■ ಮಹೇಶ ಪೋದ್ದಾರ, ಉಪ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ ವಿಜಯಪುರ

ಅಂಬೇಡ್ಕರ್ ಹೆಸರಲ್ಲಿ ಗ್ರಂಥಾಲಯ ಸ್ಥಾಪನೆ: ನಗರದ ಸಮಾಜ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ಪುಟ್ಟದೊಂದು ಗ್ರಂಥಾಲಯ ಸ್ಥಾಪಿಸಲಾಗಿದೆ. ಸಾರ್ವಜನಿಕರು ತಮ್ಮ ಕೆಲಸ, ಕಾರ್ಯದ ನಿಮಿತ್ತ ಕಚೇರಿಗೆ ಬಂದಾಗ, ಅಧಿಕಾರಿಗಳ ಭೇಟಿಗೆ ತಡವಾದಲ್ಲಿ ಇಲ್ಲಿನ ಗ್ರಂಥಾಲಯದ ಪುಸ್ತಕಗಳನ್ನು ಹಾಗೂ ಪತ್ರಿಕೆಗಳನ್ನು ಓದಬಹುದಾಗಿದೆ.



ಸಾರ್ವಜನಿಕರು, ವಿದ್ಯಾರ್ಥಿಗಳು ಸರ್ಕಾರಿ ಕಚೇರಿಗೆ ತೆರಳಿದ್ದ ಸಂದರ್ಭ, ತಮ್ಮ ಅಮೂಲ್ಯ ಸಮಯವನ್ನು ಓದಿನೊಂದಿಗೆ ಕಳೆಯು ವಂತಹ ವ್ಯವಸ್ಥೆ ಕಲ್ಪಿಸಿದ ಇಲ್ಲಿನ ಸರ್ಕಾರಿ ಕಚೇರಿಯ ಅಧಿಕಾರಿಗಳ ಕಾರ್ಯ ಶ್ಲಾಘನೀಯ ಎಂದು ಜನರು ಸಂತಸ ವ್ಯಕ್ತಪಡಿಸುತ್ತಾರೆ. ಈ ಗ್ರಂಥಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳ ಪುಸ್ತಕ, ಬಸವಾದಿ ಶರಣರ ಕೃತಿಗಳು, ನಾಡಿನ ಹಿರಿಯ ಸಾಹಿತಿಗಳ ಕಥೆ, ಕಾದಂಬರಿ ಸೇರಿದಂತೆ ಹಲವು ಪ್ರಕಾರದ ಪುಸ್ತಗಳನ್ನು ಸಂಗ್ರಹಿಸಲಾಗಿದೆ. ಅಲ್ಲದೆ ರಾಜ್ಯಮಟ್ಟದ ದಿನಪತ್ರಿಕೆ ಸೇರಿದಂತೆ ಸ್ಥಳೀಯ ದಿನಪತ್ರಿಕೆಗಳು ಇಲ್ಲಿ ಸಿಗುವುದು ವಿಶೇಷ.

ಬೀಡುಬಿಟ್ಟಿದ್ದ ಆನೆಗಳನ್ನು ಕಾಡಿಗಟ್ಟಿದ ಅರಣ್ಯ ಇಲಾಖೆ

ಮಡಿಕೇರಿ: ವೀರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಡಗ ಬಾಣಂಗಾಲ ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ಕಾಡಾನೆಗಳ ಹಿಂಡನ್ನು ಅರಣ್ಯ ಇಲಾಖೆ ಶುಕ್ರವಾರ ಯಶಸ್ವಿಯಾಗಿ ಕಾಡಿಗೆ ಮರಳಿಸಿತು.

ಗ್ರಾಮದ ಸುತ್ತಮುತ್ತಲಿನ ಅರಣ್ಯ ಪ್ರದೇಶದಿಂದ ಹೊರಬಂದು ಬೆಳೆ ಹೊಲಗಳತ್ತ ಚಲಿಸುತ್ತಿದ್ದ ಒಟ್ಟು 9 ಕಾಡಾನೆಗಳ ಹಿಂಡಿನಲ್ಲಿ ಎರಡು ಮರಿ ಆನೆಗಳೂ ಇದ್ದವು. ಈ ಘಟನೆ ಗ್ರಾಮಸ್ಥರಲ್ಲಿ ಭಯ ಮತ್ತು ಆತಂಕ ಉಂಟುಮಾಡಿತ್ತು. ಸ್ಥಿತಿ ಗಂಭೀರವಾಗುತ್ತಿರುವುದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ, ಕಾಡಾನೆಗಳನ್ನು ಸುರಕ್ಷಿತವಾಗಿ ಮರಳಿ ಅರಣ್ಯ ಪ್ರದೇಶದತ್ತ ಓಡಿಸುವಲ್ಲಿ ಯಶಸ್ವಿಯಾದರು. ಕಾರ್ಯಾಚರಣೆ ವೇಳೆ ಶಬ್ದ ಬಾಂಬ್‌ಗಳು ಸೇರಿದಂತೆ ವಿವಿಧ ಸುರಕ್ಷತಾ ಕ್ರಮಗಳನ್ನು ಬಳಸಲಾಯಿತು. ಕಾಡಾನೆಗಳ ಹಿಂಡು ಗ್ರಾಮ ಪ್ರದೇಶದಿಂದ ದೂರ ಸರಿದ ಹಿನ್ನೆಲೆಯಲ್ಲಿ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಆಗ್ರಹಿಸಿದ್ದಾರೆ. ಈ ಕಾರ್ಯಾಚರಣೆಯನ್ನು ಚೆನ್ನಂಗಿ ಭಾಗದ ಉಪವಲಯ ಅರಣ್ಯಾಧಿಕಾರಿ ಪಿ.ಟಿ. ಶಶಿ ನೇತೃತ್ವದಲ್ಲಿ ಆರ್‌ಆರ್‌ಟಿ ಸಿಬ್ಬಂದಿಯಶಸ್ವಿಯಾಗಿ ನಡೆಸಿದರು.





ಪ್ರಶ್ನೋತ್ತರ ರತ್ನಮಾಲಿಕೆ


• ವಿದ್ವಾನ್ ನರಸಿಂಹ ಭಟ್

ಈ ಜಗತ್ತು ಯಾರ ವಶದಲ್ಲಿದೆ?

ಧರ್ಮದಲ್ಲಿ ಪ್ರೀತಿ ಮತ್ತು ಪ್ರಿಯವೂ ಹಿತವೂ ಆದ ಮಾತನ್ನು ಆಡುವವನ.

ಈ ಪ್ರಶ್ನೆಯನ್ನು ಕೇಳಿದ ಆ ಕ್ಷಣದಲ್ಲಿ ಅನೇಕ ಉತ್ತರಗಳು ತಮ್ಮ ಮನಸ್ಸಿನಲ್ಲಿ ಗೋಚರವಾಗುತ್ತವೆ. ಈ ಜಗತ್ತು ಭಗವಂತನ ವಶದಲ್ಲಿ ಇದೆ. ಅಥವಾ ಈ ಜಗತ್ತು ಮಾನವನ ವಶದಲ್ಲಿ ಇದೆ. ಅಥವಾ ಈ ಜಗತ್ತು ಒಬ್ಬ ಪರಾಕ್ರಮಿ ಆದ ರಾಜನ ವಶದಲ್ಲಿದೆ ಎಂಬುದಾಗಿ. ಆದರೆ ಇಲ್ಲಿ ಹೇಳುವ ಉತ್ತರ ಇದಾವುದೂ ಅಲ್ಲ. ಏಕೆಂದರೆ ಈ ಜಗತ್ತು ಇವರಾರಿಂದಲೂ ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಾದುದಲ್ಲ. ಆದರೆ ಭಗವಂತ ಅಂದರೆ ಈ ಪ್ರಪಂಚದ ಮೂಲ ಶಕ್ತಿ. ಇದು ತಾನೇ ತನ್ನ ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯ ಎಂಬುದಾಗಿ ಅನ್ನಿಸಬಹುದು. ಹೌದು. ಒಂದರ್ಥದಲ್ಲಿ ಇದು ಉತ್ತರವಾಗಿ ಅನ್ನಿಸಲು ಅವಕಾಶ ಇದೆ. ಭಗವಂತನ ಮೂರು ಚೈತನ್ಯಗಳು ಬ್ರಹ್ಮ, ವಿಷ್ಣು, ಮಹೇಶ್ವರ. ಇವರಿಂದ ಸೃಷ್ಟಿ, ಸ್ಥಿತಿ ಮತ್ತು ಲಯವೆಂಬ ಮೂರು ವ್ಯಾಪಾರಗಳು ನಡೆಯುತ್ತವೆ. ಇವರೇ ಈ ಸೃಷ್ಟಿಯ ನಿಯಾಮಕರು ಎಂಬುದಾಗಿ ತಿಳಿಯಬಹುದು. ಆದರೆ ಇಲ್ಲಿ ಬರುವ ಉತ್ತರ ಇವೆಲ್ಲಕ್ಕೂ ಮೂಲವಾದದ್ದು. ಹಾಗಾದರೆ ಈ ಉತ್ತರ ಅದು ಹೇಗೆ ಸಮರ್ಪಕ? ಅಂದರೆ ಧರ್ಮದಲ್ಲಿ ಪ್ರೀತಿ ಇದ್ದು, ಅದನ್ನು ಮಾತಿನಲ್ಲಿ ಆಡುವವನು ಈ ಜಗತ್ತನ್ನು ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯ ಎಂಬ ಉತ್ತರ.

ಒಂದು ಮಾತು ಪ್ರಿಯವಾದದ್ದಾಗಿ ಇದ್ದು, ಆ ಮಾತು ಧರ್ಮದಿಂದ ಕೂಡಿದ್ದು, ಧರ್ಮದಲ್ಲಿ ಪ್ರೀತಿ ಉಳ್ಳದ್ದಾಗಿದ್ದರೆ, ಅಂತಹ ಮಾತು ಈ ಜಗತ್ತನ್ನು ವಶದಲ್ಲಿ ಇಟ್ಟುಕೊಳ್ಳಬಹುದು. ಅಂದರೆ ಮಾತಿಗೆ ಅದೆಷ್ಟು ಸಾಮರ್ಥ್ಯವಿದೆ ಎಂದು ಅರ್ಥ. ಮಾತಿಗೆ ಸಾಮರ್ಥ್ಯ ಬರುವುದಕ್ಕೆ ಕಾರಣ ಧರ್ಮವೇ ಆಗಿದೆ. ಹಾಗಾದರೆ ಧರ್ಮದಿಂದ ಮಾತಿಗೆ ಸಾಮರ್ಥ್ಯ ಹೇಗೆ ಬಂತು? ಧರ್ಮ ಎಂದರೇನು? ಶ್ರೀರಂಗ ಮಹಾಗುರುಗಳು ಹೇಳಿದಂತೆ ಈ ಜಗತ್ತನ್ನು ಧರಿಸಿರುವುದೇ ಧರ್ಮ. ಅದು ಒಂದು ಚೈತನ್ಯಶಕ್ತಿ ಆಗಿರಬಹುದು ಅಥವಾ ಆ ಚೈತನ್ಯಶಕ್ತಿಯಿಂದ ವಿಸ್ತರಗೊಂಡ ಅನೇಕ ಚೇತನ್ಯಶಕ್ತಿಗಳಿರಬಹುದು. ಅವೆಲ್ಲವೂ ಧರ್ಮವೇ. ಈ ಶಕ್ತಿಯನ್ನು ಅಂತೆಯೇ ಉಳಿಸುವುದಕ್ಕೆ ಬೇಕಾದ ಯಾವೆಲ್ಲ ಕ್ರಿಯಾ ಕಲಾಪಗಳಿವೆಯೋ ಅವೆಲ್ಲವನ್ನೂ ಧರ್ಮವೆಂದು ಕರೆಯಬಹುದು ಎಂದು. ಮಾತು ಕೂಡ ಧರ್ಮದಿಂದಲೇ, ಧರ್ಮದ ಮೂಲದಿಂದಲೇ ವಿಕಾಸಗೊಂಡದ್ದು. ಮಾತು ಧರ್ಮವನ್ನು ಉಳಿಸುತ್ತದೆ. ಒಂದು ವೇಳೆ ಮಾತು ಸರಿಯಾಗಿಲ್ಲದಿದ್ದರೆ ಧರ್ಮವನ್ನು ಹಾಳು ಮಾಡುತ್ತದೆ. ಅದಕ್ಕೆ ಒಂದು ಸುಭಾಷಿತವು ಹೀಗೆ ಹೇಳುತ್ತದೆ. ಯಾವ ರೀತಿಯಾದ ಮಾತನ್ನು ಹೇಳಬೇಕು ಎಂದು. ಸತ್ಯವಾದದ್ದನ್ನು ಪ್ರಿಯವಾದದ್ದನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಪ್ರಿಯವಾಗುತ್ತದೆಂದು ಸುಳ್ಳನ್ನು ಹೇಳಬಾರದು ಎಂದು. ಇಂತಹ ಮಾತು ಧರ್ಮವನ್ನು ಉಳಿಸುತ್ತದೆ. ಹೇಗೆ ಆಡಿದರೆ ಅದು ಧರ್ಮವನ್ನು ಉಳಿಸುತ್ತದೆ ಎಂಬುದನ್ನು ಅರಿತು ಮಾತನಾಡಬೇಕು. ಹೀಗೆ ಮಾತನಾಡುವ ಒಬ್ಬ ವ್ಯಕ್ತಿ ಧರ್ಮವನ್ನು ಕಾಪಾಡಬಲ್ಲ. ತನ್ಮೂಲಕ ಜಗಚ್ಛಕ್ತಿಯಾದ ಈ ಚೈತನ್ಯವನ್ನು ಈ ಮಾತಿನ ಮೂಲಕ ಬಲಗೊಳಿಸಬಲ್ಲ. ಹಾಗಾಗಿ ಇಂತಹ ಮಾತಿಗೆ ಜಗತ್ತನ್ನು ಆಳುವ, ವಶದಲ್ಲಿಟ್ಟುಕೊಳ್ಳುವ ಅದ್ಭುತ ಸಾಮರ್ಥ್ಯವಿದೆ ಎಂಬ ವಿಶಿಷ್ಟವಾದ ಪರಿಕಲ್ಪನೆಯ ಉತ್ತರ ಇಲ್ಲಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಭೀಮನಿಂದ ಜರಾಸಂಧ ವಧೆ

ಶ್ರೀಕೃಷ್ಣನು ಜರಾಸಂಧವಧೆಯು ಬೇಗನೆ ಆಗಲೆಂದು ಬಯಸಿ ಭೀಮನಿಗೆ ಹೇಳಿದನು: "ಭೀಮನೇ, ಯಾವ ಪರದ್ವದ ಸತ್ತ್ವವು ನಿನ್ನಲ್ಲುಂಟೋ, ಹಾಗೆಯೇ ವಾಯುದೇವನ ಸತ್ತ್ವವೆಂಬುದು ಯಾವುದು ನಿನ್ನಲ್ಲುಂಟೋ, ಅದನ್ನೀಗ ನಮಗೆ ನೀನು ಬೇಗನೆ ತೋರಿಸು. ನಿನ್ನಿಂದಲ್ಲದೆ ಮತ್ತಾರಿಂದಲೂ ಈತನಿಗೆ ಸಾವಿಲ್ಲ. ವಾಯುವನ್ನು ಸ್ಮರಿಸಿ, ಈ ಮಗಧರಾಜನನ್ನು ಕೊಲ್ಲು!"

ಕೃಷ್ಣನು ಹೀಗೆ ಹೇಳಲು, ಅರಿಂದಮನಾದ ಭೀಮಸೇನನು ಜರಾಸಂಧನನ್ನು ಮೇಲಕ್ಕೆತ್ತಿ ತಿರುಗಿಸಿದನು. ಆಗ ಕೃಷ್ಣನು, ಭೀಮಸೇನನತ್ತ ನೋಡುತ್ತಾ ಹುಲ್ಲುಕಡ್ಡಿಯೊಂದನ್ನು ಮುರಿದನು. ಅದಕ್ಕೆ ಸರಿಯಾಗಿ ಭೀಮನು ನೂರುಬಾರಿ ಜರಾಸಂಧನನ್ನು ತಿರುಗಿಸಿ, ಆತನ ಬೆನ್ನನ್ನು ಹಿಸುಕಿ ಮುದ್ದೆ ಮಾಡಿ, ತನ್ನ ಮಂಡಿಗಳ ಮೇಲೆ ಅಪ್ಪಳಿಸಿ ಬೆನ್ನನ್ನು ಮುರಿದನು ಹಾಗೂ ಗರ್ಜಿಸಿದನು. ಆತನೊಂದು ಕಾಲನ್ನು ಹಿಡಿದುಕೊಂಡು ಮತ್ತೊಂದನ್ನು ಮೆಟ್ಟಿ ಶರೀರವನ್ನು ಇಬ್ಭಾಗವಾಗಿಸಿದನು. ಆಗ ಜರಾಸಂಧನ ಆ ಶರೀರಭಾಗಗಳೆರಡು ಮತ್ತೆ ಸೇರಿಕೊಂಡವು ಹಾಗೂ ಜರಾಸಂಧನು ಮತ್ತೆ ಬಾಹುಯುದ್ಧಕ್ಕೆ ಆರಂಭಿಸಿಕೊಂಡನು. ಈಗ ಯುದ್ಧವು ತುಮುಲವೂ ರೋಮಹರ್ಷಣವೂ ಆಗಿದ್ದಿತು. ಅದು ಸರ್ವಲೋಕ-ಕ್ಷಯಕರವೂ ಸರ್ವಜೀವಿಗಳಿಗೂ ಭಯಾವಹವೂ ಆಗಿತ್ತು. ಮತ್ತೆ ಕೃಷ್ಣನು ಆ ಕಡ್ಡಿಯನ್ನು ಮುರಿದು ವ್ಯತ್ಯಸ್ತವಾಗಿ ಬಿಸುಟನು. ಅದರ ಅರ್ಥವನ್ನು ಅರಿತುಕೊಂಡ ಭೀಮಸೇನನು ಜರಾಸಂಧನನ್ನು ಸೀಳಿ, ಶರೀರದ ಆ ಎರಡು ಭಾಗಗಳನ್ನು ಕಾಲಿನಿಂದ ವ್ಯತ್ಯಾಸಮಾಡಿ ಒದ್ದೆಸೆದನು. ಜರಾಸಂಧನು ಆಗ ಕಡಮಾಂಸವಾದನು. ಆತನ ಮಾಂಸವೊಣಗಿತು, ಮೂಳೆ ಮುರಿಯಿತು, ಚರ್ಮ ಹರಿಯಿತು, ಮಸ್ತಿಷ್ಕವು ಮುದ್ದೆಯಾಯಿತು. ಆಗ ಜರಾಸಂಧನು ಪಿಂಡೀಭೂತನಾಗಿ ಕಂಡನು.


ಭೀಕರವಾಗಿ ಗರ್ಜಿಸುತ್ತಾ ಭೀಮನು ಜರಾಸಂಧನನ್ನು ಜಜ್ಜುತ್ತಿರಲು ಉಂಟಾದ ನಾದವು ಎಲ್ಲ ಪ್ರಾಣಿಗಳಿಗೂ ಭಯಂಕರವಾಗಿತ್ತು. ಮಗಧದೇಶದ ಪ್ರಜೆಗಳು ಬಹುವಾಗಿಯೇ ತ್ರಾಸಗೊಂಡರು. ಗರ್ಭಿಣಿಯರಿಗೆ ಗರ್ಭಸ್ರಾವವಾಯಿತು. ಏಕೆಂದರೆ ಭೀಮಸೇನ-ಜರಾಸಂಧರ ಗರ್ಜನ-ನಾದಗಳು ಹಾಗಿದ್ದುವು. "ಇದೇನು ಹಿಮಾಲಯವೇ ಒಡೆದುಹೋಯಿತೇ? ಅಥವಾ ಭೂಮಿಯೇ ಸೀಳುತ್ತಿದೆಯೋ?" ಎಂದೆಲ್ಲ ಮಾಗಧರು ಯೋಚನೆ ಮಾಡಹತ್ತಿದರು. ನಿದ್ದೆ ಮಾಡುತ್ತಿರುವಂತೆ ಬಿದ್ದಿದ್ದ ಆ ಸತ್ತ ರಾಜನನ್ನು ಆ ರಾಜದ್ವಾರದಲ್ಲಿಯೇ ಬಿಟ್ಟವರಾಗಿ, ಆ ಮೂರೂ ವೀರರು ಆ ರಾತ್ರಿಯಲ್ಲೇ ಹೊರಹೊರಟರು. ಪತಾಕೆಯಿಂದ ಮಂಡಿತವಾದ ಜರಾಸಂಧನ ರಥವನ್ನೇ ಶ್ರೀಕೃಷ್ಣನು ಸಿದ್ಧಪಡಿಸಿಕೊಂಡನು. ಭೀಮಾರ್ಜುನರನ್ನು ರಥಕ್ಕೆ ಹತ್ತಿಸಿಕೊಂಡು ತಾನೇ ಸಾರಥಿಯಾದನು.

ಅಲ್ಲಿಂದ ಹೊರಹೊರಟು, ಸೆರೆಯಾಗಿದ್ದ ತನ್ನೆಲ್ಲ ಬಂಧುಗಳನ್ನು ಮೊದಲು ಸೆರೆಯಿಂದ ಬಿಡಿಸಿದನು. ರತ್ನಗಳಿಗೆ ಅರ್ಹರೆನಿಸಿದ್ದ ಆ ರಾಜರುಗಳು, ಜರಾಸಂಧನೆಂಬ ಮಹತ್ತಾದ ಭಯದಿಂದ ಬಿಡುಗಡೆ ಪಡೆದವರಾಗಿ, ಶ್ರೀಕೃಷ್ಣನಿಗೆ ತಮ್ಮ ರತ್ನಗಳನ್ನು ಸಮರ್ಪಿಸಿದರು. ಕೃಷ್ಣನಿಗಾದರೋ ಯಾವ ಗಾಯವೂ ಆಗಿರಲಿಲ್ಲ. ಅವನ ಬಳಿ ಶಸ್ತ್ರಗಳೆಲ್ಲವೂ ಇದ್ದವು. ಶತ್ರುವನ್ನಂತೂ ಗೆದ್ದಾಯಿತು. ಈಗ ಆ ರಾಜರುಗಳೊಂದಿಗೆ ಆತನು ಆ ದಿವ್ಯರಥವನ್ನೇರಿ ಗಿರಿವ್ರಜದಿಂದ ಹೊರಹೊರಟನು. ಆ ರಥದ ಹೆಸರೇ ಸೋದರ್ಯವಾನ್ ಎಂಬುದಾಗಿ. ಅದರಲ್ಲೀಗ ಇಬ್ಬರು ಯೋಧರು, ಎಂದರೆ ಭೀಮಾರ್ಜುನರು ಕುಳಿತಿದ್ದರು. ಕೃಷ್ಣನೇ ಸಾರಥಿ. ಅನೇಕ ಬಾರಿ ಶತ್ರುಗಳಿಂದ ಆಘಾತಗಳನ್ನು ಎದುರಿಸಿದರೂ ಅದು ಮತ್ತೆ ಮತ್ತೆ ನೋಡಬೇಕೆನ್ನುವಂತೆಯೇ ಇತ್ತು.

ಕನ್ನಡಾಂಬೆಯ ರಾಗ ರಾ.ಗಣೇಶ್

ವಕ್ರದೃಷ್ಟಿ

• ಎನ್. ರಾಮನಾಥ್
anakuramanath@gmail.com



ಸಾರಂಗಾಸ್ತೇ ಜಲಲವಮುಚಃ ಸೂಚಯಿಷ್ಯಂತಿ ಮಾರ್ಗಂ ।
(ನೀರು-ಲವಣಗಳಿಂದ ಕೂಡಿರುವ ಮೋಡವೇ, ಸಾರಂಗಗಳು ನಿನಗೆ ದಾರಿತೋರಿಸುತ್ತವೆ.)

'ಮೇಘದೂತ'ದ ಮೋಡಗಳಿಗೆ ಆ ಚಿಂಕೆಗಳು (ಆನೆಗಳು, ದುಂಬಿಗಳು) ಮಾರ್ಗವನ್ನು ಸೂಚಿಸಿದವೋ, ಬಿಟ್ಟವೋ ತಿಳಿಯದು. ಆದರೆ ಸಾಹಿತ್ಯ ಲೋಕದ ದಿಗ್ಗಜರೂ, ವಿವಿಧವಿಷಯಪುಷ್ಪಗಳ ಮಕರಂದಮಂ ಪೀರ್ವ ದುಂಬಿಯೂ, ಆಲೋಚನೆಯ ವೇಗದಲ್ಲಿ ಹರಿಣಸದೃಶರೂ ಆದ ಗಣೇಶರು ಮೇಘದೂತದ ಕಾವ್ಯಾರ್ಥವೆಂಬ ಕ್ಲಿಷ್ಟಾರೋಹಣಪಥಕ್ಕೆ ಮಾರ್ಗಸೂಚಿಯಾಗಿ ದೊರೆತಿರುವುದು ಕನ್ನಡದ ಪುಣ್ಯ.

ಸಾಹಿತ್ಯಪ್ರಕಾರದಲ್ಲೇ ವಿಶಿಷ್ಟವೆನಿಸುವ ಅವಧಾನಕಲೆಯಲ್ಲಿ ಶತಾವಧಾನದ ಪಡಿಗಳನ್ನೇರಿದ ಈ ಮುಂದಾಳ ಕರ್ಣಗಳಿಗೆ ಹಿಂದೋಳ ಅತ್ಯಂತ ಪ್ರಿಯವಂತೆ. ಎಂದೂ ಯಾವ ಭಾಮೆಯನ್ನೂ ನೋಡಲು ಹೋಗದ ಇವರಿಗೆ 'ಭಾಮೆಯ ನೋಡಲು ತಾ ಬಂದ' ಹಾಡು ಪ್ರಿಯವಾದುದು. ಅಂತೆಯೇ 'ಚಂದ್ರಮುಖಿ ಪ್ರಾಣಸಖಿ' ಹಾಗೂ ಹಿಂದಿಯ ಬೈಜುಬಾವರಾ ಚಿತ್ರದ 'ಮನ ತಡಪತ' ಗೀತೆಗಳಿವರಿಗೆ ಕರ್ಣಾನಂದಕರ. "ಹಿಂದೋಳವೆಂದರೆ ಉಯ್ಯಾಲೆ ಎಂದರ್ಥ. ಇಲ್ಲಿಯೇ ತೂಗಿ ತೊನೆಯುತ್ತೇನೆ. ಮತ್ತೂ ಮುಂದುವರೆಯುವ ಬಯಕೆಯಾಗುತ್ತದೆ" ಎನ್ನುತ್ತಾರೆ ಶತಾವಧಾನಿ ಗಣೇಶರು.

ಹಲವಾರು ಭಾಷೆಗಳನ್ನು ಪಾಂಡಿತ್ಯಪೂರ್ಣವಾಗಿ ಮಂಡಿಸುವ ಗಣೇಶರು "ಸಂಸ್ಕೃತಕ್ಕೆ ಪದ್ಯ-ಗದ್ಯ-ಗೀತೆಗಳಿಗೆ ಬೇಕಾದ ನೈಸರ್ಗಿಕವಾದ ಸಾಮರ್ಥ್ಯವಿದ್ದರೂ, ನಮ್ಮ ರಾಷ್ಟ್ರದ ಸಂಸ್ಕೃತಿಸಾರವನ್ನೆಲ್ಲ ಹಿಡಿದಿಡಬಲ್ಲ ಬಲ್ಮೆಯಿದ್ದರೂ, ಇಂದಿನ ನಮ್ಮ ಪ್ರಾಂತೀಯ ಭಾಷೆಗಳಿಗೆಲ್ಲ ಇರುವಂಥ ಸಮಸಾಮಯಿಕವಾದ ನುಡಿಗಟ್ಟಿನ ಸೌಲಭ್ಯವಿಲ್ಲ. ಆಡುನುಡಿಯ ಅನುಕೂಲತೆಯಿಲ್ಲ. ಜಾಗತಿಕ ಭಾಷೆಯೆಂದೂ, ಎಲ್ಲ ಬಗೆಯ ಜ್ಞಾನ- ವಿಜ್ಞಾನಗಳ ಹೆಬ್ಬಾಗಿಲೆಂದೂ ಹೆಸರಾದ ಇಂಗ್ಲಿಷನ್ನು ಗಮನಿಸುವುದಾದರೆ, ಅದು ನಮ್ಮ ನೆಲದ ಅನುದಿನದ ಜೀವನವನ್ನೂ, ಅಂತರಾತ್ಮದ ಸಂಜೀವನವನ್ನೂ ಬಿಂಬಿಸುವಲ್ಲಿ ಶೋಚನೀಯ ವಾಗಿ ಸೋಲುತ್ತದೆ. ಆದರೆ ಇತ್ತ ಸಂಸ್ಕೃತದ ವಾಗರ್ಥ ಸಂಪತ್ತಿಯನ್ನೂ, ಇಂಗ್ಲಿಷಿನ ವಿಚಾರ-ವ್ಯವಹಾರ ಸಮೃದ್ಧಿಯನ್ನೂ ಅವಲೀಲೆಯಾಗಿ ತಮ್ಮಲ್ಲಿ ಮೈಗೂಡಿಸಿಕೊಳ್ಳಬಲ್ಲ ನಮ್ಮ ದೇಶಭಾಷೆಗಳಿಗೆ ಇವೆರಡು ನುಡಿಗಳಿಂದಲೂ ಸಾಧ್ಯವಾಗದ, ನಮ್ಮ ಜನತೆಗೆ ಬೇಕಾಗಬಲ್ಲ ಭಾವ-ಬುದ್ಧಿಗಳ ಅಭಿವ್ಯಕ್ತಿಯನ್ನು ಹವಣಿಸಿಕೊಡಬಲ್ಲ ಶಕ್ತಿಗಳುಂಟು" ಎನ್ನುತ್ತಾರೆ. ಪ್ರಾಂತೀಯ ಭಾಷೆಗಳ ಪ್ರಾಮುಖ್ಯತೆಯನ್ನು ಈ ನಿಟ್ಟಿನಲ್ಲಿ ಕಂಡ ಭಾಷಾಪ್ರೇಮಿಗಳು ವಿರಳ.

ಅವಧಾನಿಗಳ ಹಳಗನ್ನಡ ಪ್ರಯೋಗದ ಸ್ವಾದಕ್ಕೆ ಇಂದಿನ ಯಾವುದೇ ಸ್ವೀಟ್ ಸ್ಟಾಲ್‌ನಲ್ಲಿ ದೊರೆಯುವ ಯಾವುದೇ ಸಿಹಿತಿನಿಸು ಸಮವಲ್ಲ. ಒತ್ತೊತ್ತಾಗಿರುವ ತರುಗಳನ್ನುಳ್ಳ ಕಾನನದ ಸೊಗದಂತೆಯೇ ಒತ್ತಕ್ಷರಗಳ ಸಾಲುಸಾಲುಗಳಿಂದ ಶ್ರೀಮಂತವೆನಿಸುವ, ಲಯಬದ್ಧವಾಗಿ ಮುನ್ನಡೆಯುವ ಹಳಗನ್ನಡದ ಓಟದ ಸವಿಯು ಕರ್ಣರಸಾಯನವೂ ಹೌದು, ಚಿತ್ತರಸಾಯನವೂ ಹೌದು. ಇಂತಹ ಸ್ವಾದಿಷ್ಟ ರಸಾಯನವನ್ನು ಮೊಗೆಮೊಗೆದು ಉಣಬಡಿಸಬಲ್ಲ ಉದ್ದಾಮರು ವಿರಳರಾಗುತ್ತಿರುವ ಈ ಕಾಲದಲ್ಲಿ ಗಣೇಶರು ನಮಗೆ ಮರಳುಗಾಡಿನ ಓಯಸಿಸ್‌ನಂತೆ ಕಾಣಬರುತ್ತಾರೆ.

ಗಣೇಶರು ಅನೇಕ ಬಾರಿ ಹಾಸ್ಯ ಮತ್ತು ಚಮತ್ಕಾರಗಳನ್ನು ವಿಷಯಗಳನ್ನು ಪ್ರೇಕ್ಷಕರಿಗೆ ತಲುಪಿಸುವ ವಾಹನಗಳನ್ನಾಗಿ ಬಳಸಿದ್ದಾರೆ. ಅಂತಹ ವಾಹನಗಳಿಗೆ ಸುಭಾಷಿತಗಳಲ್ಲಿ ದೊರೆಯುವ ಚಮತ್ಕಾರಗಳು ಇಂಧನವಾಗಿವೆ. ಇದೋ ಗಣೇಶರು ಮೆಚ್ಚಿದ ಒಂದು ಸಂಸ್ಕೃತ ಸುಭಾಷಿತ ಮತ್ತು ಪಾ.ವೆಂ. ಆಚಾರ್ಯರು ಅದನ್ನು 'ಕನ್ನಡಿಸಿದ' ಪರಿ:

ರೇ ರೇ ರಾಸಭ ವಸ್ತ್ರಭಾರವಹನಾತ್ಕುಗ್ರಾಸಮಶ್ನಾಸಿ ಕಿಂ
ರಾಜಾಶ್ವಾವಸಥಾನ್ ಪ್ರಯಾಹಿ ಚಣಕಾಭ್ಯೂಷಂ ಸುಖಂ ಭಕ್ಷಯ ।
ಸರ್ವಾನ್ ಪುಚ್ಛವತೋ ಹಯಾ ಇತಿ ವದಂತ್ಯತ್ರಾಧಿಕಾರೇ ಸ್ಥಿತಾ
ರಾಜಾ ತೈರುಪದಿಷ್ಟಮೇವ ಮನುತೇ ಸತ್ಯಂ ತಟಸ್ಥಾಃ ಪರೇ ॥

ಇದೋ ಪಾ.ವೆಂ. ಮಂಡಿಸಿರುವ ಅನುವಾದ:

ಎಲವೆಲವೋ ಕತ್ತೆ, ತಿನ್ನಲೇಕೆ ತರಗ
ಕೊಳೆಬಟ್ಟೆಯೇಕೆ ಹೊರುವೆ?
ಅರಸುಲಾಯವ ಸೇರು, ಸುಖವಾಗಿ ನೀ ಬಾಳು
ಮೆಲ್ಲುತ್ತ ಹುರುಳಿ-ಕಡಲೆ.
ಅಂಜದಿರು; ಬಾಲವಿದ್ದದ್ದೆಲ್ಲ ಕುದುರೆಯೆಂ-
ಬಧಿಕಾರಿವರ್ಗವಿಲ್ಲಿ;
ಅರಸಗವರಂದದ್ದೆ ಪದವಾಕ್ಯ, ಮಿಕ್ಕವರು
ತೆಗೆಯುವವರಲ್ಲ ತರಲೆ!

ಗಣೇಶರನ್ನು ನಾನು ಮೊದಲ ಬಾರಿ ಕಂಡದ್ದು ಹಾಸ್ಯೋತ್ಸವದಲ್ಲಿ. ಜನರು ನೀಡಿದ ದತ್ತಪದಿಗಳನ್ನು ಬಳಸಿ ಅವರು ರಚಿಸಿದ ಕವನಗಳು ನನ್ನನ್ನು ನಿಬ್ಬೆರಗಾಗಿಸಿದ್ದವು. ಅನಂತರ ಅವರ ಅನೇಕ ದತ್ತಪದಿಪ್ರಯೋಗಗಳನ್ನು ಆಸ್ವಾದಿಸಿದ್ದೇನೆ. ಪಾಪಿ, ನೀಚ, ಚೋರ, ಜಾರ; ಈ ಪದಗಳನ್ನು ಬಳಸಿ ಮಾಡಿರುವ ಆಂಜನೇಯಸ್ತುತಿಯನ್ನು ಕಾಣಿರಿ:

ಹನುಮ! ಪಾಪೆಯೆನ್ನನೆ ಕಾಪಿಡಯ್ ।
ಜನಿತನೀಚತೆಯಿಂದಿದೊ ನೊಂದೆನಾಂ ।
ಜನಕಜಾತೆಯ ಚೋರನ ಸೈನ್ಯಸೂ-
ದನನೆ! ಜಾರದವೊಲ್ ಪಿಡಿದೆನ್ನನೋ ।

ಗಣೇಶರು ಅನ್ಯಭಾಷೆಯ ಪದಗಳನ್ನು ಕನ್ನಡದಲ್ಲಿ ಸೇರಿಸುವ ಚಮತ್ಕಾರವು ಅನನ್ಯವಾದುದು. ಟ್ರಿಗ್ನಾಮೆಟ್ರಿಯ ಸೈನ್, ಕೋಸೈನ್, ಟ್ಯಾನ್, ಕಾಟ್ ಶೀಟಾಗಳನ್ನು ಬಳಸಿ ಯುದ್ಧವರ್ಣನೆ ಮಾಡಿಸಬೇಕೆನ್ನುವುದು ಪೃಚ್ಛಕನೊಬ್ಬನಿಗೆ ಹತ್ತಿದ ಶೀಟೆ. ಇದೋ ಗಣೇಶರು ಅದಕ್ಕೆ ಕೊಟ್ಟ ಪರಿಹಾರ:

ರಿಪುಸೈನ್ಯಂಗಳ್ ಕಲೆಯಲ್
ವಿಪುಲಂ ಮೃತಿ, ಆರ ದಾಹಕೋ ಸೈನ್ಯಮಿ-
ತ್ತಪನಂ! ವೈಕಟ್ಯಾಂತರ-
ಮುಪಮಿಸಲಿಲ್ಲಂ ಸೊಗಕ್ಕೆ ಶನಿಕಾಟಮಿದೇ ।

ಸಾಮಾಜಿಕ ಕಳಕಳಿಯನ್ನು ಗಣೇಶರು ತಮ್ಮ ಪದ್ಯಗಳಲ್ಲಿ ತೋರುವುದು ವಿಶಿಷ್ಟ ರೀತಿಯಲ್ಲಿಯೇ. ಅಸಲಿಗೆ ಪರಿಸರರಕ್ಷೆಯನ್ನು ಕಡೆಗಣಿಸುವುದನ್ನು ಆನೆಗಳ ಘೀಳುಸ್ವರದಲ್ಲಿಯೋ, ಸಿಂಹನಾದದಲ್ಲಿಯೋ ಅಬ್ಬರಿಸುವ ಅನೇಕರು ಹಾದಿಗಳಲ್ಲಿ ದೊರೆತಾರು. ಗಣೇಶರು ಈ ವಿಧವನ್ನು ಮಂಡಿಸಲು ಬಳಸಿದ್ದು 'ನಿಧಾನವಾಗಿ ಮುಂದುವರೆಯುವ' ಮಂದಾಕ್ರಾಂತವನ್ನು:

ಪಾಲೆಲ್ಲಿ ದೊರೆಯುವುದು? 'ಬೃಹದ್ ಬಾಟಲಿಯಿಂದಂ' ಫಲಗಳ್
ಪೇಟ್! ಎಲ್ಲಿಂದಂ? 'ದೊರೆವುವು ದಲ್ ಫ್ರೂಟ್ ಸಲಾಡೊಳ್' 'ಸುಮಂಗಳ್'?'
'ಲೀಲಾಗುಚ್ಛಂಗಳೊಳೊಲವಿನೊಳ್, ಪಾರ್ಟಿಯೊಳ್' 'ಕಾಟ್ಮೆಗಂಗಳ್'?'
ಪೇಲೋದ್ಯಾನಂಗಳೊಳ್ ಎನ್ನುವ ನವ್ಯರ್ಗಧೀನಂ ಸಮಸ್ತಂ.

(ಹಾಲು ಬಾಟಲಿಯಲ್ಲಿ, ಹಣ್ಣು ಫ್ರೂಟ್ ಸಲಾಡಿನಲ್ಲಿ, ಹೂಗಳು ಬೊಕೆಯಲ್ಲಿ, ಪಾರ್ಟಿಗಳಲ್ಲಿ; ಕಾಡುಮೃಗಗಳು ಝೂಗಳಲ್ಲಿ ಸಿಗುತ್ತವೆ ಎನ್ನುವ ಜನರ ಕೈಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಹೊರಿಸಲಾಗಿದೆ ಎಂಬುದು ಇದರ ಅರ್ಥ. ಇದು Blinkit gives us vegetable, swiggy gives us food, dairy gives us milk, chatgpt gives us education ಎನ್ನುವ ಮಂದಿಯಿರುವ ಈ ಕಾಲದ ಚಿತ್ರಣಮಲ್ತೆ!)

ಗಣೇಶರು ಅಪ್ರಸ್ತುತಪ್ರಸಂಗಗಳಿಗೆ ನೀಡುವ ಉತ್ತರಗಳು ಪ್ರಶ್ನೋತ್ತರದಲ್ಲೇ ತೊಡಗಿರುವ ನನಗೆ ಬಹಳ ಪ್ರಿಯವಾದವು. "ನಾನೂ ಹದಿನಾರು ಸಾವಿರ ಸ್ತ್ರೀಯರನ್ನು ವರಿಸಲೆ?" ಎಂದೊಬ್ಬರು ನನ್ನನ್ನು ಪ್ರಶ್ನಿಸಿದಾಗ, 'ಮೊದಲು ಕಿರುಬೆರಳಲ್ಲಿ ಬೆಟ್ಟವನ್ನು ಎತ್ತಿ, ಆನಂತರ ಆಗಿ' ಎಂದುತ್ತರಿಸಿದ್ದೆ. ಗಣೇಶರು ಅದಕ್ಕೂ ಒಂದು ಹೆಜ್ಜೆ ಮೀರಿ, 'ಮೊದಲು ಪೂತನಿಯ ವಿಷಕುಡಿದು ಬದುಕಿರಿ, ನಂತರ ವರಿಸುವ ವಿಚಾರ' ಎಂದಿದ್ದರು. ಅವರ 'ಕನ್ನಡದಲ್ಲಿ ಅವಧಾನ ಕಲೆ' ಪುಸ್ತಕದಲ್ಲಿರುವ ಕೆಲವು ಪ್ರಶ್ನೋತ್ತರಗಳು ಇಂತಿವೆ:

- **ಅವಧಾನಪದ್ಯಗಳ ರಸ ಯಾವುದು?**

'ಬಿಸಿನೀ ರಸ'. (ಇದನ್ನು ಬಿಸಿ, ನೀರಸ ಎಂದೂ ಓದಬಹುದು; ಬಿಸಿನೀ ರಸ ಎಂದೂ ಓದಬಹುದು. ಬಿಸಿನೀ ರಸ ಎಂದರೆ ಮಕರಂದ ಎಂದರ್ಥ.)

- **ಶ್ರೀಕೃಷ್ಣನು ಗೋಪಿಯರ ಸೀರೆ ಕದ್ದ. ಆದರೆ ದ್ರೌಪದಿಯೊಬ್ಬಳ ಸೀರೆ ಸುಲಿದ ದುಶಾಸನನೇಕೆ ಕೆಟ್ಟವನಾದ?**

ಕೆಟ್ಟ ಕೆಲಸವನ್ನು ವಿಪುಲವಾಗಿ ಮಾಡಿದರೆ ಲೋಕ ಮೆಚ್ಚುತ್ತದೆ. ಒಬ್ಬರನ್ನು ಕೊಂದದ್ದು ಕೊಲೆ, ಲಕ್ಷಾಂತರ ಜನರನ್ನು ಕೊಂದರೆ ಮಹಾಯುದ್ಧ.

(ಶ್ರೀಕೃಷ್ಣನು ಗೋಪಿಯರ ಸೀರೆ ಕದ್ದದ್ದೇಕೆ ಎಂದು ನನ್ನನ್ನು ಪ್ರಶ್ನಿಸಿದ್ದರು. 'ರೀಟೇಯ್ಲ್‌ನಲ್ಲಿ ಕಲೆಕ್ಟ್ ಮಾಡಿ ಹೋಲ್‌ಸೇಲಲ್ಲಿ ದ್ರೌಪದಿಗೆ ಸಪ್ಲೈ ಮಾಡಕ್ಕೆ' ಎಂದುತ್ತರಿಸಿದ್ದೆ.)

- **ಕಾಗೆಬಂಗಾರ ಎಂದರೇನು?**

ಬಂಗಾರಕ್ಕಾಗಿ ಕಾಗೆಗಳಂತೆ ಕಚ್ಚಾಡುವುದು.

- **ಮ್ಯಾರೇಜಿಗೂ, ಗ್ಯಾರೇಜಿಗೂ ವ್ಯತ್ಯಾಸವೇನು?**

ಸರಿಯಾದದ್ದು ಹಾಳಾಗಲು ಮ್ಯಾರೇಜ್; ಹಾಳಾದದ್ದು ಸರಿಯಾಗಲು ಗ್ಯಾರೇಜ್.

ಮುಕ್ತಛಂದಸ್ಸಿನ ಲಕ್ಷಣವೇ ಅವಲಕ್ಷಣವೆಂದು ಒಮ್ಮೆ ಉತ್ತರಿಸಿದ್ದ ಗಣೇಶರು 'ಮುಕ್ತಛಂದಸ್ಸು ತಪ್ಪೇನು?' ಎಂದಾಗ, 'ಹೂರಣವನ್ನು ಆಸ್ವಾದಿಸುವವರು ಕೆಲವರು. ಒಬ್ಬಟ್ಟನ್ನು ಆಸ್ವಾದಿಸುವವರು ಹಲವರು. ಮುಕ್ತಛಂದಸ್ಸು ಹೂರಣ. ಆದಿಪ್ರಾಸವನ್ನು ಹಿಡಿದಾಗ ಅದು ಕಣಕದಲ್ಲಿರುವ ಹೂರಣ ಅರ್ಥಾತ್ ಒಬ್ಬಟ್ಟು. ಮಾತ್ರೆಗಳು ಸುಪ್ರಮಾಣದಲ್ಲಿದ್ದರೆ ಒಬ್ಬಟ್ಟಿನೊಡನೆ ತುಪ್ಪವಿದ್ದಂತೆ. ಒಂದು ಬಂಧಕ್ಕನುಗುಣವಾಗಿ ನಡೆದರೆ ಹಾಲು-ತುಪ್ಪದೊಡನೆಯ ಸವಿದ ಒಬ್ಬಟ್ಟಿನಂತೆ. ನಿಮಗೆ ಹೂರಣವಷ್ಟೇ ಪ್ರಿಯವಾದರೆ ಮುಕ್ತಛಂದಸ್ಸನ್ನೇ ಬಳಸಿ' ಎಂದಿದ್ದರು.

ಅಗಣಿತ ವಿದ್ಯೆಗಳ ಗಣಿಯಾದ ಗಣೇಶರ ಮಾತುಗಳಿಗೆ ಕಿವಿಯಾಗುವುದು ನನ್ನಂತಹ ಸಾಹಿತ್ಯಗಮಾರರಿಗೆ ಹಸಿದವನಿಗೆ ಮೃಷ್ಟಾನ್ನವಿದ್ದಂತೆ. ಸ್ವಯಂ ಪಾಂಡಿತ್ಯವಾರಿಧಿಯಾದ ಇವರು ಇತರರ ಸಣ್ಣಪುಟ್ಟ ವೈನೋದಿಕ ಮಾತುಗಳನ್ನು ಆಸ್ವಾದಿಸುವುದು ವಿಶೇಷವೆನಿಸುತ್ತದೆ. ಕೆಲವು ದಿನಗಳ ಹಿಂದೆ ಗೋಖಲೆ ಸಂಸ್ಥೆಯಲ್ಲಿ ಡಿವಿಜಿಯವರ ಸೋದರಳಿಯ ಚಂದ್ರಮೌಳಿಯವರು ತಮ್ಮ ಭಗಿನಿಯು 1942ರಲ್ಲಿಯೇ ಗತಿಸಿದ ಸಂದರ್ಭವನ್ನು ಉಲ್ಲೇಖಿಸಿದಾಗ ನಾನು, "ಆಕೆ ಕ್ವಿಟ್ ಇಂಡಿಯಾ ಚಳುವಳಿಯನ್ನು ಅಷ್ಟು ಗಂಭೀರವಾಗಿ ಸ್ವೀಕರಿಸಬಾರದಾಗಿತ್ತು" ಎಂದಾಗ ಗಣೇಶರು ಅದನ್ನು ಮನಸಾರೆ ಆಸ್ವಾದಿಸಿದ್ದು, 'ಸೀನಿಯರ್ ಸಿಟಿಜನ್'ಗಳಲ್ಲಿ ಮೂರು ವಿಧ; senior by age, 'see near' by virtue of not being able to see far, sea near by virtue of living near the sea shore' ಎಂದುದನ್ನು ಇತರರೊಡನೆಯೂ ಹಂಚಿಕೊಂಡು ಸಂಭ್ರಮಿಸಿದ್ದು ಅವರ ಸರಳತೆಯ ಪ್ರತೀಕವೇ ಸೈ. ವಿನಯತೆಯೇ ಮೂರ್ತಿವೆತ್ತ ಗಣೇಶರ ಸಾಮೀಪ್ಯ ನನಗೆ ವಿರಳವಾದುದೂ, ಅಮೂಲ್ಯವಾದುದೂ ಆಗಿದೆ.

'ನಾನು ವರಿಸೆ' ಎಂದರು ಗಣೇಶರು. ದೇವಿ ಸರಸ್ವತಿ ಅವರಿಗೆ 'ಪದ್ಮ'ಳನ್ನು ಗಂಟು ಹಾಕಿದ್ದಾಳೆ. ಇನ್ನವರು ಪದ್ಮಭೂಷಣರಾಗಿಯೇ ಬಾಳಬೇಕು. ಅವಧಾನಕಲೆಯ ಮೂಲಕ ಯುವಕರನ್ನೂ ಪದ್ಯರಚನೆಯತ್ತ, ಕನ್ನಡದೊಲುಮೆಯತ್ತ ಆಕರ್ಷಿಸಿದ ಗಣೇಶರ ಸಾಹಿತ್ಯಮಾರ್ಗ ನಿತ್ಯಸುತ್ಯ.

'ಕಾರ್ಪೋರೇಟ್ ಜಿಹಾದ್' ಎತ್ತುವ ಪ್ರಶ್ನೆಗಳು

• ಪೂರ್ಣಿಮಾ

ನಾಸಿಕ್‌ನ ಟಿಸಿಎಸ್ ಕಂಪೆನಿಯಲ್ಲಿ ಬಯಲಾದ 'ಕಾರ್ಪೋರೇಟ್ ಜಿಹಾದ್' ಇಡೀ ದೇಶವನ್ನೇ ಆಘಾತಕ್ಕೆ ತಳ್ಳಿರುವುದು ಸುಳ್ಳಲ್ಲ. ಇಂತಹುದೊಂದು ಬೆಳವಣಿಗೆ ನಡೆಯುತ್ತಿದೆ ಎಂಬುದನ್ನು ಯಾರೂ ಊಹಿಸಿರಲಾರರು. ಇಂತಹ ಮತಾಂತರ ಕೃತ್ಯಗಳು ಇನ್ನೂ ಅನೇಕ ಕಂಪೆನಿಗಳಲ್ಲಿ ನಡೆಯುತ್ತಿದೆ ಎಂಬ ವರದಿಗಳೂ ಈಗ ಕೇಳಿ ಬರುತ್ತಿದ್ದು, ಇದಂತೂ ಉದ್ಯೋಗಿಗಳಲ್ಲಿ ಮತ್ತು ಅವರ ಕುಟುಂಬಗಳಲ್ಲಿ ಭಯಾತಂಕವನ್ನು ಉಂಟು ಮಾಡಿದೆ.

ಕಂಪೆನಿಯಲ್ಲಿನ ಕೆಲವು ವ್ಯಕ್ತಿಗಳು ಇತರರ ಗಮನಕ್ಕೆ ಬಾರದಂತೆ ಒತ್ತಡ ತಂತ್ರದ ಮೂಲಕ ಹಾಗೂ ದೌರ್ಜನ್ಯದ ಮೂಲಕ ಕೆಲವು ಮಹಿಳೆಯರನ್ನು ಶೋಷಣೆ ಮಾಡುತ್ತಿದ್ದರು ಮತ್ತು ಅವರನ್ನು ಮತಾಂತರಕ್ಕೆ ಪ್ರೇರೇಪಿಸುತ್ತಿದ್ದರು ಎಂಬ ವಿಷಯವು ಕಳವಳಕಾರಿಯಾದುದು.

ನಾಸಿಕ್‌ನ ಘಟನೆಯು ಬೆಳಕಿಗೆ ಬಂದ ಬಳಿಕ ಇನ್ನೂ ಕೆಲವು ಕಂಪೆನಿಗಳಲ್ಲಿ ಇಂತಹುದೇ ಹಿಂದು ವಿರೋಧಿ ನಿಯಮಗಳನ್ನು ಹೇರಿರುವುದು ಬೆಳಕಿಗೆ ಬರಲಾರಂಭಿಸಿದೆ. ಲೆನ್ಸ್‌ಕಾರ್ಟ್ ಕಂಪೆನಿಯಲ್ಲೂ ಹಿಂದುಗಳಿಗೆ ತಮ್ಮ ಸಾಂಪ್ರದಾಯಿಕ ಆಚರಣೆಗೆ ನಿರ್ಬಂಧ ಹಾಕಿರುವುದು, ಇನ್ನು ಕೆಲವು ಕಂಪೆನಿಗಳಲ್ಲಿ ಹಿಂದು ಸಾಂಪ್ರದಾಯಿಕ ಉಡುಗೆಗಳಿಗೆ ನಿರ್ಬಂಧ ಹಾಕಿರುವುದು ತಿಳಿದು ಬಂದಿದೆ. ಇವೆಲ್ಲದರ ಕುರಿತಂತೆ ಈಗ ತನಿಖೆ ನಡೆಯುತ್ತಿದೆ.

ಇದೇವೇಳೆ, ಕಂಪೆನಿಗಳಲ್ಲಿ ವ್ಯವಸ್ಥಿತವಾಗಿ ಮತಾಂತರ ಪ್ರಕ್ರಿಯೆಯು ನಡೆಯುತ್ತಿರುವುದರಿಂದಾಗಿ ಜನರು ಒಂದು ಸಮುದಾಯವನ್ನೇ ಸಂಶಯದಿಂದ ನೋಡುವಂತಾಗಿರುವುದು ಸುಳ್ಳಲ್ಲ. ಈ ವಿಚಾರದಲ್ಲಿ ಕಂಪೆನಿಗಳ ಮ್ಯಾನೇಜ್‌ಮೆಂಟ್‌ನ ನಿರ್ಲಕ್ಷ್ಯ ಕೂಡಾ ಅಕ್ಷಮ್ಯವಾಗಿದೆ.

ನಾಸಿಕ್‌ನಲ್ಲಿ ಈ ಮತಾಂತರ ಜಾಲವು ನಡೆಯುತ್ತಿರುವುದಕ್ಕೆ ಬಹಳಷ್ಟು ಪುರಾವೆಗಳು ದೊರಕಿವೆ. ಇಲ್ಲವಾಗಿದ್ದರೆ ಈ ಚುನಾವಣಾ ಸಮಯದಲ್ಲಿ ಇಂತಹ ವಿವಾದವನ್ನು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಲಾಗಿದೆ ಎಂಬ ಆರೋಪ ಕೇಳಿಬರುತ್ತಿತ್ತು. ಇದೆಲ್ಲ ಕಪೋಲಕಲ್ಪಿತ ಎಂಬುದಾಗಿ ಅದನ್ನು ತಳ್ಳಿ ಹಾಕಲಾಗುತ್ತಿತ್ತು. 9 ಮಂದಿ ಮಹಿಳಾ ಉದ್ಯೋಗಿಗಳು ದೂರು ನೀಡಿದ್ದರ ಹಿನ್ನೆಲೆಯಲ್ಲಿ, ಮಹಿಳಾ ಪೊಲೀಸರು ಕಂಪೆನಿಯೊಳಗೆ ಸೇರಿಕೊಂಡು ರಹಸ್ಯ ಕಾರ್ಯಾಚರಣೆ ನಡೆಸಿ ಪುರಾವೆಗಳನ್ನು ಸಂಗ್ರಹಿಸಿದ್ದರು. ಆ ನಂತರವೇ ಆರೋಪಿಗಳನ್ನು ಬಂಧಿಸಲಾಗಿದೆ.

ಕಂಪೆನಿಗಳಲ್ಲಿ ಉದ್ಯೋಗಿಗಳು ಎದುರಿಸುವ ಸಮಸ್ಯೆಗಳನ್ನು ಮತ್ತು ಕಿರುಕುಳದ ಆರೋಪಗಳನ್ನು ಪರಿಹರಿಸಲು ಆಂತರಿಕ ಸಮಿತಿ ನೇಮಿಸುವಂತೆ ದಶಕದ ಹಿಂದೆಯೇ ಆದೇಶ ಹೊರಡಿಸಲಾಗಿದೆ. ಆದರೆ ಬಹಳಷ್ಟು ಕಂಪೆನಿಗಳು ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯಾಚರಿಸುತ್ತಿಲ್ಲ. ಮಹಿಳೆಯರು ಆರೋಪ ಮಾಡಿದರೂ ಅಂತಹ ಆರೋಪಗಳನ್ನು ಅಲ್ಲಿಯೇ ಮುಚ್ಚಿ ಹಾಕಲಾಗುತ್ತದೆ. ಧೈರ್ಯವಂತ ಉದ್ಯೋಗಿಗಳು ಹಠ ಬಿಡದೆ ಮುಂದುವರಿದಾಗ ಮಾತ್ರ ಇಂತಹ ಪ್ರಸಂಗಗಳು ಬೆಳಕಿಗೆ ಬರುತ್ತವೆ.

ಕಂಪೆನಿಗಳ ಆಂತರಿಕ ವ್ಯವಸ್ಥೆಯು ಉದ್ಯೋಗಿಗಳಲ್ಲಿ ದೌರ್ಜನ್ಯದ ವಿರುದ್ಧ ಹೋರಾಡುವಲ್ಲಿ ಆತ್ಮವಿಶ್ವಾಸ ತುಂಬಲು ವಿಫಲವಾಗಿದೆ.

ಕಂಪೆನಿಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವ ಆರೋಪ ಮೊದಲಿನಿಂದಲೂ ಇತ್ತು. ಅದೀಗ ಹೊಸ ಆಯಾಮ ಪಡೆದುಕೊಂಡಿರುವುದು ಗಂಭೀರವಾಗಿದೆ. ಬಲವಂತದ ಮತ್ತು ಆಮಿಷದ ಮತಾಂತರವೂ ಅದರಲ್ಲಿ ಸೇರಿಕೊಂಡಿದೆ. ಏಳು ಮಂದಿ ಮುಸ್ಲಿಮ್ ಯುವಕರು ಮತ್ತು ಓರ್ವ ಮುಸ್ಲಿಂ ಮಹಿಳೆ ಟಿಸಿಎಸ್ ಕಂಪೆನಿಯಲ್ಲಿ ಇಂತಹ ಮತಾಂತರ ಕೃತ್ಯದಲ್ಲಿ ತೊಡಗಿದ್ದರು ಎಂಬುದನ್ನು ಕಾಣುವಾಗ ಕೆಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಎಲ್ಲಾ ಕಂಪೆನಿಗಳಲ್ಲಿ ಇರುವ ಎಲ್ಲಾ ಮುಸ್ಲಿಂ ಪುರುಷರು ಇತರರನ್ನು ಮತಾಂತರಕ್ಕೆ ಪ್ರಚೋದಿಸುವುದಿಲ್ಲ. ತಮಗೆ ಮತಾಂತರ ಮಾಡಲು ಅವಕಾಶ ಸಿಕ್ಕಿದೆ ಎಂಬಂತೆ ವರ್ತಿಸುವುದಿಲ್ಲ. ಆದರೆ ಟಿಸಿಎಸ್‌ನಲ್ಲಿ ಮಾತ್ರ ಹಾಗೇಕಾಯಿತು? ಮತಾಂತರ ಮಾಡುವ ಸಮಾನ ಉದ್ದೇಶದ ಅಷ್ಟು ಮಂದಿ ಒಂದೇ ಕಂಪೆನಿಯಲ್ಲಿ, ಒಂದೇ ಕಡೆಯಲ್ಲಿ ಕೆಲಸ ಮಾಡಲು ಹೇಗೆ ಸಾಧ್ಯವಾಯಿತು? ಅವರಿಗೆ ಅಂತಹ ಅವಕಾಶ ಸೃಷ್ಟಿಸಿದವರಾರು? ಮ್ಯಾನೇಜ್‌ಮೆಂಟ್‌ನಲ್ಲೇ ಕೆಲವರು ಅಂತಹ ಅವಕಾಶ ಕಲ್ಪಿಸಿದರೆ? ಮತಾಂತರ ಜಾಲದಲ್ಲಿ ನಿರತವಾರ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಂಡು ಅವರನ್ನು ಒಂದೇ ಕಂಪೆನಿಯ ಒಂದೇ ಜಾಗದಲ್ಲಿ ಕೆಲಸ ಮಾಡುವಂತೆ ಮಾಡಲಾಯಿತೆ? ಇದರ ಜತೆಗೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರನ್ನೇ ಮತಾಂತರಕ್ಕೆ ಗುರಿ ಮಾಡಲಾಗಿದೆ. ಉದ್ಯೋಗಿಗಳ ಕುರಿತಾದ ಅಂಥ ಮಾಹಿತಿಯನ್ನು ಈ ವ್ಯಕ್ತಿಗಳಿಗೆ ಒದಗಿಸಿದವರು ಯಾರು? ಉದ್ಯೋಗಿಗಳ ವೈಯಕ್ತಿಕ ಮಾಹಿತಿಗಳನ್ನು ರಹಸ್ಯವಾಗಿಡುವುದು ಕಂಪೆನಿಗಳ ಕರ್ತವ್ಯವಲ್ಲವೆ?

ಇವರೆಲ್ಲರೂ ಒಂದು ಸಂಘಟಿತ ವ್ಯವಸ್ಥೆಯಡಿಯಲ್ಲಿ ಕೆಲಸ ಮಾಡುತ್ತಿರುವ ಅನುಮಾನ ದಟ್ಟವಾಗುತ್ತಿದೆ. ಇದರ ಜತೆಗೇ ವಿದೇಶಿ ಕೈವಾಡವೂ ಇದರ ಹಿಂದಿರುವ ಸಾಧ್ಯತೆಗಳಿವೆ.

ಆರಂಭದಲ್ಲಿ ಮಹಿಳೆಯರು ತಮಗಾದ ಕಿರುಕುಳದ ಕುರಿತು ಸಂಬಂಧಿತ ಮೇಲಧಿಕಾರಿಗಳಿಗೆ ತಿಳಿಸಿದಾಗ ಇಂತಹ ಘಟನೆಗಳು ಬೇರೆ ಕಂಪೆನಿಗಳಲ್ಲಿಯೂ ನಡೆಯುತ್ತವೆ ಎಂಬುದಾಗಿ ಸಂತ್ರಸ್ತ ಮಹಿಳೆಯರಿಗೆ ಹೇಳಿ, ವಿಷಯವನ್ನು ತೇಲಿಸಿ ಬಿಡಲಾಯಿತು. ಇದು ಇನ್ನಷ್ಟು ಆತಂಕಕಾರಿ. ಇದು ಇತರ ಕಂಪೆನಿಗಳಲ್ಲಿರುವ ಮುಸ್ಲಿಮರನ್ನು ಕೂಡಾ ಅನುಮಾನದಿಂದ ನೋಡುವಂತೆ ಮಾಡುತ್ತದೆ. ಜತೆಗೇ ಕಂಪೆನಿಗಳು ಇನ್ನು ಮುಂದೆ ಮುಸ್ಲಿಮರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಹಿಂಜರಿಯುವಂತಹ ಪ್ರಸಂಗ ಸೃಷ್ಟಿಸುತ್ತದೆ. ಕಂಪೆನಿಯಲ್ಲಿನ ಕೆಲಸಗಾರರು ಸಹೋದ್ಯೋಗಿ ಮುಸ್ಲಿಮರನ್ನು ಅನುಮಾನದಿಂದ ನೋಡುವಂತೆಯೂ ಪ್ರೇರೇಪಿಸುತ್ತದೆ. ಇವೆಲ್ಲವೂ ಅಮಾಯಕ ಮುಸ್ಲಿಮರ ಪಾಲಿಗೆ ಆಘಾತಕಾರಿ ಬೆಳವಣಿಗೆಯಲ್ಲವೆ!

ಕಂಪೆನಿಗಳಲ್ಲಿ ಮತಾಂತರಕ್ಕೆ ಪ್ರಚೋದನೆ ನೀಡುವ ಪ್ರಸಂಗಗಳು ಬೇರೆಡೆಗಳಲ್ಲೂ ನಡೆಯುವುದಿದೆ. ಅಮೆರಿಕದಲ್ಲಿ ಕ್ರೈಸ್ತ ಮತಕ್ಕೆ ಮತಾಂತರಗೊಳ್ಳುವಂತೆ ಒತ್ತಡ ಹೇರಿದ ಪ್ರಸಂಗಗಳು ವರದಿಯಾದುದಿದೆ. ಕಂಪೆನಿಯ ಮೇಲ್‌ಸ್ತರದ ಅಧಿಕಾರಿಗಳು ಕೆಳಹಂತದಲ್ಲಿರುವ ಉದ್ಯೋಗಿಗಳನ್ನು ತಮ್ಮ ಧರ್ಮಕ್ಕೆ ಒತ್ತಾಯಿಸಿದ ಪ್ರಸಂಗಗಳು ನಡೆದಿವೆ.

ಒಬ್ಬನನ್ನು ಮತಾಂತರಕ್ಕೆ ಪ್ರಯತ್ನಿಸುವುದು ಕಾನೂನುಬಾಹಿರವಾಗಿ ತಪ್ಪಲ್ಲ. ಆದರೆ ಒತ್ತಡ ಹೇರಿ ಅಥವಾ ಆಮಿಷವೊಡ್ಡಿ ಇಂತಹ ಕಾರ್ಯ ಎಸಗುವುದು ಕಾನೂನುಬಾಹಿರವಾಗಿದೆ. ಅದರಲ್ಲಿಯೂ ಈ ವಿಚಾರದಲ್ಲಿ ಕಿರುಕುಳ ನೀಡುವುದು, ಉದ್ಯೋಗಿಗೆ ಇಚ್ಛೆಯಿಲ್ಲದಿದ್ದರೂ ಆತನ ಮೇಲೆ ಒತ್ತಡ ಹೇರುವುದು ಅಕ್ಷಮ್ಯವಾಗಿದೆ. ಸಂವಿಧಾನವು ಧಾರ್ಮಿಕ ಪ್ರಚಾರದ ಹಕ್ಕನ್ನು ನೀಡುತ್ತದೆಯಾದರೂ ಇದು ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿರುವುದನ್ನು ಮರೆಯಬಾರದು.

ಕೆಲವು ವ್ಯಕ್ತಿಗಳು ಕಂಪೆನಿಯೊಂದರಲ್ಲಿ ಸೇರಿಕೊಂಡು ತಮ್ಮ ಸಹೋದ್ಯೋಗಿಗಳನ್ನು ಮತಾಂತರಕ್ಕೆ ಪ್ರಚೋದಿಸುವುದು ಮತ್ತು ಈ ಸಂಬಂಧ ಅವರಿಗೆ ಕಿರುಕುಳ ನೀಡುವುದು ನ್ಯಾಯಬಾಹಿರವಾಗಿದೆ. ಇದು ಕಾನೂನು ವಿರೋಧಿಯೂ ಆಗಿದೆ. ಹಾಗಾಗಿ ಕಂಪೆನಿಗಳು ಇಂತಹ ಕೃತ್ಯಗಳ ಮೇಲೆ ಹೆಚ್ಚಿನ ನಿಗಾ ಇಡುವ ಅಗತ್ಯವಿದೆ.

ಇದೇವೇಳೆ ಇಂತಹ ಕೃತ್ಯಗಳ ವಿರುದ್ಧ ಭಾರತೀಯ ಮುಸ್ಲಿಮರು ಅದರಲ್ಲಿಯೂ ಮುಖ್ಯವಾಗಿ ರಾಜಕಾರಣಿಗಳು ಮತ್ತು ಗಣ್ಯರು ಧ್ವನಿ ಎತ್ತುವ ಅಗತ್ಯವಿದೆ. ಕಾರ್ಪೋರೇಟ್ ಕಂಪೆನಿಗಳಲ್ಲಿ ನಡೆಯುವ ಜಿಹಾದ್ ಸಮ್ಮತವಲ್ಲವೆಂದು ಅವರು ದೇಶಕ್ಕೆ ಸಾರಿ ಹೇಳಬೇಕಾಗಿದೆ. ಆದರೆ ಈ ವರೆಗೆ ಅಂತಹ ಯಾವುದೇ ಧ್ವನಿಯೂ ಕೇಳಿಸದಿರುವುದು ದೌರ್ಭಾಗ್ಯ.

ಹಿಂದುಗಳು ತಮ್ಮ ಸಮುದಾಯದವರಿಂದಾಗುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲು ಹಿಂಜರಿಯುವುದಿಲ್ಲ. ನ್ಯಾಯಬಾಹಿರವಾದುದನ್ನು ಬಹಿರಂಗವಾಗಿ ಟೀಕಿಸುತ್ತಾರೆ. ಆದರೆ ಮುಸ್ಲಿಮರಿಂದ ಇಂತಹ ಬಹಿರಂಗ ಖಂಡನೆ ಕೇಳಿಬರುವುದಿಲ್ಲ. ಕೆಲವರಂತೂ ಇಂತಹ ಮತಾಂತರ ಕೃತ್ಯಗಳಿಗೆ ಸಮ್ಮತಿ ವ್ಯಕ್ತಪಡಿಸುವಂತಹ ಹೇಳಿಕೆಯನ್ನೂ ನೀಡುತ್ತಾರೆ.

ಒಂದಂತೂ ನಿಜ. ನಾಸಿಕ್‌ನ ಪ್ರಕರಣವು ಕಂಪೆನಿಗಳು 'ಶುದ್ಧೀಕರಣ' ಕಾರ್ಯಕ್ಕೆ ಮುಂದಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. ನಮ್ಮ ದೇಶದಲ್ಲಿ ಕಾರ್ಯಾಚರಿಸುವ ಕಂಪೆನಿಗಳು ಇಲ್ಲಿನ ಮೌಲ್ಯವನ್ನು, ಪರಂಪರೆಯನ್ನು ಗೌರವಿಸಬೇಕಾದ ಅಗತ್ಯವನ್ನು ಕೂಡಾ ತಿಳಿಸುತ್ತದೆ.

ಸಮಾಜ ನಾಶಕ್ಕೆ ಮಾದಕ ಪದಾರ್ಥ; ಜಾಗೃತಿಯೊಂದೇ ಪರಿಹಾರ

• ಚಂದನ್ ಲಕ್ಕೂರು



ಇಂದಿನ ಯುವಜನತೆಯ ಸ್ಥಿತಿಯನ್ನು ನೋಡಿದಾಗ ಆತಂಕ ಶುರುವಾಗುತ್ತದೆ. ಏಕೆಂದರೆ ದೇಶದ ಭವಿಷ್ಯದ ಶಕ್ತಿ ಎನಿಸಿಕೊಂಡಿರುವ ವಿದ್ಯಾರ್ಥಿಗಳು ಇಂದು ತಮಗೆ ಅರಿವಿಲ್ಲದಂತೆಯೇ ಒಂದು ಕರಾಳ ಲೋಕದತ್ತ ಹೆಜ್ಜೆ ಹಾಕುತ್ತಿದ್ದಾರೆ.

ಕರ್ನಾಟಕವನ್ನು ಮಾದಕ ಮುಕ್ತ ರಾಜ್ಯವನ್ನಾಗಿ ಮಾಡುವುದಾಗಿ ಸರ್ಕಾರವು ಪದೇ ಪದೇ ಘೋಷಿಸುತ್ತಿದ್ದರೂ, ವಾಸ್ತವ ಸ್ಥಿತಿ ಮಾತ್ರ ಅತ್ಯಂತ ಆತಂಕಕಾರಿಯಾಗಿದೆ. ಯುವಜನತೆಯ ದಾರಿ ತಪ್ಪಿಸುತ್ತಿರುವ ಮಾದಕ ವಸ್ತುಗಳ ಹಾವಳಿಯನ್ನು ತಡೆಯುವುದು ಸರ್ಕಾರದ ಆದ್ಯತೆಯಾಗಬೇಕೆಂದು ಸ್ವತಃ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಹಲವು ಬಾರಿ ಸದನದಲ್ಲಿ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಹೇಳಿದ್ದಾರೆ. ಆದರೆ ಇಂದಿನ ಬೆಳವಣಿಗೆಗಳನ್ನು ಗಮನಿಸಿದರೆ ಈ ಭರವಸೆಗಳು ಕೇವಲ ಘೋಷಣೆಗಳಾಗಿ ಉಳಿಯುತ್ತಿವೆಯೇ ಎಂಬ ಸಂಶಯ ಮೂಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಮಾದಕ ವಸ್ತುಗಳ ವ್ಯವಹಾರವು ಕೇವಲ ಮಾರಾಟಕ್ಕೆ ಸೀಮಿತವಾಗಿಲ್ಲ. ರಾಜ್ಯದೊಳಗೆ ಮಾದಕ ವಸ್ತುಗಳ ತಯಾರಿಕಾ ಘಟಕಗಳೇ ಕಾರ್ಯಾಚರಿಸುತ್ತಿರುವುದು ಬೆಳಕಿಗೆ ಬರುತ್ತಿದೆ. ಅತ್ಯಂತ ಆಘಾತಕಾರಿ ವಿಷಯವೆಂದರೆ ನಮ್ಮ ರಾಜ್ಯದ ಪೊಲೀಸರಿಗಿಂತ ಮೊದಲು ಹೊರರಾಜ್ಯದ ಪೊಲೀಸರು ಅಥವಾ ಕೇಂದ್ರ ತನಿಖಾ ದಳಗಳು ದಾಳಿ ನಡೆಸಿ ಈ ಜಾಲವನ್ನು ಪತ್ತೆಹಚ್ಚುತ್ತಿದ್ದಾರೆ. ನೆರೆರಾಜ್ಯದ ಅಧಿಕಾರಿಗಳು ಬಂದು ಬಾಗಿಲು ಬಡಿದಾಗ ಮಾತ್ರ ನಮ್ಮ ಇಲಾಖೆಗೆ ಇಲ್ಲಿ ಮಾದಕ ವಸ್ತುಗಳ ಉತ್ಪಾದನೆ ನಡೆಯುತ್ತಿದೆ ಎಂಬ ಅರಿವಾಗುತ್ತಿರುವುದು ವ್ಯವಸ್ಥೆಯ ಬಹುದೊಡ್ಡ ವೈಫಲ್ಯ.

ಇದು ಕೇವಲ ಕಾನೂನು ಸುವ್ಯವಸ್ಥೆಯ ಪ್ರಶ್ನೆಯಲ್ಲ. ಇದು ಆಡಳಿತ ಯಂತ್ರ, ಗೃಹ ಇಲಾಖೆ ಮತ್ತು ಗುಪ್ತಚರ ದಳದ ಕಾರ್ಯವೈಖರಿಯ ಮೇಲೆ ಸಾರ್ವಜನಿಕರು ಇಟ್ಟಿರುವ ನಂಬಿಕೆಯ ಪ್ರಶ್ನೆ ಕೂಡ. ಮಾದಕ ಮುಕ್ತ ಕರ್ನಾಟಕ ಎನ್ನುವ ಘೋಷಣೆಗಳ ನಡುವೆಯೇ ಇಂತಹ ಭೀಕರ ಜಾಲಗಳು ಬೇರೂರುತ್ತಿರುವುದು ವಿಪರ್ಯಾಸ. ಇಂದು ನಗರದ ಯಾವುದೇ ಮೂಲೆಯಲ್ಲಿ ನೋಡಿದರೂ ಶಿಕ್ಷಣದ ಹೆಸರಿನಲ್ಲಿ ಬಂದು ನೆಲೆಸಿರುವ ಕೆಲವು ವಿದೇಶಿ ಪ್ರಜೆಗಳು, ಅದರಲ್ಲೂ ವಿಶೇಷವಾಗಿ ನೈಜೀರಿಯಾದಂತಹ ದೇಶಗಳಿಂದ ಬಂದ ಕೆಲವರು ನಮ್ಮ ಯುವಕರನ್ನು ಗುರಿಯಾಗಿಸಿಕೊಂಡು ಈ ವಿಷದ ಜಾಲವನ್ನು ಹರಡುತ್ತಿದ್ದಾರೆ. ಅವರು ಮೊದಲು ಪರಿಚಯ ಮಾಡಿಕೊಳ್ಳುವುದು ಸ್ನೇಹದ ಹಸ್ತ ಚಾಚುವ ಮೂಲಕ. ಕಾಲೇಜುಗಳ ಹತ್ತಿರ, ಕೆಫೆಗಳಲ್ಲಿ ಅಥವಾ ರಾತ್ರಿಯ ಪಾರ್ಟಿಗಳಲ್ಲಿ ಕಾಣಿಸಿಕೊಳ್ಳುವ ಇವರು ನಮ್ಮ ಹುಡುಗರಿಗೆ ಹೊಸ ಅನುಭವದ ಆಸೆ ತೋರಿಸುತ್ತಾರೆ. ಇವರಿಗೆ ಬೇಕಾಗಿರುವುದು ಕೇವಲ ಹಣ ಮತ್ತು ನಮ್ಮ ದೇಶದ ಯುವಶಕ್ತಿಯನ್ನು ದಾರಿ ತಪ್ಪಿಸುವುದು. ಇಂತಹ ವಿದೇಶಿ ದಂಧೆಕೋರರು ಬಹಳ ಸಂಘಟಿತವಾಗಿ ಕೆಲಸ ಮಾಡುತ್ತಾರೆ ಮತ್ತು ಅವರ ಜಾಲ ಎಷ್ಟು ಆಳವಾಗಿದೆ ಎಂದರೆ ಒಬ್ಬ ಸಾಮಾನ್ಯ ವಿದ್ಯಾರ್ಥಿಗೆ ಅದರ ಅಪಾಯದ ಅರಿವಾಗುವಷ್ಟರಲ್ಲಿ ಆತ ಸಂಪೂರ್ಣವಾಗಿ ಅದಕ್ಕೆ ದಾಸನಾಗಿರುತ್ತಾನೆ.

ಇತ್ತೀಚಿನ ಪೊಲೀಸ್ ವರದಿಗಳ ಪ್ರಕಾರ, ಕೇವಲ ಒಂದು ತಿಂಗಳ ಅಂತರದಲ್ಲಿ ಬೆಂಗಳೂರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದರೆ ಈ ದಂಧೆಯ ವಿಸ್ತಾರ ಅದೆಷ್ಟಿರಬಹುದು? MDMA, ಗಾಂಜಾ, ಹೈಡ್ರೋ ಗಾಂಜಾ ಹಾಗೂ ಮಾರಕವಾದ ಸಿಂಥೆಟಿಕ್ ಡ್ರಗ್ಸ್‌ಗಳು ಪತ್ತೆಯಾಗಿರುವುದು ನಮ್ಮ ಯುವಜನತೆ ಎಂತಹ ಅಪಾಯದ ಸುಳಿಯಲ್ಲಿದ್ದಾರೆ ಎಂಬುದಕ್ಕೆ ಸಾಕ್ಷಿ. ಎಷ್ಟೋ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಬದುಕನ್ನು ಈ ಕಾರಣಕ್ಕಾಗಿ ಹಾಳು ಮಾಡಿಕೊಂಡಿದ್ದಾರೆ. ಕುತೂಹಲಕ್ಕಾಗಿ ಅಥವಾ ಒತ್ತಾಯಕ್ಕೆ ಮಣಿದು ಒಂದು ಮಾತ್ರೆ ಅಥವಾ ಒಂದು ಚಿಟಿಕೆ ಪುಡಿಯನ್ನು ಸೇವಿಸುವ ವಿದ್ಯಾರ್ಥಿ, ಸಾವಿನ ಹಳ್ಳಕ್ಕೆ ತಾನೇ ಬೀಳುತ್ತಿದ್ದಾನೆ. ಪೊಲೀಸ್ ಇಲಾಖೆಯು ಇತ್ತೀಚೆಗೆ ಪೆಡ್ಲರ್‌ಗಳನ್ನು ಮತ್ತು ಸೇವನೆ ಮಾಡುವವರನ್ನು ಬಂಧಿಸಿರುವುದು ಕೇವಲ ಒಂದು ಭಾಗವಷ್ಟೇ. ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಪಾನ್ ಶಾಪ್‌ಗಳು ಹಾಗೂ ಶಾಲಾ-ಕಾಲೇಜುಗಳ ಸುತ್ತಮುತ್ತಲಿನ ಸಾವಿರಾರು ಅಂಗಡಿಗಳ ಮೇಲೆ ದಾಳಿ ನಡೆಸಿರುವುದು ಈ ಜಾಲ ಎಷ್ಟು ಹತ್ತಿರಕ್ಕೆ ಬಂದಿದೆ ಎಂಬುದನ್ನು ತೋರಿಸುತ್ತದೆ.

ಇಲ್ಲಿ ಕೇವಲ ವಿದೇಶಿಯರನ್ನು ದೂಷಿಸಿದರೆ ಸಾಲದು. ವಿದ್ಯಾರ್ಥಿಗಳು ಯಾಕೆ ಇಷ್ಟು ಸುಲಭವಾಗಿ ಇವರ ಬಲೆಗೆ ಬೀಳುತ್ತಿದ್ದಾರೆ ಎಂಬುದು ಮುಖ್ಯವಾದ ಪ್ರಶ್ನೆ. ಆಧುನಿಕ ಜೀವನಶೈಲಿಯ ಭ್ರಮೆಯಲ್ಲಿರುವ ಯುವಕರು, ವಿದೇಶಿ ಸಂಸ್ಕೃತಿಯನ್ನು ಅನುಕರಿಸುವ ಭರದಲ್ಲಿ ಡ್ರಗ್ಸ್ ಸೇವಿಸುವುದು ಒಂದು ಫ್ಯಾಷನ್ ಎಂದು ತಿಳಿದುಕೊಳ್ಳುತ್ತಿದ್ದಾರೆ. ನೈಜೀರಿಯಾದಂತಹ ದೇಶಗಳಿಂದ ಬಂದು ಇಲ್ಲಿ ಡ್ರಗ್ ಪೆಡ್ಲರ್ ಆಗಿ ಕೆಲಸ ಮಾಡುವವರು ಇವರ ಈ ದೌರ್ಬಲ್ಯವನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಒಬ್ಬ ವಿದ್ಯಾರ್ಥಿ ಒಮ್ಮೆ ಈ ಜಾಲಕ್ಕೆ ಸಿಲುಕಿದರೆ ಆತನ ಇಡೀ ಕುಟುಂಬವೇ ಬೀದಿಗೆ ಬರುತ್ತದೆ.

ಸಿಬಿಐ ಮತ್ತು ಸ್ಥಳೀಯ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದರೂ, ಡ್ರಗ್ಸ್ ಉತ್ಪಾದನಾ ಘಟಕಗಳೇ ನಗರದಲ್ಲಿ ಪತ್ತೆಯಾಗುತ್ತಿರುವುದು ಈ ಸಮಸ್ಯೆಯ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಮಸ್ಯೆಗೆ ಕೊನೆ ಎಂಬುದು ನಮ್ಮೆಲ್ಲರ ಜಾಗೃತಿಯಲ್ಲಿ ಮಾತ್ರ ಇದೆ. ವಿದೇಶದಿಂದ ಬಂದವರು ಇಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿದ್ದರೆ ಅದನ್ನು ಪತ್ತೆ ಹಚ್ಚುವ ಕೆಲಸ ಪೊಲೀಸ್ ಇಲಾಖೆಯದಾದರೂ, ವಿದ್ಯಾರ್ಥಿಗಳು ತಮ್ಮ ವಿವೇಚನೆಯನ್ನು ಕಳೆದುಕೊಳ್ಳಬಾರದು. ಜೀವನದಲ್ಲಿ ಎಷ್ಟೇ ಒತ್ತಡಗಳಿದ್ದರೂ ಅಥವಾ ಏನೇ ಸಮಸ್ಯೆಗಳಿದ್ದರೂ ಮಾದಕ ವಸ್ತುಗಳು ಅದಕ್ಕೆ ಪರಿಹಾರವಲ್ಲ ಎಂಬ ಸತ್ಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅರಿಯಬೇಕಿದೆ. ಇಲ್ಲದಿದ್ದರೆ, ದೇಶದ ಮುಂದಿನ ತಲೆಮಾರು ಸಂಪೂರ್ಣವಾಗಿ ನಾಶವಾಗುವುದರಲ್ಲಿ ಸಂಶಯವಿಲ್ಲ.

ಕಿರುಸುದ್ದಿ

ಧವಳ ಕೋ ಅಪರೇಟಿವ್ ಸೊಸೈಟಿಗೆ 50.95 ಲಕ್ಷ ರೂ. ನಿವ್ವಳ ಲಾಭ

ಮಂಗಳೂರು: ಕಳೆದ ಮೂರು ವರ್ಷದ ಹಿಂದೆ 2022ನೇ ಜೂನ್ ತಿಂಗಳಲ್ಲಿ ರಾಜ್ಯಮಟ್ಟದ ಉದ್ದೇಶವನ್ನು ಇಟ್ಟುಕೊಂಡು ಕಾರ್ಯ ಆರಂಭಗೊಂಡ ಧವಳ ಕೋ ಅಪರೇಟಿವ್ ಸೊಸೈಟಿ ನಿಯಮಿತ 2025–2026 ಸಾಲಿನಲ್ಲಿ ಸುಮಾರು 200 ಕೋಟಿ ರೂ. ವ್ಯವಹಾರ ನಡೆಸಿ 50.95 ರೂ. ನಿವ್ವಳ ಲಾಭಗಳಿಸಿದೆ. ಮಂಗಳೂರಿನ ಹೃದಯ ಭಾಗದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಸಂಸ್ಥೆ ಈಗಾಗಲೇ ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಹಾಗೂ ಕಾರ್ಕಳ ತಾಲೂಕಿನ ಹೊಸ್ಮಾರ್‌ನಲ್ಲಿ ಶಾಖೆ ತೆರೆದಿದೆ. ಸಂಸ್ಥೆಯು 2026ರ ಮಾರ್ಚ್ 31ಕ್ಕೆ 22.75 ಕೋಟಿ ರೂ. ಠೇವಣಿಯೊಂದಿಗೆ 20.80 ಕೋಟಿ ರೂ. ಮುಂಗಡಸಾಲ ಸೌಲಭ್ಯ ನೀಡಿ ವ್ಯವಹಾರ ಹೊಂದಿರುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಸುದರ್ಶನ್ ಜೈನ್ ತಿಳಿಸಿದ್ದಾರೆ. ಸಂಸ್ಥೆಯು ತನ್ನ ಕೇಂದ್ರ ಕಚೇರಿ ಮತ್ತು ಶಾಖೆಗಳಲ್ಲಿ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲದೇ, ಚಿನ್ನಾಭರಣ ಭದ್ರತಾ ಸಾಲ, ಇ ಸ್ಟಾಂಪ್ ಮಾರಾಟ ವ್ಯವಸ್ಥೆ, ಕಳಸ ಶಾಖೆಯಲ್ಲಿ ಕೃಷಿ ಉತ್ಪನ್ನ ಈಡಿನ ಸಾಲ ವ್ಯವಸ್ಥೆಯೊಂದಿಗೆ, ಪ್ರಾಮಾಣಿಕ ನಿರ್ದೇಶಕರು ಹಾಗೂ ಉತ್ತಮ ಸದಸ್ಯರು ಮತ್ತು ಪ್ರಾಮಾಣಿಕ ಸಿಬ್ಬಂದಿಗಳಿಂದಾಗಿ ಅಲ್ಪಾವಧಿಯಲ್ಲಿ ವಿಶೇಷ ಸಾಧನೆಯನ್ನು ಮಾಡಲಾಗಿದೆ. ಸಂಘವು ಪ್ರತಿ ವರ್ಷವೂ ಶಾಸನ ಬದ್ಧ ಲೆಕ್ಕಪರಿಶೋಧನೆಯಲ್ಲಿ 'ಎ' ಶ್ರೇಣಿ ಕಾಯ್ದುಕೊಂಡಿದೆ. ಸಂಘವು ತನ್ನ ಸದಸ್ಯರಿಗೆ ವಿಶೇಷ ಕೊಡುಗೆಯಾಗಿ ಠೇವಣಿಗಳ ಮೇಲೆ ಒಂದು ವರ್ಷಕ್ಕೆ ಶೇ.10 ಹಾಗೂ ಹಿರಿಯ ನಾಗರೀಕರಿಗೆ ಶೇ. 10.5 ಬಡ್ಡಿಯನ್ನು ನೀಡುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಬಿಜೆಪಿ ಜಿಲ್ಲಾ ಎಸ್.ಟಿ. ಮೋರ್ಚಾ ನೂತನ ಅಧ್ಯಕ್ಷರಾಗಿ ಸುಮಿತ್ರಾ ಕರಿಯ

ಮಂಗಳೂರು: ಭಾರತೀಯ ಜನತಾ ಪಾರ್ಟಿ ಎಸ್.ಟಿ. ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾಗಿ ಮಾಜಿ ಉಪಮೇಯರ್ ಸುಮಿತ್ರಾ ಕರಿಯ ನೇಮಕಗೊಂಡಿದ್ದಾರೆ.



ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಈ ನೇಮಕ ಮಾಡಿದ್ದಾರೆ. ಸುಮಿತ್ರಾ ಕರಿಯ ಅವರು ಮಾಜಿ ಉಪಮೇಯರ್ ಆಗಿ, ಸತತವಾಗಿ ಮೂರು ಬಾರಿ ಮಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಕ್ರೀಯಾಶೀಲ, ಸಮಾಜಸೇವೆ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ಕಾರ್ಯೋನ್ಮುಖರಾಗಿ ತೊಡಗಿಸಿಕೊಂಡಿರುತ್ತಾರೆ. ಇವರ ಸೇವೆಯನ್ನು ಗುರುತಿಸಿ ಭಾರತೀಯ ಜನತಾ ಪಾರ್ಟಿಯು ಎಸ್.ಟಿ. ಮೋರ್ಚಾದ ಜಿಲ್ಲಾಧ್ಯಕ್ಷರನ್ನಾಗಿ ಪ್ರಥಮ ಬಾರಿಗೆ ಎಸ್.ಟಿ. ಮಹಿಳೆಯೊಬ್ಬರನ್ನು ಜಿಲ್ಲಾಧ್ಯಕ್ಷರಾಗಿ ಗುರುತಿಸಿರುವುದು ಇವರ ಸಮಾಜಸೇವೆಗೆ ಹಿಡಿದ ಕೈಗನ್ನಡಿಯಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಭಾಸ್ಕರ ಶೆಟ್ಟಿ ಸ್ಮರಣಾರ್ಥ ಪತ್ನಿ, ಮಕ್ಕಳು, ಖಂಡಿಗೆಮನೆ, ಪಡೀಲು ಮಧ್ಯ ಸುರತ್ಕಲ್ – ಶ್ರೀ ಕಟೀಲು ಪಿ.ಯು. ಕಾಲೇಜ್ ಬಳಿ.
2. ಯಶೋಧ ಎಸ್. ಶೆಟ್ಟಿ, ಬಲ್ಲಾಳ ಬೆಟ್ಟು, 'ಲಕ್ಷ್ಮಿ ನಿವಾಸ', ನಲ್ಲೂರು ಕಾರ್ಕಳ (ತಾ).
3. ಈಶ್ವರ ಶೆಟ್ಟಿ ಮತ್ತು ಮಕ್ಕಳು, ನಾಗಲಕ್ಕಾರು, ಚೇಳಾಯೂರು ವಯಾ ಹಳೆಯಂಗಡಿ.
4. ಚಂದ್ರಶೇಖರ ಶೆಟ್ಟಿ, 'ಜನನಿ', ನೆಲ್ಲಿಗುಡ್ಡೆ, ಕುಕ್ಕುಂದೂರು, ಕಾರ್ಕಳ (ತಾ).
5. ರಾಮಕೃಷ್ಣ ಶೆಟ್ಟಿ, 'ಆದಿತ್ಯ ಅನುಗ್ರಹ', ಕಂಕನಾಡಿಗುತ್ತು, ನ್ಯೂ ಹೌಸ್, ಕಂಕನಾಡಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ಸೊರ್ಕಳಗುತ್ತು ದಿ। ಶಂಕರ ಶೆಟ್ರ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಪ್ರಕಾಶ್, ಪ್ರಫುಲ್ಲ ಶೆಟ್ಟಿ, 'ಸುಜಯ ನಿವಾಸ', ಪಿಲಾರ್, ಹಲಸಿನ ಕಟ್ಟೆ ವಯಾ ಮುದರಂಗಡಿ.

ಶ್ರೀ ಧರ್ಮಸ್ಥಳ ಮೇಳ
ಹುಣ್ಸೆಮಕ್ಕಿ–ಹೊಂಬಾಡಿಯಲ್ಲಿ
ಶ್ರೀಮತಿ ಭಾರತಿ ಶಂಕರ ಶೆಟ್ಟಿ, ಭಾರತಿ ನಿಲಯ, ಭಟ್ರಮಕ್ಕಿ

ಶ್ರೀ ಸಾಲಿಗ್ರಾಮ ಮೇಳ
ಏ27ಕ್ಕೆ: ಮಂಕಿ ಕುಳಿಮನೆ–ಹೊನ್ನಾವರದಲ್ಲಿ

ಶ್ರೀ ಪೆರ್ಡೂರು ಮೇಳ
ಪೆರ್ಡೂರಿನಲ್ಲಿ–**ಶ್ರೀ ಪೆರ್ಡೂರು ಕ್ಷೇತ್ರ ಮಹಾತ್ಮೆ**

ಶ್ರೀ ಹನುಮಗಿರಿ ಮೇಳ
ಕುತ್ತಾರಿನಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಸದಾಶಿವ ದೇವಸ್ಥಾನ ಪೆರ್ಮಂಕಿಯಲ್ಲಿ
- **ಛಾಯಾನಂದನ**



ಮಂಗಳೂರು: ಕುದ್ರೋಳಿ ನಾರಾಯಣಗುರು ಆಂಗ್ಲ ಮಾಧ್ಯಮ ಶಾಲೆ 2025-26ನೇ ಸಾಲಿನ ಎಸ್. ಎಸ್.ಎಲ್. ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ 32ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಇವರಲ್ಲಿ 2 ಅತ್ಯುನ್ನತ ಶ್ರೇಣಿಯಲ್ಲಿ, 16 ಪ್ರಥಮ ಶ್ರೇಣಿ, 5 ದ್ವಿತೀಯ ಶ್ರೇಣಿಯಲ್ಲಿ ಫಲಿತಾಂಶವನ್ನು ದಾಖಲಿಸಿದ್ದಾರೆ.

ಶ್ರೀ ಗೋಕರ್ಣನಾಥ ಕೋ- ಆಪರೇಟಿವ್ ಬ್ಯಾಂಕ್
ದಾಖಲೆಯ 3.07 ಕೋಟಿ ರೂ. ಲಾಭ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರತಿಷ್ಠಿತ ಶ್ರೀ ಗೋಕರ್ಣನಾಥ ಕೋ– ಆಪರೇಟಿವ್ ಬ್ಯಾಂಕ್ 2025–26 ಆರ್ಥಿಕ ವರ್ಷದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದು, ಒಟ್ಟು 3.07 ಕೋಟಿ ರೂ. ಲಾಭ ದಾಖಲಿಸಿದೆ. ಬ್ಯಾಂಕು 2025–26 ಸಾಲಿನಲ್ಲಿ ಒಟ್ಟು 2028.64 ಕೋಟಿ ರೂ. ವ್ಯವಹಾರ ದಾಖಲಿಸಿದ್ದು, ಗಣನೀಯ ಏರಿಕೆ ಕಂಡಿದೆ. ಕಳೆದ ಸಾಲಿಗಿಂತ ಠೇವಣಿಯಲ್ಲಿ ಶೇ. 16ರಷ್ಟು ಹಾಗೂ ಸಾಲ ನೀಡುವಿಕೆಯಲ್ಲಿ ಶೇ. 25 ರಷ್ಟು ವೃದ್ಧಿಯನ್ನು ಸಾಧಿಸಿರುವ ಬ್ಯಾಂಕ್, ಅನುತ್ಪಾದಕ ಆಸ್ತಿ ಪ್ರಮಾಣವನ್ನು ಶೇ. 1.13ಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿದೆ.

ಬ್ಯಾಂಕ್ ಗ್ರಾಹಕರಿಗೆ ತನ್ನ 17 ಶಾಖೆಗಳ ಮೂಲಕ ಅತ್ಯಾಧುನಿಕ ಸೇವೆಗಳನ್ನು ಒದಗಿಸುವಲ್ಲಿ ಮುಂಚೂಣಿಯಲ್ಲಿದ್ದು, ಡಿಜಿಟಲ್ ತಂತ್ರಜ್ಞಾನಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದೆ. ವಿಶೇಷವಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಹಕರಿಗೆ ಯುಪಿಐ ಸೌಲಭ್ಯವನ್ನು ಪರಿಚಯಿಸಿದ ಮೊದಲ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಮೂಲಕ ಬ್ಯಾಂಕಿನ ಗ್ರಾಹಕರು ಕ್ಷಿಪ್ರವಾಗಿ ಯಾವುದೇ ಅಡೆತಡೆಯಿಲ್ಲದೆ ಡಿಜಿಟಲ್ ಪಾವತಿಗಳನ್ನು ಮಾಡಲು ಸಾಧ್ಯವಾಗಿದೆ.

ಪ್ರಸ್ತುತ ಶ್ರೀ ಗೋಕರ್ಣನಾಥ ಬ್ಯಾಂಕು 'ಸಂಪೂರ್ಣ ಡಿಜಿಟಲ್ ಬ್ಯಾಂಕಿಂಗ್' ಸೌಲಭ್ಯವನ್ನು ಅಳವಡಿಸಿದ್ದು, ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಎಟಿಎಂ ಸೌಲಭ್ಯಗಳ ಮೂಲಕ ಗ್ರಾಹಕರು ಬ್ಯಾಂಕಿಗೆ ಭೇಟಿ ನೀಡದೆಯೇ ಸುಲಭವಾಗಿ ಬಹುತೇಕ ವ್ಯವಹಾರಗಳನ್ನು ನಡೆಸುವಂತಾಗಿದೆ. ಜೊತೆಗೆ, ಪೇಟಿಯಂ ಸಂಸ್ಥೆಯೊಂದಿಗೆ ಸಹಭಾಗಿತ್ವದ ಮೂಲಕ ಕ್ಯೂಆರ್ ಕೋಡ್ ಸೌಲಭ್ಯವನ್ನು ಒದಗಿಸಲಾಗಿದ್ದು, ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ಎಲ್ಲಾ ಸುರಕ್ಷತಾ ಕ್ರಮಗಳನ್ನು ಬ್ಯಾಂಕಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇನ್ನೂ ಹೆಚ್ಚಿನ ನವೀನ ಹಾಗೂ ಗ್ರಾಹಕ ಸ್ನೇಹಿ ಸೇವೆಗಳನ್ನು ಪರಿಚಯಿಸಲು ಉದ್ದೇಶಿಸಲಾಗಿದ್ದು, ಜನರ ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಾರ, ಸಣ್ಣ ಕೈಗಾರಿಕೆ, ಆಸ್ತಿ ಅಡವು, ವಾಹನ ಸಾಲಗಳಿಗೆ ಹೆಚ್ಚಿನ ಆದ್ಯತೆ ನೀಡಲು ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಡಿಸಿಪಿ ಮಿಥುನ್ ಎಚ್ .ಎನ್. ಅಧ್ಯಕ್ಷತೆಯಲ್ಲಿ ನಡೆದ ಎಸ್‌ಸಿ, ಎಸ್‌ಟಿ ಕುಂದುಕೊರತೆ ಪರಿಹಾರ ಸಭೆಯಲ್ಲಿ ಡಿಸಿಪಿ ರವಿಶಂಕರ್
ಅಂಬೇಡ್ಕರ್ ವೃತ್ತ ಅಭಿವೃದ್ಧಿಗೆ ಸಹಕಾರ ನೀಡಿ

ಮಂಗಳೂರು: ನಗರದ ಅಂಬೇಡ್ಕರ್ ವೃತ್ತದ ಬಾವುಟಗುಡ್ಡೆ ರಸ್ತೆಗೆ ಹೊಂದಿಕೊಂಡಂತಿರುವ 'ವಿ' ಆಕಾರದ ಜಾಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸಹಿತ ವೃತ್ತ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಘಟನೆಗಳ ಸಹಕಾರ ಬೇಕು ಎಂದು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ರವಿಶಂಕರ್ ಕೆ. ತಿಳಿಸಿದರು.

ಮಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ಕಾನೂನು ಸುವ್ಯವಸ್ಥೆ ಡಿಸಿಪಿ ಮಿಥುನ್ ಎಚ್ .ಎನ್. ಅಧ್ಯಕ್ಷತೆಯಲ್ಲಿ ನಡೆದ ಎಪ್ರಿಲ್ ತಿಂಗಳ ಎಸ್‌ಸಿ, ಎಸ್‌ಟಿ ಕುಂದುಕೊರತೆ ಪರಿಹಾರ ಸಭೆಯಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ವೃತ್ತ ಕಾಮಗಾರಿ ಆರಂಭವಾಗದಿರುವ ಬಗ್ಗೆ ಮುಖಂಡ ಅನಿಲ್ ಕುಮಾರ್ ಸಭೆಯಲ್ಲಿ ಗಮನ ಸೆಳೆದರು. ಈ ಬಗ್ಗೆ ಉತ್ತರಿಸಿದ ಡಿಸಿಪಿ ರವಿಶಂಕರ್ ಕೆ., ಈಗಾಗಲೇ ಪಾಲಿಕೆ ಆಯುಕ್ತರು ಮತ್ತು ನಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಅಂಬೇಡ್ಕರ್ ವೃತ್ತ ಅತೀ ಹೆಚ್ಚು ವಾಹನ ಸಂಚಾರ ಇರುವ ಪ್ರದೇಶವಾಗಿದ್ದು, ವೃತ್ತ ನಿರ್ಮಾಣದಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಲಿದೆ. ಜತೆಗೆ ಫ್ಲೈ ಓವರ್ ನಿರ್ಮಾಣದ ಪ್ರಸ್ತಾವನೆಯೂ ಇರುವುದರಿಂದ ಮುಂದಿನ ದಿನಗಳಲ್ಲಿ ಸಮಸ್ಯೆಯಾಗಬಹುದು. ಹಾಗಾಗಿ ಬಾವುಟಗುಡ್ಡೆಗೆ ಹೊಂದಿಕೊಂಡಿರುವ ರಸ್ತೆಯಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು ಎಂದರು.





ಸಹಕಾರಿ ಸಂಘವೊಂದರ ಉದ್ಯೋಗಿಯೊಬ್ಬ ಮಹಿಳೆಯರಿಗೆ ಸಾಲ ಕೊಡಿಸುವ ನೆಪದಲ್ಲಿ ಪ್ರತಿಯೊಬ್ಬರಿಂದ 25–30 ಸಾವಿರ ರೂ. ಹಣ ಪಡೆದು ವಂಚಿಸಿ, ತಲೆಮರೆಸಿಕೊಂಡಿದ್ದಾನೆ. ಸುಮಾರು 15ರಷ್ಟು ಮಹಿಳೆಯರು ಆತನಿಂದ ವಂಚನೆಗೆ ಒಳಗಾಗಿದ್ದು, ಆತನನ್ನು ಪತ್ತೆ ಹಚ್ಚಿ ಶಿಕ್ಷೆ ವಿಧಿಸಬೇಕು ಎಂದು ಮುಖಂಡ ಎಸ್.ಪಿ. ಆನಂದ ಸಹಿತ ದಲಿತ ಮುಖಂಡರು ಒತ್ತಾಯಿಸಿದರು.

ಆರೋಪಿಗೆ ಹಣ ನೀಡಿದವರು, ಈ ಬಗ್ಗೆ ಪ್ರಶ್ನಿಸಿದಾಗ ಬೈದು ಬೆದರಿಕೆ ಹಾಕಿದ್ದಾನೆ. ಬಳಿಕ ಫೋನ್ ಸ್ವಿಚ್ ಆಫ್ ಆಗಿದೆ. ಸದ್ಯ ಆತ ಮುಂಬಯಿಯಲ್ಲಿ ಇರುವ ಬಗ್ಗೆ ತಿಳಿದು ಬಂದಿದೆ ಎಂದರು. ಡಿಸಿಪಿ ಮಿಥುನ್ ಉತ್ತರಿಸಿ, ಕೂಡಲೇ ಆತನ ವಿರುದ್ಧ ಎಫ್ ಐಆರ್ ದಾಖಲಿಸಿ. ಆತನ ಬ್ಯಾಂಕ್ ಖಾತೆ ಸ್ತಬ್ದಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಉಳ್ಳಾಲದಲ್ಲಿ ಬಾಡಿಗೆ ಮನೆ ಕೊಡಿಸುವ ನೆಪದಲ್ಲಿ ದಾವಣಗೆರೆ ಮೂಲದ ಎಸ್.ಟಿ. ವಾಲ್ಮೀಕಿ ಸಮುದಾಯದ ಮಹಿಳೆಗೆ ಸ್ಥಳಿಯ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ನಡೆಸಿ, ಹಣ, ಚಿನ್ನ ದೋಚಿದ್ದಾನೆ. ಈ ಬಗ್ಗೆ ಪ್ರಶ್ನಿಸಿದರೆ ಬೆದರಿಕೆ ಒಡ್ಡುತ್ತಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸುವಂತೆ ಎಸ್. ಪಿ. ಆನಂದ ಆಗ್ರಹಿಸಿದರು. ಕ್ರಮ ಕೈಗೊಳ್ಳುವುದಾಗಿ ಡಿಸಿಪಿ ಮಿಥುನ್ ತಿಳಿಸಿದರು.

ಕೊಣಾಜೆ ವ್ಯಾಪ್ತಿಯ ಕುರ್ನಾಡು ಗ್ರಾಪಂನಲ್ಲಿ ಸ್ವಚ್ಛತಾ ಕಾರ್ಮಿಕೆಯಾಗಿ ಸುಮಾರು 20 ವರ್ಷಗಳಿಂದ ದುಡಿಯುತ್ತಿದ್ದ ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರನ್ನು ಹೊಸ ಟೆಂಡರ್ ನೆಪದಲ್ಲಿ ಏಕಾಏಕಿ ಕೆಲಸದಿಂದ ತೆಗೆಯಲಾಗಿದೆ. ಇದರಿಂದ ಮಹಿಳೆ ಸಂಕಷ್ಟಕ್ಕೆ ಒಳಗಾಗಿದ್ದು, ಮಕ್ಕಳ ಶಿಕ್ಷಣಕ್ಕೆ ಸಮಸ್ಯೆಯಾಗಿದೆ ಎಂದು ಆರೋಪಿಸಿದರು. ಈ ಬಗ್ಗೆ ಉತ್ತರಿಸಿದ ಡಿಸಿಆರ್ ಇ ಪೊಲೀಸ್ ಅಧಿಕ್ಷಕ ಸಿಎ ಸೈಮನ್, ಠಾಣೆಗೆ ಬಂದು ದೂರು ನೀಡುವಂತೆ ನಿರ್ದೇಶಿಸಿದರು. ಕಾನೂನು ಪ್ರಕಾರ ಏನಿದೆ ಎಂದು ಪರಿಶೀಲಿಸಿ ನ್ಯಾಯ ಒದಗಿಸಲಾಗುವುದು ಎಂದರು.

ಪೌರ ಕಾರ್ಮಿಕೆಗೆ ಹೆಲ್ತ್ ಇನ್‌ಸ್ಪೆಕ್ಟರ್ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಆರೋಪಿಗೆ ಜಿಲ್ಲಾ ನ್ಯಾಯಾಲಯದಲ್ಲಿ ಜಾಮೀನು ನಿರಾಕರಣೆಯಾಗಿದೆ. ಈ ನಡುವೆ ಪೌರಕಾರ್ಮಿಕೆಗೆ ಅಧಿಕಾರಿ, ಮಾಜಿ ಕಾರ್ಪೊರೇಟರ್ ಒಬ್ಬರು ಬೆದರಿಕೆ ಹಾಕಿದ್ದಾರೆ. ದೂರು ವಾಪಾಸು ಪಡೆಯುವಂತೆ ಕಿರುಕುಳ ನೀಡುತ್ತಿದ್ದಾರೆ. ಪೊಲೀಸರು ಆತನನ್ನು ಬಂಧಿಸಲು ಹೋಗುವಾಗ ತಲೆಮರೆಸಿಕೊಂಡಿದ್ದು, ಕೂಡಲೇ ಪತ್ತೆಹಚ್ಚಿ ಬಂಧಿಸಬೇಕು ಎಂದು ಅನಿಲ್ ಕುಮಾರ್ ಹಾಗೂ ಎಸ್ ಪಿ ಆನಂದ ಆಗ್ರಹಿಸಿದರು.

ವಿವಿಧ ಠಾಣೆಗಳ ಠಾಣಾಧಿಕಾರಿ, ದಲಿತ ಮುಖಂಡರು ಭಾಗವಹಿಸಿದ್ದರು.

- ಅಂಬೇಡ್ಕರ್ ವೃತ್ತ ಅತೀ ಹೆಚ್ಚು ವಾಹನ ಸಂಚಾರ ಇರುವ ಪ್ರದೇಶವಾಗಿದ್ದು, ವೃತ್ತ ನಿರ್ಮಾಣದಿಂದ ವಾಹನ ಸಂಚಾರಕ್ಕೆ ಸಮಸ್ಯೆ ಯಾಗಲಿದೆ.
- ಹಾಗಾಗಿ ಬಾವುಟಗುಡ್ಡೆಗೆ ಹೊಂದಿಕೊಂಡಿರುವ ರಸ್ತೆಯಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು
- ಸಹಕಾರಿ ಸಂಘವೊಂದರ ಉದ್ಯೋಗಿಯೊಬ್ಬ ಮಹಿಳೆಯರಿಗೆ ಸಾಲ ಕೊಡಿಸುವ ನೆಪದಲ್ಲಿ ಪ್ರತಿಯೊಬ್ಬರಿಂದ 25–30 ಸಾವಿರ ರೂ. ಹಣ ಪಡೆದು ವಂಚಿಸಿ, ತಲೆಮರೆಸಿಕೊಂಡಿದ್ದಾನೆ.

ಸಂವಾದ ಕಾರ್ಯಕ್ರಮದಲ್ಲಿ ಶಾಸಕ ಗುರುರಾಜ ಗಂಟಿಹೊಳೆ
ಪಕ್ಷಬೇಧ ಮಾಡದೆ ಜನರ ಸೇವೆ ಮಾಡಬೇಕು

ಬೈಂದೂರು : ಶಾಸಕನಾಗಿ ಆಯ್ಕೆಯಾದ ಬಳಿಕ ಪಕ್ಷಭೇಧ ಕಾಣದೇ ಕ್ಷೇತ್ರದ ಎಲ್ಲಾ ಜನರ ಸೇವೆಗೂ ಬದ್ದನಾಗಿರಬೇಕಾಗುತ್ತದೆ, ಯಾವ ಸಮಾಜದ ಕಾರ್ಯ ನಡೆಸಿದರೆ ನಮಗೆ ರಾಜಕೀಯ ಲಾಭವಾಗುತ್ತದೆ ಎಂದು ಅಪೇಕ್ಷಿಸುವುದು ಸರಿಯಲ್ಲ. ಕ್ಷೇತ್ರದ ಎಲ್ಲ ಜನರ ಸಂಕಷ್ಟಗಳಿಗೂ ಸ್ಪಂದಿಸುವ ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕು, ನಾನು ಶಾಸಕ ಆನ್ನೋದಕ್ಕಿಂತ ಜನಸೇವೆಯ ಕಾರ್ಯಕರ್ತ ಹೀಗಾಗಿ ಶಾಸಕರು ಅಂದರೆ ಹೀಗೆ ಇರಬೇಕು ಅನ್ನುವ ಟ್ರೆಂಡ್ ಬದಲಿಸಿದ್ದೇನೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.



ಇಲ್ಲಿನ ಪತ್ರಕರ್ತರ ಕಚೇರಿಯಲ್ಲಿ ತಿಂಗಳ–ಅಂಗಳ ಕಾರ್ಯಕ್ರಮದ ಅಂಗವಾಗಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮನಬಿಚ್ಚಿ ಮಾತನಾಡಿದರು. ಕಳೆದ ಮೂರು ವರ್ಷದ ಹಿಂದೆ ಶಾಸಕನಾಗಿ ಆಯ್ಕೆಯಾದ ಬಳಿಕ ಬೈಂದೂರಿನಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಿಸುವ ಚಿಂತನೆ ಇತ್ತು. ಆದರೆ ಕೈಗಾರಿಕೆಗಳು ನಷ್ಟದ ನೆಪವೊಡ್ಡಿ ಗ್ರಾಮೀಣ ಭಾಗಗಳಲ್ಲಿ ಹೂಡಿಕೆ ಮಾಡಲು ಹಿಂದೇಟು ಹಾಕುತ್ತಿರುವ ಹಿನ್ನೆಲೆಯಲ್ಲಿ ಕೈಗಾರಿಕಾ ಸ್ಥಾಪನೆ ಕಷ್ಟಸಾಧ್ಯ. ಹೀಗಾಗಿ ಈ ಭಾಗದಲ್ಲಿ ಗುಡಿಕೈಗಾರಿಕೆ ನಿರ್ಮಾಣಕ್ಕೆ ಉತ್ತೇಜನ ನೀಡಲಾಗಿದೆ. ಬೈಂದೂರಿನಲ್ಲಿ ಸುಮಾರು 39 ಸಾವಿರ ಸಂಜೀವಿನಿ ಸಂಘದ ಸದಸ್ಯರಿದ್ದು, ಅವರ ನೇತೃತ್ವದಲ್ಲಿ ಈಗಾಗಲೇ ಗುಡಿಕೈಗಾರಿಕೆಗಳನ್ನು ಆರಂಭಿಸುವ ಚಿಂತನೆ ನಡೆಸಲಾಗಿದೆ ಎಂದರು.

ಜಲಜೀವನ್ ಯೋಜನೆ ಸಾಕಾರಕ್ಕೆ ಬದ್ಧ

ಕ್ಷೇತ್ರದ ಪ್ರತಿ ಮನೆಗೂ ಕುಡಿಯುವ ನೀರು ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಯಲ್ಲಿ ಲೋಪವಾಗಿದೆ ಎಂದು ದೂರು ಕೇಳಿ ಬರುತ್ತಿದ್ದು, ಈ ಬಗ್ಗೆ ಈಗಾಗಲೇ 16ಕ್ಕೂ ಅಧಿಕ ಬಾರಿ ಸಂಬಂಧಿತ ಅಧಿಕಾರಿಗಳ ಸಭೆ ನಡೆಸಲಾಗಿದೆ, ಇಲ್ಲಿನ ಎಲ್ಲಾ ಗೊಂದಲಗಳಿಗೂ ಸಂಬಂಧಪಟ್ಟ ಅಧಿಕಾರಿಗಳು, ಇಂಜಿನಿಯರ್ ಹಾಗೂ ಗುತ್ತಿಗೆದಾರರು ಕಾರಣವಾಗಿದ್ದು, ಈ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು ಎಂದ ಅವರು, ಬೈಂದೂರು ಕ್ಷೇತ್ರದ ಶಾಲಾ ಕಾಲೇಜು, ಆಸ್ಪತ್ರೆ, ಕಾಲುಸಂಕ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಿಗೆ ಖಾಸಗಿ ಸಂಸ್ಥೆಗಳ ಎಸ್‌ಆರ್ ನಿಧಿಯಿಂದ ಈಗಾಗಲೇ 30 ಕೋಟಿ ರೂ. ಅನುದಾನ ಹರಿದು ಬಂದಿದೆ ಎಂದರು.

ಕ್ಷೇತ್ರದ ಕನಸಿನಂತೆ ಮಾಧ್ಯಮದ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ನೀಡಿದ ಶಾಸಕರು, ಕ್ರಿಯಾತ್ಮಕ ಕಾರ್ಯಕ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಪತ್ರಕರ್ತರ ರಾಷ್ಟ್ರೀಯ ಸಮಿತಿ ಸದಸ್ಯ ಅರುಣ್ ಕುಮಾರ್ ಶಿರೂರು ಸ್ವಾಗತಿಸಿದರು. ಕಾರ್ಯದರ್ಶಿ ರಾಮ ಬಿಜೂರು ನಿರೂಪಿಸಿದರು. ಬೈಂದೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಉದಯ ಎಸ್. ಪಡಿಯಾರ್ ವಂದಿಸಿದರು.

ಶಾಸಕತ್ವ ಹುದ್ದೆ ಅಲ್ಲ

ನನಗೆ ರಾಜಕೀಯಕ್ಕಿಂತಲೂ ಸಾಮಾಜಿಕ ಚಟುವಟಿಕೆಯ ಬಗ್ಗೆ ಒಲವಿತ್ತು. ಅನಿರೀಕ್ಷಿತವಾಗಿ ಪಕ್ಷ ಅವಕಾಶ ನೀಡಿತ್ತು, ಬೈಂದೂರಿನ ಜನ ನನ್ನಂತಹ ಸಾಮಾನ್ಯ ಕಾರ್ಯಕರ್ತನನ್ನು ಒಪ್ಪಿದರು. ಶಾಸಕತ್ವ ಹುದ್ದೆ ಅಲ್ಲ. ಅದೊಂದು ಜವಾಬ್ದಾರಿಯಾಗಿದ್ದು, ಜನ ಕೇವಲ ಅಭಿವೃದ್ಧಿಯನ್ನು ಮಾತ್ರ ಬಯಸುತ್ತಿಲ್ಲ, ಬದಲಾಗಿ ಮಾನವೀಯ ಸಂಬಂಧಗಳನ್ನು ಬಯಸುತ್ತಾರೆ

■ ಗುರುರಾಜ ಗಂಟಿಹೊಳೆ, ಶಾಸಕರು, ಬೈಂದೂರು

ಪುತ್ತೂರು: ಖಾಸಗಿ ಜಮೀನಿನಲ್ಲಿರುವ ಕಟ್ಟಡ ಧ್ವಂಸ;
ಡಿಸಿ, ಎಸ್ಪಿ ಸಹಿತ ಹಿರಿಯ ಅಧಿಕಾರಿಗಳಿಗೆ ದೂರು

ಮಂಗಳೂರು: ಪುತ್ತೂರು ಪೇಟೆಯ ಮಹಿಳಾ ಪೊಲೀಸ್ ಠಾಣೆ ಎದುರಿನ ಹಳೆ ಕಟ್ಟಡವನ್ನು ಏ. 14ರಂದು ತಡರಾತ್ರಿ ಜಾಗದ ಮಾಲೀಕತ್ವದ ಬಗ್ಗೆ ಅರಿತುಕೊಳ್ಳದೆ ಅಕ್ರಮ ಪ್ರವೇಶಿಸಿ, ಜೆಸಿಬಿ ಬಳಸಿ ಭಾಗಶಃ ಧ್ವಂಸ ಮಾಡಿರುವುದು ಅಕ್ಷಮ್ಯ, ಅಕ್ರಮ, ಅಧಿಕಾರ ದುರುಪಯೋಗ, ದಾಷ್ಟ್ಯದ ಕೃತ್ಯವಾಗಿದೆ. ಕಟ್ಟಡ ಕೆಡಹಿರುವುದು ನ್ಯಾಯಾಂಗ ನಿಂದನೆಯಾಗಿದ್ದು, ಸುಮಾರು ಎರಡು ಕೋಟಿ ರೂ. ನಷ್ಟ ಸಂಭವಿಸಿದೆ ಎಂದು ಈ ಜಮೀನಿನ ಕೋರ್ಟ್ ರಿಸೀವರ್ ಡಾ. ಅರವಿಂದ ರಾವ್ ಕೇದಿಗೆ ತಿಳಿಸಿದರು.

ಖಾಸಗಿ ಜಮೀನಿನಲ್ಲಿರುವ ಕಟ್ಟಡ ಧ್ವಂಸ ಮಾಡಿರುವುದರ ವಿರುದ್ಧ ಜಿಲ್ಲಾಧಿಕಾರಿ, ಎಸ್ಪಿ ಸಹಿತ ಹಿರಿಯ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಈಗಾಗಲೇ ಇದರಲ್ಲಿ ಪಂಜಿಗುಡ್ಡೆ ಈಶ್ವರ ಭಟ್ ಹಾಗೂ ಇತರರ ವಿರುದ್ಧ ಪುತ್ತೂರು ಪೊಲೀಸರು ಎಫ್ ಐಆರ್ ದಾಖಲಿಸಿದ್ದು, ಶಾಸಕ ಅಶೋಕ್ ರೈ ಅವರಿಗೂ ನೋಟಿಸ್ ಜಾರಿಗೊಳಿಸಲಾಗುತ್ತಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಈ ಹಳೆಯ ಕಟ್ಟಡದ ಅಂಗಡಿ ಕೋಣೆಗಳಲ್ಲಿ ಅನಧಿಕೃತವಾಗಿ ವ್ಯವಹಾರ ಮಾಡುತ್ತಿರುವ ವ್ಯಕ್ತಿಗಳಿಗೆ ಪರವಾನಗಿ ನವೀಕರಿಸಬಾರದೆಂದು ನಗರಸಭೆಗೆ ಮನವಿ ಸಲ್ಲಿಸಲಾಗಿದೆ. ಅಲ್ಲದೆ ಕಟ್ಟಡ ತೆರವು ಮಾಡುವಂತೆ ಅನುಮತಿ ನೀಡಲು ನ್ಯಾಯಾಲಯಕ್ಕೂ ಮೊರೆ ಹೋಗಲಾಗಿದೆ. ಆದರೆ ಕೆಲವು ವ್ಯಾಪಾರಸ್ಥರು ಇದಕ್ಕೆ ತಡೆ ತಂದಿದ್ದಾರೆ. ಇದರ ನಡುವೆ ಶಾಸಕರು ಹಾಗೂ ಅವರ ಬೆಂಬಲಿಗರು, ಕಟ್ಟಡ ತೆರವಿಗೆ ನ್ಯಾಯಾಲಯ ಆದೇಶ ನೀಡಿದೆ ಎಂದು ರಾಜಾರೋಷವಾಗಿ ಸುಳ್ಳು ಹೇಳಿ ಏ.14ರ ರಾತ್ರಿ ಕಟ್ಟಡವನ್ನು ಧ್ವಂಸಗೊಳಿಸಿದ್ದಾರೆ. ಕಟ್ಟಡದ ಬೆಲೆಬಾಳುವ ಮರ, ಹಂಚು ಹಾಗೂ ಇತರಸಾಮಗ್ರಿಗಳನ್ನುಕದ್ದೊಯ್ದಿದ್ದು, ಇದರಿಂದ ಎರಡು ಕೋಟಿ ರೂ. ನಷ್ಟ ಸಂಭವಿಸಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಜನಪ್ರತಿನಿಧಿ, ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷರು ತನ್ನ ಅಧಿಕಾರವನ್ನು ದುರುಪಯೋಗ ಮಾಡಿ ಖಾಸಗಿ ಆಸ್ತಿಗೆ ಧಕ್ಕೆ ತರುವುದನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಕೇದಿಗೆ ಮನೆತನ ಶ್ರೀ ಮಹಾಲಿಂಗೇಶ್ವರ ಹಾಗೂ ಉಳ್ಳಾಲ್ತಿ ಅಮ್ಮನವರ ಭಕ್ತರಾಗಿದ್ದು, ಈ ಜಮೀನಿನಲ್ಲಿ 1946ರಲ್ಲಿ ದೇವರ ಕಟ್ಟೆ ನಿರ್ಮಿಸಲಾಗಿತ್ತು. ಈ ಹಿಂದೆ ಯಾವ ಶಾಸಕರೂ, ಆಡಳಿತ ಮಂಡಳಿಯೂ ಕೇದಿಕೆ ಕುಟುಂಬದ ಖಾಸಗಿ ಜಮೀನಿನಲ್ಲಿರುವ ದೇವರ ಕಟ್ಟೆ ಬಗ್ಗೆ ಚಕಾರ ಎತ್ತಿರಲಿಲ್ಲ. ಈ ಬಾರಿ ಶಾಸಕ ಅಶೋಕ್ ರೈ, ದೇವಳದ ಆಡಳಿತ ಮಂಡಳಿ ಮಧ್ಯಪ್ರವೇಶ ಮಾಡಿದ್ದಾರೆ. ಇದರ ಹಿಂದೆ ದುರುದ್ದೇಶವಿದೆ ಎಂದರು.

ಕೇದಿಗೆ ಕುಟುಂಬಿಕರಾದ ಭವಾನಿ ಶಂಕರ್, ಸುಮಿತ್, ಧೀರಜ್, ಮನೋಜ್ ಉಪಸ್ಥಿತರಿದ್ದರು.

ಪ್ರಸ್ತುತ ಧ್ವಂಸಗೊಂಡ ಕಟ್ಟಡವಿರುವ ಜಾಗವು ಕೇದಿಗೆ ಕುಟುಂಬಿಕರಿಗೆ ಸೇರಿದ್ದಾಗಿದೆ. ಇಲ್ಲಿನ 9.79 ಎಕ್ರೆ ಜಮೀನನ್ನು ಕುಟುಂಬದ ಸದಸ್ಯರ ನಡುವೆ ವಿಂಗಡನೆ ಆಗುವವರೆಗೆ ಕೋರ್ಟ್ ತನ್ನ ಸುಪರ್ದಿಗೆ ತೆಗೆದುಕೊಂಡಿದ್ದು, ಪ್ರಸ್ತುತ ನನ್ನ ಸ್ವಾಧೀನತೆಗೆ ಕೊಟ್ಟಿರುತ್ತದೆ ಎಂದರು.

ಮೇ 7: ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಸಮಾರೋಪ


ಪುತ್ತೂರು: ನಗರದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಸಮಾರೋಪ ಮೇ 7ರಂದು ನಡೆಯಲಿದ್ದು, ಶೃಂಗೇರಿ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಆಗಮಿಸಲಿದ್ದಾರೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬಿಕಾದ ಶ್ರೀ ಶಂಕರ ಸಭಾಭವನದ ಶ್ರೀ ಲಲಿತಾಂಬಿಕಾ ವೇದಿಕೆಯಲ್ಲಿ ನಡೆಯುವ ಸಮಾರಂಭದಲ್ಲಿ 4 ಸಾವಿರಕ್ಕೂ ಮಿಕ್ಕಿದ ಭಕ್ತರ ಸಮ್ಮುಖದಲ್ಲಿ ಶ್ರೀಗಳು ಗುರುವಂದನೆ ಸ್ವೀಕರಿಸಿ ಆಶೀರ್ವಚನ ನೀಡಲಿದ್ದಾರೆ ಎಂದರು.

ಜಗದ್ಗುರುಗಳ ಭೇಟಿ

ಶೃಂಗೇರಿ ಕ್ಷೇತ್ರಕ್ಕೂ ಅಂಬಿಕಾ ವಿದ್ಯಾಸಂಸ್ಥೆಗಳಿಗೂ ಅವಿನಾಭಾವ ಸಂಬಂಧವಿದೆ. ಶೃಂಗೇರಿ ಉಭಯ ಜಗದ್ಗುರುಗಳ ಕೃಪಾಶೀರ್ವಾದ ಅಂಬಿಕಾ ಸಂಸ್ಥೆಗಳ ಬೆಳವಣಿಗೆಯ ಹಿಂದಿರುವ ಮಹಾನ್ ಶಕ್ತಿ. ಅಂಬಿಕಾ ವಿದ್ಯಾಲಯದ ನಾಮಫಲಕವನ್ನು ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು 2014ರಲ್ಲಿ ಅನಾವರಣಗೊಳಿಸಿ ಹರಸಿದ್ದರು. ಅನಂತರ 2016ರಲ್ಲಿ ಮಹಾಸನ್ನಿಧಾನಂಗಳವರು ತಮ್ಮ ಉತ್ತರಾಧಿಕಾರಿ ಶಿಷ್ಯರಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಜತೆಗೂಡಿ ಬಪ್ಪಳಿಗೆಗೆ ಆಗಮಿಸಿ ವಸತಿಯುತ ಅಂಬಿಕಾ ಪದವಿಪೂರ್ವ ವಿದ್ಯಾಲಯವನ್ನು ಲೋಕಾರ್ಪಣೆಗೊಳಿಸಿದ್ದರು. 2021ರಲ್ಲಿ ಅಂಬಿಕಾ ವಿದ್ಯಾಲಯಕ್ಕೆ ಸಿಬಿಎಸ್‌ಇ ಮಾನ್ಯತೆ ದೊರಕಿದಾಗ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಶೃಂಗೇರಿಯಲ್ಲಿ 'ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ' ಎಂಬ ನಾಮಫಲಕವನ್ನು ಅನಾವರಣಗೊಳಿಸುವ ಮೂಲಕ ಪುತ್ತೂರಿನ ಮೊತ್ತಮೊದಲ ಸಿಬಿಎಸ್‌ಇ ಸಂಸ್ಥೆ ಲೋಕಾರ್ಪಣೆಗೊಂಡಿತು. ತನ್ಮಧ್ಯೆ 2019ರಲ್ಲಿ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಅಂಬಿಕಾ ಮಹಾವಿದ್ಯಾಲಯವನ್ನು ಬಪ್ಪಳಿಗೆಯಲ್ಲಿ ಲೋಕಕ್ಕೆ ಸಮರ್ಪಿಸಿದ್ದರು. 2024ರಲ್ಲಿ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆ ತನ್ನ ದಶಮಾನೋತ್ಸವ ಕಾರ್ಯಕ್ರಮ ಆಚರಿಸಿದಾಗ ಸಮಾರೋಪ ಸಮಾರಂಭಕ್ಕೆ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಆಗಮಿಸಿ ಆಶೀರ್ವಚನ ನೀಡಿದ್ದರು. ಹೀಗೆ ಶೃಂಗೇರಿ ಜಗದ್ಗುರುಗಳ ಪ್ರೇರಣೆ, ಆಶೀರ್ವಾದ, ಮಾರ್ಗದರ್ಶನದ ನೆಲೆಯಲ್ಲಿಯೇ ಅಂಬಿಕಾ ಸಂಸ್ಥೆಗಳು ಬೆಳೆದು ಬರುತ್ತಿವೆ ಎಂದರು.





ಮೇ 6ರಂದು ಶ್ರೀಗಳ ಆಗಮನ

ಮೇ 6ರಂದು ಸಂಜೆ ಗುರುಗಳು ಆಗಮಿಸಲಿದ್ದು, ಅಂಬಿಕಾ ಪರಿವಾರದ ವತಿಯಿಂದ ಪೂರ್ಣಕುಂಭ ಸ್ವಾಗತ, ಧೂಳೀ ಪಾದಪೂಜೆ ನಡೆಯಲಿದೆ. ಅನಂತರ ರಾತ್ರಿ 8 ಗಂಟೆಯಿಂದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಂದ ಶ್ರೀ ಶಂಕರ ಸಭಾಭವನದಲ್ಲಿ ಶ್ರೀ ಚಂದ್ರಮೌಳೀಶ್ವರ ಪೂಜೆ ನಡೆಯಲಿದೆ. ಮೇ 7ರಂದು ಬೆಳಗ್ಗೆ 9 ಗಂಟೆಗೆ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಅಂಬಿಕಾ ಸಂಸ್ಥೆಗಳ ರಜತ ಮಹೋತ್ಸವ ಸಮಾರೋಪಕ್ಕೆ ಸಾನ್ನಿಧ್ಯ ಒದಗಿಸಿಕೊಡಲಿದ್ದಾರೆ. ಈ ಸಂದರ್ಭದಲ್ಲಿ ಅಂಬಿಕಾ ಶಿಕ್ಷಣ ಸಂಸ್ಥೆಗಳ ವತಿಯಿಂದ ಗುರುವಂದನೆ ನಡೆಯಲಿದೆ. ನಂತರ ಜಗದ್ಗುರುಗಳಿಂದ ಆಶೀರ್ವಚನ ನಡೆಯಲಿದೆ.

'ಹಿಂದೂ ಸಂಪರ್ಕ ಸಾರಿಗೆ' ಎಂಬ ಹೆಸರಿನಲ್ಲಿ ಈ ಆ್ಯಪನ್ನುರೂಪಿಸಲಾಗಿದ್ದು, ಪುತ್ತೂರಿಗರಿಗೆ ಆಟೋರಿಕ್ಷಾಗಳನ್ನು ಬಾಡಿಗೆಗೆ ಪಡೆಯುವುದಕ್ಕೆ ಇದು ಅವಕಾಶ ಮಾಡಿಕೊಡಲಿದೆ. ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಯವರು ಈ ಆ್ಯಪನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಈ ಆಪ್ ಮಹಾನಗರಗಳಲ್ಲಿ ಬಳಕೆಯಲ್ಲಿರುವ ವಾಹನ ಸಂಬಂಧಿ ಆ್ಯಪ್‌ಗಳಂತೆ ಲಾಭಾಪೇಕ್ಷೆ ಅಥವ ಉದ್ಯಮದೃಷ್ಟಿ ಹೊಂದಿರದೆ ಕೇವಲ ಸೇವಾದೃಷ್ಟಿಯೊಂದಿಗೆ ಅಂಬಿಕಾದ ವತಿಯಿಂದ ರೂಪಿಸಲ್ಪಟ್ಟು ಸಮಾಜಕ್ಕೆ ಸಮರ್ಪಣೆಗೊಳ್ಳುತ್ತಿದೆ. ಈ ಆ್ಯಪ್‌ನಿಂದ ಯಾವುದೇ ಆರ್ಥಿಕ ಲಾಭವನ್ನು ಅಂಬಿಕಾ ಪಡೆದುಕೊಳ್ಳುವುದಿಲ್ಲ ಎಂಬುದು ಗಮನಾರ್ಹ. ಆಟೋ ಚಾಲಕರು ಹಾಗೂ ಪ್ರಯಾಣಿಕರು ಈ ಆ್ಯಪ್ ಡೌನ್‌ಲೋಡ್ ಮಾಡುವ ಮುಖಾಂತರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ ಎಂದರು.

ಸಮಾಜಸೇವೆ

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಬೆಳ್ಳಿಹಬ್ಬದ ಪ್ರಯುಕ್ತ ಸಮಾಜಮುಖಿ ಚಿಂತನೆಯನ್ನು ಅಂಬಿಕಾ ಜಾರಿಗೊಳಿಸಿದೆ. ಬಪ್ಪಳಿಗೆಯಲ್ಲಿನ ಮಾರಿಯಮ್ಮ ಗುಡಿಗೆ ಅಂಬಿಕಾದ ವತಿಯಿಂದ ರೂ.3 ಲಕ್ಷ ವೆಚ್ಚದಲ್ಲಿ ಶೀಟ್ ಅಳವಡಿಕೆ ಮಾಡಿಕೊಡಲಾಗಿದೆ ಎಂದು ಸುಬ್ರಹ್ಮಣ್ಯ ನಟ್ಟೋಜ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ರಾಜಶ್ರೀ ಎಸ್. ನಟ್ಟೋಜ, ಆಡಳಿತಾಧಿಕಾರಿ ಗಣೇಶ ಪ್ರಸಾದ್ ಎ., ಸಾರ್ವಜನಿಕ ಸಂಪರ್ಕಾಧಿಕಾರಿ ರಾಕೇಶ್ ಕುಮಾರ್ ಕಮ್ಮಜೆ ಉಪಸ್ಥಿತರಿದ್ದರು.

ನೂತನ ಆ್ಯಪ್ ಅನಾವರಣ

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಸವಿನೆನಪಿಗಾಗಿ ವಿನೂತನ ಮೊಬೈಲ್ ಆ್ಯಪ್ ಒಂದನ್ನು ಸಮಾಜಕ್ಕೆ ಸಮರ್ಪಿಸಲಾಗುತ್ತಿದೆ. ಮಹಾನಗರಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಓಲಾ, ಉಬರ್ ಮೊದಲಾದ ಬಾಡಿಗೆ ವಾಹನ ಸಂಬಂಧಿ ವ್ಯವಸ್ಥೆಯ ಮಾದರಿಯಲ್ಲಿ ಪುತ್ತೂರಿನ ಜನರಿಗೆ ಬಾಡಿಗೆ ಅಟೋ ರಿಕ್ಷಾಗಳನ್ನು ನಿಗದಿಪಡಿಸುವುದಕ್ಕೆ ಅನುವು ಮಾಡಿಕೊಡುವಂತಹ ಆಪ್ ಅನ್ನು ಅಂಬಿಕಾದ ವತಿಯಿಂದ ರೂಪಿಸಲಾಗಿದೆ.

ಕಿನ್ಯ : ಬೇಸಿಗೆ ಶಿಬಿರದ ಸಮಾರೋಪದಲ್ಲಿ ಸುಬ್ರಾಯ ನಂದೋಡಿ

ಶಿಬಿರಗಳಿಂದ ಸಂಸ್ಕಾರ ಲಭ್ಯ



ಮಂಗಳೂರು: ಬೇಸಿಗೆ ಶಿಬಿರದಿಂದ ಜೀವನ ಮೌಲ್ಯದ ಶಿಕ್ಷಣವು ದೊರೆಯುತ್ತದೆ. ವಿದ್ಯೆ ಇರುವುದು ಜ್ಞಾನ ಸಂಪಾದಿಸಲು, ಹಣ ಇರುವುದು ದಾನ ಮಾಡಲಿಕ್ಕೆ, ಶಕ್ತಿ ಇರುವುದು ಯಾಕೆ ನಮ್ಮನ್ನು ನಾವು ರಕ್ಷಣೆ ಮಾಡಿ ಸಮಾಜ, ದೇಶವನ್ನು ರಕ್ಷಣೆ ಮಾಡಲಿಕ್ಕೆ. ಈ ಭಾವನೆ ಬರಬೇಕು ಅಂತಾದರೆ ಸಂಸ್ಕಾರ ಆಗತ್ಯ. ಈ ಸಂಸ್ಕಾರ ಇಂತಹ ಶಿಬಿರಗಳಿಂದ ಸಿಗುತ್ತದೆ ಎಂದು ಕರ್ನಾಟಕ ದಕ್ಷಿಣ ಪ್ರಾಂತ ಕುಟುಂಬ ಪ್ರಭೋದನ ಪ್ರಮುಖರಾದ ಸುಬ್ರಾಯ ನಂದೋಡಿ ಹೇಳಿದರು.

ಅವರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ದೇವಿಪುರ ಹಾಗೂ ಕಿನ್ಯ ಕೇಶವ ಶಿಶು ಮಂದಿರದ ಶಿಶು ಶಿಕ್ಷಣ ಸಯೋಜನೆಯಲ್ಲಿ ನಡೆದ ಬೇಸಿಗೆ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮಾತಾಡುತಿದ್ದರು.

ನಾವೆಲ್ಲರೂ ಭಾರತೀಯರೆಂಬ ಭಾವ ಜಾಗೃತವಾಗಬೇಕು. ಇದು ನಿರಂತರವಾಗಿ ನಮ್ಮಲ್ಲಿ ಇರಬೇಕು. ನಾವೆಲ್ಲಾ ಒಂದು ಎಂಬ ಭಾವನೆ ಇರಬೇಕು. ನಮ್ಮಲ್ಲಿ ಇರುವ ಭೇದ ಭಾವಗಳು ದೂರವಾಗಬೇಕು. ಅದಕ್ಕೋಸ್ಕರ ಶಿಬಿರ ಇರುತ್ತದೆ. ದೈನಂದಿನ ಚಟುವಟಿಕೆಗಳನ್ನು ಶಿಬಿರದಂತೆ ವ್ಯವಸ್ಥಿತವಾಗಿ ಜೀವನವನ್ನು ನಡೆಸಬೇಕು ಎಂದರು.

ಶಾರದಾ ಆಯುರ್ವೇದ ಆಸ್ಪತ್ರೆಯ ವೈದ್ಯರಾದ ಸ್ವಪ್ನ ಭಂಡಾರಿ ಮಾತನಾಡಿ, ಎಲ್ಲಾ ಮಕ್ಕಳು ಪರೀಕ್ಷೆ ಮುಗಿದು ಎಲ್ಲೋ ಮೊಬೈಲಲ್ಲಿ ಕಳೆದು ಹೋಗಿರಬಹುದು. ಆದರೆ ನೀವು ಜಾಣ ಮಕ್ಕಳು, ಶಿಬಿರಕ್ಕೆ ಬಂದು ಎಲ್ಲಾ ವಿಷಯ ಗಳನ್ನು ಕಲಿತಿದ್ದೀರಿ ಎಂದು ಮಕ್ಕಳನ್ನು ಪ್ರಶಂಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಮೋಹದಾಸ್ ರೈ ಸಾಂತ್ಯಗುತ್ತು ಮಾತನಾಡಿ, ನಾವು ಚಿಕ್ಕದಿರುವಾಗ ನಮಗೆಲ್ಲಾ ಶಿಬಿರದ ಅಗತ್ಯವಿರಲಿಲ್ಲ. ಏಕೆಂದರೆ ನಾವು ಪರಿಸರದೊಂದಿಗೆ ಬೆಳೆದು ಬಂದವರು. ಆದರೆ ಈಗಿನ ಕಾಲ ಘಟ್ಟದಲ್ಲಿ ಮಕ್ಕಳಿಗೆ ಪರಿಸರ ಅಥವಾ ಯಾವುದೇ ವಿಷಯದಲ್ಲಿ ಅರಿವು ತುಂಬಾ ಕಡಿಮೆ ಇದೆ, ಆದ್ದರಿಂದ ಇಂತಹ ಶಿಬಿರಗಳು ಅಲ್ಲಲ್ಲಿ ಆಗುವುದು ಅವಶ್ಯಕ ಎಂದರು.

ವೇದಿಕೆಯಲ್ಲಿ ಮಕ್ಕಳಿಗೆ ಶಿಬಿರದ ಎಲ್ಲಾ ಸಂದರ್ಭದಲ್ಲಿ ಊಟ, ಉಪಹಾರ ತಯಾರಿ ಮಾಡಿ ಕೊಡುವ ಆನಂದ ಮಯ್ಯ ಅವರನ್ನು ಸನ್ಮಾನಿಸಲಾಯಿತು. ದೇವಸ್ಥಾನದ ನಿಕಟ ಪೂರ್ವ ಅರ್ಚಕರಾದ ಶ್ರೀನಿವಾಸ ನೆಲ್ಲಿತಾಯ, ಸಮಾಜ ಸೇವಕ ಹಾಗೂ ಉದ್ಯಮಿ ಅರವಿಂದ್ ದೇವಿನಗರ, ಮಹಾ ಮಂಡಲದ ಯುವ ಮೋರ್ಚಾದ ಉಪಾಧ್ಯಕ್ಷ ನಿತ್ಯಾನಂದ ಶೆಟ್ಟಿ ನಾರ್ಲ, ಹಿಂದು ಜಾಗರಣ ವೇದಿಕೆ ಪ್ರಮುಖ ಹರ್ಷರಾಜ್ ಕೊಟ್ಟಾರಿ, ಶ್ರೀ ದುರ್ಗಾಪರಮೇಶ್ವರಿ ಸೇವಾ ಸಂಘದ ಅಧ್ಯಕ್ಷ ಶೈಲೇಶ್ ಶೆಟ್ಟಿ, ಶಿಶು ಮಂದಿರದ ಗೌರವ ಅಧ್ಯಕ್ಷ ಶಿವರಾಮ ಶೆಟ್ಟಿ ಸಾಂತ್ಯ ಗುತ್ತು, ಶಿಶು ಮಂದಿರದ ಅಧ್ಯಕ್ಷ ಸುಂದರ್ ಅಂಚನ್, ಯುವ ಮೋರ್ಚಾ ಸದಸ್ಯ ಪ್ರಖ್ಯಾತ್ ದೇವಿಪುರ ಉಪಸ್ಥಿತರಿದ್ದರು.

ನಯನಾ ಪಾರ್ಥಸಾರಥಿ ಸ್ವಾಗತಿಸಿದರು, ಮಾನಸ ಭಟ್ ವಂದನಾರ್ಪಣೆಗೈದರು. ಸುಜಾತಾ ಕರುಣಾಕರ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಾರಾಯಣ ಕಜೆ, ಶೋಭಾ ಕಜೆ, ರಾಜೇಶ್ವರಿ ಪಿಲಿಕೂರ್, ಆಶಾ ಶೆಟ್ಟಿ, ಪ್ರತಿಮಾ, ಚೇತನ್ ಪಿಲಿಕೂರ್, ರವಿ ಕನಕ ಮುಗೇರ್ ತಿಲಕ್ ಕಿನ್ಯ, ಪ್ರಣಾಮ್ ಪಿಲಿಕೂರ್ ಮೊದಲಾದವರು ಉಪಸ್ಥಿತರಿದ್ದರು.

ಸಮಾರೋಪದ ಮರುದಿನ ಈಶ್ವರ ಮಂಗಳದ ಹನುಮಗಿರಿ ಮತ್ತು ಸಮೀಪದ ಗೆಜ್ಜೆಗಿರಿಗೆ ಶಿಬಿರಾರ್ಥಿಗಳಿಗೆ ಒಂದು ದಿನದ ಪ್ರವಾಸ ಏರ್ಪಡಿಸಲಾಗಿತ್ತು.

ಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿ

ಏ.29–ಮೇ 3: ಪಂಚಕಲ್ಯಾಣ, ಧಾಮ ಸಂಪ್ರೋಕ್ಷಣೆ



ಉಪ್ಪಿನಂಗಡಿ: ಇಲ್ಲಿನ ಗಾಂಧೀ ಪಾರ್ಕ್ ಎಂಬಲ್ಲಿ ಹೆದ್ದಾರಿ ಪಾರ್ಶ್ವದಲ್ಲಿ ಪುನರ್ ನಿರ್ಮಿತ ಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವ ಏ.29ರಿಂದ ಮೇ 3ರ ತನಕ ನಡೆಯಲಿದೆ ಎಂದು ಜೀರ್ಣೋದ್ದಾರ ಸಮಿತಿಯ ಕಾರ್ಯಾಧ್ಯಕ್ಷ ಧನ್ಯಕುಮಾರ್ ರೈ ಬಿಳಿಯೂರು ಗುತ್ತು ತಿಳಿಸಿದರು.

ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ, ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಕಾರಣಕ್ಕೆ ಬಸದಿಯ ಹಳೇ ಕಟ್ಟಡವನ್ನು ತೆರವುಗೊಳಿಸಬೇಕಾಗಿ ಬಂದಿದ್ದು, ಬಸದಿಯ ಪುರೋಹಿತ ಮನೆತನದವರು ಸ್ಥಳದಾನ ಮಾಡಿ ಕೊಟ್ಟ ಭೂಮಿಯಲ್ಲಿ ನೂತನ ಬಸದಿಯನ್ನು ಪುನರ್ ನಿರ್ಮಿಸಲಾಗಿದೆ. ಅಂದಾಜು ಸುಮಾರು ರೂ. 1.5 ಕೋಟಿ ವೆಚ್ಚದ ಈ ಕಾಮಗಾರಿಯಲ್ಲಿ ಬಸದಿ, ಗೋಪುರ, ಆವರಣ ಗೋಡೆ, ಏಕಶಿಲಾ ಚತುರ್ಮುಖ ಮಾನಸ್ತಂಭ, ಬಾವಿಗಳನ್ನು ನಿರ್ಮಿಸಲಾಗಿದೆ. ಬಸದಿಯಲ್ಲಿ ಬಿಳಿ ಅಮೃತಶಿಲಾ ಕೆತ್ತನೆಗಳನ್ನು, ಜೈನ ಪರಂಪರೆಯ ಇತಿಹಾಸವನ್ನು ಸಾರುವ ಆಕರ್ಷಕ ಕೆತ್ತನೆಗಳನ್ನು ರಾಜಸ್ಥಾನದ ಶಿಲ್ಪಿಗಳಿಂದ ರಚಿಸಲಾಗಿದೆ ಎಂದರು.

ಬಸದಿಯ ಪುನರ್ ಪ್ರತಿಷ್ಠಾ ಮಹೋತ್ಸವದಲ್ಲಿ ಜೈನ ದಿಗಂಬರ ಪರಂಪರೆಯ ಪರಮಪೂಜ್ಯ 108 ಶ್ರೀ ವೀರಸಾಗರ ಮುನಿ ಮಹಾರಾಜರು ಭಾಗವಹಿಸಿ ಮಂಗಲ ಪ್ರವಚನವನ್ನು ನೀಡಲಿರುವರು. ಐದು ದಿನಗಳ ಕಾಲ ನಡೆಯಲಿರುವ ಪುನರ್ ಪ್ರತಿಷ್ಠಾ ಮಹೋತ್ಸವದಲ್ಲಿ ಜೈನ ಮಹಾ ಸ್ವಾಮೀಜಿಯವಾರದ ಆತಿಶಯ ಶ್ರೀಕ್ಷೇತ್ರ, ಹೊಂಬುಜ ಇಲ್ಲಿನ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು, ಶ್ರೀಕ್ಷೇತ್ರ ಕಂಬದಹಳ್ಳಿಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿ ಗಳವರು, ಶ್ರೀಕ್ಷೇತ್ರ, ಜೈನ ಮಠ, ಕಾರ್ಕಳ ಇಲ್ಲಿನ ಜಗದ್ಗುರು ರಾಜಗುರು ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆ, ದಿಗಂಬರ ಜೈನ ಮಹಾಸಂಸ್ಥಾನ ಮಠ, ಶ್ರೀ ಕ್ಷೇತ್ರ ಶ್ರವಣಬೆಳಗೊಳ ಇಲ್ಲಿನ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿ ಯವರು, ಮೂಡಬಿದ್ರೆ ಶ್ರೀ ಜೈನ ಮಠದ ಭಾರತ ಭೂಷಣ ಸ್ವಸ್ತಿಶ್ರೀ ಭಟ್ಟಾರಕ ಡಾ. ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿ ಯವರು, ಆತಿಶಯ ಕ್ಷೇತ್ರ ಸಿಂಹನಗದ್ದೆ ಬಸ್ತಿಮಠ, ನರಸಿಂಹರಾಜಪುರ ಇಲ್ಲಿನ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿ ಯವರುಗಳ ದಿವ್ಯ ಉಪಸ್ಥಿತಿಯಲ್ಲಿ ಧಾರ್ಮಿಕ ವಿಧಿ ವಿಧಾನಗಳು ನೆರವೇರಲಿದ್ದು, ಧಾರ್ಮಿಕ ಸಭೆಯಲ್ಲಿ ಸ್ವಾಮೀಜಿಗಳ ಜೊತೆ ಮಂತ್ರಿ ಶಾಸಕರಾದಿಯಾಗಿ ಹಲವಾರು ಗಣ್ಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಂಚಕಲ್ಯಾಣ ಸಮಿತಿಯ ಅಧ್ಯಕ್ಷ ವಿಧ್ಯಾಧರ ಜೈನ್, ಸಮಿತಿಯ ಸದಸ್ಯರಾದ ಪ್ರಶಾಂತ್ ಜೈನ್ ಬಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಸ್ಯಾಬ್ರಕಟ್ಟೆ: ಪ್ರಸಾದ್ ನೇತ್ರಾಲಯದಿಂದ ನೇತ್ರ ತಪಾಸಣೆ, ಉಚಿತ ಕನ್ನಡಕ ವಿತರಣೆ



ಮಂಗಳೂರು: ಪ್ರಸಾದ್ ನೇತ್ರಾಲಯಸೂಪರ್ ಸ್ಪೆಷಾಲಿಟಿಕಣ್ಣಿನ ಆಸ್ಪತ್ರೆ, ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್, ಉಡುಪಿ, ನ್ಯಾಷನಲ್ ಮೆಡಿಕೋಸ್ ಆರ್ಗನೈಸೇಷನ್ ಹಾಗೂ ವಿವಿಧ ಇತರ ವಿವಿಧ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಇತ್ತೀಚೆಗೆ ಸ್ಯಾಬ್ರಕಟ್ಟೆಯಲ್ಲಿ ನೇತ್ರ ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕ ವಿತರಣಾ ಶಿಬಿರ ನಡೆಯಿತು.

ಆಯ್ಕೆಯಾದ ಫಲಾನುಭವಿಗಳಿಗೆ ಪ್ರಸಾದ್ ನೇತ್ರಾಲಯದ ವೈದ್ಯಕೀಯ ನಿರ್ದೇಶಕ ಹಾಗೂ ನ್ಯಾಷನಲ್ ಮೆಡಿಕೋಸ್ಆರ್ಗನೈಸೇಷನ್ ಇದರ ಮಂಗಳೂರು ಮತ್ತುಉಡುಪಿ ವಿಭಾಗದಮುಖ್ಯಸ್ಥಡಾ. ಕೃಷ್ಣಪ್ರಸಾದ್ ಕೂಡ್ಲು ಅವರು ಕನ್ನಡಕ ವಿತರಿಸಿದರು. ನೇತ್ರತಜ್ಞ ಹಾಗೂ ಎನ್ಎಂಒ ರಾಜ್ಯ ಕಾರ್ಯದರ್ಶಿ ಡಾ. ಶ್ರೀಕಾಂತ ಶೆಟ್ಟಿ, ಸಾಲಿಗ್ರಾಮ ತಾಲೂಕು ಸಂಘಚಾಲಕ ಸಂದೀಪ್ ಶೆಟ್ಟಿ, ಉದ್ಯಮಿಗಳಾದ ಅಮರನಾಥ ಭಂಡಾರಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸ್ಯಾಬ್ರಕಟ್ಟೆಯ ಅಧ್ಯಕ್ಷ ಶರತ್ ಉಪಸ್ಥಿತರಿದ್ದರು. ಕರುಣಾಕರ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜ್–ಕ್ರಿಸ್ಟ್ ವಿವಿ ಒಪ್ಪಂದ



ಮಂಗಳೂರು: ಮಂಗಳೂರಿನ ಪ್ರತಿಷ್ಠಿತ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ಮೆಂಟ್ ಮತ್ತು ಬೆಂಗಳೂರಿನ ಕ್ರಿಸ್ಟ್ ಪರಿಗಣಿತ ವಿಶ್ವವಿದ್ಯಾನಿಲಯ ಶನಿವಾರ ಅಡ್ಯಾರ್‌ನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆದ ಸಮಾಂಭದಲ್ಲಿ ಪ್ರತಿಷ್ಠಿತ ಸಲಹಾ ಒಪ್ಪಂದ (ಎಂಒಯು)ಕ್ಕೆ ಸಹಿ ಹಾಕಲಾಗಿದೆ.

ಕ್ರಿಸ್ಟ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಅನಿಲ್ ಜೋಸೆಫ್ ಪಿಂಟೊ ಮತ್ತು ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಎಸ್. ಇಂಜಗನೇರಿ ಒಪ್ಪಂದಕ್ಕೆ ಸಹಿ ಹಾಕಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ಮೆಂಟ್ ಸಂಸ್ಥೆಯ ಅಧ್ಯಕ್ಷ ಡಾ. ಮಂಜುನಾಥ ಭಂಡಾರಿ ಮಾತನಾಡಿ, ಕ್ರಿಸ್ಟ್ ವಿವಿಯಂತಹ ಶ್ರೇಷ್ಠ ಸಂಸ್ಥೆಯೊಂದಿಗೆ ಸಲಹಾ ಒಪ್ಪಂದವನ್ನು ಮಾಡಿಕೊಳ್ಳಲು ಹೆಮ್ಮೆಯಾಗುತ್ತಿದೆ. ಸಹ್ಯಾದ್ರಿಯಲ್ಲಿ ಕ್ರಿಸ್ಟ್ ವಿವಿಯ ಸಹಕಾರದೊಂದಿಗೆ ಬರುವ ಶೈಕ್ಷಣಿಕ ವರ್ಷದಲ್ಲಿ ಬಿಸಿಎ, ಬಿಬಿಎ ಮತ್ತು ಎಂಬಿಎ ಆರಂಭಿಸಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯ ವಿಷಯದಲ್ಲಿ ಸಂಸ್ಥೆಯು ಪ್ರಮಾಣಕ್ಕಿಂತ ಗುಣಮಟ್ಟಕ್ಕೆ ಆದ್ಯತೆ ನೀಡುತ್ತಿದೆ ಎಂದರು.

ಕ್ರಿಸ್ಟ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಅನಿಲ್ ಜೋಸೆಫ್ ಪಿಂಟೊ ಅವರು ತಮ್ಮ ಸಂಸ್ಥೆಯು ನಡೆದು ಬಂದ ಹಾದಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಬಗ್ಗೆ ವಿವರಿಸಿ ಸಹ್ಯಾದ್ರಿಯೊಂದಿನ ಸಂಸ್ಥೆಯ ಸಲಹಾ ಒಪ್ಪಂದದ ಸಂತೋಷ ವ್ಯಕ್ತಪಡಿಸಿದರು.

ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಎಸ್. ಇಂಜಗನೇರಿ ಅವರು ಗುಣಮಟ್ಟದ ಶಿಕ್ಷಣ, ಸಂಶೋಧನೆ ವಿಚಾರದಲ್ಲಿ ಸಂಸ್ಥೆಯ ಬದ್ಧತೆಯನ್ನು ವಿವರಿಸಿ, ಸಂಸ್ಥೆಯು ನಡೆದು ಬಂದ ಹಾದಿಯ ಬಗ್ಗೆ ಮತ್ತು ಸಂಸ್ಥೆಯ ಈಗಿನ ಕಾರ್ಯಚಟುವಟಿಕೆಗಳ ವಿಷಯ ಮಂಡಿಸಿದರು.

ಕ್ರಿಸ್ಟ್ ವಿವಿಯ ಯಶವಂತಪುರ ಕ್ಯಾಂಪಸ್‌ನ ಸ್ಕೂಲ್ ಆಫ್ ಬ್ಯುಸಿನೆಸ್ ಮತ್ತು ಮ್ಯಾನೇಜ್ಮೆಂಟ್ನ ಮುಖ್ಯಸ್ಥ ಡಾ. ಶ್ರೀನಿವಾಸ್ ಕುಲಕರ್ಣಿ, ಕಂಪ್ಯೂಟರ್ ಸೈನ್ಸ್, ಸ್ಟ್ಯಾಟಿಸ್ಟಿಕ್ಸ್ ಮತ್ತು ಡೇಟಾ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವಿನಯ್ ಎಂ., ಬಿಬಿಎ ಕಾರ್ಯಕ್ರಮ ಸಂಯೋಜಕಿ ಡಾ. ಸಂಧ್ಯಾ ಡಿ. ಉಪಸ್ಥಿತರಿದ್ದರು.

ಸಹ್ಯಾದ್ರಿ ಕಾಲೇಜಿನ ಎಂಬಿಎ ವಿಭಾಗದ ನಿರ್ದೇಶಕಿ ವಿಶಾಲ್ ಸಮರ್ಥ ಸ್ವಾಗತಿಸಿದರು. ವ್ಯವಹಾರ ಆಡಳಿತ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಸುಷ್ಮಾ ವಿ. ಕಾರ್ಯಕ್ರಮ ನಿರೂಪಿಸಿದರು.

ಕೋಟದಲ್ಲಿ ಬೇಸಿಗೆ ಶಿಬಿರ ಆಯೋಜನೆ



ಕೋಟ: ಶಿಬಿರಗಳು ಎಲ್ಲೆಡೆ ನಡೆಯುವುದು ಸ್ವಾಭಾವಿಕ ಆದರೆ ಇಲ್ಲಿನ ಕಾರಂತ ಥೀಂ ಪಾರ್ಕ್ ನಲ್ಲಿ ನಡೆಯುವ ಬೇಸಿಗೆ ಶಿಬಿರಗಳು ವಿಭಿನ್ನ ಮತ್ತು ಮಕ್ಕಳ ಮನೋವಿಕಾಸಕ್ಕೆ ಸಹಕಾರಿ ಎಂದು ಪತ್ರಕರ್ತ ರವೀಂದ್ರ ಕೋಟ ಅಭಿಪ್ರಾಯಪಟ್ಟರು.

ಏ.25ರಿಂದ ಮೇ 4ರವರೆಗೆ ಕೋಟದ ಡಾ.ಶಿವರಾಮ ಕಾರಂತ ಥೀಂ ಪಾರ್ಕ್‌ನಲ್ಲಿ ಮಣೂರು ಪಡುಕೆರೆ ಗೀತಾನಂದ ಫೌಂಡೇಶನ್, ಕೋಟ ಡಾ.ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ, ಕೋಟ ಉಸಿರು, ಕೋಟತಟ್ಟು ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಆಶ್ರಯದಲ್ಲಿ ದಿ.ಕೆ.ಸಿ.ಕುಂದರ್ ಸ್ಮರಣಾರ್ಥ 26ನೇ ವರ್ಷದ ವಿದ್ಯಾರ್ಥಿ ಗಳ ಉಚಿತ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ ಪ್ರಸ್ತುತ ಮೊಬೈಲ್ ಕಾಲಘಟ್ಟದಲ್ಲಿ ಮಕ್ಕಳಿಗೆ ಶಿಬಿರಗಳ ಮೂಲಕ ಕೌಶಲ್ಯಾಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಲಿದೆ. ಇಂದಿನ ತಾಪಮಾನದಲ್ಲಿ ಹಸಿರು ಪರಿಸರ,ಪ್ಲಾಸ್ಟಿಕ್ ಮುಕ್ತಸಮಾಜಕ್ಕೆಯುವಸಮುದಾಯದ ಕುರಿತಂತೆ ಸಮಗ್ರ ಮಾಹಿತಿ ನೀಡಿದರು.

ಇದೇ ವೇಳೆ ಶಿಬಿರಾರ್ಥಿಗಳ ನಾಯಕರಾದ ವೃದ್ಧಿ, ಧನುಶ್ರೀ, ಚಿರಂತನ್, ಶಮಂತ್, ತನ್ವಿ ಇವರಿಗೆ ರವೀಂದ್ರ ಕೋಟ ಶಿಬಿರದ ಫ್ಲೈಲ್ ಹಸ್ತಾಂತರಿಸಿದರು.

ಶಿವರಾಮ ಕಾರಂತ ಪ್ರತಿಷ್ಠಾನದ ಸದಸ್ಯ ಎಂ. ಸುಬ್ರಾಯ ಆಚಾರ್, ಥೀಂ ಪಾರ್ಕ್ ಗ್ರಂಥಪಾಲಕಿ ಶೈಲಜ, ಕಲ್ಮಾಡಿ ಅಂಗನವಾಡಿ ಸಹಾಯಕಿ ಶೈಲಜ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು. ಶಿಬಿರದಲ್ಲಿ ವಿವಿಧ ತಂಡಗಳನ್ನು ರಚಿಸಿ ಅವುಗಳಿಗೆ ಹೆಸರನ್ನು ಉಲ್ಲೇಖಿಸಿ ಒಂದೊಂದು ತಂಡಕ್ಕೆ ನಾಯಕತ್ವ ನೀಡಲಾಗಿದೆ. ದಿನವಿಡೀ ಮಕ್ಕಳಿಗೆ ವಿವಿಧ ತರಹದ ಆಟ ಸೇರಿದಂತೆ ಜ್ಞಾನವೃದ್ಧಿಗೆ ಬೇಕಾಗುವ ವಿಚಾರ,ಕಥೆ ಹಲವು ಯೋಜನೆಗಳನ್ನು ಶಿಬಿರಾರ್ಥಿಗಳಿಗೆ ಒದಗಿಸಲಾಗುತ್ತಿದೆ.

ಕಾರ್ಯಕ್ರಮ ಸಂಯೋಜಕ ಪ್ರತಿಷ್ಠಾನದ ಕಾರ್ಯದರ್ಶಿ ಕುಮಾರ್ ಕೋಟ ಕಾರ್ಯಕ್ರಮ ನಿರೂಪಿಸಿದರೆ, ಸದಸ್ಯ ಶಿಕ್ಷಕ ಸತೀಶ್ ವಡ್ಡರ್ಸೆ ಸ್ವಾಗತಿಸಿ ವಂದಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-751) ಡ್ರಾ ಏಪ್ರಿಲ್ 25ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KY 794625 (THRISSUR)

Consolation Prize Rs.5,000/-
KN 794625 KO 794625 KP 794625 KR 794625
KS 794625 KT 794625 KU 794625 KV 794625
KW 794625 KX 794625 KZ 794625

2nd Prize Rs.25,00,000/- [25 Lakhs]
KN 555454 (VAIKKOM)

3rd Prize Rs.10,00,000/- [10 Lakhs]
KP 875040 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0506 0709 1372 1952 2478 3596 4007 4338 4639 4910
5119 5391 5550 5669 6716 7245 7529 8693 9446

5th Prize Rs.2,000/-
2416 4409 4835 7113 7869 8112

6th Prize Rs.1,000/-
0393 0942 1098 1319 1706 1911 2713 2831 2840 2846
3093 3307 4364 5528 5998 6313 6866 7100 7697 7864
7943 8016 8838 9015 9257

7th Prize Rs.500/-
0152 0170 0296 0318 0426 0508 0852 0856 0944 0998
1008 1279 1392 1558 1572 1581 1589 1677 1690 1787
1839 2537 2757 3003 3007 3033 3040 3101 3253 3290
3441 3574 3814 4137 4206 4365 4394 4554 4647 4693
4726 4949 5043 5127 5189 5278 5642 5779 5873 5887
5937 5972 6069 6249 6620 6672 7095 7198 7465 7709
7780 8377 8443 8496 8596 8684 8697 8724 8850 9009
9341 9431 9468 9818 9926 9974

8th Prize Rs.200/-
0190 0202 0251 0379 0558 0607 0646 1027 1107 1183
1213 1233 1543 1557 1569 1696 1716 1745 1755 1959
1965 2147 2150 2300 2459 2699 2788 3045 3353 3518
3724 3757 3872 4057 4145 4331 4517 4558 4619 4864
4870 5021 5141 5144 5443 5453 5457 5503 5541 5632
5682 5771 5910 5923 5933 5940 5991 6033 6147 6240
6261 6277 6389 6390 6440 6488 6621 6981 7116 7202
7380 7530 7537 7579 7609 7928 8057 8188 8193 8251
8404 8493 8500 8689 8755 8857 9016 9129 9233 9238
9563 9585

9th Prize Rs.100/-
0030 0142 0231 0273 0313 0316 0350 0419 0520 0525
0581 0588 0700 0710 0721 0741 0789 0816 0829 0872
0930 1056 1294 1328 1357 1437 1489 1592 1596 1620
1874 1891 1936 1987 2080 2092 2161 2203 2228 2317
2380 2414 2502 2569 2627 2838 2863 3023 3077 3104
3191 3283 3365 3453 3546 3583 3636 3752 3774 3805
3894 3907 3938 3998 4043 4068 4123 4359 4529 4633
4700 4736 4837 4984 5033 5135 5165 5201 5290 5404
5501 5652 5685 5786 5970 6017 6116 6149 6221 6413
6444 6462 6550 6602 6647 6731 6777 6784 7120 7186
7197 7299 7419 7426 7445 7528 7580 7600 7650 7703
7704 7727 7770 7818 7876 7878 7930 7940 7956 8040
8153 8159 8222 8376 8461 8688 9005 9060 9080 9345
9380 9408 9421 9437 9494 9603 9606 9637 9655 9782
9800 9810 9985 9999

ಅತ್ತಾವರ ಅಯ್ಯಪ್ಪ ಮಂದಿರದಲ್ಲಿ ಧಾರ್ಮಿಕ ಕವಿಗೋಷ್ಠಿ – ಕಾವ್ಯ ಗಾಯನ

ದುಡಿಮೆಯಲ್ಲಿ ದೇವರನ್ನು ಕಾಣುವ ಪ್ರವೃತ್ತಿ ಬೆಳೆಯಲಿ



ಮಂಗಳೂರು: ಕೇವಲ ಮನೋರಂಜನೆಯಲ್ಲದೆ ಸಾಹಿತ್ಯಪರ ಕಾರ್ಯಕ್ರಮಗಳ ಮೂಲಕ ಧಾರ್ಮಿಕ ಜಾಗೃತಿ ಮೂಡಿಸುವ ಅಗತ್ಯವಿದೆ. ದುಡಿಮೆಯಲ್ಲಿ ಭಗವಂತನನ್ನು ಕಾಣುವ ಪ್ರವೃತ್ತಿ ಬೆಳೆಯಬೇಕು ಎಂದು ಯಕ್ಷಗಾನ ಅರ್ಥಧಾರಿ ಭಾಸ್ಕರ ರೈ ಕುಕ್ಕುವಳ್ಳಿ ಹೇಳಿದ್ದಾರೆ.

ಅಮೃತ ಪ್ರಕಾಶ ಪತ್ರಿಕೆ ಮಂಗಳೂರು ಸಂಯೋಜನೆಯಲ್ಲಿ ಅತ್ತಾವರ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಕವಿಗೋಷ್ಠಿ – ಕಾವ್ಯ ಗಾಯನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಳಿಕ 'ದೇವೆರುಲ್ಲೆರಾ.. ?' ಎಂಬ ಸ್ವರಚಿತ ತುಳು ಕವಿತೆಯನ್ನು ಓದಿದರು.

ಕವಿಗಳಾದ ರಘು ಇಡ್ಕಿದು, ವ.ಉಮೇಶ ಕಾರಂತ, ಡಾ. ಎಸ್. ಎಂ.ಶಿವಪ್ರಕಾಶ್, ಡಾ. ಮೀನಾಕ್ಷಿ ರಾಮಚಂದ್ರ, ಸುಧಾ ನಾಗೇಶ್, ಮಾಲತಿ ಶೆಟ್ಟಿ ಮಾಣೂರು ಧಾರ್ಮಿಕ ಸಂದೇಶವುಳ್ಳ ಗೇಯ ಕವನಗಳನ್ನು ವಾಚಿಸಿದರು. ತೋನ್ಸೆ ಪುಷ್ಕಳ ಕುಮಾರ್ ಹಾಗೂ ಲಾವಣ್ಯ ಸುಧಾಕರ್ ಅವುಗಳಿಗೆ ರಾಗಸಂಯೋಜಿಸಿ ಹಾಡಿದರು. ಸತೀಶ್ ಸುರತ್ಕಲ್, ಕೌಶಿಕ್ ಮಂಜನಾಡಿ ಮತ್ತು ವಂದನ್ ಬೇಕಲ್ ಹಿನ್ನಲೆ ಸಂಗೀತ ನೀಡಿದರು. ವಿ. ಎನ್.ಆರ್. ಗೋಲ್ಡ್ ಬಂಟ್ವಾಳ ಹಾಗೂ ಅಮೃತ ಪ್ರಕಾಶ ಪತ್ರಿಕೆ ಕಾರ್ಯಕ್ರಮದ ಪ್ರಾಯೋಜಕರಾಗಿದ್ದರು.

ಮಾಲತಿ ಶೆಟ್ಟಿ ಮಾಣೂರು ಸ್ವಾಗತಿಸಿ, ನಿರೂಪಿಸಿದರು. ಸಾಂಸ್ಕೃತಿಕ ಸಮಿತಿ ಮುಖ್ಯಸ್ಥ ಸುರೇಶ್ ಅತ್ತಾವರ ವಂದಿಸಿದರು. ಅಯ್ಯಪ್ಪ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸೂರ್ಯಕಾಂತ್ ಅತ್ತಾವರ, ಸತ್ಯ ಪ್ರಕಾಶ್ ಶೆಟ್ಟಿ ಅತ್ತಾವರ, ಬ್ರಹ್ಮಕಲಶ ಸ್ವಾಗತ ಸಮಿತಿ ಅಧ್ಯಕ್ಷ ರಾಜರತ್ನ ಸನಿಲ್, ಗೌರವ ಕಾರ್ಯದರ್ಶಿ ಜನಾರ್ದನ್ ಅತ್ತಾವರ ಕವಿಗಳನ್ನು ಗೌರವಿಸಿದರು. ಲಲಿತಾ ಅತ್ತಾವರ, ದೇವಿ ಅತ್ತಾವರ, ಪ್ರೊ.ವಿನಯ ಶೆಟ್ಟಿ ಅತ್ತಾವರ, ಶ್ರುತಿ ಶೆಟ್ಟಿ ಅತ್ತಾವರ ಸಹಕರಿಸಿದರು.

ಪುತ್ತೂರು ಮಾರುಕಟ್ಟೆ ಧಾರಣೆ

25-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	350 - 400
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	237.00
ಆರ್‌ಎಸ್‌ಎಸ್ 2	207.00
ಸ್ಕ್ರಾಪ್ 1	146.00
ಸ್ಕ್ರಾಪ್ 2	137.00

15 ಲಕ್ಷ ಗಿಡ ನೆಡಲು ಬಿಡಿಎ ಸಂಕಲ್ಪ



ಬೆಂಗಳೂರು: ನಗರದ ವಿವಿಧ ಸ್ಥಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಸಿಯನ್ನು ನೆಡುವ ಮೂಲಕ ಬೆಂಗಳೂರನ್ನು ಮತ್ತಷ್ಟು ಹಸಿರಾಗಿಸುವ ಉದ್ದೇಶದಿಂದ 2026 ಜೂನ್ 5 ವಿಶ್ವ ಪರಿಸರ ದಿನದಂದು 15 ಲಕ್ಷ ಸಸಿಯನ್ನು ನೆಡುವ ಮಹತ್ವಾಕಾಂಕ್ಷೆ ಪರಿಸರ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ರೂಪಿಸಿದೆ.

ಮಾಧ್ಯಮ ಮಾಹಿತಿ ನೀಡಿರುವ ಬಿಡಿಎ, ಎನ್.ಎ. ಹ್ಯಾರಿಸ್ ರವರ ನೇತೃತ್ವದಲ್ಲಿ ಈ ಯೋಜನೆಯು ಕಾರ್ಯರೂಪಕ್ಕೆ ಬರಲಿದ್ದು, ಸುಸ್ಥಿರ ನಗರ ಅಭಿವೃದ್ಧಿ ಮತ್ತು ಹಸಿರು ಪರಿಸರವನ್ನು ಮರು ಸ್ಥಾಪಿಸುವಲ್ಲಿ ಈ ಯೋಜನೆ ಮಹತ್ವದ ಹೆಜ್ಜೆಯಾಗಲಿದೆ. ಹಸಿರು ಮತ್ತು ಸುಸ್ಥಿರ ಹವಾಮಾನ ಪೂರಕವಾದ ಬೆಂಗಳೂರನ್ನು ನಿರ್ಮಿಸುವ ಪ್ರಾಧಿಕಾರದ ಬದ್ಧತೆಯನ್ನು ಈ ಯೋಜನೆಯು ಇನ್ನಷ್ಟು ಬಲಪಡಿಸಲಿದೆ ಎಂದು ತಿಳಿಸಿದೆ. ಬೆಂಗಳೂರಿನಾದ್ಯಂತ ಸಾರ್ವಜನಿಕರು ಅನುಭವಿಸುತ್ತಿ ರುವ ತಾಪಮಾನ ಏರಿಕೆ ಮತ್ತು ಅರ್ಬನ್ ಹೀಟ್ ಐಲ್ಯಾಂಡ್ (ಖಿಏಐ) ಪರಿಣಾಮದ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಸಿಎಸ್‌ಆರ್ ನಿಧಿಯ ಮೂಲಕ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಗುರಿಯನ್ನು ಹೊಂದಿರುವ ಈ ಯೋಜನೆಯು ನಿರ್ದಿಷ್ಟ ಕಾಲಮಿತಿಯಲ್ಲಿ ಸರ್ಕಾರಿ ಸಂಸ್ಥೆಗಳು, ನಾಗರಿಕ ಸಂಸ್ಥೆಗಳು, ಎನ್‌ಜಿಓಗಳು, ಸ್ವಯಂಸೇವಕರು ಮತ್ತು ನಾಗರಿಕರನ್ನು ಸಮನ್ವಯಗೊಳಿಸಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ದೀರ್ಘಕಾಲೀನ ಪರಿಸರ ಸಂರಕ್ಷಣೆಯಲ್ಲಿ ಪಾಲುದಾರಿಕೆಯನ್ನು ಈ ಯೋಜನೆ ಉತ್ತೇಜಿಸುತ್ತದೆ ಎಂದು ಮಾಹಿತಿ ನೀಡಿದೆ.

41 ದಿನಗಳ ಪೂರ್ವಸಿದ್ಧತಾ ಯೋಜನೆ ಪ್ರಗತಿಯಲ್ಲಿದ್ದು, ನೆಡುತೋಪುಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ದೀರ್ಘ ಕಾಲೀನ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಬಿಡಿಎ ದೃಢವಾದ ವ್ಯವಸ್ಥೆಗಳನ್ನು ರೂಪಿಸುತ್ತಿದೆ.ಈ ಉಪಕ್ರಮದ ಭಾಗವಾಗಿ, ಬಿಡಿಎ ಗಿನ್ನಿಸ್ ವಿಶ್ವ ದಾಖಲೆಯನ್ನು ಸಾಧಿಸಲು ಉದ್ದೇಶಿಸಿದೆ ಎಂದು ತಿಳಿಸಿದೆ. ಹಸಿರು ಮತ್ತು ಆರೋಗ್ಯಕರ ಬೆಂಗಳೂರಿನತ್ತ ಸಾಗಲು ರೂಪಿಸಿರುವ ಈ ಚಳುವಳಿಯಲ್ಲಿ ನೇರಬೇಕೆಂದು ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ಪಾಲುದಾರರನ್ನು ಬಿಡಿಎ ಆಹ್ವಾನಿಸಿದೆ.

ಈ ಯೋಜನೆಯು ಭವಿಷ್ಯದಲ್ಲಿ ಬೆಂಗಳೂರಿನ ಪರಿಸರವನ್ನು ಸುಸ್ಥಿರವಾಗಿಡಬೇಕೆನ್ನುವ ನಮ್ಮ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡುವುದರ ಜೊತೆಗೆ ಸಮುದಾಯವನ್ನು ಭಾಗವಹಿಸುವಂತೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಮಾದರಿ ಸುಸ್ಥಿರ ಹಸಿರು ನಗರವನ್ನು ನಿರ್ಮಿಸಿಕೊಡಲಿದ್ದೇವೆ.
■ **ಎನ್.ಎ. ಹ್ಯಾರಿಸ್, ಬಿಡಿಎ ಅಧ್ಯಕ್ಷ**

- **ಜೂ.5ರಂದು ವಿಶ್ವಪರಿಸರ ದಿನಾಚರಣೆಗೆ ಸಜ್ಜು**
- **ಹ್ಯಾರಿಸ್ ನೇತೃತ್ವದಲ್ಲಿ ಯೋಜನೆಗೆ ಕಾರ್ಯರೂಪ**

ವಿಚಾರ ಸಂಕಿರಣ



ಹೊಸದಿಲ್ಲಿ ಶನಿವಾರ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ಆಯೋಜಿಸಿದ್ದ ಅರ್ಬನ್ ಚಾಲೆಂಜ್ ಫಂಡ್ ಹಾಗೂ ಅರ್ಬನ್ ಇನ್ವೆಸ್ಟ್ ವಿಂಡೋ 56ನೇ ಸಂಸ್ಥಾಪನಾ ದಿನ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಭಾಗವಹಿಸಿದ್ದರು. ಕೇಂದ್ರ ಸಚಿವ ಮನೋಹರ ಲಾಲ್ ಖಟ್ಟರ್ ಉಪಸ್ಥಿತರಿದ್ದರು.

ಕಿರುಸುದ್ದಿ

ಏ.29ರಂದು ಒಳಚರಂಡಿ ಪುರಾಣ ನಾಟಕ ಪ್ರದರ್ಶನ

ಬೆಂಗಳೂರು: ಅಂತರಂಗ ತಂಡದ ಹೊಸ ನಾಟಕ ಒಳಚರಂಡಿ ಪುರಾಣ ಏ.29ರಂದು ಸಂಜೆ 7.30ಕ್ಕೆ ಜೆ.ಪಿ.ನಗರದ ರಂಗಶಂಕರದಲ್ಲಿ ಪ್ರದರ್ಶನಗೊಳ್ಳಲಿದೆ. ಸುಮಾರು 46ವರ್ಷದಿಂದ ಸಕ್ರಿಯ ರಂಗಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಅಂತರಂಗ ತಂಡ, ಈ ನಾಟಕದ ಮೂಲಕ ಪ್ರಸ್ತುತ ಸಮಾಜ ಮತ್ತು ಆಡಳಿತ ವ್ಯವಸ್ಥೆಯ ಮೇಲೆ ವ್ಯಂಗ್ಯಾತ್ಮಕ ನೋಟ ಹರಿಸಿದೆ. ಖ್ಯಾತ ಲೇಖಿಕ ಮತ್ತು ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ ಅವರ ಸಣ್ಣಕತೆಯನ್ನು ಆಧರಿಸಿ, ನಾಟಕಕಾರ ಡಾ.ಗೌರೀಶ್ ಜೋಶಿ ಅವರು ಕಥೆಯನ್ನು ರೂಪಿಸಿದ್ದು, ಅರ್ಚನಾ ಶ್ಯಾಮ್ ಅವರ ನಿರ್ದೇಶನದಲ್ಲಿ ನಾಟಕ ಮೂಡಿಬಂದಿದೆ. ಸರ್ಕಾರಿ ಕಚೇರಿಗಳ ಕಾರ್ಯವೈಖರಿ ಹಾಗೂ ಅವ್ಯವಸ್ಥೆಯನ್ನು ಪ್ರತಿಬಿಂಬಿಸುವ ಈ ನಾಟಕದಲ್ಲಿ ಲೋಕಪ್ಪ ಎಂಬ ಸಾಮಾನ್ಯ ವ್ಯಕ್ತಿಯ ಹೋರಾಟದ ಕಥೆಯನ್ನು ಚಿತ್ರಿಸಲಾಗಿದೆ. ತನ್ನ ಪ್ರದೇಶದ ಸಮಸ್ಯೆಗಳ ವಿರುದ್ಧ ಹೋರಾಡುವ ಲೋಕಪ್ಪ, ಪ್ರಜೆಗಳ ಸಂಕಷ್ಟ ಮತ್ತು ವ್ಯವಸ್ಥೆಯ ವೈಫಲ್ಯವನ್ನು ಪ್ರತಿನಿಧಿಸುತ್ತಾನೆ. ವಿಡಂಬನೆ, ಸಾಮಾಜಿಕ ವಿಶ್ಲೇಷಣೆ ಮತ್ತು ಮನರಂಜನೆಯ ಸಂಯೋಜನೆಯಾಗಿ ಈ ನಾಟಕ ರೂಪುಗೊಂಡಿದ್ದು, ಪ್ರೇಕ್ಷಕರಿಗೆ ಹೊಸ ಅನುಭವ ನೀಡುವ ನಿರೀಕ್ಷೆಯಿದೆ. ಟಿಕೆಟ್ ದರ ರೂ. 200 ಆಗಿದ್ದು, ಆನ್‌ಲೈನ್‌ನಲ್ಲಿ ಬುಕ್ ಮೈ ಶೋ ಮೂಲಕ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ 98809 14509 ಮತ್ತು 99869 11321 ಸಂಪರ್ಕಿಸಬಹುದು.

ಗ್ರಾಮ ಸಡಕ್ ಯೋಜನೆ ವಿಸ್ತರಣೆ: ಸ್ವಾಗತ



ಬೆಂಗಳೂರು: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಮಾರ್ಚ್ 2028ರವರೆಗೆ ವಿಸ್ತರಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಜೆಸಿಬಿ ಇಂಡಿಯಾ ಸ್ವಾಗತಿಸಿದೆ. ಈ ಕ್ರಮವು ದೇಶಾದ್ಯಂತ ಗ್ರಾಮೀಣ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಕಂಪನಿ ತಿಳಿಸಿದೆ. ಈ ಕುರಿತು ಜೆಸಿಬಿ ಇಂಡಿಯಾದ ಮುಖ್ಯಸ್ಥ ಮತ್ತು ವ್ಯವಸ್ಥಾಪಕ ನಿರ್ದೇಶಕ ದೀಪಕ್ ಶೆಟ್ಟಿ ಮಾತನಾಡಿ, ಗ್ರಾಮೀಣ ರಸ್ತೆಗಳು ಜನರ ದೈನಂದಿನ ಜೀವನದ ಮೇಲೆ ನೇರ ಪರಿಣಾಮ ಬೀರುತ್ತವೆ. ಉತ್ತಮ ಸಂಪರ್ಕವು ತುರ್ತು ಸೇವೆಗಳ ಲಭ್ಯತೆ ಹಾಗೂ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಗ್ರಾಮಗಳನ್ನು ಪ್ರಮುಖ ಸೇವೆಗಳು ಮತ್ತು ಆರ್ಥಿಕ ಚಟುವಟಿಕೆಗಳೊಂದಿಗೆ ಸಂಪರ್ಕಿಸುವ ರಸ್ತೆ ಮೂಲಸೌಕರ್ಯ ಅಭಿವೃದ್ಧಿಯಿಂದ ಆರೋಗ್ಯ, ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಗೆ ಸುಲಭ ಪ್ರವೇಶ ಸಿಗಲಿದೆ. ರೈತರಿಗೆ ಕೃಷಿ ಉತ್ಪನ್ನಗಳ ಸಾಗಣೆ ಸುಗಮವಾಗುವುದರಿಂದ ನಷ್ಟ ಕಡಿಮೆಯಾಗಲಿದ್ದು, ಸ್ಥಳೀಯ ಆರ್ಥಿಕತೆಗೂ ಉತ್ತೇಜನ ಸಿಗಲಿದೆ ಎಂದು ಹೇಳಿದರು.

ಇಂದು 108 ಸುಭಾಷಿತ ಕೃತಿ ಲೋಕಾರ್ಪಣೆ

ಬೆಂಗಳೂರು: ಪುಸ್ತಕ ಪ್ರಪಂಚದ ಓದುಗ ಆಸಕ್ತರಿಗೆ ಸಾಹಿತ್ಯ ಹಾಗೂ ಸಂಗೀತಲೋಕದ ಶ್ರೋತೃಗಳಿಗೆ ಗಾನಸುಧೆಯ ಸಿಂಚನ ಕಾರ್ಯಕ್ರಮಗಳು ಒಂದೇ ವೇದಿಕೆಯಲ್ಲಿ ಏ. 26 ರಂದು ಸಂಜೆ 5 ಗಂಟೆಗೆ ನಗರದ ಬಿ.ಪಿ. ವಾಡಿಯಾ ರಸ್ತೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ನಡೆಯಲಿದೆ. ಸಾವಣ್ಣ ಪ್ರಕಾಶನ ಪ್ರಕಟಿಸಿರುವ ವಿದ್ವಾನ್ ಜಗದೀಶ ಶರ್ಮಾ ಸಂಪ ವಿರಚಿತ 108 ಸುಭಾಷಿತ (ಭಾಗ 1) ಪುಸ್ತಕ ಲೋಕಾರ್ಪಣೆಯಾಗಲಿದೆ.

ಮಳೆ ನೀರು ಕೊಯ್ಲು ಅಭಿಯಾನಕ್ಕೆ ಚುರುಕು | ಮೇಲ್ಮೈ ನೀರು ಅವಲಂಬನೆ ತಗ್ಗಿಸಲು ದಿಟ್ಟ ಹೆಜ್ಜೆ

ಮಳೆ ನೀರು ಕೊಯ್ಲಿಗೆ ತಂತ್ರಜ್ಞಾನ ಬಳಕೆ

ಬೆಂಗಳೂರು: ಮುಂಬರುವ ಮುಂಗಾರು ಮಳೆ ಕಡಿಮೆಯಾಗುವ ಹವಾಮಾನ ಇಲಾಖೆಯ ಮುನ್ಸೂಚನೆಯ ಹಿನ್ನೆಲೆಯಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ಮೇಲ್ಮೈ ನೀರಿನ ಮೇಲಿನ ಅವಲಂಬನೆ ತಗ್ಗಿಸಲು ಬೆಂಗಳೂರು ಜಲಮಂಡಳಿಯು ಮಹತ್ವದ ಹೆಜ್ಜೆ ಇಟ್ಟಿದೆ. ನಗರದಲ್ಲಿ ಮಳೆನೀರು ಕೊಯ್ಲು ಅಭಿಯಾನವನ್ನು ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ, ಇಚ್ಚಿಸುವ ಗ್ರಾಹಕರ ಕಟ್ಟಡಗಳಲ್ಲಿ ಜಲಮಂಡಳಿಯೇ ಖುದ್ದಾಗಿ ಅತ್ಯಾಧುನಿಕ ಹಾಗೂ ವಿನೂತನ ತಂತ್ರಜ್ಞಾನದ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲು ಮುಂದಾಗಿದೆ. ಜಾಗದ ಕೊರತೆಯಿಂದಾಗಿ ಮಳೆನೀರು ಕೊಯ್ಲು ಅಳವಡಿಸಿಕೊಳ್ಳಲು ಹಿಂದೇಟು ಹಾಕುವ ಗ್ರಾಹಕರಿಗಾಗಿ ಅತ್ಯಂತ ಕಡಿಮೆ ಜಾಗದಲ್ಲಿ ಅಳವಡಿಸಬಹುದಾದ ಹೊಸ ಮೂರನೇ ಜನರೇಷನ್ ತಂತ್ರಜ್ಞಾನವನ್ನು ಪರಿಚಯಿಸಲಾಗುತ್ತಿದೆ. ಇದು ಕಾವೇರಿ ನೀರು ಹಾಗೂ ಅಂತರ್ಜಲದ ಮೇಲಿನ ಅವಲಂಬನೆಯನ್ನು ಗಣನೀಯವಾಗಿ ಕಡಿಮೆಗೊಳಿಸಲಿದೆ.

ಪ್ರಾಯೋಗಿಕ ಯೋಜನೆ ಯಶಸ್ವಿ: ಈ ವಿನೂತನ ಮಳೆನೀರು ಕೊಯ್ಲು ಪದ್ಧತಿಯನ್ನು ಈಗಾಗಲೇ ಪ್ರಾಯೋ ೀಗಿಕವಾಗಿ 75 ಕಡೆಗಳಲ್ಲಿ ಅಳವಡಿಸಲಾಗಿದ್ದು, ಅತ್ಯುತ್ತಮ ಗುಣಮಟ್ಟದ ನೀರು ಲಭ್ಯವಾಗುತ್ತಿರುವುದು ದೃಢಪಟ್ಟಿದೆ. ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ನಿವಾಸಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಈ ಮಹತ್ವಾಕಾಂಕ್ಷಿ ಯೋಜನೆಯ ಅನುಷ್ಠಾನದ ಕುರಿತು ಮುಂಬರುವ ಜಲಮಂಡಲಿಯ ಆಡಳಿತ ಮಂಡಲಿ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು.
■ **ಡಾ. ರಾಮ್ ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ**

ಗ್ರಾಹಕರಿಗೆ ಲಾಭ

ಮಳೆನೀರು ಕೊಯ್ಲು ಅಳವಡಿಸಿಕೊಳ್ಳದ ಕಾರಣಕ್ಕಾಗಿ ನಗರದ ಅನೇಕ ಗ್ರಾಹಕರು ಜಲಮಂಡಳಿಗೆ ಪ್ರತಿ ತಿಂಗಳು ದಂಡ ಪಾವತಿಸುತ್ತಿದ್ದಾರೆ. ಜಲಮಂಡಳಿಯು ಈ ದಂಡದ ರೂಪದಲ್ಲಿಯೇ ಪ್ರತಿ ತಿಂಗಳು ಸುಮಾರು ೩ ಕೋಟಿ ಆದಾಯ ಸಂಗ್ರಹಿಸುತ್ತಿದೆ. ಗ್ರಾಹಕರಿಗೆ ಅನುಕೂಲವಾಗಬೇಕು ಹಾಗೂ ಮಳೆ ನೀರಿನ ಸದ್ಬಳಕೆಯಾಗಬೇಕೆಂಬ ಸದುದ್ದೇಶದಿಂದ ಈ ಹೊಸ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಲ್ಲಿ ಇಚ್ಚಿಸುವ ಗ್ರಾಹಕರ ಕಟ್ಟಡಗಳಿಗೆ ಜಲಮಂಡಳಿಯೇ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲಿದೆ. ಇದಕ್ಕಾಗಿ ತಗಲುವ ವೆಚ್ಚವನ್ನು, ಗ್ರಾಹಕರು ಪ್ರತಿ ತಿಂಗಳು ಪಾವತಿಸುವ ಪೆನಾಲ್ಟಿ ಮೊತ್ತದ ರೂಪದಲ್ಲೇ ಹಂತ ಹಂತವಾಗಿ ವಸೂಲಿ ಮಾಡಲು ನಿರ್ಧರಿಸಲಾಗಿದೆ. ಇದರಿಂದ ಕಾಲಕ್ರಮೇಣ ಗ್ರಾಹಕರಿಗೆ ದಂಡ ಕಟ್ಟುವ ಕಿರಿಕಿರಿ ತಪ್ಪುವುದರ ಜೊತೆಗೆ, ಮಾಸಿಕ ನೀರಿನ ಬಿಲ್ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ .

ನೂತನ ಫಿಲ್ಟರ್‌ನ ಪ್ರಮುಖ ತಾಂತ್ರಿಕ ಅಂಶಗಳು

- ಆಂಟಿ-ಚೋಕ್ ನೇಯ್ಗೆಯನ್ನು ಹೊಂದಿರುವ ಎಸ್‌ಎಸ್316 ಮೆಶ್ ಅನ್ನು ಅಳವಡಿಸಲಾಗಿದೆ
- ಫಿಲ್ಟರ್‌ನ ಒಳಗಿರುವ ಸ್ಟ್ರೀಮ್ ಲೈನರ್ ವಿನ್ಯಾಸವು ಒಳಬರುವ ನೀರಿನ ವೇಗವನ್ನು ಗರಿಷ್ಠಗೊಳಿಸುತ್ತದೆ
- ಗುರುತ್ವಾಕರ್ಷಣೆಯ ಶಕ್ತಿಯನ್ನು ಬಳಸಿಕೊಂಡು 60 ಮೈಕ್ರಾನ್ ಮೆಶ್‌ನಲ್ಲಿ ಶೇ.90ಕ್ಕಿಂತ ಹೆಚ್ಚು ನೀರನ್ನು ಮರುಪಡೆಯುವ ಸಾಮರ್ಥ್ಯ ಹೊಂದಿದೆ
- ಇದರಲ್ಲಿರುವ ರೆಗ್ಯುಲೇಟರಿ ಸಿಸ್ಟಮ್ ಮತ್ತು ಆಟೋಮ್ಯಾಟಿಕ್ ವಿಂಡೋ ಒಟ್ಟಾಗಿ ಕೆಲಸ ಮಾಡಲಿದೆ. ನೀರಿನಲ್ಲಿ ದೊಡ್ಡ ಗಾತ್ರದ ತ್ಯಾಜ್ಯವಿದ್ದರೂ ಅದನ್ನು ತಕ್ಷಣವೇ ಹೊರಹಾಕಿ ಅತ್ಯಂತ ಶುದ್ಧ ನೀರನ್ನು ಒದಗಿಸುತ್ತದೆ

ಜನಗಣತಿ ಸಿಬ್ಬಂದಿಗೆ ನಿಂದನೆ

ಬೆಂಗಳೂರು: ಅವಾಚ್ಯ ಶಬ್ದದಿಂದ ಮಹಿಳಾ ಸಿಬ್ಬಂದಿಗೆ ಅವಮಾನಿಸಿ ಜನಗಣತಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರ ಮೇಲೆ ಪ್ರಕರಣ ದಾಖಲಿಸಲಾಗಿದೆ.


- **ಅಪಾರ್ಟ್‌ಮೆಂಟ್ ನಿವಾಸಿ ವಿರುದ್ಧ ಪ್ರಕರಣ ದಾಖಲು**

ಈ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ನೀಡಿರುವ ಪಾಲಿಕೆ, ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ-2027 ಕಾರ್ಯಾಚರಣೆಯ ವೇಳೆ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಅವಮಾನಿಸಲಾಗಿದೆ. ವಾರ್ಡ್ ಸಂಖ್ಯೆ 43ರಲ್ಲಿ ಜನಗಣತಿ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಗಣತಿದಾರರಾದ ವೀಣಾ ಅವರು ಏ.20 ರಂದು ಆರ್.ಟಿ.ನಗರದ ಸುಲ್ತಾನಪಾಳ್ಯ ಮುಖ್ಯ ರಸ್ತೆಯ ಸಮೀಪದಲ್ಲಿರುವ ಪೇರಿ ಮೊನಾರ್ಕ್ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದ ವೇಳೆ, ಸಂಬಂಧಿಸಿದ ನಿವಾಸಿ ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂದು ಹೇಳಿದೆ.

ಈ ಸಂಬಂಧ, ಏ.25ರಂದು ಪರಿಶೀಲನೆ ವೇಳೆ ಸರ್ಕಲ್-2 ಮೇಲ್ವಿಚಾರಕಿ ರಶ್ಮಿ.ಆರ್ ಸ್ಥಳಕ್ಕೆ ಭೇಟಿ ನೀಡಿ ಗಣತಿ ಕಾರ್ಯಕ್ಕೆ ಅಗತ್ಯ ಮಾಹಿತಿಯನ್ನು ಕೇಳಿದಾಗ, ಅಪಾರ್ಟ್‌ಮೆಂಟ್ ನಿವಾಸಿಯು ಸಹಕರಿಸಲು ನಿರಾಕರಿಸಿದ್ದು ಮಾತ್ರವಲ್ಲದೆ, ಗಣತಿ ಕಾರ್ಯಕ್ಕೆ ಅಡ್ಡಿಪಡಿಸಿ ಮಹಿಳಾ ಸಿಬ್ಬಂದಿಯೊಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಈ ಕುರಿತು ಫಿರ್ಯಾದಿನ ಆಧಾರದ ಮೇಲೆ ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ ಜನಗಣತಿ ಕಾಯ್ದೆ, 1948ರ ಸೆಕ್ಷನ್ 11(1) ಹಾಗೂ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ಮತ್ತು 79 ಅಡಿಯಲ್ಲಿ ಜನಗಣತಿ ಚಾರ್ಜ್ ಅಧಿಕಾರಿ ಡಾ. ಲೋಕೇಶ್ ಪ್ರಕರಣ ದಾಖಲಿಸಿರುತ್ತಾರೆ ಎಂದು ತಿಳಿಸಿದೆ.

ಕರ್ತವ್ಯಕ್ಕೆ ಅಡ್ಡಿ ಅಪರಾಧ: ಎಚ್ಚರಿಕೆ

ಜನಗಣತಿ ಕಾರ್ಯವು ರಾಷ್ಟ್ರದ ಪ್ರಮುಖ ಕರ್ತವ್ಯವಾಗಿದೆ. ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಡ್ಡಿಪಡಿಸುವುದು ಕಾನೂನುಬದ್ಧ ಅಪರಾಧವಾಗಿದೆ. ಈ ರೀತಿಯ ಕೃತ್ಯಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಗರ ಪಾಲಿಕೆ ಆಯುಕ್ತರು ತಿಳಿಸಿದ್ದು, ಗಣತಿದಾರರು ಮನೆಗಳಿಗೆ ಭೇಟಿ ನೀಡಿದಾಗ ನಿಖರ ಮಾಹಿತಿಯನ್ನು ಒದಗಿಸುವುದು ಪ್ರತಿಯೊಬ್ಬರ ಕಾನೂನುಬದ್ಧ ಕರ್ತವ್ಯವಾಗಿದೆ. ಆದ್ದರಿಂದ ಸಿಬ್ಬಂದಿಗಳೊಂದಿಗೆ ಸಹಕರಿಸಲು ಮನವಿ ಮಾಡಿದ್ದಾರೆ.



ಯೋಧರ ಗೌರವಿಸುವುದು ಎಲ್ಲಾ ನಾಗರಿಕರ ಹೊಣೆ

ಬೆಂಗಳೂರು: ದೇಶಕ್ಕಾಗಿ ತಮ್ಮ ಜೀವವನ್ನೇ ಅರ್ಪಿಸುವ ಸೈನಿಕರನ್ನು ಸಮಾಜ ಮರೆಯಬಾರದು. ಅವರ ತ್ಯಾಗವನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ನಿವೃತ್ತ ಸೈನಿಕ ಮೇಜರ್ ಅಂಕಿತ್ ಅಭಿಪ್ರಾಯಪಟ್ಟರು.

ಯುವ ಬ್ರಿಗೇಡ್ ವತಿಯಿಂದ ಬಸವನಗುಡಿಯ ಸುಚಿತ್ರ ಫಿಲಂ ಸೊಸೈಟಿಯಲ್ಲಿ ಆಯೋಜಿಸಿದ್ದ ಪರಮ್ ವೀರ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೈನಿಕರ ಸಾಧನೆಗಳನ್ನು ಜನರಿಗೆ ಪರಿಚಯಿಸುವ ಕೆಲಸವನ್ನು ಯುವ ಬ್ರಿಗೇಡ್ ಕೈಗೆತ್ತಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು. ತಮ್ಮ ಬಾಲ್ಯದ ಪ್ರೇರಣೆಗಳ ಬಗ್ಗೆ ಮಾತನಾಡಿದ ಅವರು, 2012-13ರ ಅವಧಿಯಲ್ಲಿ ನಡೆದ ಜಾಗೋ ಭಾರತ್ ಕಾರ್ಯಕ್ರಮವೇ ನನಗೆ ಆರ್ಮಿಗೆ ಸೇರುವ ಉತ್ಸಾಹ ನೀಡಿತು. ಸಾವರ್ಕರ್ ಅವರ 1857 ರ ಸ್ವಾತಂತ್ರ್ಯ ಹೋರಾಟದ ಕುರಿತು ಬರೆದ ಕೃತಿ ಸೇರಿದಂತೆ ಅನೇಕ ದೇಶಭಕ್ತಿಯ ಪುಸ್ತಕಗಳು ತಮ್ಮ ಜೀವನದ ದಿಕ್ಕನ್ನು ರೂಪಿಸಿವೆ. ಜೀವನವು ಕೇವಲ ಬದುಕುವುದಕ್ಕಾಗಿ ಅಲ್ಲ. ದೇಶದ ಏಳಿಗೆಗಾಗಿ ಗುರಿ ಹೊಂದಿರಬೇಕು ಎಂದು ಹೇಳಿದರು.

- **ಸುಚಿತ್ರ ಫಿಲಂ ಸೊಸೈಟಿಯಲ್ಲಿ ಪರಮ್ ವೀರ್ ಕಾರ್ಯಕ್ರಮ**

ದೇಶದ ಪ್ರತಿಯೊಬ್ಬರೂ ಸೈನಿಕರೇ

ಭಾರತೀಯ ಸೇನೆಯ ಶಿಸ್ತಿನ ತರಬೇತಿ, ಮಾನಸಿಕ ದೃಢತೆ ಮತ್ತು ತ್ಯಾಗಭಾವನೆಯು ದೇಶದ ಭದ್ರತೆಗೆ ಬಲವಾಗಿವೆ. ಗಡಿಯಲ್ಲಿರುವ ಸೈನಿಕರ ನಿರಂತರ ಜಾಗರೂಕತೆಯಿಂದಲೇ ದೇಶದ ಒಳಭಾಗದಲ್ಲಿ ಜನರು ಶಾಂತಿಯುತ ಜೀವನ ನಡೆಸಲು ಸಾಧ್ಯವಾಗಿದೆ. ಆರ್ಮಿಯವರು ಇಲ್ಲದಿದ್ದರೆ ನಾವು ಯಾರೂ ಇಂದಿಲ್ಲ. ದೇಶದ ಪ್ರತಿಯೊಬ್ಬ ನಾಗರಿಕನು ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ದೇಶ ಸುಂದರವಾಗುತ್ತದೆ ಮತ್ತು ಅಭಿವೃದ್ಧಿಯಾಗುತ್ತದೆ. ಆ ಅರ್ಥದಲ್ಲಿ ದೇಶದ ಪ್ರತಿಯೊಬ್ಬರೂ ಸೈನಿಕರೇ ಎಂದು ಮೇಜರ್ ಅಂಕಿತ್ ಹೇಳಿದರು. ಸೇನೆ ಯಾವುದೇ ವ್ಯಕ್ತಿ ಅಥವಾ ಪರಿಸ್ಥಿತಿಯನ್ನು ಆರೋಪಿಸಲಿಲ್ಲ. ನಂತರ ಆಪರೇಷನ್ ಸಿಂದೂರ ಮೂಲಕ ಉತ್ತರಿಸಿದೆ. ಆದ್ದರಿಂದ ಸೈನಿಕರ ಸೇವೆಯ ನಿಜಸ್ವರೂಪವನ್ನು ಸಮಾಜ ಅರ್ಥಮಾಡಿಕೊಳ್ಳಬೇಕೆಂದು. ಆಪರೇಷನ್ ಸಿಂದೂರದಲ್ಲಿ ಭಾಗವಹಿಸಿರುವುದು ಜೀವನದ ಮಹತ್ವದ ಘಟ್ಟ ಎಂದು ಹೇಳಿದರು.

ವಿಮಾನ ನಿಲ್ದಾಣದಲ್ಲಿ ಕಲಾಕೃತಿ ಲೋಕಾರ್ಪಣೆ



ಬೆಂಗಳೂರು: ಬೆಂಗಳೂರಿನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಗಳೂರಿನ ಆತ್ಮ ಹೆಸರಿನ ಸುಂದರ ಹಾಗೂ ಬೃಹತ್ ಕಲಾತ್ಮಕ ಶಿಲ್ಪವನ್ನು ಲೋಕಾರ್ಪಣೆ ಮಾಡಲಾಗಿದೆ.

ಬಯೋಕಾನ್ ಫೌಂಡೇಷನ್ ಮತ್ತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಸಹಯೋಗದಲ್ಲಿ ಈ ಕಲಾಕೃತಿಯನ್ನು ಟರ್ಮಿನಲ್-2ರ ಮುಂಭಾಗದಲ್ಲಿ ಸ್ಥಾಪಿಸಲಾಗಿದೆ. ಸ್ಪೇನ್ ದೇಶದ ಕಲೆಗಾರ ಜೌಮೆ ಪ್ಲೆನ್ಸಾ ಅವರ ಕಲ್ಪನೆಯಲ್ಲಿ ಮೂಡಿಬಂದಿರುವ ಈ ಶಿಲ್ಪವು ಪ್ರಯಾಣಿಕರ ಕಣ್ಮನ ಸೆಳೆಯುತ್ತಿದೆ.

ಭಾರತದಲ್ಲಿನ ಸ್ಪೇನ್ ರಾಯಭಾರಿ ಜುವಾನ್ ಆಂಟೋನಿಯೊ ಮಾರ್ಚ್ ಪ್ಯೂಜೋಲ್ ಅವರು ಈ ಕಲಾಕೃತಿಯನ್ನು ಅಧಿಕೃತವಾಗಿ ಅನಾವರಣಗೊಳಿಸಿದರು. ಸಮಾರಂಭದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬಯೋಕಾನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರಿ ಮರಾರ್ ಮತ್ತು ಕಲಾಕೃತಿಯ ರೂವಾರಿ ಜೌಮೆ ಪ್ಲೆನ್ಸಾ ಉಪಸ್ಥಿತರಿದ್ದರು.

ಜನಿವಾರ, ಮೂಗುತಿ ತೆಗೆಸಿದ ಹೀನ ಕ್ರಮ: ಖಂಡನೆ

ಪೊಲೀಸರು ಕಠಿಣ ಕ್ರಮ ಕೈಗೊಳ್ಳಲಿ

ಬೆಂಗಳೂರು: ಸಿಇಟಿ ಪರೀಕ್ಷೆ ವೇಳೆ ಪರೀಕ್ಷಾರ್ಥಿಗಳ ಜನಿವಾರ, ಮೂಗುತಿ ತೆಗೆಸಿದ ಅಧಿಕಾರಿಗಳ ಕಾರ್ಯಕ್ಕೆ ಜೆಡಿಎಸ್ ಹಿರಿಯ ನಾಯಕ, ವಿಧಾನ ಪರಿಷತ್ ಶಾಸಕ ಟಿ.ಎ.ಶರವಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದು ಮಾನ, ಮರ್ಯಾದೆ ಇರುವ ಸರ್ಕಾರ ನಡೆದುಕೊಳ್ಳುವ ರೀತಿಯಲ್ಲ. ಜನಿವಾರ, ಮೂಗುತಿ ಇವೆಲ್ಲ ಭಾವನಾತ್ಮಕ ಧಾರ್ಮಿಕ ಸಂಕೇತಗಳು. ಇದಕ್ಕೂ ಪರೀಕ್ಷೆಗೂ ಸಂಬಂಧವಿಲ್ಲ. ಜನಿವಾರದ ಒಳಗೆ, ಮೂಗುತಿ ಒಳಗೆ ಏನಾದರೂ ಬಚ್ಚಿಟ್ಟುಕೊಂಡು ಬಂದು ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಸಾಧ್ಯವೇ? ಎಂದು ಶರವಣ ಪ್ರಶ್ನಿಸಿದ್ದಾರೆ. ಸಿಇಟಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳ ಜನಿವಾರ ಬಲವಂತದಿಂದ ತೆಗೆದು ಹಾಕಿರುವುದು, ವಿದ್ಯಾರ್ಥಿನಿಯರ ಮೂಗುತಿ ತೆಗೆದು ಪ್ಲಾಸ್ಟರ್ ಅಂಟಿಸಿರುವುದು ಖಂಡನೀಯ.

ಭಾವನಾತ್ಮಕ ದೌರ್ಜನ್ಯ

ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವಾಗಲೂ ಇದೇ ಗೋಳು. ಪರೀಕ್ಷೆ ಬರೆಯಲು ಹೋಗುವ ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಹಿಂಸೆ ಕೊಡುವುದು ಜತೆಗೆ ಅಧೀರರನ್ನಾಗಿಸುವುದು. ಗಲಿಬಿಲಿ ಮಾಡುವುದು ನಡೆದು ಬಂದಿದೆ. ಇದೊಂದು ನೀಚ, ಹೇಯ, ಅಮಾನವೀಯ ಸರ್ಕಾರ. ಈ ಸರ್ಕಾರದ ಅಧಿಕಾರಿಗಳು ಪರೀಕ್ಷೆ ಬರೆಯಲು ಬಂದ ಮಕ್ಕಳ ಮೇಲೆ ಧಾರ್ಮಿಕ , ಭಾವನಾತ್ಮಕ ದೌರ್ಜನ್ಯ ಎಸಗಿದ್ದಾರೆ ಎಂದು ಕಿಡಿ ಕಾರಿದ್ದಾರೆ.

ಕ್ರಮವಾಗಲಿ

ಈಗಾಗಲೇ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರುಗಳು ದಾಖಲಾಗಿವೆ. ಮತ್ತೆ ಕೆಲವು ವಿದ್ಯಾರ್ಥಿಗಳು, ಪೋಷಕರು ಹೆದರಿ ದೂರು ಕೊಟ್ಟಿಲ್ಲ. ತಕ್ಷಣವೇ ಸರ್ಕಾರ ನ್ಯಾಯಸಮ್ಮತ ತನಿಖೆ ನಡೆಸಿ, ಅಸಂಬದ್ಧವಾಗಿ ವರ್ತಿಸಿದ ಅಧಿಕಾರಿಯನ್ನು ಅಮಾನತು ಮಾಡಬೇಕು. ಭಾವನಾತ್ಮಕವಾಗಿ ವಿದ್ಯಾರ್ಥಿಗಳಿಗೆ ಮನಸ್ಸಿಗೆ ನೋವಾಗುವಂತೆ ಮಾಡಿದ್ದಕ್ಕೆ ಈ ಅಧಿಕಾರಿಗಳ ಮೇಲೆ ಪೊಲೀಸ್ ಕ್ರಮ ಜರುಗಿಸಬೇಕು ಎಂದು ಶರವಣ ಆಗ್ರಹ ಪಡಿಸಿದ್ದಾರೆ.

ಜನಿವಾರ ತೆಗೆಸಿ ಹಿಂದೂ ನಂಬಿಕೆಗೆ ಸರಕಾರ ಅವಮಾನ: ಶಾಸಕ ಭರತ್ ಶೆಟ್ಟಿ ಆಕ್ರೋಶ

ಮಂಗಳೂರು: ಕರ್ನಾಟಕ ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ಜನಿವಾರ, ಕೈದಾರ, ಓಲೆ ಬಿಚ್ಚಿಸಿ ಹಿಂದೂ ವಿದ್ಯಾರ್ಥಿಗಳ ನಂಬಿಕೆ ಆಚರಣೆಗೆ ಅವಮಾನ ಮಾಡುವ ಸರಕಾರ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡುತ್ತಿದ್ದು ಈ ಮೂಲಕ ಸರಕಾರವೇ ಹಿಂದೂ ಸಮಾಜವನ್ನು ಕೆರಳಿಸಿ ಹೋರಾಟಕ್ಕೆ ಇಳಿಯುವಂತೆ ಪ್ರೇರೇಪಿಸುತ್ತಿದೆ ಎಂದು ಬಿಜೆಪಿ ಶಾಸಕ ಡಾ.ಭರತ್ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿಂದೂ ಸಂಪ್ರದಾಯ ಹಾಗೂ ನಂಬಿಕೆಗಳಿಗೆ ಸಂಬಂಧಿಸಿದ ಪ್ರತೀಕಗಳನ್ನು ಕಳಚಿಸುವುದು ವಿದ್ಯಾರ್ಥಿಗಳ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತದ್ದು. ಕಳೆದ ವರ್ಷವೂ ಇದೇ ರೀತಿಯ ಘಟನೆಗಳು ನಡೆದಿದ್ದರೂ ಸರ್ಕಾರ ಯಾವುದೇ ಪಾಠ ಕಲಿತಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಭೇದಭಾವ ಯಾಕೆ?

ಪರೀಕ್ಷೆಯ ಸಂದರ್ಭವನ್ನು ಒಂದು ವರ್ಗದ ತುಷ್ಟೀಕರಣಕ್ಕೆ ಬಳಸಿಕೊಳ್ಳುತ್ತಿರುವ ಕಾಂಗ್ರೆಸ್ ಸರಕಾರ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಿದೆ. ಪಾರದರ್ಶಕವಾಗಿ ಕಾಣುವ ಕಿವಿಯೋಲೆ, ಕರಿಮಣಿ, ಕೈದಾರಗಳನ್ನು ತೆಗೆಸುವ ಉದ್ದೇಶವೇನು? ಇದು ಸ್ಪಷ್ಟವಾಗಿ ಒಂದು ಸಮುದಾಯದ ವಿರುದ್ಧ ಭೇದಭಾವ ತೋರಿಸುವ ಕ್ರಮವಾಗಿದೆ ಎಂದು ಅವರು ಹೇಳಿದ್ದಾರೆ.



ಸರ್ಕಾರ ತಕ್ಷಣ ಈ ರೀತಿಯ ಕ್ರಮಗಳನ್ನು ನಿಲ್ಲಿಸಿ, ಎಲ್ಲಾ ವಿದ್ಯಾರ್ಥಿಗಳು ಶಾಂತಿ ಮತ್ತು ನೆಮ್ಮದಿಯಿಂದ ಪರೀಕ್ಷೆ ಬರೆಯುವಂತೆ ಸೂಕ್ತ ಮಾರ್ಗಸೂಚಿಗಳನ್ನು ಜಾರಿಗೆ ತರಬೇಕು ಎಂದು ಅವರು ಆಗ್ರಹಿಸಿದ್ದಾರೆ. ಇಲ್ಲವಾದರೆ, ಹಿಂದೂ ಸಮುದಾಯದ ಆಕ್ರೋಶ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಎಚ್ಚರಿಸಿದ್ದಾರೆ. ಈ ಘಟನೆ ರಾಜ್ಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಪರೀಕ್ಷಾ ನಿಯಮಗಳು ಹಾಗೂ ಸಮಾನತೆ ಕುರಿತಂತೆ ಹೊಸ ಚರ್ಚೆಗೆ ಕಾರಣವಾಗಿದ್ದು, ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಸರಕಾರ, ಮುಖ್ಯಮಂತ್ರಿ ಹಿಂದೂಗಳ ಕ್ಷಮೆ ಯಾಚಿಸಬೇಕು ಎಂದು ಶಾಸಕ ಭರತ್ ಶೆಟ್ಟಿ ಒತ್ತಾಯಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಡಿಕ್ಕಿ: ಟ್ರೇಲರ್ ಚಾಲಕ ಗಂಭೀರ

ಉಪ್ಪಿನಂಗಡಿ : ಹೆದ್ದಾರಿ ಬದಿ ಟ್ರೇಲರ್ ನಿಲ್ಲಿಸಿ ಅದರ ಟಯರ್ ಪರಿಶೀಲನೆಗಾಗಿ ಟ್ರೇಲರ್ ಹಿಂಬದಿ ನಿಂತಿದ್ದ ವೇಳೆ ಕಾರು ಡಿಕ್ಕಿಯಾಗಿ ಟ್ರೇಲರ್ ಸಹ ಚಾಲಕ ಗಂಭೀರ ಗಾಯಗೊಂಡ ಘಟನೆ ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಇಚ್ಲಂಪಾಡಿ ಗ್ರಾಮದ ಕೊರಮೇರು ಸಮೀಪ ಶುಕ್ರವಾರ ರಾತ್ರಿ ನಡೆದಿದೆ.

ಗಾಯಾಳುವನ್ನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಗಾಂಧಿನಗರದ ಸೀಬಿನಕೆರೆ ನಿವಾಸಿ ಶೇಖ್ ಬುಡಾನ್ (53.) ಎಂದು ಗುರುತಿಸಲಾಗಿದೆ. ಇವರು ಹಾಸನದಿಂದ ಸ್ಟೀಲ್ ರಾಡ್‌ಗಳನ್ನು ತುಂಬಿಸಿಕೊಂಡು ಮಂಗಳೂರಿನತ್ತ ಸಂಚರಿಸುತ್ತಿದ್ದ ವೇಳೆ ರಾತ್ರಿ 10.30ರ ಸುಮಾರಿಗೆ ಕೊರಮೇರು ತಲುಪಿದ್ದಾಗ , ರಸ್ತೆ ಬದಿ ಟ್ರೇಲರ್ ನಿಲ್ಲಿಸಿ ಟಯರ್ ಪರಿಶೀಲನೆಗಾಗಿ ಟ್ರೇಲರ್‌ನಿಂದ ಕೆಳಗಿಳಿದು ಟ್ರೇಲರ್‌ನ ಹಿಂಭಾಗದಲ್ಲಿ ನಿಂತಿದ್ದರು. ಈ ವೇಳೆ ಬೆಂಗಳೂರಿನಿಂದ ಮಂಗಳೂರಿಗೆ ಬರುತ್ತಿದ್ದ ಕಾರು ಚಾಲಕ ಮಂಗಳೂರು ನಿವಾಸಿ ಉದ್ಯಮಿ ರಂಜನ್ ಅವರ ನಿಯಂತ್ರಣ ತಪ್ಪಿ ಶೇಖ್ ಬುಡಾನ್ ಅವರಿಗೆ ಹಾಗೂ ಟ್ರೇಲರ್‌ನ ಹಿಂಭಾಗಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಶೇಖ್ ಬುಡಾನ್ ಅವರು ಗಂಭೀರವಾಗಿ ಗಾಯಗೊಂಡಿದ್ದು, ತಕ್ಷಣವೇ ಅವರನ್ನು ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದೆ. ಘಟನೆಯಲ್ಲಿ ಟ್ರೇಲರ್ ಹಾಗೂ ಕಾರು ಸಹ ಜಖಂಗೊಂಡಿದೆ. ಘಟನಾ ಸ್ಥಳಕ್ಕೆ ನೆಲ್ಯಾಡಿ ಹೊರಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಕುರಿತು ಟ್ರೇಲರ್ ಚಾಲಕ ಆರ್.ಎ.ಮಹಮ್ಮದ್ ನೀಡಿದ ದೂರಿನ ಮೇರೆಗೆ ಉಪ್ಪಿನಂಗಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕಿರುಸುದ್ದಿ

ಎಂಡಿಎಂಎ ಮಾರಾಟ: ಓರ್ವನ ಬಂಧನ

• **ಮಂಗಳೂರು:** ವೀರನಗರ ಪೇರ್ಲ ರಸ್ತೆಯಲ್ಲಿ ಸ್ಕೂಟರ್‌ನಲ್ಲಿ ಕುಳಿತು ಸಾರ್ವಜನಿಕರಿಗೆ ಎಂಡಿಎಂಎ ಮಾರಾಟ ಮಾಡಲು ಯತ್ನಿಸುತ್ತಿದ್ದ ಯುವಕನನ್ನು ಕಂಕನಾಡಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಗುಲ್ ಝುಹೀಮ್ ಬಂಧಿತ ಆರೋಪಿ. ಕಂಕನಾಡಿ ನಗರ ಠಾಣೆ ಪೊಲೀಸರು ಗಸ್ತು ಕರ್ತವ್ಯದಲ್ಲಿರುವಾಗ ಬಜಾಲ್ ವೀರ ನಗರ ಕಡೆಗೆ ಹೋಗುವ ಪೇರ್ಲ ರಸ್ತೆಯಲ್ಲಿ ಸ್ಕೂಟರ್‌ನಲ್ಲಿ ಕುಳಿತಿದ್ದಾತ ಪೊಲೀಸ್ ವಾಹನ ನೋಡಿ ಓಡಿ ಹೋಗಲು ಯತ್ನಿಸಿದ್ದಾನೆ. ಪೊಲೀಸರು ಆತನನ್ನು ಹಿಡಿದು, ಪರಿಶೀಲಿಸಿದಾಗ 65.78 ಗ್ರಾಂ ತೂಕದ, 6,57,800 ರೂ. ಅಂದಾಜು ಮೌಲ್ಯದ ಎಂಡಿಎಂಎ ಪತ್ತೆಯಾಗಿದೆ. ಜತೆಗೆ 25 ಸಣ್ಣ ಜಿಪ್ ಲಾಕ್ ಕವರ್‌ಗಳು, ಬ್ಯಾಟರಿ ಚಾಲಿತ ತೂಕ ಮಾಪನ ಯಂತ್ರ, ಇಲೆಕ್ಟ್ರಿಕ್ ಸ್ಕೂಟರ್ ಸೇರಿ 8,08,100 ರೂ. ಮೌಲ್ಯದ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿಚಾರಣೆ ವೇಳೆ ಬೆಂಗಳೂರಿನ ಅಪರಿಚಿತ ವ್ಯಕ್ತಿಯಿಂದ ವಾಣಿಜ್ಯ ಪ್ರಮಾಣದಲ್ಲಿ ಖರೀದಿಸಿಕೊಂಡು ಬಂದು ಮಾರಾಟ ಮಾಡುತ್ತಿದ್ದುದಾಗಿ ತಿಳಿಸಿದ್ದಾನೆ. ಆರೋಪಿ ವಿರುದ್ಧ ಕಂಕನಾಡಿ ನಗರ ಠಾಣೆಯಲ್ಲಿ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕೋಟ್ಯಂತರ ರೂ.ಗಳ ವಂಚನೆ: ತಲೆಮರೆಸಿಕೊಂಡಿದ್ದ ಇಬ್ಬರ ಸೆರೆ

• **ಕಾಸರಗೋಡು:** ಕೋಟ್ಯಂತರ ರೂಪಾಯಿ ವಂಚನೆ ನಡೆಸಿ ತಲೆಮರೆಸಿಕೊಂಡಿದ್ದ ಇಬ್ಬರನ್ನು ಬೇಡಗಂ ಪೊಲೀಸರು ಬಂಧಿಸಿದ್ದಾರೆ. ಬೇಡಗಂ ಪೊಲೀಸ್ ಠಾಣೆ, ಕೇರಳ ಹಾಗೂ ಹೊರ ರಾಜ್ಯಗಳ ಹಲವು ಪೊಲೀಸ್ ಠಾಣೆಗಳಲ್ಲಿ ಕೇಸು ದಾಖಲಾದ ಕುಳತ್ತುಪುಳ ನೆಲ್ಲಿಮೂಡ್ ಕಾಲಿಲ್ ವೀಟಿಲ್‌ನ ಶಿಬಾ ಎಸ್. (46) ಎಂಬಾಕೆಯನ್ನು ಕೊಲ್ಲಂ ಜಿಲ್ಲೆಯ ಪುನಲೂರು ವಿಲ್ಲೇಜ್ ಪತ್ತಡಿ ಎಂಬಲ್ಲಿಂದ ಹಾಗೂ ವೀಸಾ ವಂಚನೆ ಸಹಿತ ಹಲವು ಪ್ರಕರಣಗಳಲ್ಲಿ ಆರೋಪಿಯಾಗಿ ತಲೆಮರೆಸಿಕೊಂಡಿದ್ದ ಕುರಿಯನ್ ಮ್ಯಾಥ್ಯೂ (37) ಎಂಬಾತನನ್ನು ಕೋಟ್ಟಯಂ ಜಿಲ್ಲೆಯ ಮಣ್ಣಾರ್‌ಕ್ಕಾಡ್ ವಿಲ್ಲೇಜ್‌ನ ಮಾಲಂಕರ ಎಂಬಲ್ಲಿಂದ ಬಂಧಿಸಲಾಗಿದೆ. ಬೇಡಗಂ ಇನ್‌ಸ್ಪೆಕ್ಟರ್ ವಿನೋದ್ ಕುಮಾರ್‌ರವರ ನಿರ್ದೇಶ ಪ್ರಕಾರ ಗ್ರೇಡ್ ಸೀನಿಯರ್ ಸಿವಿಲ್ ಪೊಲೀಸ್ ಆಫೀಸ್ ರಜೀಶ್ ತಾರಂತಟ್ಟ, ಸಿವಿಲ್ ಪೊಲೀಸ್ ಆಫೀಸರ್ ಸಂದೀಪ್, ಮಹಿಳಾ ಸಿವಿಲ್ ಪೊಲೀಸ್ ಆಫೀಸರ್ ಅನಿತಾ ಎಂಬವರನ್ನೊಳಗೊಂಡ ತಂಡ ಆರೋಪಿಗಳನ್ನು ಬಂಧಿಸಿದೆ.


ಇಂದು ಹಿರಿಯ ನಾಟಕ ಕಲಾವಿದ ಕೆ.ಕೆ.ಗಟ್ಟಿ ಅವರಿಗೆ ತುಳು ಅಕಾಡೆಮಿಯ ಚಾವಡಿ ತಮ್ಮನ

• **ಮಂಗಳೂರು:** ಹಿರಿಯ ನಾಟಕ ಕಲಾವಿದ ಕೆ.ಕೆ.ಗಟ್ಟಿ ಅವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಚಾವಡಿ ತಮ್ಮನದ ಗೌರವ ಸಮರ್ಪಣೆ ಕಾರ್ಯಕ್ರಮ ಏ. 26ರಂದು ಸಂಜೆ 4.30 ಗಂಟೆಗೆ ಮಂಗಳೂರಿನ ಶರವು ಮಹಾಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಿದೆ.

ತುಳು ಅಕಾಡೆಮಿಯ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸುವರು. ಶ್ರೀ ಶರವು ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶರವು ರಾಘವೇಂದ್ರ ಶಾಸ್ತ್ರಿ ಚಾವಡಿ ಸನ್ಮಾನದ ಗೌರವ ಪ್ರದಾನ ಮಾಡುವರು. ಹಿರಿಯ ನಾಟಕ ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್‌ಬೈಲ್ ಅಭಿನಂದನಾ ಮಾತುಗಳನ್ನಾಡುವರು. ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಎ.ಸಿ.ಭಂಡಾರಿ , ಸೋಮೇಶ್ವರ ಶ್ರೀ ಸೋಮನಾಥ ಸೇವಾ ಸಮಿತಿಯ ಅಧ್ಯಕ್ಷ ಜಯರಾಮ ಗಟ್ಟಿ ಪಿಲಾರ್, ಶ್ರೀ ಸೋಮನಾಥ ಕಲಾಭೂಮಿಯ ಕಾರ್ಯದರ್ಶಿ ವಸಂತ ರೈ ಬಿ.ಕೆ. ಭಾಗವಹಿಸುವರು ಎಂದು ತುಳು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಸೈಂಟ್ ಮೇರಿಸ್ ಆಂಗ್ಲ ಮಾಧ್ಯಮ: ಶೇ.100ಫಲಿತಾಂಶ

• **ಬೆಳ್ತಂಗಡಿ:** ಇಲ್ಲಿನ ಸೈಂಟ್ ಮೆರೀಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದ್ದು, ಚಿರಾಗ್ ನಾಯಕ್ 622 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ 4ನೇ ಸ್ಥಾನ, ತಾಲೂಕಿಗೆ ಮತ್ತು ಶಾಲೆಗೆ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ್ದಾರೆ.



ವಿ. ತನುಷ್ ರೈ 616 ಅಂಕ ಪಡೆದಿದ್ದು, ಲೀನ್ ಮರಿಯ 608, ಮನಸ್ವಿ ಎಂ.ಕೆ.608, ಪ್ರಜ್ವಲ್ ಲಸ್ರಾದೋ 608ಅಂಕ ಪಡೆದಿದ್ದಾರೆ.

ಬೆಂಕಿ ಅವಘಡ

• **ಮೂಡುಬಿದಿರೆ:** ಪಾಲಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಡಂದಲೆ ಬಿ.ಟಿ.ರೋಡ್ ಎಂಬಲ್ಲಿ ಅರಣ್ಯ ಇಲಾಖೆಗೆ ಸೇರಿದ ಪ್ರದೇಶಕ್ಕೆ ಬೆಂಕಿ ಬಿದ್ದಿದೆ. ವಿದ್ಯುತ್ ತಂತಿ ತುಂಡಾಗಿ ಬಿದ್ದು ಈ ಅವಘಡ ಸಂಭವಿಸಿದೆ. ಅಗ್ನಿಶಾಮಕ ದಳ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವ ಕಾರ್ಯ ಮಾಡಿದ್ದಾರೆ. ಅರಣ್ಯದ ಕೆಲವು ಭಾಗಗಳು ಬೆಂಕಿಗೆ ಆಹುತಿಯಾಗಿವೆ.

ಪೆರಡಾಲ ಶ್ರೀಕ್ಷೇತ್ರದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂಭ್ರಮ

ಸಂಸ್ಕೃತಿ ರಕ್ಷಣೆಗೆ ಭಜನೆ ಸುಲಭ ಮಾರ್ಗ

• **ಬದಿಯಡ್ಕ:** ಕನ್ನಡ, ಮಲೆಯಾಳ ಮುಂತಾದ ಭಾಷೆಗಳಪ್ರಭಾವಇರುವಪ್ರದೇಶದಲ್ಲಿಶ್ರೇಷ್ಠವಾದ ಸಂಸ್ಕೃತಿಯು ಸಮೃದ್ಧವಾಗಿದೆ. ಪ್ರಾಚೀನತೆಗೆ ಧಕ್ಕೆ ಬಾರದಂತೆ ಅತ್ಯಂತ ಸುಂದರವಾಗಿ ಪೆರಡಾಲ ಕ್ಷೇತ್ರವು ನವೀಕರಣಗೊಂಡಿದೆ. ಪ್ರಕೃತಿಯನ್ನು ಉಳಿಸಿಕೊಂಡು ಉದನೇಶ್ವರನ ಆರಾಧನೆ ನಡೆಯುತ್ತಿರುವುದು ಅತ್ಯಂತ ಸಂತಸದ ವಿಚಾರ ಎಂದು ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಹಂಗಾರಕಟ್ಟೆ ಬಾಳೆಕುದ್ರು ಕದಳೀಪುರ ಶ್ರೀ ಮಠದ ಶ್ರೀ ವಾಸುದೇವ ಸದಾಶಿವಾಶ್ರಮ ಮಹಾಸ್ವಾಮಿಗಳು ನುಡಿದರು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ 9ನೇ ದಿನವಾದ ಶನಿವಾರ ನಡೆದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ಶಿವಪೂಜೆ ಎಂದರೆ ಸಮಸ್ತ ದೇವತೆಗಳ ಪೂಜೆಯಾಗಿದೆ. ಬೇರೆ ಬೇರೆ ವಿಚಿತ್ರ ರೀತಿಯ ಆಕ್ರಮಣಗಳು ನಮ್ಮ ಹಿಂದು ಸಮಾಜದ ಮೇಲೆ ನಡೆಯುತ್ತಿವೆ. ನಮ್ಮ ಸಂಸ್ಕೃತಿಯ ರಕ್ಷಣೆಗಾಗಿ ಪೂರ್ವಜರು ಹಾಕಿಕೊಟ್ಟ ಮಾರ್ಗವೇ ಧಾರ್ಮಿಕ ಕ್ಷೇತ್ರಗಳು. ಸಂಸ್ಕೃತಿಯ ರಕ್ಷಣೆಗೆ ಸುಲಭದ ಮಾರ್ಗವೇ ಭಜನೆ. ಸಮಸ್ತ ಹಿಂದು ಸಮಾಜದ ಮನೆಗಳಲ್ಲಿ ಭಜನೆ ನಿತ್ಯ ನಡೆಯುವಂತೆ ದೇವಸ್ಥಾನಗಳಿಂದ ಪ್ರೇರಣೆಯಾಗಬೇಕು ಎಂದರು.

ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು ಸಭಾಧ್ಯಕ್ಷತೆ ವಹಿಸಿದ್ದರು.

ಶ್ರೀನಿವಾಸನ್ ಪಯ್ಯನ್ನೂರು ಧಾರ್ಮಿಕ ಭಾಷಣ ಮಾಡಿ, ಈಶ್ವರ ಚೈತನ್ಯವನ್ನು ಕಂಡುಕೊಂಡವರು ಭಾರತೀಯರು. ಧರ್ಮದ



ವಿಚಾರಗಳನ್ನು ಮುಂದಿನ ಜನಾಂಗಕ್ಕೆ ಉಣಬಡಿಸುವ ಕಾರ್ಯದಲ್ಲಿ ನಾವೆಲ್ಲಾ ಜೊತೆಯಾಗಬೇಕು ಎಂದು ಆಶಿಸಿದರು.

ತಿರುಪತಿ ದೇವಾಲಯದ ಆಡಳಿತ ಮಂಡಳಿ ಸದಸ್ಯ ಎಸ್.ನರೇಶ್ ಕುಮಾರ್, ಸಿವಿಲ್ ಇಂಜಿನಿಯರ್ ಕಂದೇಲು ಮಹಾಲಿಂಗೇಶ್ವರ ಭಟ್, ಹಿರಿಯ ಧಾರ್ಮಿಕ ಮುಂದಾಳು ಮಧುಕರ ರೈ ಕೊರೆಕ್ಕಾನ, ವೇದ ಅಧ್ಯಾಪಕ ವೇದಮೂರ್ತಿ ಪಳ್ಳತ್ತಡ್ಕ ಶಂಕರನಾರಾಯಣ ಭಟ್, ಸ್ವದೇಶಿ ಕ್ಲಬ್ ಮತ್ತು ರೆಸಾರ್ಟ್ ನಿರ್ದೇಶಕಿ ಪದ್ಮಾವತಿ, ಬದಿಯಡ್ಕ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಎನ್.ಕೃಷ್ಣ ಭಟ್, ಲೆಕ್ಕ ಪರಿಶೋಧಕ ಈಶ್ವರ ಭಟ್ ಮಿತ್ತೂರು, ಡಾ.ಜಯಶಂಕರ ಮಾರ್ಲ ಕಡಾರುಬೀಡು ಮುಖ್ಯ ಅಭ್ಯಾಗತರಾಗಿ ಮಾತನಾಡಿದರು.

ಉದ್ಯಮಿ ರಮೇಶ್ ರಾವ್ ಕೆ., ಮೆಡಿಕಲ್ ಆಫೀಸರ್ ಡಾ.ಜನಾರ್ದನ ನಾಯ್ಕ ಕಾಸರಗೋಡು, ಉದ್ಯಮಿ ವಾಸ್ತವ ವಿಟ್ಲ, ನಿವೃತ್ತ ಬ್ಯಾಂಕ್ ಪ್ರಬಂಧಕ ಉದನೇಶ್ವರ ಪ್ರಸಾದ್ ಕೇಡಿಗುಮ್ಮೆ, ಶೀನಪ್ಪ ಆಳ್ವ ವಳಮಲೆ ಪೆರಡಾಲ, ರವಿಕುಮಾರ್ ರೈ ಪೆರಡಾಲಗುತ್ತು, ಕೃಷ್ಣಮೂರ್ತಿ ಮಾತೃಪ್ಪಾಡಿ, ವಿನಾಯಕ ರೈ ನೆಕ್ರಾಜೆ, ಬಿಂದು ಜಯದಾಸ್, ಕೃಷ್ಣ ತಲ್ಪಣಾಜೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಶಂಕರ ಸಾರಡ್ಕ ಕಾರ್ಯಕ್ರಮ ನಿರೂಪಿಸಿದರು. ಸಾಂಸ್ಕೃತಿಕ ಸಮಿತಿ ಉಪಾಧ್ಯಕ್ಷರಾದ ತಲ್ಪಣಾಜೆ ವೆಂಕಟ್ರಮಣ ಭಟ್ ಸ್ವಾಗತಿಸಿ, ಶಿವರಾಮ ಪಟ್ಟಾಜೆ ವಂದಿಸಿದರು.

ದೇವರಿಗೆ ಇಂದು ಬ್ರಹ್ಮಕಲಶಾಭಿಷೇಕ

• **ಬದಿಯಡ್ಕ:** ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ 10ನೇ ದಿನವಾದ ಏ.26 ರಂದು ಬೆಳಗ್ಗೆ ಶ್ರೀ ಉದನೇಶ್ವರ ದೇವರಿಗೆ ಸಹಸ್ರ ಕಲಶಾಭಿಷೇಕ, ಬ್ರಹ್ಮಕಲಶಾಭಿಷೇಕ ಕಾರ್ಯಕ್ರಮವು ವಿವಿಧ ವಿಧಿ ವಿಧಾನಗಳೊಂದಿಗೆ ಶ್ರದ್ಧಾಭಕ್ತಿಯಿಂದ ನೆರವೇರಲಿದೆ.



ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳ ನೇತೃತ್ವದಲ್ಲಿ ಶನಿವಾರ ಸಹಸ್ರ ಕಲಶ, ಬ್ರಹ್ಮಕಲಶ ಪೂಜೆ ನಡೆಯಿತು. ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ತತ್ವಹೋಮ, ಕುಂಭೇಶ ಕರ್ಕರಿ ಪೂಜೆ, ಅಂಕುರ ಪೂಜೆ, ಸೋಪಾನ ಪೂಜೆ, ಬ್ರಹ್ಮಕಲಶ ಪೂಜೆ, ಮಧ್ಯಾಹ್ನ ಸೋಪಾನ ಪೂಜೆ, ಅಂಕುರ ಪೂಜೆ, ಮಹಾಪೂಜೆ, ಸಂಜೆ ಪರಿಕಲಶ ಪೂಜೆ, ಅಧಿವಾಸ ಹೋಮ, ಅಧಿವಾಸ ಬಲಿ, ಕಲಶಾಧಿವಾಸ, ಸೋಪಾನ ಪೂಜೆ, ಮಹಾಬಲಿ ಪೀಠಾಧಿವಾಸ ಜರಗಿತು.

ಶ್ರೀ ಕ್ಷೇತ್ರದಲ್ಲಿ ಏ.26ರಂದು ಬೆಳಗ್ಗೆ 5 ಗಂಟೆಗೆ ಗಣಪತಿ ಹೋಮ, ಕವಾಟೋದ್ಘಾಟನೆ, ಶಾಂತಿ, ಪ್ರಾಯಶ್ಚಿತ್ತ ಮತ್ತು ತತ್ವ ಹೋಮಗಳ ಕಲಶಾಭಿಷೇಕ ನಡೆಯಲಿದೆ. ಜಗದ್ಗುರು ಶ್ರೀ ಶಂಕರಾಚಾರ್ಯ ಸಂಸ್ಥಾನಮ್ ಶ್ರೀ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಸಹಸ್ರ ಕಲಶಾಭಿಷೇಕ ಮತ್ತು ಬ್ರಹ್ಮಕಲಶಾಭಿಷೇಕ, ಅವಭೃತ ಪ್ರೋಕ್ಷಣೆ, ಮಹಾಪೂಜೆ, ಮಂಗಲ ಮಂತ್ರಾಕ್ಷತೆ, ಪ್ರಸಾದ ವಿತರಣೆ ಜರಗಲಿದೆ.

ಬೆಳಗ್ಗೆ 11.30ಕ್ಕೆ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಆಗಮನ, ಪೂರ್ಣಕುಂಭ ಸ್ವಾಗತ, ಆಶೀರ್ವಚನ ನಡೆಯಲಿದೆ. ರಾತ್ರಿ 7ರಿಂದ ಶ್ರೀ ದೇವರ ಉತ್ಸವ ಬಲಿ ನೆರವೇರಲಿದೆ.

ವಯೋಲಿನ್ ಫ್ಯೂಷನ್ ಗಂಗಾತರಂಗಮ್ ಶಿವಶಕ್ತಿ ಪೆರಡಾಲ ಪ್ರಾಯೋಜಕತ್ವದಲ್ಲಿ ಗಂಗಾ ಶಶಿಧರನ್ ತ್ರಿಶೂರು ಮತ್ತು ಬಳಗದ ವರಿಂದ ರಾತ್ರಿ 9 ಗಂಟೆಯಿಂದ ವಯೋಲಿನ್ ಫ್ಯೂಷನ್ ಗಂಗಾತರಂಗಮ್ ಜರಗಲಿದೆ.

ಭಾರತೀಯ ವೈದ್ಯಕೀಯ ಸಂಘ ಮಂಗಳೂರು ಶಾಖೆ

ಡಾ.ಎಂ.ಸುಧಾಕರ ಶೆಟ್ಟಿ ಸ್ಮಾರಕ ದತ್ತಿ ಉಪನ್ಯಾಸ

• **ಮಂಗಳೂರು:** ನಗರದ ಭಾರತೀಯ ವೈದ್ಯಕೀಯ ಸಂಘ ಮತ್ತು ಕೆನರಾ ಮೂಳೆ ಶಾಸ್ತ್ರ ತಜ್ಞರ ಸಂಘದ ಜಂಟಿ ಆಶ್ರಯದಲ್ಲಿ ಮಾನವೀಯ ಮೌಲ್ಯದ ಜೊತೆಗೆ ಅನುಪಮ ವೈದ್ಯಕೀಯ ಸೇವೆ ಸಲ್ಲಿಸಿ ನೂರಾರು ಪದವಿ ಪೂರ್ವ ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶ್ರೇಷ್ಠ ಮಟ್ಟದ ಶಿಕ್ಷಣ, ತರಬೇತಿ ಮಾರ್ಗದರ್ಶನ ನೀಡಿದ ನಗರದ ಹಿರಿಯ ಗುರು, ಕೀಲು ಮತ್ತು ಮೂಳೆ ಶಾಸ್ತ್ರ ತಜ್ಞ ಡಾ. ಎಂ. ಸುಧಾಕರ ಶೆಟ್ಟಿ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ ನಗರದ ಐ.ಎಂ.ಎ. ಡಾ. ಎ.ವಿ. ರಾವ್ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ನಗರದ ಕೆ.ಎಸ್. ಹೆಗ್ಡೆ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಸಂದೀಪ್ ರೈ ಮಾತನಾಡಿ, ದಿ. ಡಾ. ಎಂ. ಸುಧಾಕರ ಶೆಟ್ಟಿ ಅವರದ್ದು ವಿಶೇಷ ಸೇವಾ ಮನೋಭಾವದ ಗೌರವಾನ್ವಿತ ವ್ಯಕ್ತಿತ್ವ. ಕರ್ತವ್ಯ ನಿಷ್ಠೆ, ಸಮಯ ಪ್ರಜ್ಞೆ, ಶಿಸ್ತುಬದ್ಧತೆ, ವಿದ್ಯಾರ್ಥಿಗಳಿಗೆ ಧಾರೆ ಎರೆದ ಮೌಲ್ಯಧಾರಿತ ಶಿಕ್ಷಣದ ಮೂಲಕ ರೋಗಿಗಳ ಮತ್ತು ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾಗಿದ್ದರು. ಅವರ ವ್ಯಕ್ತಿತ್ವ ಯುವ ವೈದ್ಯರಿಗೆ ಮಾದರಿ ಎಂದರು.



ಭಾರತೀಯ ವೈದ್ಯಕೀಯ ಸಂಘದ ಮಾಜಿ ಅಧ್ಯಕ್ಷ ಕೆ.ಆರ್. ಕಾಮತ್ ಅವರು ಡಾ. ಶೆಟ್ಟಿಯವರ ಸಲ್ಲಿಸಿದ ನಿಸ್ವಾರ್ಥ ಮತ್ತು ಪ್ರಾಮಾಣಿಕ ಸುದೀರ್ಘ ವೈದ್ಯಕೀಯ, ಶೈಕ್ಷಣಿಕ ಸೇವೆ ಮತ್ತು ಸಾಧನೆ ಮತ್ತು ಪಡೆದ ಪ್ರಶಸ್ತಿಗಳ ಬಗ್ಗೆ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಮಂಗಳೂರು ಕೆ.ಎಸ್. ಹೆಗ್ಡೆ ವೈದ್ಯಕೀಯ ಕಾಲೇಜಿನ ಶಸ್ತ್ರಚಿಕಿತ್ಸಾ ತಜ್ಞ ಡಾ. ರಾಜೇಶ್ ಬಲ್ಲಾಳ್, ವೈದ್ಯಕೀಯ ವೃತ್ತಿಯಲ್ಲಿ ನೈತಿಕತೆ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಇತ್ತೀಚಿನ ಬೆಳವಣಿಗೆ ಬಗ್ಗೆ ದತ್ತಿ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಸದಾನಂದ ಪೂಜಾರಿ ಸ್ವಾಗತಿಸಿದರು. ಕೋಶಾಧಿಕಾರಿ ಡಾ. ಜೂಲಿಯಾನ ಸಲ್ಡಾನ, ಕೆನರಾ ಮೂಳೆ ತಜ್ಞರ ಸಂಘದ ಉಪಾಧ್ಯಕ್ಷ ಡಾ. ವಿಕ್ರಂ ಭಟ್ ಉಪಸ್ಥಿತರಿದ್ದರು.

ಸಂಸ್ಥೆಯ ಚುನಾಯಿತ ಅಧ್ಯಕ್ಷ ಉಲ್ಲಾಸ್ ಶೆಟ್ಟಿ ನಿರೂಪಿಸಿದರು. ಡಾ. ಪ್ರಕಾಶ್ ಹರಿಶ್ಚಂದ್ರ ವಂದಿಸಿದರು.

ಸಂಸ್ಕೃತ ಪ್ರಬೋಧನ ವರ್ಗದ ಸಮಾರೋಪದಲ್ಲಿ ಪ್ರೊ. ಎಂ.ಬಿ. ಪುರಾಣಿಕ್

ವಿದೇಶಿಗರ ಸಂಸ್ಕೃತಾಸಕ್ತಿ ಶ್ಲಾಘನಾರ್ಹ

• **ಉಳ್ಳಾಲ:** ಸ್ವಾತಂತ್ರ್ಯದ ಬಳಿಕ ನಿಧಾನಗತಿಯಲ್ಲಿ ಬೆಳೆದಿದ್ದ ಸಂಸ್ಕೃತ ನಂತರದ ದಿನಗಳಲ್ಲಿ ವೇಗವಾಗಿ ವ್ಯಾಪಿಸಿದೆ. ಭಾರತ ದೇಶ ಮಾತ್ರವಲ್ಲದೆ ವಿದೇಶಿಗರೂ ಸಹ ಸಂಸ್ಕೃತ ಕಲಿಯಲು ಉತ್ಸುಕರಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆಯೆಂದು ಶಾರದಾಸಮೂಹಸಂಸ್ಥೆಗಳಸಂಸ್ಥಾಪಕಪ್ರೊ. ಎಂ.ಬಿ.ಪುರಾಣಿಕ್ ಅಭಿಪ್ರಾಯಪಟ್ಟರು.

ಸಂಸ್ಕೃತ ಭಾರತೀ ಕರ್ನಾಟಕ ದಕ್ಷಿಣ ವತಿಯಿಂದ ತಲಪಾಡಿಯ ದೇವಿನಗರದ ಶಾರದಾ ನಿಕೇತನದಲ್ಲಿ ನಡೆದ ಏಳು ದಿನಗಳ ಸಂಸ್ಕೃತ ಪ್ರಬೋಧನವರ್ಗದ ಪ್ರಯುಕ್ತ ಶನಿವಾರದಂದು ನಡೆದ ಸಮಾರೋಪ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು.

ಹದಿಮೂರು ಸಾವಿರ ವರುಷದ ಹಿಂದೆ ಜಗತ್ತಿನ ಯಾವ ಭಾಷೆಯನ್ನೂ ಸಹಲಿಖಿತರೂಪದಲ್ಲಿದಾಖಲೀಕರಿಸಲು ಸಾಧ್ಯವಾಗದ ಸಂದರ್ಭದಲ್ಲಿ ಸಂಸ್ಕೃತ ಭಾಷೆಯನ್ನು ಮಾತ್ರ ಲಿಖಿತ ರೂಪದಲ್ಲಿ ದಾಖಲಿಸಲು ಸಾಧ್ಯವಾಗಿದೆ.



ಜಗತ್ತಲ್ಲಿ ಈಗ ವ್ಯಾಪಕವಾಗಿ ಸಂಸ್ಕೃತ ಬೆಳೆಯುತ್ತಿದೆ. ನಮ್ಮ ಶಾಲೆಯಲ್ಲೂ ಆಧುನಿಕತೆಯೊಂದಿಗೆ ಸಂಸ್ಕೃತವನ್ನೂ ಕಲಿಸಿ ಮಕ್ಕಳಲ್ಲಿ ಸಂಸ್ಕೃತ ಭಾಷೆಯ ಆಸಕ್ತಿ ಹುಟ್ಟಿಸಲಾಗಿದೆ. ಈ ಮೂಲಕ ಸಂಸ್ಕೃತವನ್ನು ಬೆಳೆಸುವ ಅವಕಾಶ ನಮಗೂ ಲಭಿಸಿದಂತಾಗಿದೆಯೆಂದರು. ತಮ್ಮ ವಿದ್ಯಾ ಸಂಸ್ಥೆಯಲ್ಲಿ ಪ್ರಬೋಧನ ವರ್ಗ ಸಂಯೋಜಿಸಿ ಸಂಸ್ಕೃತ ಮಾತೆಯ ಸೇವೆ ಮಾಡಲು ಅವಕಾಶ ಕೊಟ್ಟ ಸಂಸ್ಕೃತ ಭಾರತೀ ಸಂಸ್ಥೆಗೆ ಕೃತಜ್ಞತೆಯನ್ನು ಅವರು ಸಲ್ಲಿಸಿದರು.

ಶಿಬಿರಾರ್ಥಿಗಳು ವೇದಿಕೆಯಲ್ಲಿ ತಮ್ಮ ಅನುಭವ ಹಂಚಿಕೊಂಡರು. ಬಳಿಕ ಸಮೂಹ ಸಂಸ್ಕೃತ ಗೀತೆಯನ್ನು ಹಾಡಲಾಯಿತು.

ಸಂಸ್ಕೃತ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ ಮಂತ್ರಿಯಾದ ಸಂತೋಷ್ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ಭಾರತೀ ಕರ್ನಾಟಕ ಪ್ರಾಂತ ಸಂಘಟನಾ ಮಂತ್ರಿ ಲಕ್ಷ್ಮೀನಾರಾಯಣ, ಶಿಬಿರಾಧಿಕಾರಿ ಯು.ಎಲ್.ಹೆಗ್ಡೆ ಉಪಸ್ಥಿತರಿದ್ದರು.

ಶಿಬಿರಾರ್ಥಿಗಳಾದ ಜಯಶ್ರೀ ಸ್ವಾಗತಿಸಿದರು. ಶ್ರೀಪ್ರಿಯಾ ಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಸಂಸ್ಕೃತ ಭಾರತಿ ದಕ್ಷಿಣ ಪ್ರಾಂತ ಸಹ ಮಂತ್ರಿ ಸತ್ಯನಾರಾಯಣ ಕೆ.ವಿ. ವಂದಿಸಿದರು.

ವೈದ್ಯಕೀಯ ನಾವೀನ್ಯತೆಯ ಪ್ರಯಾಣದಲ್ಲಿ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದ ತುಂಬೆ ಹೆಲ್ತ್‌ಕೇರ್

ಹೈಪರ್ಬಾರಿಕ್ ಆಕ್ಸಿಜನ್ ಥೆರಪಿ, ರಾಯಲ್ ಪ್ರೆಸಿಡೆನ್ಷಿಯಲ್ ಸೂಟ್ ಆರಂಭ

• **ಮಂಗಳೂರು:** ತುಂಬೆ ಹೆಲ್ತ್‌ಕೇರ್ ತನ್ನ ವೈದ್ಯಕೀಯ ನಾವೀನ್ಯತೆಯ ಪ್ರಯಾಣದಲ್ಲಿ ಒಂದು ಮಹತ್ವದ ಮೈಲಿಗಲ್ಲನ್ನು ದಾಖಲಿಸಿದೆ. ಅಜ್ಮಾನ್‌ನ ಅಲ್‌ಜುರ್ಫ್‌ನಲ್ಲಿರುವ ತುಂಬೆ ಮೆಡಿಸಿಟಿಯಲ್ಲಿ ಎರಡು ಪ್ರಮುಖ ಸೌಲಭ್ಯಗಳನ್ನು – ಅತ್ಯಾಧುನಿಕ ಹೈಪರ್ಬಾರಿಕ್ ಬಾರಿಕ್ ಆಕ್ಸಿಜನ್ ಥೆರಪಿ ಘಟಕ ಮತ್ತು ಅಲ್ಟ್ರಾ- ಪ್ರೀಮಿಯಂ ರಾಯಲ್ ಪ್ರೆಸಿಡೆನ್ಷಿಯಲ್ ಸೂಟ್‌ಗಳನ್ನು ಉದ್ಘಾಟಿಸಲಾಯಿತು.

ಉದ್ಘಾಟನಾ ಸಮಾರಂಭದಲ್ಲಿ ಎಮಿರೇಟ್ಸ್ ಹೆಲ್ತ್ ಸರ್ವಿಸಸ್‌ನ ಉಪಾಧ್ಯಕ್ಷ ಯೂಸುಫ್ ಮೊಹಮ್ಮದ್ ಅಲಿ ಅಲ್ ನುವಾಮಿ ಅವರು ಉಪಸ್ಥಿತರಿದ್ದು, ಎರಡೂ ಸೌಲಭ್ಯಗಳನ್ನು ಅಧಿಕೃತವಾಗಿ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅಲ್ ನುವಾಮಿ ಅವರು, ಯುಎಇಯ ಆರೋಗ್ಯ ಮತ್ತು ಶಿಕ್ಷಣ



ಕ್ಷೇತ್ರಕ್ಕೆ ತುಂಬೆ ಸಮೂಹವು ನೀಡುತ್ತಿರುವ ಕೊಡುಗೆಗಳನ್ನು ಶ್ಲಾಘಿಸಿದರು. ದೇಶಾದ್ಯಂತ ರೋಗಿಗಳ ಆರೈಕೆಯ ಗುಣಮಟ್ಟವನ್ನು ಸತತವಾಗಿ ಮೇಲ್ದರ್ಜೆಗೇರಿಸುತ್ತಿರುವ ಸಮೂಹವನ್ನು ಅವರು ಅಭಿನಂದಿಸಿದರು. ತುಂಬೆ ಗ್ರೂಪ್‌ನ ಹೆಲ್ತ್‌ಕೇರ್ ವಿಭಾಗದ ಉಪಾಧ್ಯಕ್ಷ ಅಕ್ಬರ್ ಮೊಯಿದ್ದೀನ್ ತುಂಬೆ ಮಾತನಾಡಿ, ಯುಎಇಯ ಅತಿದೊಡ್ಡ ಖಾಸಗಿ ಶೈಕ್ಷಣಿಕ ಆರೋಗ್ಯ ಸೇವಾ ಜಾಲಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿರುವ ತುಂಬೆ ಹೆಲ್ತ್‌ಕೇರ್, ತನ್ನ ಪರಿಸರ ವ್ಯವಸ್ಥೆಯಾದ್ಯಂತ ಶಿಕ್ಷಣ, ಸಂಶೋಧನೆ ಮತ್ತು ವೈದ್ಯಕೀಯ ಸೇವೆಗಳನ್ನು ಸಂಯೋಜಿಸುವುದನ್ನು ಮುಂದುವರೆಸಿದೆ. ಈ ಹೊಸ ಸೌಲಭ್ಯಗಳ ಸೇರ್ಪಡೆಯು ಈ ಪ್ರದೇಶದಲ್ಲಿ ಸುಧಾರಿತಚಿಕಿತ್ಸೆ ಮತ್ತು ಪ್ರೀಮಿಯಂ ಆರೋಗ್ಯ ಸೇವೆಗಳಿಗೆ ಪ್ರಮುಖತಾಣವಾಗಿ ತುಂಬೆ ಮೆಡಿಸಿಟಿಯ ಸ್ಥಾನವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದರು. ತುಂಬೆ ಗ್ರೂಪ್‌ನ ಹೆಲ್ತ್‌ಕೇರ್ ವಿಭಾಗದ ಉಪಾಧ್ಯಕ್ಷ ಅಕ್ಬರ್ ಮೊಯಿದ್ದೀನ್ ತುಂಬೆ ಅವರು ನೂತನ ಸೌಲಭ್ಯಗಳ ವಿವರ ನೀಡಿದರು.

ತುಂಬೆ ಹೆಲ್ತ್‌ಕೇರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.thumbayuniversity-hospital.com ಭೇಟಿ ನೀಡಬಹುದು.

ವಿಶೇಷವಾದ ಚಿಕಿತ್ಸಾ ಆಯ್ಕೆ

ತುಂಬೆ ಫಿಸಿಕಲ್ ಥೆರಪಿ ಮತ್ತು ರಿಹ್ಯಾಬಿಲಿಟೇಶನ್ ಆಸ್ಪತ್ರೆಯಲ್ಲಿ ಹೊಸದಾಗಿ ಪ್ರಾರಂಭಿಸಲಾದ ಘಟಕವು ಈ ಪ್ರದೇಶಕ್ಕೆ ಅತ್ಯಂತ ವಿಶೇಷವಾದ ಚಿಕಿತ್ಸಾ ಆಯ್ಕೆಯನ್ನು ಪರಿಚಯಿಸುತ್ತದೆ. ಹೈಪರ್ಬೇರಿಕ್ ಆಕ್ಸಿಜನ್ ಥೆರಪಿಯನ್ನು ದೀರ್ಘಕಾಲದ ಗಾಯಗಳು, ಮಧುಮೇಹದ ಪಾದದ ಹುಣ್ಣುಗಳು, ಶಸ್ತ್ರಚಿಕಿತ್ಸೆಯ ನಂತರದ ಚೇತರಿಕೆ ಮತ್ತು ವಿಕಿರಣದ ಗಾಯಗಳಂತಹ ಸಂದರ್ಭಗಳಲ್ಲಿ ಗುಣಪಡಿಸುವಿಕೆಯನ್ನು ವೇಗಗೊಳಿಸಲು ವ್ಯಾಪಕವಾಗಿ ಬಳಸಲಾಗುತ್ತದೆ. ಪಾರ್ಶ್ವವಾಯು, ಆಘಾತಕಾರಿ ಮಿದುಳಿನ ಗಾಯ, ಬೆನ್ನುಮೂಳೆಯ ಗಾಯಗಳು ಮತ್ತು ಸೆರೆಬ್ರಲ್ ಪಾಲ್ಸಿ ಸೇರಿದಂತೆ ನರವೈಜ್ಞಾನಿಕ ಪರಿಸ್ಥಿತಿಗಳನ್ನು ನಿರ್ವಹಿಸುವಲ್ಲಿಯೂ ಇದನ್ನು ಹೆಚ್ಚಾಗಿ ಬಳಸಲಾಗುತ್ತಿದೆ.

ಮಾದಕ ವಸ್ತು ಸೇವನೆ: ಮೂವರ ಬಂಧನ

• **ಮಂಗಳೂರು:** ಕುಂಟಿಕಾನ ಬಸ್ಸು ತಂಗುದಾಣದ ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವನೆ ಮಾಡಿದ್ದ ಆರೋಪದಡಿ ಮೂವರನ್ನು ಕಾವೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಯೆಯ್ಯಾಡಿ ಪದವು ಗುಂಡಳಿಕೆ ನಿವಾಸಿ ಅಭಿರಾಜ್ (38), ಸುಳ್ಯ ಐವರ್ನಾಡು ನಿವಾಸಿ ಎನ್.ಬಿ. ಲೋಕೇಶ್ (19), ಮೂಲ್ಕಿ ಕಾರ್ನಾಡು ನಿವಾಸಿ ಅರವಿಂದ್ (33) ಬಂಧಿತ ಆರೋಪಿಗಳು. ಪೊಲೀಸರು ಗಸ್ತಿನಲ್ಲಿದ್ದಾಗ ಮಾದಕ ವಸ್ತು ಸೇವನೆ ಮಾಡಿದಂತೆ ಕಂಡು ಬಂದ ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ಮಾದಕ ವಸ್ತು ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಆರೋಪಿಗಳು ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಮೂವರು ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಕ್ಷಿಣ ಕನ್ನಡ ಸಹಕಾರಿ ನೌಕರರ ಸಹಕಾರ ಸಂಘದ ಸಾಧನೆಯ ಮೈಲಿಗಲ್ಲು | 95 ವರ್ಷಗಳ ಇತಿಹಾಸದಲ್ಲಿ ಅತ್ಯಂತ ದೊಡ್ಡ ಸಾಧನೆ

ರೂ.108 ಕೋಟಿ ಠೇವಣಿ, ರೂ.1.09 ಕೋಟಿ ಲಾಭ

• **ಮಂಗಳೂರು:** ಸಹಕಾರ ರಂಗದ ಅಗ್ರಗಣ್ಯ ನಾಯಕರಾದ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರಕುಮಾರ್ ಅವರ ಸೂಕ್ತ ಮಾರ್ಗದರ್ಶನದಲ್ಲಿ ಅಭಿವೃದ್ಧಿಯ ಪಥದಲ್ಲಿರುವ ದಕ್ಷಿಣ ಕನ್ನಡ ಸಹಕಾರಿ ನೌಕರರ ಸಹಕಾರ ಸಂಘವು ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಗುರುತನ್ನು ಮೂಡಿಸಿ, 2025-26ನೇ ಆರ್ಥಿಕ ವರ್ಷದಲ್ಲಿ ರೂ.1.09 ಕೋಟಿ ಲಾಭಗಳಿಸಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದೆ ಎಂದು ಸಂಘದ ಅಧ್ಯಕ್ಷ ಎಸ್. ಜಗದೀಶ್ಚಂದ್ರ ಅಂಚನ್ ತಿಳಿಸಿದ್ದಾರೆ.



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ನೌಕರರು ತಮ್ಮ ಆರ್ಥಿಕ ಬಲವರ್ಧನೆಗಾಗಿ ಸ್ಥಾಪಿಸಿದ ದಕ್ಷಿಣ ಕನ್ನಡ ಸಹಕಾರಿ ನೌಕರರ ಸಹಕಾರಿ ಸಂಘವು ಇದೀಗ 95 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಆರಂಭಿಕ 71 ವರ್ಷಗಳ ಕಾಲ ಅರೆಕಾಲಿಕವಾಗಿ ಕಾರ್ಯನಿರ್ವಹಿಸಿದ್ದ ಸಂಘವು 2001ರವರೆಗೆ ಕೇವಲ ರೂ. 3.84 ಲಕ್ಷ ಠೇವಣಿ ಹಾಗೂ ರೂ. 3.13 ಲಕ್ಷ ಮುಂಗಡದೊಂದಿಗೆ ಕಾರ್ಯನಿರ್ವಹಿಸು ತ್ತಿತ್ತು. ಆದರೆ, ಕಳೆದ 25 ವರ್ಷಗಳಲ್ಲಿ ಸಂಘವು ಅದ್ಭುತ ಬೆಳವಣಿಗೆಯನ್ನು ಕಂಡು, ಇಂದು ಸಹಕಾರಿ ನೌಕರರ ಆರ್ಥಿಕ ಶಕ್ತಿಯಾಗಿ ರೂಪಾಂತರಗೊಂಡಿದೆ ಎಂದರು.

ರೂ.100 ಕೋಟಿ ದಾಟಿದ ಠೇವಣಿ

ಏಪ್ರಿಲ್ -25ರಂದು ನಡೆದ ಸಂಘದ ಸಭೆಯಲ್ಲಿ ಪ್ರಕಟಿಸಿದ ಆರ್ಥಿಕ ತಖ್ತೆಯ ಪ್ರಕಾರ , 2024-25ರ ಆರ್ಥಿಕ ವರ್ಷದಲ್ಲಿ ರೂ.94.33 ಕೋಟಿ ಠೇವಣಿ ಹೊಂದಿದ್ದ ಸಂಘವು 2025-26ರ ಆರ್ಥಿಕ ವರ್ಷದಲ್ಲಿ ರೂ. 100 ಕೋಟಿಗಳ ಮೈಲಿಗಲ್ಲನ್ನು ದಾಟಿ ರೂ.108.10 ಕೋಟಿ ಠೇವಣಿಯನ್ನು ಹೊಂದಿದೆ.ಇದು ಸಂಘದ 95 ವರ್ಷಗಳ ಇತಿಹಾಸದಲ್ಲಿ ಅತ್ಯಂತ ದೊಡ್ಡ ಸಾಧನೆ. ಠೇವಣಿ ಸಂಗ್ರಹಣೆಯ ಜೊತೆಗೆ ಸಾಲ ಮುಂಗಡದಲ್ಲೂ ಏರಿಕೆಯಾಗಿದ್ದು ರೂ.82.91 ಕೋಟಿಯಿಂದ ವರದಿ ವರ್ಷದಲ್ಲಿ ರೂ.91.91 ಕೋಟಿಗೆ ಏರಿಕೆಯಾಗಿದೆ. ಹಾಗೆಯೇ ಸಂಘದ ಒಟ್ಟು ವ್ಯವಹಾರವೂ ಕೂಡಾ ವರದಿ ವರ್ಷದಲ್ಲಿದ್ದ ರೂ.177.23 ಕೋಟಿಯಿಂದ ಇದೀಗ ರೂ.200.01 ಕೋಟಿಗೆ ವೃದ್ಧಿಯಾಗಿದೆ. ಇದು ಸಂಘದ ಸ್ಥಿರತೆ ಮತ್ತು ಸದಸ್ಯರ ವಿಶ್ವಾಸವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ ಎಂದರು.


ಅಭಿವೃದ್ಧಿಯ ಮುಂಚೂಣಿಯಲ್ಲಿ...

ಸಂಘವು ಪ್ರಸ್ತುತ 1140 'ಎ' ತರಗತಿ ಸದಸ್ಯರನ್ನು ಹೊಂದಿದ್ದು, ಅವರ ಬೆಂಬಲವೇ ಸಂಘದ ಪ್ರಗತಿಯ ಮೂಲವಾಗಿದೆ. ಸಂಘವು 2024-25ನೇ ಸಾಲಿನಲ್ಲಿ ರೂ.95.32 ಲಕ್ಷ ಲಾಭ ಗಳಿಸಿತ್ತು. ಇದೀಗ 2025-26ನೇ ಸಾಲಿನಲ್ಲಿ ರೂ.108.10ಕೋಟಿ ಲಾಭ ಗಳಿಸಿ ಸಾಧನೆಯ ಪಥವನ್ನು ಕಂಡಿದೆ. ಸಂಘವು 29.12 ಲಕ್ಷ ಪಾಲು ಬಂಡವಾಳವನ್ನು ಹೊಂದಿದ್ದು, ರೂ. 6.31 ಕೋಟಿ ವಿವಿಧ ನಿಧಿಗಳನ್ನು ಹೊಂದಿದೆ. ಸಂಘಕ್ಕೆ ಸಹಕಾರಿ ನೌಕರ ಸದಸ್ಯರೇ ಜೀವಾಳ ಆಗಿದ್ದು, ಸಂಘದ ವ್ಯವಹಾರ ಅಭಿವೃದ್ಧಿಯಲ್ಲಿ ಸದಸ್ಯರೆಲ್ಲರ ಬೆಂಬಲ, ಪ್ರೋತ್ಸಾಹ , ಸಿಬ್ಬಂದಿಗಳ ಪ್ರಾಮಾಣಿಕ ಸೇವೆ ಹಾಗೂ ಆಡಳಿತ ಮಂಡಲಿಯ ನಿರ್ದೇಶಕರೆಲ್ಲರ ಸಂಘಟಿತ ಕಾರ್ಯ ನಿರ್ವಹಣೆಯಿಂದ ಸಂಘವು ಅಭಿವೃದ್ಧಿಯ ಮುಂಚೂಣಿಯಲ್ಲಿದೆ ಎಂದು ಎಸ್.ಜಗದೀಶ್ಚಂದ್ರ ಅಂಚನ್ ತಿಳಿಸಿದ್ದಾರೆ.

ಸಂಘವು ಮಂಗಳೂರು ನಗರದ ಕೊಡಿಯಾಲ್‌ಬೈಲ್‌ನಲ್ಲಿ ಮೂರು ಮಹಡಿಯ ಸುಸಜ್ಜಿತ 'ಉನ್ನತಿ' ಸ್ವಂತ ಆಡಳಿತ ಕಟ್ಟಡವನ್ನು ಹೊಂದಿದೆ . ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಘವು ಈಗಾಗಲೇ ನಾಲ್ಕು ಶಾಖೆಗಳನ್ನು ಹೊಂದಿದ್ದು , ಈ ಪೈಕಿ ಮಂಗಳೂರುನಲ್ಲಿ ಎರಡು , ಉಡುಪಿ ಹಾಗೂ ಪುತ್ತೂರುನಲ್ಲಿ ತಲಾ ಒಂದು ಶಾಖೆ ಕಾರ್ಯ ನಿರ್ವಹಿಸುತ್ತಿದೆ. ಸಂಘದ ಪ್ರಗತಿಯನ್ನು ಗುರುತಿಸಿ ಎಸ್‌ಸಿಡಿಸಿಸಿ ಬ್ಯಾಂಕ್ ನೀಡುವ ಪ್ರತಿಷ್ಠಿತ ಸಾಧನಾ ಪ್ರಶಸ್ತಿಯನ್ನು ಸಂಘವು ಸತತ 8 ಬಾರಿ (2017-18 ರಿಂದ 2024-25) ಪಡೆದುಕೊಂಡಿದೆ. ಇದು ಸಂಘದ ಸ್ಥಿರ ಸಾಧನೆಗೆ ಸಾಕ್ಷಿಯಾಗಿದೆ ಎಂದು ಎಸ್. ಜಗದೀಶ್ಚಂದ್ರ ಅಂಚನ್ ತಿಳಿಸಿದ್ದಾರೆ.

ಸಂಘದ ಸಭೆಯಲ್ಲಿ ಉಪಾಧ್ಯಕ್ಷರಾದ ರಾಘವ ಆರ್ ಉಚ್ಚಿಲ್, ನಿರ್ದೇಶಕರುಗಳಾದ ದಿವಾಕರ ಶೆಟ್ಟಿ ಕೆ, ವಿಶ್ವೇಶ್ವರ ಐತಾಳ್ , ಜಯಪ್ರಕಾಶ್ ರೈ ಸಿ, ಗಿರಿಧರ್ ಕೆ, ವಿಶ್ವನಾಥ ಕೆ ಟಿ, ಶಿವಾನಂದ ಪಿ, ಚಂದ್ರಕಲಾ ಕೆ., ಮೋಹನ್ ಎನ್ , ವಿಶ್ವನಾಥ್ ಎನ್. ಅಮೀನ್ , ಗೀತಾಕ್ಷಿ , ಕಿರಣ್ ಕುಮಾರ್ ಶೆಟ್ಟಿ , ನಿರಿತಾ ಜಯರಾಮ್, ಪ್ರೇಮ್ ರಾಜ್ ಭಂಡಾರಿ ಹಾಗೂ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಸತೀಶ್ ಪೂಜಾರಿ ಉಪಸ್ಥಿತರಿದ್ದರು.

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
11
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಭಾನುವಾರ, 26 ಏಪ್ರಿಲ್ 2026
ಮಂಗಳೂರು



ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ವೈಭವ್ (ಆರ್‌ಆರ್) 357 ರನ್	ಅನ್ಶುಲ್ (ಚೆನ್ನೈ) 14 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	7	5	2	0	10	+1.101
ರಾಜಸ್ಥಾನ	7	5	2	0	10	+0.790
ಹೈದರಾಬಾದ್	7	4	3	0	8	+0.820
ಚೆನ್ನೈ	7	3	4	0	6	+0.118
ದಿಲ್ಲಿ	7	3	4	0	6	-0.184
ಗುಜರಾತ್	7	3	4	0	6	-0.790
ಮುಂಬೈ	7	2	5	0	4	-0.736
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

265 ರನ್ ಗುರಿ ಪೇರಿಸಿದ ಶ್ರೇಯಸ್ ಪಡೆ

ಪಂಜಾಬ್ ಕಿಂಗ್ಸ್



ದಾಖಲೆಗಳು

- ಒಟ್ಟು ರನ್ 529 ರನ್ ಮೂಡಿಬಂದವು, ಇದು ಟಿ20 ಕ್ರಿಕೆಟ್‌ನಲ್ಲೇ ಹೆಚ್ಚು.
- ಪವರ್‌ಪ್ಲೇನಲ್ಲಿ ಪಂಜಾಬ್ 116 ರನ್ ಗಳಿಸಿತು. ಇದು ಐಪಿಎಲ್‌ನ ಎರಡನೇ ಗರಿಷ್ಠ
- ಪಂಜಾಬ್ 265 ರನ್ ಗುರಿ ಪೇರಿಸಿತು. ಇದು ಐಪಿಎಲ್‌ನ ಎರಡನೇ ಅತಿ ಹೆಚ್ಚು ರನ್ ಚೇಸ್
- ರಾಹುಲ್-ನಿತೀಶ್ ನಡುವೆ 220 ರನ್ ಜೊತೆಯಾಟ

ಹೊಸದಿಲ್ಲಿ: ಐಪಿಎಲ್ ಇತಿಹಾಸದಲ್ಲಿ ಎಂದೆಂದಿಗೂ ನೆನಪಿಡಲೇಬೇಕಾದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಬರೋಬ್ಬರಿ 265 ರನ್ ಗುರಿ ಮುಟ್ಟಿ ದಾಖಲೆಯ ಗೆಲುವು ಸಾಧಿಸಿದೆ.

ದಿಲ್ಲಿ ಕ್ಯಾಪಿಟಲ್ಸ್ ಕೊಟ್ಟಿದ್ದ 265 ರನ್ ಗುರಿಯನ್ನು ಪಂಜಾಬ್ 7 ಎಸೆತ ಉಳಿದಿರುವಂತೆ ಪೇರಿಸಿ 6 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ತನ್ನದೇ ಅತಿ ಹೆಚ್ಚು ರನ್ ಚೇಸ್ ಮಾಡಿದ ದಾಖಲೆ ಮುರಿದ ಕಿಂಗ್ಸ್, ಅಂಕಪಟ್ಟಿಯ ಅಗ್ರಸ್ಥಾನ ಇನ್ನಷ್ಟು ಗಟ್ಟಿಗೊಳಿಸಿದೆ. ಶನಿವಾರದಂದು ದಿಲ್ಲಿಯಲ್ಲಿ ರನ್‌ಹೊಳೆ ಹರಿಯಿತು. ಬರೋಬ್ಬರಿ 529 ರನ್ ಮೂಡಿಬಂದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ದಿಲ್ಲಿ 2 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿತು. ಕನ್ನಡಿಗ ರಾಹುಲ್ (152*, 67ಎ, 16 ಬೌ, 9ಸಿ) ರನ್ ಬಾರಿಸಿದರು. ನಿತೀಶ್ ರಾಣಾ (91, 44ಎ, 11ಬೌ, 4ಸಿ) ರನ್ ಗಳಿಸಿದರು. ಗುರಿ ಬೆನ್ನತ್ತಿದ ಪಂಜಾಬ್ 18.5 ಓವರ್‌ಗಳಲ್ಲಿ 265 ರನ್ ಗಳಿಸಿತು. ತಂಡದ ಪರ ಪ್ರಭಸಿಮ್ರನ್ (76, 26ಎ, 9 ಬೌ, 5 ಸಿ), ಶ್ರೇಯಸ್(73*, 36ಎ, 3ಬೌ, 7ಸಿ) ಗಳಿಸಿದರು.

ಪಂಜಾಬ್-ದಿಲ್ಲಿ ಸ್ಟ್ಯಾಟ್ಸ್: ಬ್ಯಾಟಿಂಗ್ ಗಿಳಿದ ದಿಲ್ಲಿ ರಾಹುಲ್ ಹಾಗೂ ನಿತೀಶ್ ಅವರ ಆಸರೆ ಪಡೆದು, ಪವರ್‌ಪ್ಲೇನಲ್ಲಿ 68 ರನ್ ಗಳಿಸಿತು. ಇತ್ತ ಪಂಜಾಬ್ ಮೊದಲನೇ ಬಾಲ್‌ನಿಂದಲೂ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಬರೋಬ್ಬರಿ 116 ರನ್ ಬಾರಿಸಿತು. ಮಧ್ಯಮ ಓವರ್‌ನಲ್ಲಿ ರಾಹುಲ್ ಅಬ್ಬರದೊಂದಿಗೆ ದಿಲ್ಲಿ ಮಿಂಚಿತು. ಅರ್ಧಶತಕ ದಾಟಿದ ನಂತರ ಅವರು, ತೀರಾ ಬಿರುಸಿನ ಬ್ಯಾಟಿಂಗ್ ಮಾಡಿದರು. ನಿತೀಶ್ ರಾಣಾ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. ಮಧ್ಯಮ ಓವರ್‌ಗಳಲ್ಲಿ ದಿಲ್ಲಿ 145 ರನ್ ಬಾರಿಸಿತು. ಇತ್ತ ಪಂಜಾಬ್‌ಗೆ ಯಾವುದೇ ಲಗಾಮು ಇಲ್ಲ. ಪ್ರಭಸಿಮ್ರನ್ ಅವರ ಆಟ 76ಕ್ಕೆ ನಿಂತಿತು. ಪ್ರಿಯಾಂಶ್ ಕೂಡ 43 ರನ್‌ಗೆ ವಿಕೆಟ್ ಒಪ್ಪಿಸಿದರು. ಕೊನೊಲಿ ಈ ಬಾರಿ ಬೇಗನೆ ವಿಕೆಟ್ ಕೊಟ್ಟರು. ಆದರೆ ಶ್ರೇಯಸ್ ಅಯ್ಯರ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 110 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ದಿಲ್ಲಿ ತಂಡದ ರಾಹುಲ್ ಭರ್ಜರಿ ಹೊಡೆತಗಳೊಂದಿಗೆ 150 ರನ್ ಪೂರೈಸಿಕೊಂಡರು. ನಿತೀಶ್ 91 ರನ್‌ಗೆ ಔಟಾದರು. ದಿಲ್ಲಿ 51 ರನ್ ಗಳಿಸಿತು. ಒಟ್ಟು ಸ್ಕೋರ್ 264. ಇತ್ತ ಪಂಜಾಬ್ 39 ರನ್ ಮಾತ್ರ ಗಳಿಸಬೇಕಿತ್ತು. ಶ್ರೇಯಸ್ ಅಯ್ಯರ್ ಸೆಟ್ ಆದ ನಂತರ ಪಂದ್ಯವನ್ನು ಕಸಿದರು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದ ಅವರು, 71 ರನ್ ಗಳಿಸಿದರು. ಪಂದ್ಯ ಮುಕ್ತಾಯಗೊಂಡಿತು. ಪಂಜಾಬ್ 18.5 ಓವರ್‌ಗಳಲ್ಲಿ 265 ರನ್ ಮಾಡಿತು.



ರಾಕ್‌ಸ್ಟಾರ್ ರಾಹುಲ್

ಐಪಿಎಲ್‌ನಲ್ಲಿ ಕನ್ನಡಿಗ ರಾಹುಲ್ ದಾಖಲೆ

ದಿಲ್ಲಿಯ ಅಂಗಳದಲ್ಲಿ ಕೆ.ಎಲ್. ರಾಹುಲ್ ಅವರದ್ದೇ ದರ್ಬಾರ್. ಪಂದ್ಯದಲ್ಲಿ ರಾಹುಲ್ 67 ಬಾಲ್‌ಗಳಲ್ಲಿ ಎದುರಿಸಿದರು. 16 ಬೌಂಡರಿ 9 ಸಿಕ್ಸರ್ ಬಾರಿಸಿದರು. ಇದರೊಂದಿಗೆ 152* ರನ್ ಮಾಡಿದರು. ಐಪಿಎಲ್ ಇತಿಹಾಸದಲ್ಲೇ ಮರೆಯಲಾದ ದಾಖಲೆಗಳನ್ನು, ಯಾರಿಂದಲೂ ಅಳಿಸಲಾಗದ ಮತ್ತು ಮಾಡಲಾಗದ ದಾಖಲೆಗಳನ್ನು ಕನ್ನಡಿಗ ರಾಹುಲ್ ಬರೆದರು. ಬ್ಯಾಟಿಂಗ್ ಮಾಡುವ ವೇಳೆ ಬಾರಿಸಿದ ಪ್ರತಿಯೊಂದು ಬೌಂಡರಿ ದಾಖಲೆಗಳನ್ನು ಮುರಿಯುತ್ತ ಬಂದರೆ, ಬಾನೆತ್ತರದ ಸಿಕ್ಸರ್‌ಗಳು ಇತಿಹಾಸ ನಿರ್ಮಿಸುತ್ತಾ ಬಂದವು. ಯಾವುದೇ ಬೌಲರ್‌ಗಳ ಮೇಲೆ ರಾಹುಲ್ ಕರುಣೆ ತೋರಲಿಲ್ಲ. ಯಾವುದೇ ಅವಕಾಶವನ್ನೂ ಕೈಚೆಲ್ಲಲಿಲ್ಲ, ಬ್ಯಾಟಿನ ಮೂಲಕ ಇತಿಹಾಸ ಗೀಚಿದ ರಾಹುಲ್ ದಾಖಲೆಗಳ ಪಟ್ಟಿ ಇಲ್ಲಿದೆ.

3 ಫ್ರಾಂಚೈಸಿ ಪರ 2 ಶತಕ

ಕೆ.ಎಲ್. ರಾಹುಲ್ ಈ ಇನ್ನಿಂಗ್ಸ್‌ನೊಂದಿಗೆ ಮೂರು ಬೇರೆ ಫ್ರಾಂಚೈಸಿ ಪರ ಎರಡು ಶತಕ ಬಾರಿಸಿದ ಏಕೈಕ ಆಟಗಾರ ಎಂಬ ದಾಖಲೆ ಮಾಡಿದರು. ಇದಕ್ಕೂ ಮುನ್ನ ಅವರು, ಪಂಜಾಬ್ ಕಿಂಗ್ಸ್, ಲಖನೌ ಸೂಪರ್ ಜೇಂಟ್ಸ್ ಪರ ಶತಕ ಬಾರಿಸಿದ್ದಾರೆ.

ಅತಿ ಹೆಚ್ಚು ರನ್ ಬಾರಿಸಿದ ಭಾರತೀಯ

152 ರನ್‌ಗಳ ರಾಹುಲ್ ಇನ್ನಿಂಗ್ಸ್ ಭಾರತೀಯ ಆಟಗಾರ ಟಿ20ಯಲ್ಲಿ ಗಳಿಸಿದ ಅತಿ ಹೆಚ್ಚು ವೈಯಕ್ತಿಕ ಸ್ಕೋರ್. ಈ ಹಿಂದೆ ಐಪಿಎಲ್‌ನಲ್ಲೇ ಅಭಿಷೇಕ್ ಶರ್ಮ 141 ರನ್ ಮಾಡಿ ಸಾಧನೆ ಮಾಡಿದ್ದರು. 152 ರನ್ ಗಳಿಸುವುದರೊಂದಿಗೆ ರಾಹುಲ್ ಈ ದಾಖಲೆ ಮುಡಿಗೇರಿಸಿ ಕೊಂಡರು.

ಹೆಚ್ಚು ಸ್ಕೋರರ್

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ವೈಯಕ್ತಿ ಅತಿ ಹೆಚ್ಚು ರನ್‌ಗಳ ದಾಖಲೆಯ ಪಟ್ಟಿಯಲ್ಲಿ ರಾಹುಲ್ ಅವರ ಈ ಇನ್ನಿಂಗ್ಸ್ ಮುರನೇಯದ್ದು. ಈ ಮೊದಲು ಅಭಿಷೇಕ್ ಶರ್ಮ ಹೆಸರಲ್ಲಿದ್ದ ದಾಖಲೆಯನ್ನು ಅಳಸಿ ಹಾಕಿದ ಅವರು, ಗೇಲ್, ಮೆಕ್ಕಲಂ ನಂತರದ ಸ್ಥಾನದಲ್ಲಿದ್ದಾರೆ.

ಅತಿ ಹೆಚ್ಚು ವೈಯಕ್ತಿಕ ಸ್ಕೋರ್

ಆಟಗಾರ	ರನ್
ಕ್ರಿಸ್ ಗೇಲ್	175*
ಬ್ರೆಂಡನ್ ಮೆಕ್ಕಲಂ	158*
ಕೆ.ಎಲ್. ರಾಹುಲ್	152*
ಅಭಿಷೇಕ್ ಶರ್ಮ	141
ಡಿಕಾಕ್	140*

ರಾಹುಲ್‌ನ ಇನ್ನಷ್ಟು ದಾಖಲೆ

- ಟಿ20ಯಲ್ಲಿ 150 ರನ್ ಬಾರಿಸಿದ ಮೊದಲ ಬ್ಯಾಟರ್
- ಐಪಿಎಲ್‌ನಲ್ಲಿ 150 ರನ್ ಮಾಡಿದ 3ನೇ ಬ್ಯಾಟರ್
- ದಿಲ್ಲಿ ಪರ ಅತಿ ಹೆಚ್ಚು ರನ್ (ಒಂದೇ ಇನ್ನಿಂಗ್ಸ್‌ನಲ್ಲಿ) ಗಳಿಸಿದ ಬ್ಯಾಟರ್
- ರಾಹುಲ್‌ಗೆ ಇದು ವೈಯಕ್ತಿಕ ಅತಿ ಹೆಚ್ಚು ರನ್
- 46 ಬಾಲ್‌ಗಳಲ್ಲಿ ಶತಕ; ದಿಲ್ಲಿ ಬ್ಯಾಟರ್‌ನಿಂದ ಅತಿ ಹೆಚ್ಚು

ಸಂಕ್ಷಿಪ್ತ ಸ್ಕೋರ್

ದಿಲ್ಲಿ 20 ಓವರ್‌ಗಳಲ್ಲಿ 264/2: ರಾಹುಲ್ 152★, ನಿತೀಶ್ 91; ಅರ್ಷದೀಪ್ 49/1
ಪಂಜಾಬ್ 18.5 ಓವರ್‌ಗಳಲ್ಲಿ 265/4: ಪ್ರಭಸಿಮ್ರನ್ 76, ಶ್ರೇಯಸ್ 71; ಕುಲ್ದೀಪ್ 46/2

ಕಿರುಸುದ್ದಿ

ಗುಜರಾತ್‌ಗೆ ಚೆನ್ನೈ ಸವಾಲು



ಚೆನ್ನೈ: ಭಾನುವಾರದ ಐಪಿಎಲ್ ಪಂದ್ಯಗಳಲ್ಲಿ ಚೆನ್ನೈ ಗುಜರಾತ್ ತಂಡವನ್ನು, ಲಖನೌ ಕೋಲ್ಕತ್ತಾ ತಂಡವನ್ನು ಎದುರಿಲಿವೆ. ವಾರಾಂತ್ಯದಲ್ಲಿ ಅಭಿಮಾನಿಗಳಿಗೆ ಮನರಂಜನಾ ರಸದೌತಣ ನೀಡುವುದಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಸಿದ್ಧವಾಗಿದೆ. ಹಿಂದಿನ ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಚೆನ್ನೈ ಹಾಗೂ ಸತತ ಎರಡು ಸೋಲು ಕಂಡಿರುವ ಗುಜರಾತ್ ಮಧ್ಯಾಹ್ನದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕಳೆದ ನಾಲ್ಕು ಪಂದ್ಯಗಳಲ್ಲಿ ಚೆನ್ನೈ ಉತ್ತಮ ಪ್ರದರ್ಶನವನ್ನೇ ನೀಡಿದೆ. ಇತ್ತ ಗುಜರಾತ್ ಮುಂಬೈ ಹಾಗೂ ಆರ್‌ಸಿಬಿ ವಿರುದ್ಧ ಸೋಲನುಭವಿಸಿದೆ. ಚೆನ್ನೈ ಗೆದ್ದರೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಬಹುದು. ಗುಜರಾತ್ ಗೆದ್ದರೆ, ಚೆನ್ನೈ ತಂಡವನ್ನು ಕಳನೂಕಲಿದೆ. ಎರಡನೇ ಪಂದ್ಯದಲ್ಲಿ ಕೆಕೆಆರ್ ಮತ್ತು ಲಖನೌ ತಂಡಗಳು ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಕೆಕೆಆರ್ ಮೊದಲನೇ ಗೆಲುವು ಸಾಧಿಸಿದೆ. ಇತ್ತ ಲಖನೌ ಹ್ಯಾಟ್ರಿಕ್ ಸೋಲುಗಳೊಂದಿಗೆ ಕಂಗೆಟ್ಟಿದೆ. ಹೀಗಿರುವಾಗ ಗೆಲುವಿನ ಲಯ ಪಡೆಯಲು ತಿಣುಕಾಟ ನಡೆಸುತ್ತಿದೆ. ವಾಸ್ತವವಾಗಿ ಕೆಕೆಆರ್ ಅತಿ ಕೆಟ್ಟ ಪ್ರದರ್ಶನ ನೀಡುತ್ತಿದೆ. 7 ಪಂದ್ಯಗಳಲ್ಲಿ ಒಂದು ಮಾತ್ರ ಗೆದ್ದಿದೆ. ಇತ್ತ ಲಖನೌ ಕೂಡ ಅದೇ ಹಾಲತ್ತಿನಲ್ಲಿದೆ.

ಪಂದ್ಯದ ವಿವರ

ಚೆನ್ನೈ-ಗುಜರಾತ್	ಕೆಕೆಆರ್-ಲಖನೌ:
ಯಾವಾಗ?: ಭಾನುವಾರ	ಯಾವಾಗ: ಭಾನುವಾರ
ಎಲ್ಲಿ: ಚೆನ್ನೈ	ಎಲ್ಲಿ: ಲಖನೌ
ಸಮಯ: ಮಧ್ಯಾಹ್ನ 3:30	ಸಮಯ: ಸಂಜೆ 7:30

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಗ್ರಾಸ್‌ಹಾಪರ್ ಕಪ್: ಅಭಯ್ ಸಿಂಗ್ ಹೋರಾಟಕ್ಕೆ ತೆರೆ

ಹೊಸದಿಲ್ಲಿ: ಸ್ವಿಟ್ಜರ್‌ಲ್ಯಾಂಡ್‌ನ ಜ್ಯೂರಿಕ್‌ನಲ್ಲಿ ನಡೆದ ಗ್ರಾಸ್ ಹಾಪರ್ ಕಪ್ ಸ್ಕ್ವ್ಯಾಷ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಅಭಯ್ ಸಿಂಗ್ ಸೋಲನುಭವಿಸಿದ್ದಾರೆ. ಅವರು ಈಜಿಪ್ಟ್‌ನ ಮಾಜಿ ವಿಶ್ವ ನಂ.1 ಹಾಗೂ ವಿಶ್ವ ಚಾಂಪಿಯನ್ ಕರೀಮ್ ಗೌವಾಡ್ ವಿರುದ್ಧ ಕಠಿಣ ಪೈಪೋಟಿ ನೀಡಿದರೂ 12–10, 11–9 ಅಂತರದಲ್ಲಿ ಸೋತರು. ಮೊದಲ ಗೇಮ್‌ನಲ್ಲಿ 6–0 ಹಿನ್ನಡೆಯಲ್ಲಿದ್ದ ಅಭಯ್ ಸಿಂಗ್ ಅದ್ಭುತವಾಗಿ ಮರಳಿ ಟೈಬ್ರೇಕ್‌ಗೆ ಕೊಂಡೊಯ್ದರು. ಎರಡನೇ ಗೇಮ್‌ನಲ್ಲೂ ವಿಶ್ವ ನಂ.4 ಗೌವಾಡ್‌ಗೆ ಸಮಬಲವಾಗಿ ಎದುರಿಸಿದರು. ಆದರೆ ಅಂತಿಮ ಕ್ಷಣದಲ್ಲಿ ಅನುಭವದ ಮೇಲುಗೈ ಸಾಧಿಸಿದ ಗೌವಾಡ್ ಪಂದ್ಯವನ್ನು ತಮ್ಮದಾಗಿಸಿಕೊಂಡರು.

> ಪಂದ್ಯದ ವೇಗ ತುಂಬಾ ಹೆಚ್ಚು ಇತ್ತು. ಅಭಯ್ ತುಂಬಾ ಬುದ್ಧಿವಂತ ಮತ್ತು ಪ್ರತಿಭಾವಂತ ಆಟಗಾರ. ಅವರ ಮುಂದಿನ ಹೆಜ್ಜೆಯನ್ನು ಊಹಿಸಲು ಕಷ್ಟ. ಮೊದಲ ಗೇಮ್‌ನಲ್ಲಿ ನಾನು ಮುನ್ನಡೆದಲ್ಲಿದ್ದರೂ ಅವರು ತಕ್ಷಣ ಮರಳಿ ಸಮಬಲ ಸಾಧಿಸಿದರು.
>
> ■ ಗೌವಾಡ್, ಸ್ಕ್ವ್ಯಾಷ್ ಆಟಗಾರ

ಟಿ20 ಕ್ರಿಕೆಟ್‌ನಲ್ಲಿ 220 ಸಾವಿರ ರನ್ ಬಾರಿಸಿದ ವಿರಾಟ್

ಕೊಹ್ಲಿ ವಿರಾಟ ದಾಖಲೆ

ಸಿಕ್ಸರ್-ಫೋರ್ ಬಾರಿಸುವುದರಲ್ಲೂ ದಾಖಲೆ



ಬೆಂಗಳೂರು: ಅಬ್ಬರದ ಬ್ಯಾಟಿಂಗ್ ಮೂಲಕ ಪಂದ್ಯ ಗೆಲ್ಲಿಸಿರುವ ವಿರಾಟ್ ಕೊಹ್ಲಿ ಗುಜರಾತ್ ತಂಡವನ್ನು ದಂಡಿಸಿ ವಿವಿಧ ದಾಖಲೆಗಳನ್ನು ಮಾಡಿದ್ದಾರೆ. ಶುಕ್ರವಾರ ನಡೆದ ಐಪಿಎಲ್‌ನ 34ನೇ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಆರ್‌ಸಿಬಿ ಭರ್ಜರಿ ಗೆಲುವು ಸಾಧಿಸಿತ್ತು. ಈ ಪಂದ್ಯದಲ್ಲಿ ಕೊಹ್ಲಿ 44 ಎಸೆತಗಳಲ್ಲಿ 81 ರನ್ ಬಾರಿಸಿದ್ದರು. ಈ ಇನ್ನಿಂಗ್ಸ್‌ನಲ್ಲಿ 4 ಭರ್ಜರಿ ಸಿಕ್ಸ್ ಹಾಗೂ 8 ಫೋರ್‌ಗಳು ಸಹ ಮೂಡಿಬಂದಿದ್ದವು. ಈ ಸಿಕ್ಸ್-ಫೋರ್ಗಳೊಂದಿಗೆ ಕಿಂಗ್ ಕೊಹ್ಲಿ ಐಪಿಎಲ್‌ನಲ್ಲಿ ವಿಶೇಷ ಮೈಲುಗಲ್ಲುಗಳನ್ನು ದಾಟಿದ್ದಾರೆ.

ಕೊಹ್ಲಿ ದಾಖಲೆಗಳ ವಿವರ

10 ಸಾವಿರ ರನ್

ಗುಜರಾತ್ ಟೈಟಾನ್ಸ್ ವಿರುದ್ಧದ 81 ರನ್‌ಗಳೊಂದಿಗೆ ಒಂದೇ ದೇಶದಲ್ಲಿ ಟಿ20 ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಕಲೆಹಾಕಿದ ವಿಶ್ವದ ಮೊದಲ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ಕಿಂಗ್ ಕೊಹ್ಲಿ ನಿರ್ಮಿಸಿದ್ದಾರೆ. ಅಂದರೆ ಕೊಹ್ಲಿ ಭಾರತದಲ್ಲೇ 10 ಸಾವಿರ ರನ್ ಕಲೆಹಾಕಿ ಈ ಸಾಧನೆ ಮಾಡಿದ ಏಕೈಕ ಆಟಗಾರ ಎನಿಸಿಕೊಂಡಿದ್ದಾರೆ. ಈ ಸಾಲಿನಲ್ಲಿ ರೋಹಿತ್ ಶರ್ಮ, ಕ್ರಿಸ್ ಗೇಲ್, ಆರೋನ್ ಫಿಂಚ್ ಕೂ ಸೇರಿದ್ದಾರೆ.

800 ಫೋರ್‌ಗಳು

ಗುಜರಾತ್ ಟೈಟಾನ್ಸ್ ವಿರುದ್ಧ ಬಾರಿಸಿದ 8 ಫೋರ್‌ಗಳೊಂದಿಗೆ ಕೊಹ್ಲಿ ಐಪಿಎಲ್‌ನಲ್ಲಿ 800 ಫೋರ್‌ಗಳನ್ನು ಬಾರಿಸಿದ ಆಟಗಾರ ಆನಿಸಿಕೊಂಡರು. ಈ ಸಾಧನೆ ಮಾಡಿದ ಏಕೈಕ ಬ್ಯಾಟರ್ ಕೊಹ್ಲಿಯವರೇ ಆಗಿದ್ದಾರೆ.

300 ಸಿಕ್ಸರ್

ಈ ಪಂದ್ಯದಲ್ಲಿ 4 ಸಿಕ್ಸ್ ಸಿಡಿಸುವುದರೊಂದಿಗೆ ಐಪಿಎಲ್ ಇತಿಹಾಸದಲ್ಲೇ ಒಂದೇ ಫ್ರಾಂಚೈಸಿ ಪರ 300 ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಬ್ಯಾಟರ್ ಎಂಬ ಭರ್ಜರಿ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ.

ಲುಂಗಿ ಎನ್‌ಗಿಡಿಗೆ ಗಂಭೀರ ಗಾಯ

ಹೊಸದಿಲ್ಲಿ: ದಿಲ್ಲಿ ಕ್ಯಾಪಿಟಲ್ಸ್‌ನ ವೇಗಿ ಲುಂಗಿ ಎನ್‌ಗಿಡಿ ಫೀಲ್ಡಿಂಗ್ ಮಾಡುತ್ತಿರುವಾಗ ತಲೆಗೆ ಗಂಭೀರ ಏಟಾಗಿದ್ದು, ಪಂದ್ಯದ ಮಧ್ಯೆ ಆಸ್ಪತ್ರೆಗೆ ದಾಖಲಾದರು. ಅಕ್ಷರ್ ಪಟೇಲ್ ಬೌಲಿಂಗ್ ಮಾಡುತ್ತಿದ್ದ ವೇಳೆ ಲಾಂಗ್ ಆನ್‌ನಲ್ಲಿ ನಿಂತಿದ್ದ ಲುಂಗಿ ಕ್ಯಾಚ್‌ಗೆ ಹೊರಟರು. ಆ ವೇಳೆ ಅವರು ಹಿಂಬದಿಯಿಂದ ಓಡುತ್ತಲೇ ಬಿದ್ದರು. ತಲೆಗೆ ಪೆಟ್ಟಾಯಿತು. ಮೈದಾನದಲ್ಲೇ ಪ್ರಜ್ಞೆ ತಪ್ಪಿ ಬಿದ್ದರು. ತ್ವರಿತವಾಗಿ ಚಿಕಿತ್ಸೆ ಕೊಟ್ಟರೂ ಸರಿಹೋಗದ ಅವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರ ಐಪಿಎಲ್ ಭವಿಷ್ಯ ಈಗ ಅನಿಶ್ಚಿತವಾಗಿದೆ. ಎನ್‌ಗಿಡಿ ಅವರ ಗಾಯದ ತೀವ್ರತೆ ಎಷ್ಟಿತ್ತೆಂದರೆ ಅವರಿಗೆ ಮೇಲೇಳಲು ಸಾಧ್ಯವಾಗಲಿಲ್ಲ. ಕೂಡಲೇ ಮೈದಾನಕ್ಕೆ ಆಗಮನಿಸಿದ ದಿಲ್ಲಿ ತಂಡದ ಫಿಸಿಯೋ ಎನ್‌ಗಿಡಿ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದರು. ಆದರೆ ಫಲಿಸದ ಕಾರಣ ಅವರನ್ನು ಆಸ್ಪತ್ರೆಗೆ ರವಾನಿಸಲಾಗಿಯಿತು. ಇದಕ್ಕೂ ಮೊದಲು ಶುಕ್ರವಾರ ಸಂಜೆಯೇ ದಿಲ್ಲಿ ನೆಟ್ ಬಾಲರ್ ಪಾಠಕ್ ಕೂಡ ಗಾಯಗೊಂಡಿದ್ದರು. ಅವರನ್ನೂ ಮೈದಾನದಿಂದ ಆಸ್ಪತ್ರೆಗೆ ರವಾನಿಸಲಾಗಿದೆ.

ಸೂರ್ಯವಂಶಿ ವೈಭವದ ಶತಕ

ಜೈಪುರ: ದಿನದಾಟದ ಎರಡನೇ ಪಂದ್ಯದಲ್ಲೂ ರನ್ ಮಳೆ. ರಾಜಸ್ಥಾನ ಹಾಗೂ ಹೈದರಾಬಾದ್ ನಡುವಿನ ಪಂದ್ಯದಲ್ಲಿ ಯುವ ಆಟಗಾರ ವೈಭೌವ್ ಸೂರ್ಯವಂಶಿ ಅಬ್ಬರಿಸಿದರು. ಶತಕದ ಇನ್ನಿಂಗ್ಸ್ ಕಟ್ಟಿದ್ದಲ್ಲದೆ, ದಾಖಲೆಗಳನ್ನೂ ಮಾಡಿದರು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಬರೋಬ್ಬರಿ 228/6 ರನ್ ಚಚ್ಚಿದೆ.

36 ಬಾಲ್‌ಗಳಲ್ಲಿ ಶತಕದಾಟ

ವೈಭವ್ ಸೂರ್ಯವಂಶಿ ಶತಕ ಬಾರಿಸಿದರೆ, ಧ್ರುವ್ ಜುರೇಲ್ ಅರ್ಧಶತಕ ಬಾರಿಸಿ ಮಿಂಚಿದರು. ಇತ್ತ ಹೈದರಾಬಾದ್ ಪಡೆ ಪಂದ್ಯದುದಕ್ಕೂ ವೈಭವ್ ಅವರನ್ನು ತಡೆಯುವುದರಲ್ಲೇ ಹೈರಾಣಾಯಿತು.

ವೈಭವ್ ಅಬ್ಬರ: ಯಥಾ ಪ್ರಕಾರ ವೈಭವ್ ಸೂರ್ಯವಂಶಿ ಬಂದ ಕೂಡಲೇ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈದರು. ಇತ್ತ ಜೈಸ್ವಾಲ್ 10 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಧ್ರುವ್ ಜುರೇಲ್ ಸೆಟ್ ಆಗುವತ್ತ ಸಾಗಿದರು. ವೈಭವ್ ಸೂರ್ಯವಂಶಿ 15 ಬಾಲ್‌ಗಳಲ್ಲಿ ಅರ್ಧಶತಕ ಪೂರೈಸಿಕೊಂಡರು. ಇತ್ತ ಜುರೇಲ್ ಕೂಡ ಕೈ ಮಿಲಾಯಿಸಿದರು. ಇವರಿಬ್ಬರ ಆಟಕ್ಕೆ ಹೈದರಾಬಾದ್ ತತ್ತರಿಸಿತು. ಪವರ್‌ಪ್ಲೇನಲ್ಲಿ 76 ರನ್ ಗಳಿಸಿತು. ಜುರೇಲ್ 51 ರನ್‌ಗೆ ವಿಕೆಟ್ ಕೊಟ್ಟರೆ, ಫೆರಾರಿಯಾ ಉತ್ತಮ ಬ್ಯಾಟಿಂಗ್ ಮಾಡಿದರು.



ಐಪಿಎಲ್‌ನ ವೇಗದ ಶತಕ

ಆಟಗಾರ	ಎಸೆತ
ಗೇಲ್	30
ವೈಭವ್	35
ವೈಭವ್	36
ಯುಸೂಫ್	37
ಕ್ಲಾಸೆನ್	37

ಶತಕದ ದಾಖಲೆ: 15 ವರ್ಷದ ವೈಭವ್ ಸೂರ್ಯವಂಶಿ ಮತ್ತೆ ದಾಖಲೆ ಮಾಡಿದರು. ಕಳೆದ ವರ್ಷ 35 ಬಾಲ್‌ಗಳಲ್ಲಿ ಶತಕ ಬಾರಿಸಿದ್ದ ಅವರು, 36 ಬಾಲ್‌ಗಳಲ್ಲಿ ಶತಕ ಬಾರಿಸಿದರು. ಈ ಇನ್ನಿಂಗ್ಸ್‌ನಲ್ಲಿ ಬರೋಬ್ಬರಿ 12 ಸಿಕ್ಸರ್ ಮತ್ತು 5 ಬೌಂಡರಿ ಸೇರಿವೆ. ಇದರೊಂದಿಗೆ ವೇಗದ ಶತಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿ ವೈಭವ್ ಸೇರಿಕೊಂಡರು. ಇದಕ್ಕೂ ಮುನ್ನ ದಾಖಲೆ ಯುಸೂಫ್ ಪಠಾಣ್ ಹೆಸರಲ್ಲಿತ್ತು.

ಇಂದು ಐತಿಹಾಸಿಕ ಟಿಸಿಎಸ್ ವಿಶ್ವ 10-ಕೆ | ಓಟದಲ್ಲಿ ಗಣ್ಯರು ಭಾಗಿ

10-ಕೆ ಓಟಕ್ಕೆ ಬೆಂಗಳೂರು ಸಿದ್ಧ

ಬೆಂಗಳೂರು: ಬಹು ನಿರೀಕ್ಷಿತ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿ ಭಾನುವಾರದಂದು ಗಾರ್ಡನ್ ಸಿಟಿಯಲ್ಲಿ ನಡೆಯಲಿದೆ. ವಿಶ್ವದ ಅಗ್ರ ರನ್ನರ್‌ಗಳು ಭಾಗವಹಿಸುವ ಈ ಐತಿಹಾಸಿಕ ಕೂಟಕ್ಕಾಗಿ ಬೆಂಗಳೂರು ಸಿದ್ಧವಾಗಿದ್ದು, ಭಾರತೀಯ ರನ್ನರ್‌ಗಳು ಭವರವಸೆ ವ್ಯಕ್ತಪಡಿಸಿದ್ದಾರೆ.

ಹಾಲಿ ಚಾಂಪಿಯನ್ ಅಭಿಷೇಕ್ ಪಾಲ್ ಕಳೆದ ವರ್ಷ 29:12 ನಿಮಿಷಗಳಲ್ಲಿ ಗುರಿ ತಲುಪಿ ಭಾರತೀಯ ಪುರುಷರ ಕೂಟದ ದಾಖಲೆಯನ್ನು ಮಾಡಿದ್ದರು. ಅವರೊಂದಿಗೆ ಡಾ. ಕಾರ್ತಿಕ್ ಕರ್ಕೇರಾ ಕೂಡ ಸೇರಿದ್ದಾರೆ, ಅವರು ರಾಷ್ಟ್ರೀಯ ಮ್ಯಾರಥಾನ್ ಚಾಂಪಿಯನ್‌ಶಿಪ್ ಮತ್ತು ಟಾಟಾ ಮುಂಬೈ ಮ್ಯಾರಥಾನ್‌ನ ಚೊಚ್ಚಲ ಗೆಲುವುಗಳೊಂದಿಗೆ ಭಾಗವಹಿಸುತ್ತಿದ್ದಾರೆ. ಮಹಿಯರಲ್ಲಿ, ಭಾರತೀಯ ಓಟದಲ್ಲಿ ಅತ್ಯಂತ ಸ್ಥಿರವಾದ ಹೆಸರುಗಳಲ್ಲಿ ಒಬ್ಬರಾದ ಮತ್ತು ಬೆಂಗಳೂರಿನಲ್ಲಿ ಸತತವಾಗಿ ಇಂಡಿಯನ್ ಎಲೈಟ್ ವಿಜೇತರಾದ ಸಂಜೀವನಿ ಜಾಧವ್ ಅವರಿಗೆ ಐತಿಹಾಸಿಕ ಹ್ಯಾಟ್ರಿಕ್ ಪಡೆಯುವ ಅವಕಾಶ ಸಿಗಲಿದೆ.

ರಾಜ್ಯಪಾಲರಿಂದ ಉದ್ಘಾಟನೆ

10-ಕೆ ಬೆಂಗಳೂರು ಓಟ ಗಣ್ಯರಿಂದ ಚಾಲನೆ ಪಡೆಯಲಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್, ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ, ಗೃಹ ಸಚಿವ ಡಾ. ಜಿ. ಪರಮೇಶ್ವರ ಮತ್ತು ಅಂತಾರಾಷ್ಟ್ರೀಯ ಕೂಟದ ರಾಯಭಾರಿ ಬ್ಲಾಂಕಾ ವ್ಲಾಸಿಕ್ ಓಟಕ್ಕೆ ಚಾಲನೆ ನೀಡಲಿದ್ದಾರೆ.

ಓಟದಲ್ಲಿ ಗಣ್ಯರು

ಓಟದಲ್ಲಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಿರೀಯ ರಾಜಕಾರಣಿಗಳು ಭಾಗವಗಿಸಲಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಸಂಸದ, ಮೈಸೂರು ಮಹರಾಜರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ತೇಜಸ್ವಿ ಸೂರ್ಯ, ಬ್ರಿಗೇಡಿಯರ್ ರಂಜೀತ್ ಅಳ್ವಾ, ಮತ್ತು ಇಟಲಿಯ ಕಾನ್ಸುಲ್ ಜನರಲ್ ಜಿಯಾಂಡೊಮೆನಿಕೊ ಮಿಲಾನೊ ಅವರು ಭಾಗವಹಿಸಲಿದ್ದಾರೆ.

ಫ್ರಾಂಚೈಸಿ ಮಾದರಿಯ ಟಿಟಿಗೆ ಸಿದ್ಧತೆ

ಟಿಟಿ: ಸ್ಟಾರ್ ಆಟಗಾರರ ಪಟ್ಟಿ ಪ್ರಕಟ

ಹೊಸದಿಲ್ಲಿ: ಭಾರತದ ಟೇಬಲ್ ಟೆನಿಸ್ ತಾರೆಯರಾದ ಮನವ್ ಠಕ್ಕರ್, ಮನೂಷ್ ಶಾ ಮತ್ತು ದಿಯಾ ಚಿತಾಲೆ ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಸೀಸನ್ 7ರ ಆಟಗಾರರ ಪೂಲ್‌ನಲ್ಲಿ ಪ್ರಮುಖರಾಗಿದ್ದಾರೆ. ಇದೇ ವೇಳೆ ಅನುಭವಿಗಳಾದ ಜಿ ಸತ್ಯನ್ ಗಣೇಶಕರನ್ ಮತ್ತು ಮನಿಕಾ ಬಾತ್ರಾ ಅವರನ್ನು ಅವರ ತಂಡಗಳು ಉಳಿಸಿಕೊಂಡಿವೆ.

ಈ ಬಾರಿಯ ಯುಟಿಟಿ ಸೀಸನ್ ಜುಲೈ 9ರಿಂದ 26ರವರೆಗೆ ಗೋವಾದ ಡಾ ಶ್ಯಾಮ ಪ್ರಸಾದ್ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಏಪ್ರಿಲ್ 28ರಂದು ಮುಂಬೈನಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ.

ಠಕ್ಕರ್ ಮತ್ತು ಶಾ ಕಳೆದ ಸೀಸನ್‌ಗೆ ಗೈರಾಗಿದ್ದರೂ, ಈ ಬಾರಿ ಹರಾಜಿಗೆ ಮರಳಿದ್ದಾರೆ. ಇವರಿಬ್ಬರೂ ಪುರುಷರ ಡಬಲ್ಸ್‌ನಲ್ಲಿ ವಿಶ್ವ ನಂ.5 ಸ್ಥಾನದಲ್ಲಿದ್ದಾರೆ. ಶಾ ಮತ್ತು ಚಿತಾಲೆ ಮಿಶ್ರ ಡಬಲ್ಸ್‌ನಲ್ಲಿ ವಿಶ್ವ ನಂ.6 ಸ್ಥಾನದಲ್ಲಿದ್ದು, ಡಬ್ಲ್ಯುಟಿಟಿ ಫೈನಲ್ಸ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಜೋಡಿಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಹಿಂದಿನ ಸೀಸನ್‌ನ ಅತ್ಯಂತ ದುಬಾರಿ ಆಟಗಾರ್ತಿಯಾದ ಚಿತಾಲೆ ಈ ಬಾರಿ ಹರಾಜಿನಲ್ಲಿ ಭಾಗವಹಿಸುತ್ತಿದ್ದಾರೆ. ದಬಾಂಗ್ ದೆಹಲಿ ತಂಡ ಸತ್ಯನ್ ಅವರನ್ನು ಉಳಿಸಿಕೊಂಡಿದ್ದು, ಇದು ಅವರ ಏಳನೇ ನಿರಂತರ ಸೀಸನ್ ಆಗಿದೆ. ಗಾಯದ ಕಾರಣ ಕಳೆದ ಸೀಸನ್ ತಪ್ಪಿಸಿಕೊಂಡಿದ್ದ ಬಾತ್ರಾ ಅವರನ್ನು ಅಹಮದಾಬಾದ್ ತಂಡ ಉಳಿಸಿಕೊಂಡಿದೆ. ಕೊಲ್ಕತ್ತಾ ಮತ್ತು ಮುಂಬಾ ತಂಡಗಳು ತಮ್ಮ ಆಟಗಾರರನ್ನು ಉಳಿಸಿಕೊಂಡಿದ್ದರೆ, ಗೋವಾ ಮತ್ತು ಪುಣೆ ತಂಡಗಳು ಪೂರ್ಣ ಹಣದೊಂದಿಗೆ ಹರಾಜಿಗೆ ಪ್ರವೇಶಿಸಲಿವೆ.




ಪ್ರಮುಖ ಅಂಶಗಳು

- ಸೀಸನ್ ದಿನಾಂಕ: ಜುಲೈ 9 26
- ಸ್ಥಳ: ಗೋವಾ
- ಹರಾಜು: ಏಪ್ರಿಲ್ 28, ಮುಂಬೈ
- ಪ್ರತೀ ತಂಡಕ್ಕೆ ಬಜೆಟ್: 1 ಕೋಟಿ
- ಮೂಲ ಬೆಲೆ: 20 ಲಕ್ಷದಿಂದ 3 ಲಕ್ಷದವರೆಗೆ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5965

ಎಡದಿಂದ ಬಲಕ್ಕೆ
1.ವ್ಯವಸಾಯವನ್ನು ಮಾಡುವವನು-ರೈತ (5)
3.ಮೂಗನ ನಡುವೆ ಇರುವ ಮೂರು ಲೋಕಗಳು (3)
5.ಎತ್ತರಕ್ಕೆ ಹಾರುವಿಕೆ-ಜಿಗಿ (2)
7.ಆತುರಪಡು-ತವಕಿಸು (5)
9.ಬುದ್ಧನ ಸಮಕಾಲೀನ-ಹರ್ಯಾಂಕ ರಾಜವಂಶದ ಅರಸ (4)
11.ಹಾವಿನ ಹೆಡೆಯಲ್ಲಿದೆಯೆನ್ನುವ ಮಣಿ (4)
13.ಆನಂದದಿಂದ ತುಂಬಿದುದರ ಕಡೆಯಲ್ಲಿ ಕಾಲವಿದೆ (5)
15.ಬೆಟ್ಟವೂ ಹೌದು-ಆಭರಣವೂ ಹೌದು (2)
17.ಕರಣಿಕನನ್ನು ಹೀಗೂ ಹೇಳಬಹುದು (3)
18.ಬುದ್ಧಿಯನ್ನು ಉಪಯೋಗಿಸು ಎಂಬರ್ಥದ ನುಡಿಗಟ್ಟು (5)

ಮೇಲಿನಿಂದ ಕೆಳಕ್ಕೆ
1.ಸೆಕೆಗಾಲ-ಬಿಸಿಲಿನಿಂದ ಕೂಡಿದ ದಿನಗಳು (3)
2.ಜನರು ತೆರಳಿದ್ದು ಈ ಬೆಳ್ಳಿಯನ್ನು ನೋಡಲು (3)
4.ತುಂಬ ಬಿರುಸು-ಗಟ್ಟಿ ಗುಣವುಳ್ಳದ್ದು (3)
6.ಕಬ್ಬಿಣದ ಅಂಶವುಳ್ಳ ತರಕಾರಿ ತಲೆಕೆಳಗಾಗಿದೆ (3)
8.ಯಾಗ ಮಾಡುವಿಕೆ ಕಡೆಯಲ್ಲಿ ದೀರ್ಘವಾಗಿದೆ (3)
10.ಹೊಟ್ಟೆಕಿಚ್ಚು ತಲೆಕೆಳಗಾಗಿದೆ (3)
12. ಕುಶನ ಕರದಲ್ಲಿರುವ ಲಗಾಮು (3)
13.ಬಂಧಿತ-ಸೆರೆಯಾಳಿನ ಕೈಗೆ ಹಾಕುವ ಬೇಡಿ (3)
14.ಮಗನಿಲ್ಲಿ ತಲೆಕೆಳಗಾಗಿದ್ದಾನೆ (3)
16.ಸಂಪಾದನೆ ಮಾಡು-ಆದಾಯವನ್ನು ಹೊಂದು (3)

5964 ಉತ್ತರ

ಎಡದಿಂದ ಬಲಕ್ಕೆ:
1.ನಿಗಿನಿಗಿಸು 3.ಅಡಗು
5.ಮನ 7.ತಸ್ಕರ 8.ಕಾಲ
9.ರಾಸು 10.ನಿಧಾನ
12.ತಮ 14.ಕ್ಷಪಣ
15.ಬಿಗಡಾಯಿಸು

ಮೇಲಿನಿಂದ ಕೆಳಕ್ಕೆ :
1.ನಿಗಮ 2.ಸುಲಲಿತ
3.ಅಹಂಕಾರ
4.ಗುರಕಾಯಿಸು
6.ಮಕುಲ
8.ಕಾರ್ಯಕಾರಣ
9.ರಾದ್ಧಾಂತ 10.ನಿಟಿಲಾಕ್ಷ
11.ಬಿಗುಮಾನ
13.ಮಣಿಸು

ಕಿರುಸುದ್ದಿ

ನಾಪತ್ತೆಯಾಗಿದ್ದ ಉಪನ್ಯಾಸಕರ ಮೃತದೇಹ ಬಾವಿಯಲ್ಲಿ ಪತ್ತೆ

ಉಡುಪಿ: ನಾಪತ್ತೆಯಾಗಿದ್ದ ಉಪನ್ಯಾಸಕರೊಬ್ಬರ ಮೃತದೇಹ ಮನೆಯ ಬಾವಿಯಲ್ಲಿ ಶನಿವಾರ ಪತ್ತೆಯಾಗಿದೆ. ಮೃತರನ್ನು ಉಡುಪಿ ಸಂಸ್ಕೃತ ಕಾಲೇಜಿನ ಉಪನ್ಯಾಸಕ, ಶಿರಸಿ ಮೂಲದ ಗಣಪತಿ ಭಟ್ (55) ಎಂದು ಗುರುತಿಸಲಾಗಿದೆ. ಅವಿವಾಹಿತರಾಗಿದ್ದ ಇವರು, ಎಂ.ಜಿ.ಎಂ ಕಾಲೇಜಿನ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಇವರು ನಾಪತ್ತೆಯಾದ ಬಗ್ಗೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವೈಯಕ್ತಿಕ ಕಾರಣದಿಂದ ಮನನೊಂದು ಇವರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬೇಕೆಂದು ಶಂಕಿಸಲಾಗಿದೆ. ಸ್ಥಳಕ್ಕೆ ಉಡುಪಿ ನಗರ ಪೊಲೀಸ್ ಠಾಣೆಯ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಅಗ್ನಿ ಶಾಮಕ ದಳದ ನೆರವಿನಿಂದ ಮೃತದೇಹವನ್ನು ಮೇಲಕ್ಕೆತ್ತಲಾಯಿತು.

ಯುವಕ ಆತ್ಮಹತ್ಯೆ

ಬೆಳ್ತಂಗಡಿ : ಯುವಕನೊಬ್ಬ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳ್ತಂಗಡಿಯ ಚಾರ್ಮಾಡಿಯಲ್ಲಿ ನಡೆದಿದೆ. ತಾಲೂಕಿನ ಚಾರ್ಮಾಡಿ ಗ್ರಾಮದ ಕೊಡಿಹಿತ್ತಿಲು ನಿವಾಸಿ ಬಾಬುಗೌಡ ಪುತ್ರ ಗಣೇಶ್ (20) ಎಂಬಾತ ಏ.25 ರಂದು ಮಧ್ಯಾಹ್ನ 1.30 ಕ್ಕೆ ಮನೆಯ ಗುಡ್ಡದಲ್ಲಿ ಮರಕ್ಕೆ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ತಂದೆ ಕೂಡ ಆತ್ಮಹತ್ಯೆಗೆ ಪ್ರಯತ್ನ

ಮನೆಯಲ್ಲಿ ದನದ ಕೊಟ್ಟಿಗೆಯನ್ನು ಸ್ವಚ್ಛ ಮಾಡುತ್ತಿದ್ದು ಏಕಾಏಕಿ ಮನೆಯ ಪಕ್ಕದ ಗುಡ್ಡಕ್ಕೆ ತೆರಳಿ ಗಣೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಘಟನೆ ಬಗ್ಗೆ ಮಾಹಿತಿ ತಿಳಿದು ಗಣೇಶ್ ತಂದೆ ಬಾಬುಗೌಡ ಕೂಡ ಆತ್ಮಹತ್ಯೆ ಮಾಡಿಕೊಳ್ಳಲು ಗುಡ್ಡಕ್ಕೆ ಹೋದಾಗ ತಕ್ಷಣ ಸ್ಥಳೀಯರು ರಕ್ಷಣೆ ಮಾಡಿ ಬಾಬುಗೌಡರನ್ನು ಮನೆಗೆ ಕರೆದುಕೊಂಡು ಬಂದಿದ್ದಾರೆ ಎನ್ನಲಾಗಿದೆ. ಮೃತದೇಹವನ್ನು ಬೆಳ್ತಂಗಡಿ ತಾಲೂಕು ಸರಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು. ಈ ಬಗ್ಗೆ ಧರ್ಮಸ್ಥಳ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿದ್ಯುತ್ ತಂತಿ ತಗುಲಿ ಬಾಲಕ ಮೃತ್ಯು

ಬಂಟ್ವಾಳ: ವಿದ್ಯುತ್ ತಂತಿ ತಗುಲಿ ಬಾಲಕನೋರ್ವ ಮೃತಪಟ್ಟ ಘಟನೆ ಮಾಣಿ ಸಮೀಪದ ಗಡಿಯಾರ ಎಂಬಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. ನೇರಳಕಟ್ಟೆ ಸಮೀಪದ ಬಾಡಿಗೆ ಮನೆಯಲ್ಲಿ ವಾಸವಿರುವ ಶರೀಫ್ ಅವರ ಪುತ್ರ ಶಹೀರ್(15) ಮೃತಪಟ್ಟ ಬಾಲಕ.



ಪುತ್ತೂರು ಮೌಂಟೇನ್ ವ್ಯೂ ಆಂಗ್ಲ ಮಾಧ್ಯಮ ಶಾಲೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯಾಗಿದ್ದ ಈತ ಶಾಲೆಗೆ ರಜೆಯ ಹಿನ್ನಲೆಯಲ್ಲಿ ಸಮೀಪದ ಗಡಿಯಾರ ದಲ್ಲಿರುವ ಅಜ್ಜನ ಮನೆಗೆ ತೆರಳಿದ್ದ. ಶನಿವಾರ ಬೆಳಗ್ಗೆ ಆಕಸ್ಮಿಕವಾಗಿ ವಿದ್ಯುತ್ ತಂತಿ ತಗುಲಿ ಶಹೀರ್ ಮೃತಪಟ್ಟಿದ್ದಾನೆ. ಮೃತ ಶಹೀರ್ ತಂದೆ, ತಾಯಿ, ತಮ್ಮ, ಇಬ್ಬರು ಸಹೋದರಿಯರ ಸಹಿತ ಅಪಾರ ಬಂಧುಗಳನ್ನು ಅಗಲಿದ್ದಾನೆ.

ಗುಂಡಿಗೆ ಬಿದ್ದ ಬೈಕ್: ಗಾಯಾಳು ಸವಾರ ಸಾವು

ಉಪ್ಪಿನಂಗಡಿ : ನಿಯಂತ್ರಣ ತಪ್ಪಿದ ಬೈಕ್ ಗುಂಡಿಗೆ ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಲಿಖಿತ್ ರೈ ಸಾವನ್ನಪ್ಪಿರುವ ಘಟನೆ ಶನಿವಾರ ಸಂಭವಿಸಿದೆ. ಹಿರೇಬಂಡಾಡಿ ನಿವಾಸಿ ರವೀಂದ್ರ ರೈ ಎಂಬವರ ಮಗನಾಗಿರುವ ಈತ ಏ.22ರಂದು ಸಂಜೆ ಬೈಕ್ ನಲ್ಲಿ ಉಪ್ಪಿನಂಗಡಿ-ಕೊಯಿಲ ಸಾರ್ವಜನಿಕ ರಸ್ತೆಯಲ್ಲಿ ಸವಾರಿ ಮಾಡಿಕೊಂಡು ಹೋಗುತ್ತಾ ಹಿರೇಬಂಡಾಡಿ ಗ್ರಾಮದ



ಶಾಖೆಮರ ಎಂಬಲ್ಲಿ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಗುಂಡಿಗೆ ಬಿದ್ದು ಗಾಯಗೊಂಡಿದ್ದರು. ಗಾಯಗೊಂಡಿದ್ದ ಲಿಖಿತ್‌ನನ್ನು ಸಾರ್ವಜನಿಕರು ಉಪಚರಿಸಿ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿಂದ ಆ ಪುತ್ತೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ತಲೆಗೆ ಗಂಭೀರ ಸ್ವರೂಪದ ಗಾಯಪಡೆದಿದ್ದ ಲಿಖಿತ್ ರೈ ಚಿಕಿತ್ಸೆಗೆ ಸ್ಪಂದಿಸದೆ ಶನಿವಾರದಂದು ಮೃತಪಟ್ಟಿರುವುದಾಗಿ ವರದಿಯಾಗಿದೆ. ಘಟನೆ ಕುರಿತು ಹಿರೇಬಂಡಾಡಿ ನಿವಾಸಿ ದಯಾನಂದ ಎಂಬವರು ನೀಡಿದ ದೂರಿನಂತೆ ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡುತ್ತಿದೆ ಸರಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ, ಎಲುಬು ರೋಗ, ಶಿಶುರೋಗ ತಪಾಸಣೆಗೆ ತಜ್ಞ ವೈದ್ಯರ ಕೊರತೆ

ಕಾಸರಗೋಡಲ್ಲಿ ರೋಗಿಗಳ ಪರದಾಟ





ಕಾಸರಗೋಡು: ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಸಹಿತ 126 ವೈದ್ಯರ ಕೊರತೆಯಿದೆ. ಹೆರಿಗೆ, ಎಲುಬು ರೋಗ, ಶಿಶುರೋಗ ತಜ್ಞ ವೈದ್ಯರ ಕೊರತೆ ಕಂಡುಬರುತ್ತಿದ್ದು, ರೋಗಿಗಳು ಪರದಾಡುವಂತಾಗಿದೆ.

ಒಳರೋಗಿ ಚಿಕಿತ್ಸಾ ಸೌಕರ್ಯವಿರುವ ಜಿಲ್ಲೆಯ ಹತ್ತಕ್ಕೂ ಅಧಿಕ ಆಸ್ಪತ್ರೆಗಳಲ್ಲಿ ಕೇವಲ 7 ಮಂದಿ ಸ್ತ್ರೀರೋಗ ತಜ್ಞರು ಮಾತ್ರ ಇದ್ದಾರೆ. ಇದರಲ್ಲಿ ಒಬ್ಬರು ತಾತ್ಕಾಲಿಕವಾಗಿ ನೇಮಕವಾಗಿದ್ದರೆ, ಮೂವರು ಈ ವರ್ಷ ನಿವೃತ್ತರಾಗಲಿದ್ದಾರೆ. ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಗರ್ಭಿಣಿಯರು ಚಿಕಿತ್ಸೆ ಪಡೆಯುವುದು ಕಾಸರಗೋಡು ಜನರಲ್ ಆಸ್ಪತ್ರೆ, ಕಾಞಂಗಾಡು ಜಿಲ್ಲಾಸ್ಪತ್ರೆ ಹಾಗೂ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯನ್ನಾಗಿದೆ. ಈ ಆಸ್ಪತ್ರೆಗಳಲ್ಲಿ ಸ್ತ್ರೀರೋಗ ಚಿಕಿತ್ಸಾ ವಿಭಾಗ ಕಾರ್ಯಾಚರಿಸುತ್ತಿದ್ದರೂ, ವೈದ್ಯರ ಕೊರತೆಯು ದೊಡ್ಡ ಸಮಸ್ಯೆಯಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಚಿಕಿತ್ಸೆಗಾಗಿ ಒಂದು ಲಕ್ಷ ರೂ.ಗೂ ಅಧಿಕ ಹಣ ಖರ್ಚಾಗುತ್ತದೆ. ಆದ್ದರಿಂದ ಬಡ ಕುಟುಂಬಗಳು ಸರಕಾರಿ ಆಸ್ಪತ್ರೆಗಳನ್ನು ಆಶ್ರಯಿಸುತ್ತಿದ್ದಾರೆ. ಆದರೆ ಆಸ್ಪತ್ರೆಯಲ್ಲಿ ತಜ್ಞ ವೈದ್ಯರಿಲ್ಲದೆ ಇರುವುದು ರೋಗಿಗಳನ್ನು ಸಂಕಷ್ಟ ಕ್ಕೀಡು ಮಾಡಿದೆ.

ಒಂದು ತಿಂಗಳ ಹಿಂದಿನ ವರೆಗೆ ನಾಲ್ವರು ಆರ್ಥೋ ವೈದ್ಯರು ಜಿಲ್ಲಾಸ್ಪತ್ರೆಯಲ್ಲಿ ಕರ್ತವ್ಯ ಸಲ್ಲಿಸುತ್ತಿದ್ದರು. ಪ್ರಸ್ತುತ ಒಬ್ಬರು ಮಾತ್ರ ಕರ್ತವ್ಯದಲ್ಲಿದ್ದಾರೆ. ಇದರಿಂದ ವೈದ್ಯರು ಭಾರಿ ಒತ್ತಡದಲ್ಲಿ ಕಾರ್ಯನಿರ್ವಹಿಸಬೇಕಿದೆ. ಜಿಲ್ಲೆಯಲ್ಲಿ ಮೂರು ವರ್ಷ ಸರ್ವೀಸ್ ಪೂರ್ತಿಗೊಳಿಸಿದ ವೈದ್ಯರು ವರ್ಗಾವಣೆಗೆ ಅರ್ಹರಾಗಿದ್ದಾರೆ. ಆದ್ದರಿಂದ ಇನ್ನು ಮತ್ತಷ್ಟು ವೈದ್ಯರ ಕೊರತೆ ಕಂಡುಬರಲಿದೆ.

> 'ಜಿಲ್ಲೆಯ ಹತ್ತಕ್ಕೂ ಅಧಿಕ ಆಸ್ಪತ್ರೆಗಳಲ್ಲಿ ಕೇವಲ 7 ಮಂದಿ ಸ್ತ್ರೀರೋಗ ತಜ್ಞರು ಮಾತ್ರ ಇದ್ದಾರೆ.
>
> ಆಸ್ಪತ್ರೆಯಲ್ಲಿ ತಜ್ಞ ವೈದ್ಯರಿಲ್ಲದೆ ಇರುವುದು ರೋಗಿಗಳನ್ನು ಸಂಕಷ್ಟ ಕ್ಕೀಡುಮಾಡಿದೆ.

ಹುದ್ದೆ ಮಂಜೂರುಗೊಳಿಸಿದರೂ ನೇಮಕಾತಿ ನಡೆದಿಲ್ಲ

ಕಾಞಂಗಾಡು ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ಪೂಡಂಕಲ್ಲು ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗಳನ್ನು ಮಂಜೂರು ಗೊಳಿಸಲಾಗಿದೆಯಾದರೂ ನೇಮಕಾತಿ ನಡೆದಿಲ್ಲ.

ಡಿಎಂಒ ಡಾ.ಎ.ವಿ.ರಾಮ್‌ದಾಸ್ ಮಾರ್ಚ್ ನಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ಪ್ರಸ್ತುತ ಕಾಞಂಗಾಡು ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ ಸೂಪರಿಟೆಂಡೆಂಟ್ ಡಾ.ಬಿ.ಸಂತೋಷ್, ಡಿಎಂಒ ಅವರ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದಾರೆ. ಡಿಎಂಒ ಹಾಗೂ ಸೂಪರಿಂಟೆಂಡೆಂಟ್ ಹೊಣೆ ಗಾರಿಕೆಯ ಹೊರತು ಅವರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಹಾಗೂ ಸಹಾಯಕ ಡಿಎಂಒ (ಡಿಎಸ್‌ಒ) ಹೊಣೆಗಾರಿಕೆಯನ್ನು ಕೂಡಾ ನೀಡಲಾಗಿದೆ.

ಜಿಲ್ಲೆಯ ಬಡರೋಗಿಗಳು ಅನುಭವಿಸುವ ಸಂಕಷ್ಟಗಳನ್ನು ಪರಿಹರಿಸಲು ಸಂಬಂಧಪಟ್ಟ ಅಧಿಕಾರಿ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರನ್ನು ಕೂಡಲೇ ನೇಮಕಾತಿ ನಡೆಸಬೇಕು. ಇಲ್ಲವಾದರೆ ಪ್ರಬಲ ಪ್ರತಿಭಟನೆ ಮೊದಲಾದ ಹೋರಾಟ ನಡೆಸಬೇಕಾದೀತು ಎಂದು ನಾಗರಿಕರು ಎಚ್ಚರಿಕೆ ನೀಡಿದ್ದಾರೆ.

ಸರಕಾರ ಕ್ರಮ ಕೈಗೊಳ್ಳಲಿ

ಜಿಲ್ಲೆಯ ಆರೋಗ್ಯ ವಲಯವು ಎದುರಿಸುವ ಸಮಸ್ಯೆಗೆ ರಾಜ್ಯಮಟ್ಟದಲ್ಲೇ ಪರಿಹಾರ ಕಲ್ಪಿಸಬೇಕಿದೆ. ಕಟ್ಟಡಗಳು ಮೊದಲಾದ ಭೌತಿಕ ಪರಿಸ್ಥಿತಿಯಲ್ಲಿ ಜಿಲ್ಲೆಯ ಆರೋಗ್ಯ ವಲಯ ಮುಂಚೂಣಿಯಲ್ಲಿದ್ದರೂ ವೈದ್ಯರು, ನರ್ಸ್‌ಗಳು, ಆರೋಗ್ಯ ಕಾರ್ಯಕರ್ತರ ಕೊರತೆಯೂ ಕಂಡುಬರುತ್ತಿದೆ. ಇದನ್ನು ಪರಿಹರಿಸಲು ಸರಕಾರ ಕ್ರಮ ಕೈಗೊಳ್ಳಬೇಕಾಗಿದೆ.

ಮಂಗಳೂರು ಏರ್‌ಪೋರ್ಟ್‌ಗೆ ಮತ್ತೊಂದು ಹಿರಿಮೆ

ಝೀರೋ ವೇಸ್ಟ್ ಟು ಲ್ಯಾಂಡ್‌ಫಿಲ್ ಪ್ರಮಾಣಪತ್ರ



ಮಂಗಳೂರು: ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತನ್ನ ಪರಿಸರ ಸ್ನೇಹಿ ಪ್ರಯತ್ನಗಳಲ್ಲಿ ಮಹತ್ವದ ಮೈಲುಗಲ್ಲು ಸಾಧಿಸಿದೆ. ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ ವತಿಯಿಂದ ನಡೆಸಿದ ಕಠಿಣ ತಪಾಸಣೆಯ ಬಳಿಕ, ವಿಮಾನ ನಿಲ್ದಾಣಕ್ಕೆ ಪ್ರತಿಷ್ಠಿತ ಝೀರೋ ವೇಸ್ಟ್ ಟು ಲ್ಯಾಂಡ್‌ಫಿಲ್ ಪ್ರಮಾಣಪತ್ರ ದೊರೆತಿದೆ.

ಈ ಪ್ರಮಾಣಪತ್ರದಲ್ಲಿ ವಿಮಾನ ನಿಲ್ದಾಣವು ಪ್ಲಾಟಿನಂ ಕ್ಲಾಸ್ 1 ರೇಟಿಂಗ್ ಪಡೆದಿದ್ದು, ಇದು ಅತ್ಯುನ್ನತ ವರ್ಗವಾಗಿದೆ. ಶೇ. 99 ಕ್ಕಿಂತ ಹೆಚ್ಚು ತ್ಯಾಜ್ಯವನ್ನು ಲ್ಯಾಂಡ್ ಫಿಲ್‌ಗೆ ಹೋಗದಂತೆ ತಡೆದು, ಮರುಬಳಕೆ, ಮರುಸಂಸ್ಕರಣೆ ಹಾಗೂ ಪುನಃಪ್ರಯೋಜನೆ ಮೂಲಕ ಪರಿಸರದ ಮೇಲೆ ಪರಿಣಾಮವನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿದೆ.

ಈ ಸಾಧನೆ ಮಂಗಳೂರು ವಿಮಾನ ನಿಲ್ದಾಣವನ್ನು ಪರಿಸರ ಜವಾಬ್ದಾರಿಯುತ ವಿಮಾನ ನಿಲ್ದಾಣವಾಗಿ ಮತ್ತಷ್ಟು ಬಲಪಡಿಸಿದ್ದು, ರಾಷ್ಟ್ರೀಯ ಹಾಗೂ ಜಾಗತಿಕ ಸ್ಥಿರತೆಯ ಗುರಿಗಳೊಂದಿಗೆ ಹೊಂದಾಣಿಕೆ ಸಾಧಿಸಿದೆ. ಭಾರತೀಯ ವಿಮಾನಯಾನ ಕ್ಷೇತ್ರದಲ್ಲಿ ತ್ಯಾಜ್ಯ ನಿರ್ವಹಣೆಯ ಉತ್ತಮ ಮಾದರಿಯನ್ನು ಸ್ಥಾಪಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ಶಾಲಾ ಕಟ್ಟಡಗಳ ಫಿಟ್ನೆಸ್ ಸರ್ಟಿಫಿಕೇಟ್: ಮುಖ್ಯೋಪಾಧ್ಯಾಯರಿಗೆ ಮೇ 30 ಗಡು

ಕಾಸರಗೋಡು: ಮುಂದಿನ ಶೈಕ್ಷಣಿಕ ವರ್ಷ ಜೂನ್‌ನಲ್ಲಿ ಆರಂಭಗೊಳ್ಳಲಿರುವಂತೆಯೇ ಶಾಲಾ ಕಟ್ಟಡಗಳ ದುರಸ್ತಿ ಕೆಲಸವನ್ನು ಪೂರ್ತಿಕರಿಸಿ ಅದರ ಫಿಟ್ನೆಸ್ ಸರ್ಟಿಫಿಕೇಟ್‌ನ್ನು ಆಯಾ ಶಾಲಾ ಮುಖ್ಯೋಪಾಧ್ಯಾಯರು ಮೇ 30ರೊಳಗಾಗಿ ಪಡೆದುಕೊಳ್ಳಬೇಕೆಂದು ರಾಜ್ಯ ಶಿಕ್ಷಣ ಇಲಾಖೆ ನಿರ್ದೇಶನ ನೀಡಿದೆ. ಈ ವರ್ಷದಿಂದ ಶಲಾ ಕಟ್ಟಡಗಳಿಗೆ ಫಿಟ್ನೆಸ್ ಲಭಿಸಲು ವಿವಿಧ ಸರ್ಟಿಫಿಕೇಟ್‌ಗಳನ್ನು ಪಡೆದುಕೊಳ್ಳಬೇಕು.

ಅದರಂತೆ ವಿದ್ಯುನ್ಮಂಡಳಿ, ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಮತ್ತು ಮೋಟಾರು ವಾಹನ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಶಾಲೆಗಳಿಗೆ ಸಂದರ್ಶಿಸಿ ಶಾಲೆಗಳ ಸುರಕ್ಷತೆಯ ಬಗ್ಗೆ ಆಡಿಟ್ ನಡೆಸಿ ಸರ್ಟಿಫಿಕೇಟ್ ನೀಡಬೇಕಾಗಿದೆ. ಅಗ್ನಿಬಾಧೆ ಸಾಧ್ಯತೆಯಿಲ್ಲ ಎಂಬುದನ್ನು ಖಾತರಿಪಡಿಸುವ ಸರ್ಟಿಫಿಕೇಟ್‌ನ್ನು ಅಗ್ನಿಶಾಮಕ ದಳ ನೀಡಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಶಾಲಾ ಕಟ್ಟಡಗಳ ಫಿಟ್ನೆಸ್ ನಡೆಸಬೇಕಾದ ಮಾನದಂಡಗಳನ್ನು ಸರಕಾರ ಇನ್ನೂ ನೀಡಿಲ್ಲ. ಇದು ಸಂಬಂಧಪಟ್ಟ ಇಲಾಖೆಗಳು ಮತ್ತು ಶಾಲಾ ಮುಖ್ಯೋಪಾಧ್ಯಾಯರಲ್ಲಿ ಇನ್ನೊಂದೆಡೆ ತೀವ್ರ ಗೊಂದಲಕ್ಕೆ ಸಿಲುಕುವಂತೆ ಮಾಡಲಿದೆ.

ಲೋನ್ ಆ್ಯಪ್ ವಂಚನೆ ಕೂಪ: ಸಂತ್ರಸ್ತರಲ್ಲಿ ಮಹಿಳೆಯರು, ವಿದ್ಯಾರ್ಥಿಗಳ ಸಂಖ್ಯೆ ಹಿರಿದು

ಕಾಸರಗೋಡು: ಲೋನ್ ಆ್ಯಪ್‌ನ ವಂಚನೆಯ ಕೂಪದಲ್ಲಿ ಸಿಲುಕಿದವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ವಿದ್ಯಾರ್ಥಿಗಳಾಗಿದ್ದಾರೆ. ವ್ಯಕ್ತಿಗಳ ಜಾಮೀನು ಅಥವಾ ಯಾವುದೇ ವಸ್ತುವನ್ನು ಅಡವಿರಿಸದೆ ಹಾಗೂ ಇತರ ಯಾವುದೇ ರೀತಿಯ ನಿಬಂಧನೆಗಳೂ ಇಲ್ಲದೆ ಗಂಟೆಗಳೊಳಗಾಗಿ ಸಾಲ ನೀಡಲಾಗುವುದೆಂಬ ರೀತಿಯ ಆಕರ್ಷಕ ಭರವಸೆಗಳನ್ನು ನೀಡಿ ವಂಚಿಸುವ ಸೈಬರ್ ವಂಚಕರ ಜಾಲವಾಗಿದೆ ಲೋನ್ ಆ್ಯಪ್.



ಮೊಬೈಲ್‌ಫೋನ್ ಗೂಗಲ್ ಪ್ಲೇಸ್ಟೋರ್‌ನಿಂದ ಸಾಧಾರಣವಾಗಿ ಯಾವುದೇ ರೀತಿಯ ಆ್ಯಪ್‌ಗಳನ್ನು ಡೌನ್ ಲೋಡ್ ಮಾಡಲಾಗುತ್ತಿದೆ. ಆದರೆ ವಂಚಕರು ಗೂಗಲ್ ಪ್ಲೇ ಸ್ಟೋರ್‌ನ ಬದಲು ಸೋಶಿಯಲ್ ಮಾಧ್ಯಮಗಳ ಮೂಲಕ ಲಭಿಸುವ ಲಿಂಕ್‌ಗಳ ಮೂಲಕ ಇನ್‌ಸ್ಟಾಲ್ ಮಾಡಲು ಸಾಧ್ಯವಾಗುವ ರೀತಿಯಲ್ಲಿ ಸಾಲ ಆ್ಯಪ್‌ಗೆ ರೂಪು ನೀಡುತ್ತಾರೆ.

ಇಂತಹ ಆ್ಯಪ್‌ಗಳನ್ನು ಉಪಯೋಗಿಸುವವರ ಮೊಬೈಲ್ ಗ್ಯಾಲರಿ ಮತ್ತು ಕಾಂಟಾಕ್ಟ್ ನಂಬ್ರಗಳನ್ನು ಆ ಮೊಬೈಲ್‌ನ ಮಾಲಕರಿಗೆ ತಿಳಿಯದೇ ಅದನ್ನು ಪಡೆದುಕೊಂಡು ಉಪಯೋಗಿಸಿ ಸಾಲಕ್ಕಾಗಿ ಸಂಪರ್ಕಿಸುವವರನ್ನು ತಮ್ಮ ವಂಚನಾ ಜಾಲದಲ್ಲಿ ಸಿಲುಕಿಸಿ ಆನ್‌ಲೈನ್ ಸಾಲದ ಹೆಸರಲ್ಲಿ ಹಣ ಎಗರಿಸುತ್ತಾರೆ. ಹೀಗೆ ಸೈಬರ್ ವಂಚಕರ ಬಲೆಗೆ ಬಿದ್ದ ವಂಚನೆಗಾರರಲ್ಲಿ ಕೆಲವರು ಮಾತ್ರವೇ ಪೊಲೀಸರಿಗೆ ದೂರು ನೀಡಲು ಮುಂದಾಗುತ್ತಾರೆ.

ನಕಲಿ ಸಾಲ ಆ್ಯಪ್

ಇಂತಹ ಲೋನ್ ಆ್ಯಪ್ ಮೂಲಕ ಕಳೆದ ಮೂರು ವರ್ಷದಲ್ಲಿ ಸೈಬರ್ ವಂಚಕರು 70 ಕೋಟಿ ರೂ.ನಷ್ಟು ಹಣ ಎಗರಿಸಿದ್ದಾರೆ. ಹೀಗೆ ವಂಚನೆಗೊಳಗಾದವರಲ್ಲಿ ಬಹುಪಾಲು ಮಂದಿ ಮಹಿಳೆ ಯರು, ಖಾಸಗಿ ಸಂಸ್ಥೆಗಳ ಸಿಬ್ಬಂದಿಗಳು ವಂಚನಾ ಜಾಲದಲ್ಲಿ ಮತ್ತು ವಿದ್ಯಾರ್ಥಿಗಳೇ ಆಗಿದ್ದಾರೆ. ಹೀಗೆ ಸಿಲುಕಿಕೊಂಡಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಅವರ ಮನೆ ಯವರಿಗೆ ತಿಳಿಯದೇ ಇಂತಹ ಜಾಲದಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಾಲ ಲಭಿಸಲು ಮಾರ್ಗಗಳಿಲ್ಲದವರು ಇಂತಹ ನಕಲಿ ಸಾಲ ಆ್ಯಪ್‌ಗಳ ಬಲೆಗೆ ಸಿಲುಕಿಕೊಳ್ಳುತ್ತಿದ್ದಾರೆ.

ಭಜನೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಬರಹ

ಅರಣ್ಯ ಅಧಿಕಾರಿ ವಿರುದ್ಧ ದೂರು



ಕಡಬ: ಭಜನೆ ಮತ್ತು ಭಜಕರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಬರಹಗಳನ್ನು ಹಂಚುವ ಮೂಲಕ ಹಿಂದೂ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ ಎಂದು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಂಜೀವ ಪೂಜಾರಿ ಕಾಣಿಯೂರು ಎಂಬವರ ವಿರುದ್ಧ ಶ್ರೀ ಕ್ಷೇತ್ರ ಧರ್ಮಸ್ಥಳ ಭಜನಾ ಪರಿಷತ್‌ನ ಕಡಬ ತಾಲೂಕು ಘಟಕದ ನೇತೃತ್ವದಲ್ಲಿ ಕಡಬ ಪೊಲೀಸ್ ಠಾಣೆಯ ಮೂಲಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಲಾಗಿದೆ.

ಕಡಬದ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಪೊಲೀಸ್ ಠಾಣೆಗೆ ತೆರಳಿದ ಭಜನಾ ಪರಿಷತ್‌ನ ನಿಯೋಗವು ದೂರು ಸಲ್ಲಿಸಿತು. ಸಂಜೀವ ಪೂಜಾರಿ ಕಾಣಿಯೂರು ಎಂಬವರು ತಾನು ಒಬ್ಬ ಸರಕಾರಿ ಸೇವೆಯಲ್ಲಿರುವ ಅಧಿಕಾರಿ ಎನ್ನುವುದನ್ನು ಮರೆತು ಹಿಂದೂ ಬಾಂಧವರು ಶ್ರದ್ಧಾ ಭಕ್ತಿಯಿಂದ ಭಗವಂತನನ್ನು ಆರಾಧಿಸಿಕೊಂಡು ಬರುವ ಮಾರ್ಗವಾದ ಭಜನೆ ಮತ್ತು ಭಜಕರ ಬಗ್ಗೆ ಅತ್ಯಂತ ಕೀಳು ಮಟ್ಟದ ಶಬ್ದಗಳನ್ನು ಉಪಯೋಗಿಸಿಕೊಂಡು ಅವಹೇಳನಕಾರಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಬರಹಗಳನ್ನು ಹರಿಯ ಬಿಡುತ್ತಿರುವುದು ಅತ್ಯಂತ ಖಂಡನೀಯ. ಹಿಂದೂ ಸಹೋದರಿಯರ ಕುಣಿತ ಭಜನೆಗೆ ಕೀಳು ಮಟ್ಟದ ಪದ ಬಳಕೆ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುತ್ತಾರೆ. ಅದರೊಂದಿಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಧಾರ್ಮಿಕ ನಂಬಿಕೆಗೆ ವಿರೋಧಾಭಾಸ ಹೇಳಿಕೆ ಕೊಡುತ್ತ ಸಾಮಾಜಿಕ ಶಾಂತಿ ಭಂಗಕ್ಕೆ ಕಾರಣರಾಗುತ್ತಿದ್ದಾರೆ. ಈ ಹಿಂದೆಯೂ ಇದೇ ರೀತಿಯಲ್ಲಿ ಆ ವ್ಯಕ್ತಿ ಸಾಮಾಜಿಕ ಜಾಲತಾಣದಲ್ಲಿ ಭಜನೆ ಮತ್ತು ಹಿಂದೂ ಧಾರ್ಮಿಕತೆಯ ಬಗ್ಗೆ ಅವಹೇಳನಕಾರಿಯಾಗಿ ಬರೆದಿದ್ದು, ತನ್ನ ಕೆಟ್ಟ ಪ್ರವೃತ್ತಿಯಿಂದ ಹಿಂದೂ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದ್ದಾನೆ. ಆತನ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಜರುಗಿಸಿ ಹಿಂದೂ ಸಮಾಜಕ್ಕೆ ನ್ಯಾಯ ಒದಗಿಸಿ ಕೊಡಬೇಕೆಂದು ದೂರಿನಲ್ಲಿ ಕೇಳಿಕೊಳ್ಳಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಭಜನಾ ಪರಿಷತ್‌ನ ಕಡಬ ತಾಲೂಕು ಘಟಕದ ಅಧ್ಯಕ್ಷ ಸುಂದರ ಗೌಡ ಒಗ್ಗು ಬಿಳಿನೆಲೆ, ಗೌರವ ಸಲಹೆಗಾರ ಸತ್ಯನಾರಾಯಣ ಹೆಗ್ಡೆ ನಡುಮಜಲು, ಉಪಾಧ್ಯಕ್ಷ ಕೃಷ್ಣಪ್ಪ ಕೊಣಾಜೆ, ಕಾರ್ಯದರ್ಶಿ ದೀಪಿಕ್ ನಾವೂರು, ಸಮನ್ವಯಾಧಿಕಾರಿ ಸಂತೋಷ್ ಮೂಡಬಿದ್ರೆ, ಗ್ರಾಮಾಭಿವೃದ್ಧಿ ಯೋಜನೆಯ ಕಡಬ ತಾಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್, ಮೇಲ್ವಿಚಾರಕ ವಿಜೇಶ್ ಜೈನ್, ವಿಹಿಂಪ ಮುಂದಾಳು ಪ್ರಮೋದ್ ರೈ ನಂದುಗುರಿ, ಕಡಬ ಪಟ್ಟಣ ಪಂಚಾಯತ್ ಸದಸ್ಯ ದಯಾನಂದ ಗೌಡ ಪಿಜಕ್ಕಳ, ಪ್ರಮುಖರಾದ ಅಶೋಕ್ ಕುಮಾರ್ ಪಿ., ಸುಂದರ ಗೌಡ ಪಿಜಕ್ಕಳ, ದೇವರಾಯ ಆಚಾರ್ಯ, ಸರೋಜ ಆಲಂಕಾರು, ನೆಲ್ಯಾಡಿಯ ಧರ್ಮಶ್ರೀ ಭಜನಾ ಮಂಡಳಿಯ ಅಧ್ಯಕ್ಷೆ ಭಾರತಿ ಹಾಗೂ ಸದಸ್ಯರು ನಿಯೋಗದಲ್ಲಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಭಾನುವಾರ 26, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
37° 27°	33° 28°


ಪುಟ 3
ಕೊಲ್ಲಿ ಯುದ್ಧ: ಸಂಕಷ್ಟದಲ್ಲಿ ಕಾಸರಗೋಡಿನ ವ್ಯಾಪಾರ, ವ್ಯವಹಾರ


ಪುಟ 5
ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಮಹೋತ್ಸವ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಪ್ರಸಿದ್ಧ ಪ್ರವಾಸಿ ತಾಣ ಚಂದ್ರಗಿರಿ ಕೋಟೆಯ ಅಭಿವೃದ್ಧಿಯತ್ತ ಕಾಸರಗೋಡು ಜಿಲ್ಲಾಡಳಿತದ ಚಿತ್ತ




ಕಾಸರಗೋಡು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳ ಪೈಕಿ ಒಂದಾಗಿರುವ ಚಂದ್ರಗಿರಿ ಕೋಟೆಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಶನಿವಾರ ಭೇಟಿ ನೀಡಿದರು. ಈ ಸಂದರ್ಭ ಇಲ್ಲಿನ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಎಲ್ಲಾ ಅಗತ್ಯದ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. (ವಿವರಗಳು ಪುಟ 3)

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಮುಂದುವರಿದ ಮೋಡ, ಬಿಸಿಲಿನ ಕಣ್ಣಾಮುಚ್ಚಾಲೆ

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಶನಿವಾರ ಮೋಡ, ಬಿಸಿಲಿನ ಕಣ್ಣಾಮುಚ್ಚಾಲೆ ಮುಂದುವರಿದಿತ್ತು.

ಗರಿಷ್ಟ ತಾಪಮಾನ 39 ಡಿಗ್ರಿ!

ತಾಪಮಾನದಲ್ಲಿ ಮತ್ತಷ್ಟು ಏರಿಕೆ ಕಾಣಿಸಿಕೊಳ್ಳುತ್ತಿದ್ದು ಸುಡು ಬಿಸಿಲಿಗೆ ಜನತೆ ಅಕ್ಷರಶಃ ಹೈರಾಣಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಟ 39 ಡಿಗ್ರಿ, ಉಡುಪಿಯಲ್ಲಿ 35 ಡಿಗ್ರಿ ಹಾಗೂ ಕಾಸರಗೋಡಿನಲ್ಲಿ 36 ಡಿಗ್ರಿ ಉಷ್ಣಾಂಶ ದಾಖಲಾಗಿದೆ.

ಸುರತ್ಕಲ್ ಪರಿಸರದಲ್ಲಿ ಕಾಡುಕೋಣನ ಸವಾರಿ: ಸ್ಥಳೀಯರಲ್ಲಿ ಆತಂಕ

ಮಂಗಳೂರು: ನಗರದ ಹೊರವಲಯ ಸುರತ್ಕಲ್ ಪರಿಸರದ ಸುಭಾಷಿತ ನಗರ ಪರಿಸರದಲ್ಲಿ ಕಾಡುಕೋಣವೊಂದು ಸಂಚಾರ ನಡೆಸುತ್ತಿದ್ದುದು ಕಂಡುಬಂದಿದ್ದು, ಈ ಬೆಳವಣಿಗೆ ಸ್ಥಳೀಯರಲ್ಲಿ ಆತಂಕ ಉಂಟುಮಾಡಿದೆ.

ಇಲ್ಲಿನ ಕುರುಚಲು ಪೊದೆಗಳ ನಡುವೆ ಈ ಕಾಡುಕೋಣ ಕಾಣಸಿಕ್ಕಿದ್ದು, ಬಳಿಕ ಅಲ್ಲಿಂದ ಮರೆಯಾಗಿದೆ. ಇದೀಗ ಈ ಕಾಡುಕೋಣಕ್ಕಾಗಿ ತೀವ್ರ ಹುಡುಕಾಟ ಸ್ಥಳೀಯರಿಂದ ಮುಂದುವರಿದಿದೆ.

ಕಳಾಯಿ ಹೊಳೆಯಿಂದ ಮರಳು ಸಾಗಾಟ: ಇಬ್ಬರ ಬಂಧನ, ಲಾರಿ ವಶಕ್ಕೆ

ಕುಂಬಳೆ: ಹೊಳೆಯಿಂದ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಇಬ್ಬರನ್ನು ಮಂಜೇಶ್ವರ ಪೊಲೀಸರು ಬಂಧಿಸಿದ್ದಾರೆ. ಮೀಂಜ ಪಂಚಾಯತ್‌ನ ಅಮೆರಡ್ಕ ಕಳ್ಳಿಗೆ ನಿವಾಸಿ ಸದಾನಂದ (57), ಲಾರಿ ಚಾಲಕ ಕನಿಲ ಬಡಾಜೆಯ ಜಾಕಿರ್ (31) ಬಂಧಿತರು.

ಅವರ ವಿರುದ್ಧ ಸಾರ್ವಜನಿಕ ಸೊತ್ತು ಕಳವು ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮರಳು ಸಾಗಿಸಲು ಬಳಸಿದ್ದ ಟಿಪ್ಪರ್ ಲಾರಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಕೆಲವು ಕಡೆಗಳಲ್ಲಿ ಗುಡುಗು ಸಹಿತ ಮಳೆ?

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಇಂದು (ಏ.26) ಗುಡುಗಿನಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಳಿದಂತೆ ಎಲ್ಲೆಡೆ ಬಿಸಿಲಿನ ವಾತಾವರಣ ಮುಂದುವರಿಯಲಿದೆ.

ತುಂಬೆ ಡ್ಯಾಂ ನೀರಿನ ಮಟ್ಟದಲ್ಲಿ ಇನ್ನಷ್ಟು ಇಳಿಕೆ
ಗೇಟ್‌ಗೆ ಬಿತ್ತು ಬೀಗ!
ಈಗ ಜಲ ಸಂಗ್ರಹ ಕಡೆಗೆ ಆಡಳಿತದ ಹೆಜ್ಜೆ

ಬಂಟ್ವಾಳ: ತುಂಬೆ ಆಣೆಕಟ್ಟಿನಲ್ಲಿ ನೀರಿನ ಮಟ್ಟ ಸತತ ಇಳಿಕೆಯಾಗುತ್ತಿದ್ದು, ಮುಂದಿನ ಒಂದು ತಿಂಗಳ ಅವಧಿಯಲ್ಲಿ ಭರ್ಜರಿ ಮಳೆ ಬಾರದಿದ್ದಲ್ಲಿ ಮಂಗಳೂರು ಮಹಾನಗರದ ಜನತೆಗೆ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆ ನಿಧಾನವಾಗಿ ಗೋಚರಿಸುತ್ತಿವೆ.


ಸಂಗಮ ವಿಶೇಷ

ಶನಿವಾರ ಜಲಮಟ್ಟ ಮತ್ತಷ್ಟು ಇಳಿಕೆ

ಶನಿವಾರ ಸಂಜೆ ವೇಳೆಗೆ ತುಂಬೆ ವೆಂಟೆಡ್ ಡ್ಯಾಂನಲ್ಲಿ ನೀರಿನ ಮಟ್ಟ 4.30 ಮೀ. ಅಡಿಯಷ್ಟು ಮಾತ್ರ ಶೇಖರಣೆಯದೆ ಎಂದು ತಿಳಿದು ಬಂದಿದ್ದು, ಸದ್ಯ ಡ್ಯಾಂನ ಎಲ್ಲಾ ಗೇಟ್ ಗಳನ್ನುಮುಚ್ಚಿ ನೀರು ಸಂಗ್ರಹಿಸಿಡಲಾಗುತ್ತಿದೆ. ಬಿಸಿಲಿ ಝಳಕ್ಕೆ ನೇತ್ರಾವತಿ ನದಿಯಲ್ಲಿ ದಿನೇ ದಿನೇ ನೀರಿನ ಮಟ್ಟ ಕುಸಿತ ಕಾಣುತ್ತಿದೆ. ತುಂಬೆ ಮಾತ್ರವಲ್ಲ ಜಕ್ರಿಬೆಟ್ಟು ಡ್ಯಾಂನಲ್ಲೂ ನೀರಿನ ಮಟ್ಟದಲ್ಲಿ ಗೊತ್ತಾಗದಂತೆ ಇಳಿಕೆಯಾಗುತ್ತಿದೆ. ಆದರೂ ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ ಜನತೆಗೆ ನೀರಿನ ಸಮಸ್ಯೆ ಸದ್ಯಕ್ಕೆ ಗೋಚರಿಸಿಲ್ಲ. ತುಂಬೆ ವೆಂಟೆಡ್ ಡ್ಯಾಂನ ನೀರಿನ ಮಟ್ಟದಲ್ಲಿ ಇನ್ನಷ್ಟು ಇಳಿಕೆಯಾದರೆ ಮಂಗಳೂರು ಮಹಾ ನಗರದ ಜನತೆ ಕುಡಿಯುವ ನೀರಿನ ಸಮಸ್ಯೆ ಎದುರಿಸಬೇಕಾಗಬಹುದು. »ಪುಟ 5

ಸದ್ಯ ಬಂಟ್ವಾಳಕಿಲ್ಲ ಕುಡಿವ ನೀರಿನ ಸಮಸ್ಯೆ

ಮಂಗಳೂರಿನ ಜನತೆಗೆ ಬಂಟ್ವಾಳ ಮೂಲಕ ಹರಿಯುವ ನೇತ್ರಾವತಿ ನದಿಯಿಂದಲೇ ನೀರು ಪೂರೈಸಲಾಗುತ್ತದೆ, ಹೀಗಿದ್ದೂ ಕೆಲವೊಮ್ಮೆ ಬಂಟ್ವಾಳ ಜನತೆಗೂ ನೀರಿನ ಸಮಸ್ಯೆ ಕಾಡುತ್ತಿತ್ತು. ಇದೀಗ ಪುರಸಭಾ ವ್ಯಾಪ್ತಿಯ ಜಕ್ರಿಬೆಟ್ಟುವಿಲ್ಲಿ ಡ್ಯಾಂ ನಿರ್ಮಾಣ ಹಾಗೂ ತಾಲೂಕು ವ್ಯಾಪ್ತಿಯಲ್ಲಿ ಆರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿವೆ.

ಗೊತ್ತೇ ಆಗದಂತೆ ಕಡಿಮೆಯಾಗುತ್ತಿದೆ...

ಬಿಸಿಲಿನ ಝಳಕ್ಕೆ ಡ್ಯಾಂನ ನೀರು ಆವಿಯಾಗುವ ಪ್ರಮಾಣ ಅಧಿಕವಾಗುವುದು ಹಾಗೂ ಪ್ರಸ್ತುತ ನೀರಿನ ಬಳಕೆ ಅಧಿಕ ಇರುವುದು ಇತ್ಯಾದಿ ಕಾರಣದಿಂದ ಡ್ಯಾಂನಲ್ಲಿ ನೀರಿನ ಪ್ರಮಾಣ ಗೊತ್ತೇ ಆಗದಂತೆ ಕಡಿಮೆಯಾಗುತ್ತದೆ. ಹೀಗಾಗಿ 1 ತಿಂಗಳ ಅಂತರದಲ್ಲಿ ಉತ್ತಮ ಮಳೆಯಾದರೆ ಯಾವುದೇ ಸಮಸ್ಯೆ ಇಲ್ಲ ಎನ್ನುತ್ತಾರೆ ಅಧಿಕಾರಿಗಳು.

4.30
ಶನಿವಾರ ತುಂಬೆ ಆಣೆಕಟ್ಟಿನಲ್ಲಿದ್ದ ನೀರಿನ ಮಟ್ಟ(ಮೀ.)

ಪುರಸಭಾ ವ್ಯಾಪ್ತಿಗಿಲ್ಲ ಟೆನ್ಶನ್

ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಇಲ್ಲಿ ತನಕ ಕುಡಿಯುವ ನೀರಿಗೆ ತತ್ವಾರ ಎದುರಾಗಿಲ್ಲ ಹಾಗಾಗಿ ಈ ಬಾರಿಯೂ ಏನೂ ಸಮಸ್ಯೆ ಆಗದು, ಕೆಲ ತಾಂತ್ರಿಕ ಸಮಸ್ಯೆಯಿಂದ ಕೆಲವೆಡೆ ನೀರಿನ ಸಮಸ್ಯೆ ಎದುರಾಗಿದ್ದು ಸ್ಥಳೀಯರು ಪ್ರತಿಭಟನೆ ಕೂಡ ನಡೆಸಿದ್ದು ಇಲ್ಲಿ ಗಮನಾರ್ಹ ಅಂಶವಾಗಿದೆ.

ಜಲಮಟ್ಟ 3.3 ಮೀಟರ್‌ಗೆ ಇಳಿಕೆ
ಬಿಸಿಲಿನ ಝಳದಲ್ಲಿ ಬಸವಳಿದಿದೆ 'ಬಜೆ'
ಈಗ ನಾಡಿಗೆ ವರವಾಗಿದೆ ವಾರಾಹಿ

ಉಡುಪಿ: ಬೇಸಿಗೆ ಝಳ ಹೆಚ್ಚುತ್ತಿರುವ ಬೆನ್ನಿಗೇ ಈಗ ನಗರಕ್ಕೆ ನೀರು ಪೂರೈಸುವ ಬಜೆ ಆಣೆಕಟ್ಟಿನಲ್ಲಿ ನೀರಿನ ಮಟ್ಟ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತಾ ಸಾಗುತ್ತಿದ್ದು, ಈ ಬೆಳವಣಿಗೆ ಈಗ ನಾಗರಿಕರು, ಜಿಲ್ಲಾಡಳಿತಕ್ಕೆ ಹೊಸ ರೀತಿಯ ತಲೆನೋವು ತಂದಿಟ್ಟಿದೆ. »ಪುಟ 5



ಬರೋಬ್ಬರಿ 20 ಗಂಟೆ ಕಾಲುವೆಯಲ್ಲಿ ಕಳೆದ ಕಾಡುಕೋಣ
ನರಕ ಯಾತನೆಗೆ ಕೊನೆಗೂ ಮುಕ್ತಿ!

ಕುಂದಾಪುರ: ಇಲ್ಲಿನ ಕಾಳಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಸೋಡು ಶ್ರೀ ಕುಮಾರ ಮಹಾಲಿಂಗೇಶ್ವರ ದೇವಸ್ಥಾನದ ಸಮೀಪದ ವಾರಾಹಿ ಕಾಲುವೆಯಲ್ಲಿ ಬಿದ್ದಿದ್ದ ಕಾಡುಕೋಣವನ್ನು ಸ್ಥಳೀಯರ ಸಹಕಾರದಿಂದ ಶನಿವಾರ ಅರಣ್ಯ ಇಲಾಖೆ ರಕ್ಷಿಸಿದೆ.

ಶುಕ್ರವಾರ ಕಾಲುವೆಗೆ ಬಿದ್ದಿತ್ತು...

ನೀರು, ಆಹಾರ ಅರಸಿಕೊಂಡು ಸಮೀಪದ ಅರಣ್ಯ ಪ್ರದೇಶದಿಂದ ಜನವಸತಿ ಪ್ರದೇಶಕ್ಕೆ ಬಂದಿದ್ದ ಈ ಕಾಡುಕೋಣ ಶುಕ್ರವಾರ ಆಕಸ್ಮಿಕವಾಗಿ ಕಾಲುವೆಗೆ ಬಿದ್ದಿತ್ತು.

ಈ ಬಗ್ಗೆ ಮಾಹಿತಿ ಪಡೆದ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಸ್ಥಳಕ್ಕೆ ಧಾವಿಸಿ ಸ್ಥಳೀಯ ನಾಗರಿಕರ ಸಹಕಾರ ಪಡೆದುಕೊಂಡು ಶನಿವಾರ ಬೆಳಿಗ್ಗೆಯಿದಲೇ ರಕ್ಷಣಾ ಕಾರ್ಯ ಆರಂಭಿಸಿದ್ದರು. ಕಾಡು ಕೋಣವನ್ನು ಸಲೀಸಾಗಿ ಮೇಲ್ಭಾಗಕ್ಕೆ ಬರಲು ಅನುಕೂಲವಾಗುವಂತೆ ಕಾಲುವೆಗೆ ಮಣ್ಣು ಹಾಕಿ ಇಳಿಜಾರು ಮಾಡಿ, ಜೆಸಿಬಿ ಹಾಗೂ ಹಗ್ಗದ ಸಹಾಯದಿಂದ ಕಾಡುಕೋಣ ಮೇಲಕ್ಕೆ ಎತ್ತಿ ಬರೋಬ್ಬರಿ 20 ಗಂಟೆಗಳ ಆತಂಕ ದೂರಮಾಡಿ ಕಾಡುಕೋಣವನ್ನು ರಕ್ಷಣೆ ಮಾಡಲಾಗಿದೆ. »ಪುಟ 5



ಮೇಲಕ್ಕೆ ಬರಲು ಸಾಧ್ಯವೇ ಆಗಿರಲಿಲ್ಲ

ಕಾಡುಕೋಣ ಬರೋಬ್ಬರಿ 20 ಗಂಟೆಗಳ ಕಾಲ ಅಸೋಡಿನ ವಾರಾಹಿ ಕಾಲುವೆಯಲ್ಲಿ ಬಾಕಿಯಾಗಿತ್ತು. ಕಾಲುವೆಯಿಂದ ಮೇಲಕ್ಕೆ ಬರಲು ಸಾಹಸ ಮಾಡಿದ್ದರೂ ಸಾಧ್ಯವಾಗಿರಲಿಲ್ಲ.

ನ್ಯಾಷನಲ್ ಡಾಟಾ ಪ್ರೊಟೆಕ್ಷನ್ ಸೆಂಟರ್ ಅಧಿಕಾರಿ ಎಂಬ ಹೆಸರಿನಲ್ಲಿ ವೃದ್ಧಗೆ ವಂಚನೆ
ಒಂದು ಕಾಲ್, ಬರೋಬ್ಬರಿ 2.07 ಕೋಟಿ ರೂ. ಉಡೀಸ್

ಮಂಗಳೂರು: ನ್ಯಾಷನಲ್ ಡಾಟಾ ಪ್ರೊಟೆಕ್ಷನ್ ಸೆಂಟರ್ ಅಧಿಕಾರಿ ಎಂದು ಹೇಳಿ ಡಿಜಿಟಲ್ ಅರೆಸ್ಟ್ ಹಸರಿನಲ್ಲಿ ಹಿರಿಯ ನಾಗರಿಕರೊಬ್ಬರಿಗೆ 2.07 ಕೋ.ರೂ. ವಂಚನೆಗೈದ ಬಗ್ಗೆ ಸೈಬರ್ ಕ್ರೈಮ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏನಿದು ಘಟನೆ? ಹೇಗೆ ನಡೆಯಿತು?

ಸುಮಾರು 61 ವರ್ಷ ಪ್ರಾಯದ ದೂರುದಾರರ ಮೊಬೈಲ್‌ಗೆ ಮಾ.31ರಂದು ಸಾಮಾನ್ಯ ಕರೆಯೊಂದು ಬಂದಿದೆ. ಕರೆ ಮಾಡಿದ ವ್ಯಕ್ತಿ ತಾನು ನ್ಯಾಷನಲ್ ಡಾಟಾ ಪ್ರೊಟೆಕ್ಷನ್ ಸೆಂಟರ್ ಅಧಿಕಾರಿ ಎಂದು ಆಂಗ್ಲ ಭಾಷೆಯಲ್ಲಿ ಪರಿಚಯಿಸಿಕೊಂಡಿದ್ದಾನೆ. ನಿಮ್ಮ ಗುರುತಿನ ಚೀಟಿ ಬಳಸಿಕೊಂಡು ಮುಂಬಯಿ ಮೂಲದ ವ್ಯಕ್ತಿಯೊಬ್ಬ ಸಿಮ್ ಖರೀದಿಸಿ ಮುಂಬಯಿನ ಸಾರ್ವಜನಿಕರಿಗೆ



ಬೆದರಿಕೆ ಕರೆ ಮಾಡಿದ್ದಾನೆ. ಜತೆಗೆ ಅಶ್ಲೀಲ ಫೋಟೊ, ವಿಡಿಯೋಗಳನ್ನು ಕಳುಹಿಸುತ್ತಿದ್ದಾನೆ. ಮಾದಕ ವಸ್ತು ಮಾರಾಟ ಮಾಡಲೂ ಅದೇ ಸಿಮ್ ಬಳಸುತ್ತಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ ನಿಮ್ಮ ಮೇಲೆ ಕೊಲಾಬ ಪೊಲೀಸ್ ಠಾಣೆಯಲ್ಲಿ 30–50 ಎಫ್‌ಐಆರ್ ದಾಖಲಾಗಿದೆ. ಇದರಿಂದ ಕ್ಲಿಯರೆನ್ಸ್ ನೀಡಲು ಎನ್‌ಐಎ ಮತ್ತು ಇಡಿ ಅಧಿಕಾರಿಗಳು ಕರೆ ಮಾಡಿ ಪರಿಶೀಲಿಸಲಿದ್ದಾರೆ ಎಂದು ತಿಳಿಸಿದ್ದಾನೆ. ಇದನ್ನು ದೂರುದಾರರು ಸತ್ಯವೆಂದೇ ನಂಬಿದ್ದಾರೆ. ಅನಂತರ ದೂರುದಾರರ ವಾಟ್ಸ್ ಆ್ಯಪ್‌ಗೆ ಕರೆ ಬಂದಿದ್ದು, ಕರೆ ಮಾಡಿದ ವ್ಯಕ್ತಿ ಎನ್‌ಐಎ ಅಧಿಕಾರಿ ಸಂದೀಪ್ ರಾವ್ ಎಂದು ಪರಿಚಯಿಸಿಕೊಂಡಿದ್ದಾನೆ. ಎಡಿಜಿಪಿ ಮ್ಯಾಥ್ಯೂ ಅವರು ತಿಳಿಸಿದಂತೆ ನಿಮ್ಮ ಬಯೋಡಾಟಾ ಬೇಕು ಎಂದು ಕೇಳಿ ತೆಗೆದುಕೊಂಡಿದ್ದಾನೆ. ಅನಂತರ ಇಡಿ ಅಧಿಕಾರಿ ವಿಲಾಸ್ ರಾವ್ ಪಟೇಲ್ ಜತೆ ಮಾತನಾಡುವಂತೆ ತಿಳಿಸಿದ್ದಾನೆ. ಆತನ ಜತೆ ಮಾತನಾಡಿದಾಗ, ನಮ್ಮ ದಾಖಲೆಗಳ ಪ್ರಕಾರ ನೀವು ದೊಡ್ಡ ಕ್ರಿಮಿನಲ್. ನಿಮ್ಮ ಮೇಲೆ ಅನೇಕ ಕೇಸ್‌ಗಳು ದಾಖಲಾಗಿದ್ದು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ ಎಂದು ಬೆದರಿಸಿ ಅವರ ಖಾತೆಯಿಂದ ಹಣ ಎಗರಿಸಿದ್ದಾನೆ. ಈ ವಂಚಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಹಂತ ಹಂತವಾಗಿ ವಿವಿಧ ಖಾತೆಗಳಿಗೆ ಹಣ ವರ್ಗಾವಣೆ

ವಂಚಕನ ನಿರ್ದೇಶನದಂತೆ ಏ.7ರಿಂದ 18ರ ವರೆಗೆ ಹಂತ ಹಂತವಾಗಿ ಒಟ್ಟು 2,07,04,600 ರೂ.ವನ್ನು ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ಆರ್‌ಟಿಜಿಎಸ್ ಮಾಡಿದ್ದಾರೆ. ಇದು ಮನೆಯವರ ಗಮನಕ್ಕೆ ತಂದಾಗ ಮೋಸ ನಡೆದಿದ್ದು ಗೊತ್ತಾಗಿದೆ.

ಇಂದಿನಿಂದ ಕಾಳ್ಯಂಗಾಡು ಕ್ಷೇತ್ರದಲ್ಲಿ ಬ್ರಹ್ಮಕಲಶಾಭಿಷೇಕ 3
ಮನಪಾ ವ್ಯಾಪ್ತಿಯಲ್ಲಿ 66,000 ಎಲ್‌ಇಡಿ ಬೀದಿ ದೀಪಗಳ ಗುರಿ 4
ಇಂದು 'ಸಹಕಾರ ಸಿಂಧೂರ' ಸಂಕೀರ್ಣ ಲೋಕಾರ್ಪಣೆ 5

ಸುತ್ತಮುತ್ತ

ಕಡಬದ ಸರಸ್ವತಿ ಆಂ.ಮಾ.ಪ್ರೌ. ಶಾಲೆ ಶೇ.100 ಫಲಿತಾಂಶ



ಕಡಬ: ಕಡಬದ ಸರಸ್ವತಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 14 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ. 9 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 4 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಮುಖ್ಯ ಶಿಕ್ಷಕಿ ವಸಂತ ಕೆ. ತಿಳಿಸಿದ್ದಾರೆ. ನಿಧಿ ಕೆ.ಸಿ.–606, ಪ್ರೇಕ್ಷ ಪಿ.ಎಂ.–605, ಪ್ರಣಮ್ಯ–597 ಅಂಕ ಗಳಿಸಿದ್ದಾರೆ.

ಕ್ನಾನಾಯ ಜ್ಯೋತಿ ಶಾಲೆ: ಶೇ.100 ಫಲಿತಾಂಶ

ಕಡಬ: ಕಡಬದ ಕ್ನಾನಾಯ ಜ್ಯೋತಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ



ಹಾಜರಾದ 23 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ ಎಂದು ಸಂಸ್ಥೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಮರಿಯಾ ಲೂಯಿಸಾ ತಿಳಿಸಿದ್ದಾರೆ. 12 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 10 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಧೃತಿ ರೈ–597 ಅಂಕ ಗಳಿಸಿದ್ದಾರೆ.

ಗುತ್ತಿಗಾರಿನ ಬ್ಲೆಸ್ಡ್ ಕುರಿಯಕೋಸ್ ಪ್ರೌ. ಶಾಲೆ: ಶೇ.100 ಫಲಿತಾಂಶ

ಸುಬ್ರಹ್ಮಣ್ಯ: ಗುತ್ತಿಗಾರಿನ ಬ್ಲೆಸ್ಡ್ ಕುರಿಯಕೋಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ



ಶೇ.100 ತೇರ್ಗಡೆ ದಾಖಲಿಸಿದೆ. ಇಲ್ಲಿನ ವಿದ್ಯಾರ್ಥಿನಿ ನೇಹಾ ಸಿ.ಪಿ.–612 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಪರೀಕ್ಷೆಗೆ 19 ವಿದ್ಯಾರ್ಥಿಗಳು ಹಾಜರಾಗಿ, 12 ವಿದ್ಯಾರ್ಥಿಯರು ವಿಶಿಷ್ಟ ಶ್ರೇಣಿಯಲ್ಲಿ, 6 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 1 ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಪದ್ಮುಂಜದ ಸರಕಾರಿ ಪ್ರೌಢ ಶಾಲೆ: ಶೇ.96.15



ಪುತ್ತೂರು: ಪದ್ಮುಂಜದ ಸರಕಾರಿ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.96.15 ತೇರ್ಗಡೆ ದಾಖಲಿಸಿದೆ. 52 ವಿದ್ಯಾರ್ಥಿಗಳಲ್ಲಿ 50 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಶ್ಮಿತಾ–602 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಆಶ್ಲೇಷ–559, ಅಫ್ರೀನ ಬಾನು–554 ಅಂಕಗಳನ್ನು ಗಳಿಸಿದ್ದಾರೆ. 5 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ 27 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 11 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಾಲೆಗೆ 'ಎ' ಗ್ರೇಡ್ ಬಂದಿದೆ.


ಬೆಳ್ಳಾರೆ ಕೆ.ಪಿ.ಎಸ್. ಶೇ.100 ಫಲಿತಾಂಶ





ಸುಳ್ಯ: ಬೆಳ್ಳಾರೆ ಕೆ.ಪಿ.ಎಸ್. ಶೇ.100 ತೇರ್ಗಡೆ ದಾಖಲಿಸಿದೆ. ಒಟ್ಟು 148 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 148 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 33 ಮಂದಿ ವಿಶಿಷ್ಟ ಶ್ರೇಣಿಯಲ್ಲಿ, 98 ಮಂದಿ ಪ್ರಥಮ ದರ್ಜೆ, 13 ಮಂದಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮುಹಮ್ಮದ್ ಶಿಹಾಬ್–608, ಮೌಲ್ಯ ಕೆ.–606, ಧನ್ವಿತ್ ಕೆ.–606, ತನುಷಾ ಕೆ.ಬಿ.–605, ಫಾತಿಮತ್ ಶೈಮ–599, ಫಾತಿಮತ್ ಇಬ್ಬಾನ–595 ಅಂಕಗಳನ್ನು ಪಡೆದಿದ್ದಾರೆ.

ಕಡಬ ಶ್ರೀರಾಮಕುಂಜೇಶ್ವರ ಕನ್ನಡ ಮಾಧ್ಯಮ ಶಾಲೆಗೆ ಶೇ.100 ಫಲಿತಾಂಶ



ಕಡಬ: ರಾಮಕುಂಜದ ಶ್ರೀ ರಾಮ ಕುಂಜೇಶ್ವರ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಎಲ್ಲಾ 145 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ರಾಧಾಕೃಷ್ಣ ಕೆ.ಎಸ್. ಹಾಗೂ ಮುಖ್ಯ ಶಿಕ್ಷಕ ಸತೀಶ್ ಭಟ್ ತಿಳಿಸಿದ್ದಾರೆ.



36 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 90 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದಾರೆ. ಝುಮೀರಾ–597, ದೀಕ್ಷಾ ಎಸ್. –594, ವೀಣಾ ಎ.–590, ಅದಿತಿ–578, ಪುಣ್ಯ ಕೆ.ಎನ್.–578, ಹೃತಿಕ್ ಕೆ.–577, ಅನುಶ್ರೀ–576, ಪಾತಿಮ ಅಸ್ಲ–574, ಬಿ. ಧನುಷ್ –572, ಊರ್ಮಿಳಾ–572, ಹವ್ಯಶ್ರೀ–566, ಪಿ. ಹರ್ಷ ಭಟ್–566, ಫಾತಿಮತ್ ಫರ್ವೀನ–565, ಕ್ಷಮಾ ಡಿ.ಕೆ.–564, ಶ್ರೇಯಾ ಎಸ್.–564, ಅಪೇಕ್ಷಾ ಎಸ್. –562, ಶಮೀಕ್ಷಾ ಬಿ.ಎಸ್. –562, ಧನ್ವಿತ್ ಎಸ್.–561, ಪ್ರಜ್ಞಾ–561 ಅಂಕ ಗಳಿಸಿದ್ದಾರೆ.

ಬೊಂಡಾಲ ಸರಕಾರಿ ಪ್ರೌಢಶಾಲೆ: 100%

ಬಂಟ್ವಾಳ: ಶಂಭೂರಿನ ಬೊಂಡಾಲ ಜಗನ್ನಾಥ ಶೆಟ್ಟಿ ಸ್ಮಾರಕ ಸರಕಾರಿ ಪ್ರೌಢಶಾಲೆ ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದೆ.



ಪರೀಕ್ಷೆಗೆ ಹಾಜರಾದ 77 ವಿದ್ಯಾರ್ಥಿಗಳಲ್ಲಿ 77 ವಿದ್ಯಾರ್ಥಿಗಳೂ ಉತ್ತೀರ್ಣ ರಾಗುವ ಮೂಲಕ ಆಂಗ್ಲ ವಿಭಾಗದಲ್ಲಿ ಸತತ ಒಂಭತ್ತನೇ ಬಾರಿ ಕನ್ನಡ ಮಾಧ್ಯಮದಲ್ಲಿ ಪ್ರಥಮ ಬಾರಿಗೆ 100 ಶೇ. ಫಲಿತಾಂಶ ದಾಖಲಿಸಿದೆ. ಪ್ರತಿ ಬಾರಿಯಂತೆ ಈ ಬಾರಿಯೂ ಗುಣಾತ್ಮಕ ಫಲಿತಾಂಶದಲ್ಲಿ ಎ ಗ್ರೇಡ್ ಪಡೆದಿರುತ್ತದೆ. ವಿದ್ಯಾರ್ಥಿಗಳಾದ ಮಾನ್ಯಶ್ರೀ 607 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನಿ, ಕೇತನ್ 602 ಅಂಕಗಳೊಂದಿಗೆ ದ್ವಿತೀಯ ಸ್ಥಾನಿಯಾಗಿದ್ದಾನೆ. 4 ವಿದ್ಯಾರ್ಥಿಗಳು ಎ ಪ್ಲಸ್, 24 ವಿದ್ಯಾರ್ಥಿಗಳು ಎ ಶ್ರೇಣಿ ಪಡೆದಿರುತ್ತಾರೆ. ಈ ಸಾಧನೆಗೆ ಕಾರಣಕರ್ತರಾದ ವಿದ್ಯಾರ್ಥಿಗಳು, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯಾಧ್ಯಕ್ಷರಾದ ಬೊಂಡಾಲ ಸಚ್ಚಿದಾನಂದ ಶೆಟ್ಟಿಯವರು ಅಭಿನಂದಿಸಿದ್ದಾರೆ.

ಕುಷಿ ಕೆ. ಸಾಲ್ಯಾನ್‌ಗೆ 7ನೇ ರ್‍ಯಾಂಕ್



ಮುಲ್ಕಿ: 2025 –26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾ ಪೀಠದ ವಿದ್ಯಾರ್ಥಿ ಖುಷಿ ಕೆ. ಸಾಲ್ಯಾನ್ ಅವರು 99.04 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ 7ನೇ ರ್‍ಯಾಂಕ್ ಪಡೆದು ಟಾಪರ್ ಆಗಿ ಮೂಡಿ ಬಂದಿದ್ದಾರೆ.

ಅವರು ಮುಲ್ಕಿ ಬಿರುವೆರ್ ಕುಡ್ಲ ಸಂಘಟನೆಯ ಗೌರವಾಧ್ಯಕ್ಷ ಕಿಶೋರ್ ಸಾಲ್ಯಾನ್ ಹಾಗೂ ನಳಿನಿ ಕೆ. ಸಾಲ್ಯಾನ್ ರವರ ಪುತ್ರಿ. ಅವರ ಸಾಧನೆಗೆ ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು ಶ್ರೀ ಚಂದ್ರಶೇಖರ ಸ್ವಾಮೀಜಿ, ಶಾಸಕ ಉಮಾನಾಥಕೋಟ್ಯಾನ್, ಮಾಜಿ ಸಚಿವ ಅಭಯ ಚಂದ್ರ ಜೈನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ಧರ್ಮದರ್ಶಿ ಡಾ ಹರಿಕೃಷ್ಣ ಪುನರೂರು, ಉದ್ಯಮಿ ಅರವಿಂದ ಪೂಂಜಾ ಕಾರ್ನಾಡ್, ಕೆಪಿಸಿಸಿ ಕೋ ಆರ್ಡಿನೇಟರ್ ವಸಂತ್ ಬೆರ್ನಾಡ್, ಬಿರುವೆರ್ ಕುಡ್ಲ ಸಂಘಟನೆಯ ಮುಲ್ಕಿ ವಲಯದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾ ಪೀಠದ ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.

ಸರಸ್ವತಿ ಕ.ಮಾ.ಪ್ರೌ. ಶಾಲೆ: ಶೇ.97 ಫಲಿತಾಂಶ



ಏಳು ಮಂದಿಗೆ ವಿಶಿಷ್ಟ ಶ್ರೇಣಿ

ಕಡಬ: ಕಡಬದ ಸರಸ್ವತಿ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 33 ಮಂದಿ ವಿದ್ಯಾರ್ಥಿಗಳಲ್ಲಿ 32 ಉತ್ತೀರ್ಣರಾಗಿ ಶೇ.97 ತೇರ್ಗಡೆ ದಾಖಲಾಗಿದೆ.

7 ಮಂದಿ ವಿಶಿಷ್ಟ ಶ್ರೇಣಿ ಯಲ್ಲಿ ಹಾಗೂ 15 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದಾರೆ ಎಂದು ಮುಖ್ಯ ಶಿಕ್ಷಕಿ ಶೈಲಶ್ರೀ ಶ್ರೀಕರ ರೈ ತಿಳಿಸಿದ್ದಾರೆ. ಸಿಂಚನ ಕೆ.ಎಸ್.–584, ಪೂರ್ವಿತ್ ಎಸ್.–574, ಸಿಂಚನ–574, ದೀಪ್ತಿ 571, ರಕ್ಷ ಎಂ.ಜೆ.–567 ಅಂಕಗಳನ್ನು ಗಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಡಮಂಗಲ ಸರಕಾರಿ ಶಾಲೆಗೆ ಶೇ.100



ಕಡಬ: ಎಡಮಂಗಲದ ಸರಕಾರಿ ಕನ್ನಡ ಮಾಧ್ಯಮ ಪ್ರೌಢ ಶಾಲೆಯ 21 ಮಂದಿ ವಿದ್ಯಾರ್ಥಿಗಳು ಉತ್ತೀರ್ಣ ರಾಗಿ ಶೇ.100 ತೇರ್ಗಡೆ ಫಲಿತಾಂಶ ದಾಖಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಅಬ್ದುಲ್ ಖಾದರ್ ತಿಳಿಸಿದ್ದಾರೆ. 3 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 14 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಯಶ್ವಿತಾ ಎಂ.ಕೆ.–592, ಸಾಯಿರಾಜ್ ವಿನೋದ್ ಡಿ.–566 ಅಂಕ ಗಳಿಸಿದ್ದಾರೆಂದು ಪ್ರಕಟಣೆ ತಿಳಿಸಿದ್ದಾರೆ.

ಎಸ್ಸೆಸೆಲ್ಸಿ: ಉಡುಪಿ ಜಿಲ್ಲೆಯಲ್ಲಿ ಕಾರ್ಕಳ ತಾಲೂಕು ಪ್ರಥಮ ಸ್ಥಾನ

ಕಾರ್ಕಳ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಾರ್ಕಳ ತಾಲೂಕಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ತೋರಿದ್ದು ವಿಶೇಷವಾಗಿ ವಿದ್ಯಾರ್ಥಿನಿಯರು ಗಮನಾರ್ಹ ಸಾಧನೆ ಮೆರೆದಿದ್ದಾರೆ.

ಒಟ್ಟು 2653 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಇವರಲ್ಲಿ 2625 ಮಂದಿ ಉತ್ತೀರ್ಣರಾಗಿದ್ದಾರೆ. ಇದರಿಂದ 98.94% ಶೇಕಡಾ ಫಲಿತಾಂಶ ದಾಖಲಾಗಿ, ಉಡುಪಿ ಜಿಲ್ಲೆಯಲ್ಲಿ ಕಾರ್ಕಳ ತಾಲೂಕು ಪ್ರಥಮ ಸ್ಥಾನವನ್ನುಗಳಿಸಿದೆ. ಪರೀಕ್ಷೆಗೆಹಾಜರಾದವರಲ್ಲಿ 1360 ಮಂದಿ ಹುಡುಗರು ಇದ್ದು ಇವರಲ್ಲಿ 1342 ಮಂದಿ ಪಾಸಾಗಿದ್ದಾರೆ. ಅದೇ ರೀತಿ 1293 ಹುಡುಗಿಯರಲ್ಲಿ 1283 ಮಂದಿ ಉತ್ತೀರ್ಣರಾಗಿದ್ದು ವಿದ್ಯಾರ್ಥಿನಿಯರ ಸಾಧನೆ ವಿಶೇಷವಾಗಿ ಗಮನ ಸೆಳೆದಿದೆ.



ಐಎಎಸ್ ಅಧಿಕಾರಿಯಾಗುವ ಆಸೆ

ಬೈಲೂರಿನ ನಿಸಾ ಬರ್ಬೋಜಾ ಕೂಡ ಅದ್ಭುತ ಸಾಧನೆ ಮಾಡಿದ್ದಾಳೆ. ಇಂಗ್ಲಿಷ್ ಮಾಧ್ಯಮ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯಾಗಿರುವ ನಿಸಾ ವಿಜ್ಞಾನ ವಿಷಯದಲ್ಲಿ 99 ಅಂಕಗಳನ್ನು ಪಡೆದು, ಉಳಿದ ಎಲ್ಲಾ ವಿಷಯಗಳಲ್ಲಿ ಶತಕ್ಕೆ ಶತ ಅಂಕ ಗಳಿಸಿದ್ದಾಳೆ. ತಂದೆ ಕಿರಣ್ ಬರ್ಬೋಜಾ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದು ತಾಯಿ ಲವೀನಾ ಮರಿಯ ಪಿಂಟೋ ಶಿಕ್ಷಕಿಯಾಗಿದ್ದಾರೆ. ಭವಿಷ್ಯದಲ್ಲಿ ಐಎಎಸ್ ಅಧಿಕಾರಿಯಾಗುವ ಕನಸನ್ನು ನಿಸಾ ಹೊಂದಿದ್ದಾಳೆ.

ಎಸ್.ಜಿ.ಎಂ. ಪ್ರೌಢ ಶಾಲೆಗೆ ಶೇ.100

ಪುತ್ತೂರು: ಸರ್ವೆಯ ಎಸ್.ಜಿ.ಎಂ. ಪ್ರೌಢ ಶಾಲೆ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶದಲ್ಲಿ ಶೇ.100 ಉತ್ತೀರ್ಣತೆಯನ್ನು ದಾಖಲಿಸಿ 'ಎ' ಗ್ರೇಡ್ ಪಡೆದುಕೊಂಡಿದೆ.

ಕಳೆದ ಶೈಕ್ಷಣಿಕ ಸಾಲಿನಲ್ಲೂ ಶಾಲೆ ಶೇ.110 ಉತ್ತೀರ್ಣತೆ ದಾಖಲಿಸಿತ್ತು. ಶಾಲೆಯ



ಹಲವು ಮಕ್ಕಳಿಗೆ ಉನ್ನತ ಶ್ರೇಣಿ

ವಿದ್ಯಾರ್ಥಿಗಳಾದ ಪುಣ್ಯ ಶ್ರೀ–581, ಜೈರಾಜ್–580 ಮತ್ತು ಆಮಿನ ಆಸಿಮ–574 ಅಂಕ ಗಳಿಸಿದ್ದಾರೆ ಎಂದು ಶಾಲೆ ಯು ಪ್ರಕಟಣೆಯಲ್ಲಿ ತಿಳಿಸಿದೆ.

ಬಂಟ್ವಾಳ ಎಸ್‌ವಿಎಸ್ ಆಂಗ್ಲ ಮಾಧ್ಯಮ ಶಾಲೆಯ ಯಶಸ್ವಿನಿಗೆ 89.71% ಅಂಕ ಸಾಧನೆ




ಬಂಟ್ವಾಳ: ಪ್ರಸಕ್ತ ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಬಂಟ್ವಾಳ ಎಸ್.ವಿ.ಎಸ್.ದೇವಳ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಯಶಸ್ವಿನಿ 561 ಅಂಕಗಳಿಸಿ ಶೇ.89.73ಪಡೆದಿದ್ದಾಳೆ. ಈಕೆ ವೆಂಕಟೇಶ್ ಬಂಟ್ವಾಳ –ಅನುರಾಧ ದಂಪತಿಯ ಪುತ್ರಿಯಾಗಿದ್ದಾಳೆ.

ಗುರುಪುರ ಸರಕಾರಿ ಪ್ರೌಢಶಾಲೆಗೆ ಶೇ. 100



ಕೈಕಂಬ: ಗುರುಪುರ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ಪರೀಕ್ಷೆಗೆ ಹಾಜರಾಗಿರುವ ಎಲ್ಲ 25 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶಾಲೆಗೆ ಶೇ. 100 ಫಲಿತಾಂಶ ಬಂದಿದೆ. ಐವರು ಡಿಸ್ಟಿಂಕ್ಷನ್‌ನಲ್ಲಿ 16 ಮಂದಿ ಪ್ರಥಮ ದರ್ಜೆ ಹಾಗೂ ನಾಲ್ವರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ರಾಕೇಶ್ (571), ರಶ್ಮಿ (566) ಮತ್ತು ನಿಶಾಂತ್(566) ಅಂಕ ಗಳಿಸಿದ್ದಾರೆ.

ಶ್ರೀ ವ್ಯಾಸಮಹರ್ಷಿ ಶಾಲೆ: 100% ಫಲಿತಾಂಶ



ಮುಲ್ಕಿ: ಇಲ್ಲಿನ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತದ ಶ್ರೀ ವ್ಯಾಸಮಹರ್ಷಿ ಶಾಲೆಯು ಸತತ 12ನೇ ಬಾರಿಗೆ ಶೇ. 100 ಫಲಿತಾಂಶ ಹಾಗೂ ನಾಲ್ಕು ರ್‍ಯಾಂಕ್‌ಗಳನ್ನು ಪಡೆದಿದೆ.

115 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 69 ವಿಶಿಷ್ಟ ಶ್ರೇಣಿ,40 ಪ್ರಥಮ ದರ್ಜೆ ಫಲಿತಾಂಶ ಬಂದಿದೆ. ದಿಗಂತ್ ಎಸ್. ಶೆಟ್ಟಿ 620 ಅಂಕಗಳೊಂದಿಗೆ 6ನೇ ರ್‍ಯಾಂಕ್ ಶಾಲೆಗೆ ಪ್ರಥಮ, ಕುಶಿ ಕೆ. ಸಾಲ್ಯಾನ್ 619 ಅಂಕಗಳೊಂದಿಗೆ 7ನೇ ರ್‍ಯಾಂಕ್, ದಿಶಾ ಜಿ. ದೇವಾಡಿಗ 618 ಅಂಕಗಳೊಂದಿಗೆ 8ನೇ ರ್‍ಯಾಂಕ್, ಎಂ. ವಿನಯಾ ಎ. ಕುಡ್ವಾ 616 ಅಂಕಗಳೊಂದಿಗೆ 10ನೇ ರ್‍ಯಾಂಕ್ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾಡಳಿತ ಮೆಚ್ಚುಗೆ ವ್ಯಕ್ತಪಡಿಸಿದೆ.

ಪಡುಬೆಳ್ಳೆ ಶಾಲೆಗೆ ಶೇ. 98.11 ಫಲಿತಾಂಶ

ಶಿರ್ವ: ಪಡುಬೆಳ್ಳೆ ಶ್ರೀನಾರಾಯಣ ಗುರು ಆಂಗ್ಲ ಮಾಧ್ಯಮ ಶಾಲೆ 2025–26ನೇ ಸಾಲಿನಲ್ಲಿ ಜರುಗಿದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 53 ವಿದ್ಯಾರ್ಥಿಗಳು ಹಾಜರಾಗಿದ್ದು 52 ವಿದ್ಯಾರ್ಥಿಗಳು ಉತ್ತೀರ್ಣರಾಗಿ 98.11ಶೇಕಡ ಫಲಿತಾಂಶ ದಾಖಲಾಗಿದೆ. ಅತ್ಯುನ್ನತ ಶ್ರೇಣಿ–17, ಪ್ರಥಮ ಶ್ರೇಣಿ–27, ದ್ವಿತೀಯ ಶ್ರೇಣಿ –8 ವಿದ್ಯಾರ್ಥಿ ಗಳು ಉತ್ತೀರ್ಣ ರಾಗಿದ್ದಾರೆ.



ಪ್ರೀತಿಕಾ –596 (95.4%) ಅಂಕ ಗಳಿಸಿ ಶಾಲೆಯಲ್ಲಿ ಪ್ರಥಮ ಸ್ಥಾನಿಯಾಗಿದ್ದಾಳೆ, ಯಶಸ್ ಆಚಾರ್ಯ –595 (95.2%), ದೀಕ್ಷಿತ್– 586(93.8%) ಅಂಕಗಳಿಸಿದ್ದಾರೆ.

ಮಣೂರು ಪಡುಕರೆ ಪ್ರೌಢಶಾಲೆಗೆ ಶೇ. 100

ಕೋಟ: ಮಣೂರು ಪಡುಕರೆ ಸರ್ಕಾರಿ ಪ್ರೌಢಶಾಲೆಯ 82 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 100 ಶೇಕಡ ಫಲಿತಾಂಶ ದಾಖಲುಗೊಂಡಿದೆ. ಇದರಲ್ಲಿ 25 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ 38 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ರಾಗುವುದರ ಮೂಲಕ ಗುಣಾತ್ಮಕ ಫಲಿತಾಂಶ ಜತೆಗೆ ಶಾಲೆಯು ಎ ಗ್ರೇಡ್ ಪಡೆದುಕೊಂಡಿದೆ.



ವಿದ್ಯಾರ್ಥಿನಿ ಮೈತ್ರಿ 615 ಅಂಕಗಳನ್ನು ಗಳಿಸುವುದರ ಮೂಲಕ ಬ್ರಹ್ಮಾವರ ವಲಯದ ಸರ್ಕಾರಿ ಶಾಲೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾಳೆ. ಲಿಖಿತ 606 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಆತ್ರಾಡಿ ವಿಜಯ ಮಕ್ಕಳ ಕೂಟ ಶಾಲೆಗೆ ಶೇ. 100

ಕುಂದಾಪುರ: ಬೈಂದೂರು ಶೈಕ್ಷಣಿಕ ವಲಯದ ಆತ್ರಾಡಿಯ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆಯು2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಪಡೆದುಕೊಂಡಿದೆ.



ಪರೀಕ್ಷೆಗೆ ಹಾಜರಾದ 46 ವಿದ್ಯಾರ್ಥಿಗಳಲ್ಲಿ 30 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 16 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಅಂಕಿತಾ 616 ಅಂಕ ಪಡೆಯುವುದರ ಮೂಲಕ ರಾಜ್ಯಕ್ಕೆ ಹತ್ತನೇ ರ್‍ಯಾಂಕ್, ಸಂಸ್ಥೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವರ್ಷಿಣಿ (615), ದೀಪ್ತಿ (614), ಬೃಂದಾ (611), ತನ್ವಿ (608), ಸನ್ನಿಧಿ (604), ಶ್ರೀಜಾ (603) ಅಂಕಗಳನ್ನು ಗಳಿಸಿದ್ದಾರೆ.

ಕೋಡಿಕನ್ಯಾನ ಸರ್ಕಾರಿ ಪ್ರೌಢಶಾಲೆಗೆ ಶೇ. 100

ಕೋಟ: ಕೋಡಿಕನ್ಯಾನ ಸೋಮಬಂಗೇರ ಸ್ಮಾರಕ ಸರಕಾರಿ ಪ್ರೌಢಶಾಲೆ ಶೇ. 100 ಫಲಿತಾಂಶ ದಾಖಲಾಗಿದ್ದು ಶಾಲಾ ಗುಣಾತ್ಮಕ ಫಲಿತಾಂಶ 90.33 ಆಗಿದೆ.



6 ವಿದ್ಯಾರ್ಥಿ ಗಳು ಡಿಸ್ಟಿಂಕ್ಷನ್, 13 ವಿದ್ಯಾರ್ಥಿ ಗಳು ಪ್ರಥಮ ಶ್ರೇಣಿ ಒರ್ವ ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯು ಪ್ರಕಟಣೆ ತಿಳಿಸಿದೆ.

ಗುಂಡ್ಮಿ ಸರ್ಕಾರಿ ಪ್ರೌಢ ಶಾಲೆಗೆ 96.15

ಕೋಟ: ಸರಕಾರಿ ಪ್ರೌಢ ಶಾಲೆ ಗುಂಡ್ಮಿ–ಸಾಸ್ತಾನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 26 ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು ಉತ್ತೀರ್ಣ ರಾಗಿ ಶಾಲೆಯ 96.15% ಫಲಿತಾಂಶ ದಾಖಲಾಗಿದೆ.



ವಿಶಿಷ್ಟ ಶ್ರೇಣಿಯಲ್ಲಿ 5, ಪ್ರಥಮ ಶ್ರೇಣಿಯಲ್ಲಿ 16, ತೃತೀಯ ಶ್ರೇಣಿಯಲ್ಲಿ 4 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಪ್ರಥಮ ಅಮೃತಾ 567 (90.72%), ದ್ವಿತೀಯ ಅನ್ವಿ 562 (89.92%), ತೃತೀಯ ಫಾತಿಮಾ ಮುರ್‍ಶೈನಾ 552 (88.32%) ಅಂಕಗಳನ್ನು ಪಡೆದ್ದಾರೆ.

ವಿದ್ಯಾರ್ಥಿನಿಗೆ 2 ಲಕ್ಷ ನಗದು ಘೋಷಣೆ



ಕುಂದಾಪುರ: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದ ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿನಿ ರಶ್ಮಿ ಅವರಿಗೆ ಸಮರ್ಪಣಾ ಎಜುಕೇಶನಲ್ ಟ್ರಸ್ಟ್ ಅಧ್ಯಕ್ಷ, ಪ್ರಾಂಶುಪಾಲ ಗಣೇಶ್ ಆರ್. ಮೊಗವೀರ ಅವರು 2 ಲಕ್ಷ ರೂ. ನಗದು ಘೋಷಣೆ ಮಾಡಿದ್ದಾರೆ.

ಹೆಮ್ಮಾಡಿಯ ಮತ್ಸ್ಯಜ್ಯೋತಿ ಸಭಾಂಗಣದಲ್ಲಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಅಭಿನಂದನಾ ಸಮಾರಂಭ ನಡೆಯಿತು.

ವಿಜ್ಞಾನ ವಿಭಾಗದಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನಿಯಾದ ರಶ್ಮಿ ಅವರಿಗೆ ಎರಡು ಲಕ್ಷ ರೂ. ನಗದು, 597 ಅಂಕ ಪಡೆದು ರಾಜ್ಯಕ್ಕೆ ಮೂರನೇ ಸ್ಥಾನ ಹಾಗೂ ಜಿಲ್ಲೆಗೆ 2ನೇ ಸ್ಥಾನಿಯಾದ ಶ್ರಾವ್ಯ ಜಿ. ದೇವಾಡಿಗ ಅವರಿಗೆ ಒಂದು ಲಕ್ಷ ರೂ. ನಗದು, 596 ಅಂಕಗಳನ್ನು ಪಡೆದು ರಾಜ್ಯಕ್ಕೆ ನಾಲ್ಕನೇ ಸ್ಥಾನಿಯಾದ ಅಕ್ಷತಾ ವೀರಣ್ಣ ಹಾಗೂ ವಾಣಿಜ್ಯ ವಿಭಾಗದಲ್ಲಿ 597 ಅಂಕಗಳನ್ನು ಪಡೆದು ರಾಜ್ಯಕ್ಕೆ ನಾಲ್ಕನೇ ಬ್ಯಾಂಕ್ ಪಡೆದ ಶಮ್ಯಾ ಶೆಟ್ಟಿ ಅವರಿಗೆ ತಲಾ 50 ಸಾವಿರ ರೂ. ನಗದು ಮತ್ತು 590ಕ್ಕಿಂತ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ತಲಾ 25 ಸಾವಿರ ರೂ. ನಗದು ಘೋಷಣೆ ಮಾಡಲಾಗಿದೆ.

ಸಿಬಿಎಸ್‌ಇ ಪರೀಕ್ಷೆಯಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳ ಸಾಧನೆ

ಶೇ.100 ಫಲಿತಾಂಶ, 4 ವಿದ್ಯಾರ್ಥಿಗಳಿಗೆ ಡಿಸ್ಟಿಂಕ್ಷನ್

ಮಂಗಳೂರು: ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ, ಮಂಗಳೂರು ಶಾಲೆಯು 10ನೇ ತರಗತಿಯ ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿ ಗಮನಾರ್ಹ ಸಾಧನೆ ಮಾಡಿದೆ. ವಿದ್ಯಾರ್ಥಿಗಳ ಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಸಹಕಾರದ ಫಲವಾಗಿ ಈ ಯಶಸ್ಸು ಸಾಧ್ಯವಾಗಿದೆ.



ಈ ವರ್ಷದ ಫಲಿತಾಂಶದಲ್ಲಿ 4 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಸಾನ್ವಿ ರಾವ್, ಎನ್. ಶಿವ ಭಟ್, ಲಕ್ಷ್ಯಾ ಸಿ ಅಜಂತಾ ಹಾಗೂ ಪವನ್ ಅವರು ಅತ್ಯುತ್ತಮ ಅಂಕಗಳನ್ನು ಗಳಿಸಿ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಇದೇ ವೇಳೆ, 4 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಶಾಲೆಯ ಗೌರವವನ್ನು ಹೆಚ್ಚಿಸಿದ್ದಾರೆ.



ಲಕ್ಷ್ಯಾ, ಮನ್ವಿತ್, ಚೈತ್ರೇಶ್ ಹಾಗೂ ಶೆರಿನ್ ಅವರು ಪ್ರಥಮ ದರ್ಜೆಯಲ್ಲಿ ಯಶಸ್ಸು ಸಾಧಿಸಿದ್ದಾರೆ.

ಶುಭ ಹಾರೈಕೆ

ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದವು ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಅವರ ಉಜ್ವಲ ಭವಿಷ್ಯಕ್ಕಾಗಿ ಹಾರೈಸಿದ್ದಾರೆ. 'ಪ್ರಯತ್ನದಿಂದ ಶ್ರೇಷ್ಠತೆಗೆ' ಎಂಬ ಧ್ಯೇಯವಾಕ್ಯವನ್ನು ಸಾರ್ಥಕಗೊಳಿಸಿರುವ ವಿದ್ಯಾರ್ಥಿಗಳ ಈ ಸಾಧನೆ ಇತರರಿಗೆ ಪ್ರೇರಣೆಯಾಗಿದೆ. ಶಾಲೆಯು ಮುಂದಿನ ವರ್ಷಗಳಲ್ಲಿಯೂ ಇದೇ ರೀತಿಯ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸುವ ವಿಶ್ವಾಸ ವ್ಯಕ್ತಪಡಿಸಿದೆ.

ಹೆಬ್ರಿ ಪಿಆರ್‌ಎನ್ ಅಮೃತಭಾರತಿ ವಿದ್ಯಾಲಯ ವಿದ್ಯಾರ್ಥಿನಿ ಸಾಧನೆ

ಹೆಬ್ರಿ ತಾಲೂಕಿಗೆ ಲಾವಣ್ಯ ಎಚ್.ವಿ. ಪ್ರಥಮ

ಹೆಬ್ರಿ: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಹೆಬ್ರಿ ಪಿಆರ್‌ಎನ್ ಅಮೃತಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಲಾವಣ್ಯ ಎಚ್.ವಿ. 612/625 ಸಂಸ್ಕೃತ 125, ಇಂಗ್ಲಿಷ್ 100, ಕನ್ನಡ 100, ಗಣಿತ 94, ವಿಜ್ಞಾನ 96,ಸಮಾಜ ವಿಜ್ಞಾನ 97, ಅಂಕ ಪಡೆದು ಹೆಬ್ರಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ. ಇವಳು 41ನೇ ಶೀರೂರು ಮೂಲದ ಕೃಷಿಕರಾದ ಕವಿತಾ ಮತ್ತು ವಾಮನ ಭಟ್ ಇವರು ಸುಪುತ್ರಿಯಾಗಿದ್ದಾಳೆ.

ಹಾಗೂ ಶಿಕ್ಷಕಿ ಕಬ್ಬಿನಾಲೆ ಶೋಭಾಕುಮಾರಿ ಮತ್ತು ಕೃಷಿಕ ಕೃಷ್ಣಪ್ರಸಾದ ಭಟ್ ದಂಪತಿ ಪುತ್ರ ಕೆ. ಸೃಜನ್ ಭಟ್ 610/625 ಸಂಸ್ಕೃತ 125, ಇಂಗ್ಲಿಷ್ 94, ಕನ್ನಡ 100, ಗಣಿತ 97, ವಿಜ್ಞಾನ 99, ಸಮಾಜ ವಿಜ್ಞಾನ 95 ಅಂಕ ಪಡೆದು ತಾಲೂಕಿನ ದ್ವಿತೀಯ ಸ್ಥಾನ ಪಡೆದಿದ್ದಾರೆ.



ಇವರನ್ನು ಅಮೃತಭಾರತಿ ಟ್ರಸ್ಟ್ ಮತ್ತು ಮುಖ್ಯಶಿಕ್ಷಕಿ ಅಪರ್ಣಾ ಆಚಾರ್, ತರಗತಿ ಶಿಕ್ಷಕ ವಿದ್ವಾನ್ ವೇದವ್ಯಾಸ ತಂತ್ರಿ ಮಡಾಮಕ್ಕಿ ಹಾಗೂ ಸಂಸ್ಥೆಯ ಗುರುವೃಂದ ಅಭಿನಂದಿಸಿದ್ದಾರೆ

ಸುತ್ತ ಮುತ್ತ

ಏ.30ರಂದು ವಿವೇಕಾನಂದ ಸೆಂಟ್ರಲ್ ಸ್ಕೂಲ್ ಕಟ್ಟಡ ಉದ್ಘಾಟನೆ

ಪೆರ್ಲ: ಪೆರ್ಲ – ಕಾಟುಕುಕ್ಕೆ ರಸ್ತೆ ಬಳಿಯ ನಿವೇಶನದಲ್ಲಿ ನೂತನವಾಗಿ ನಿರ್ಮಿಸಲಾಗುವ ಧ್ಯಾನ ಮಂದಿರ ಹಾಗೂ ಪೆರ್ಲ ನಾಲಂದ ಕಾಲೇಜು ಸಮೀಪದ ನಿವೇಶನದಲ್ಲಿ ನಿರ್ಮಿಸಲಾಗುವ ವಿವೇಕಾನಂದ ಸೆಂಟ್ರಲ್ ಸ್ಕೂಲ್ ಕಟ್ಟಡದ ಶಿಲಾನ್ಯಾಸ ಸಮಾರಂಭವು ಏ.30ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.
ಬೆಳಗ್ಗೆ 8.02ರ ಮುಹೂರ್ತದಲ್ಲಿ ಧ್ಯಾನ ಮಂದಿರದ ಶಿಲಾನ್ಯಾಸವನ್ನು ಡಾ.ಪರ್ತಜೆ ಸುಬ್ಬಣ್ಣ ಭಟ್ ಹಾಗೂ 10.53ರ ಮುಹೂರ್ತದಲ್ಲಿ ವಿವೇಕಾನಂದ ಸೆಂಟ್ರಲ್ ಸ್ಕೂಲ್ ಕಟ್ಟಡದ ಶಿಲಾನ್ಯಾಸವನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ನೆರವೇರಿಸುವರು. ನಾಲಂದ ಕಾಲೇಜು ಸಭಾಂಗಣದಲ್ಲಿ ಶ್ರೀ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷ ಡಾ.ಪ್ರಭಾಕರ ಭಟ್ ಕಲ್ಲಡ್ಕ ಅಧ್ಯಕ್ಷತೆಯಲ್ಲಿ 11.30ಕ್ಕೆ ಸಭಾ ಕಾರ್ಯಕ್ರಮ ಜರಗಲಿದೆ. ಎಡನೀರು ಸ್ವಾಮೀಜಿ ಆಶೀರ್ವಚನ ನೀಡುವರು. ಸೆಂಟ್ರಲ್ ಸ್ಕೂಲ್‌ನ ಗೌರವ ಸಲಹೆಗಾರ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಪ್ರಾಸ್ತಾವಿಕವಾಗಿ ಮಾತನಾಡುವರು. ಎನ್‌ಐಟಿಕೆ ಸುರತ್ಕಲ್ ಇದರ ನಿವೃತ್ತ ಪ್ರಾಚಾರ್ಯ ಡಾ.ಪರ್ತಜೆ ಸುಬ್ಬಣ್ಣ ಭಟ್, ಮಣಿಪಾಲ ಅನಂತನಗರ ಉದ್ಭವ್ ಡಿಸೈನ್ ಸ್ಟುಡಿಯೋ ಇಂಜಿನಿಯರ್ ಸುಮಂತ್, ವಾಸ್ತುತಜ್ಞ ಪ್ರಸನ್ನ ಮುಳಿಯಾಲ, ಹರೀಶ ಶೆಣೈ ಪೆರ್ಲ, ವಾಸ್ತುತಜ್ಞ ಸುಬ್ಬಯ್ಯ ವರ್ಮುಡಿ ಉಪಸ್ಥಿತರಿರುವರು.

ಇಂದು ವಿವಿಧ ವಿಶೇಷ ಕಾರ್ಯಕ್ರಮ

ಪೆರ್ಲ: ಸವಿಹೃದಯದ ಕವಿಮಿತ್ರರು ವೇದಿಕೆ ಪೆರ್ಲ ಇದರ ನೇತೃತ್ವದಲ್ಲಿ ಕಣ್ಣೂರು ಕಾಕೊಡೆ ಪ್ರಮೋಯಿಲ್ ನವಪುರಂ ಮತಾತೀತ ದೇವಾಲಯದ ವಾರ್ಷಿಕ ಜಾತ್ರೆ ಪ್ರಯುಕ್ತ ಏ.26ರಂದು ನವಪುರಂ ನವರಸಂ ಎಂಬ ವಿಶೇಷ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ದ್ರಾವಿಡ ಭಾಷಾ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಬಹುಭಾಷಾ ಕವಿಗೋಷ್ಠಿ ನಡೆಯಲಿದೆ. ಮತಾತೀತ ದೇವಾಲಯದ ಸ್ಥಾಪಕ ಪ್ರಮೋಯಿಲ್ ನಾರಾಯಣನ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಹರೀಶ್ ನಾಯಕ್ ಮೀಯಪದವು ಅಧ್ಯಕ್ಷತೆ ವಹಿಸುವರು. ಪ್ರಮೀಳಾ ಚುಳ್ಳಿಕಾನ ಕವಿಗೋಷ್ಠಿಗೆ ಚಾಲನೆ ನೀಡುವರು. ವೆಂಕಟ್ ಭಟ್ ಎಡನೀರು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸುವರು. ಚುಟುಕು ಸಾಹಿತ್ಯ ಪರಿಷತ್ ಮಂಗಳೂರು ಇದರ ಅಧ್ಯಕ್ಷ ಹರೀಶ್ ಸುಲಾಯ ಒಡ್ಡಂಬೆಟ್ಟು ಅವರಿಗೆ ದ್ರಾವಿಡ ಭಾಷಾ ಸಾಹಿತ್ಯ ಪ್ರಶಸ್ತಿ ಪ್ರದಾನಿಸಲಾಗುವುದು. ವೇದಿಕೆಯ ಸಂಚಾಲಕ ಸುಭಾಷ್ ಪೆರ್ಲ, ಹಿರಿಯ ಸಾಹಿತಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಉಡುಪಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಶಿವರಾಜ್ ಅರಸು, ಶಿಕ್ಷಣ ಸೌರಭ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಜಯಾನಂದ ಪೆರಾಜೆ, ಶಿಕ್ಷಕ ದಿನೇಶ್ ಕುಂದರ್ ಬಿಳಿನೆಲೆ, ನಿವೃತ್ತ ಶಿಕ್ಷಕ ವಿಜಯ ಕಾನ, ಶಿಕ್ಷಕಿ ಜ್ಯೋತ್ಸ್ನಾ ಎಂ. ಕಡಂದೇಲು, ಶಿಕ್ಷಕ ಗಣೇಶ್ ಆಚಾರ್ಯ ಅಡ್ಕನಡ್ಕ, ಸುಂದರ ಕೆಜಕ್ಕಾರು, ಐತ್ತಪ್ಪ ನಾಯ್ಕ ಏಳ್ಕಾನ, ನಳಿನಿ ಏಳ್ಕಾನ, ಜೋನ್ ಡಿಸೋಜ, ರಮೇಶ್ ಮೀಯಪದವು, ಹರೀಶ್ ಪುತ್ತಿಗೆ ಪಾಲ್ಗೊಳ್ಳುವರು.

11ನೇ ತರಗತಿ ಪ್ರವೇಶ: ಅರ್ಜಿ ಆಹ್ವಾನ

ಕಾಸರಗೋಡು: ವಿದ್ಯಾನಗರದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಸಂಖ್ಯೆ 2 ರಲ್ಲಿ 11ನೇ ತರಗತಿ (ವಾಣಿಜ್ಯ ಮತ್ತು ವಿಜ್ಞಾನ) ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೋಂದಣಿ ನಮೂನೆಗಳು ಮತ್ತು ಆಯ್ಕೆ ನಮೂನೆಗಳನ್ನು (ಕೆ.ವಿ.ಯೇತರ ವಿದ್ಯಾರ್ಥಿಗಳಿಗೆ) ಶಾಲಾ ಕಚೇರಿಯಿಂದ ಪಡೆಯಬಹುದು. ಅರ್ಜಿ ಸಲ್ಲಿಸಲು ಕಡೆ ದಿನ ಮೇ 2 ಆಗಿದೆ. ಹೆಚ್ಚಿನ ಮಾಹಿತಿಗೆ 04994 256788, 295788, 9605789843 ಕರೆ ಮಾಡಬಹುದು.


ಪೊಲೀಸ್, ಆರ್‌ಟಿಒ ಇ-ಚಲನ್ ಅದಾಲತ್

ಕಾಸರಗೋಡು: ಜಿಲ್ಲಾ ಆರ್‌ಟಿಒ ಜಾರಿ ದಳ ಮತ್ತು ಕಾಸರಗೋಡು ಪೊಲೀಸರು ಆಯೋಜಿಸಿರುವ ಇ-ಚಲನ್ ಅದಾಲತ್‌ನಲ್ಲಿ ಭಾಗವಹಿಸುವ ಮೂಲಕ ಮೋಟಾರು ವಾಹನ ನಿಯಮಗಳ ಉಲ್ಲಂಘನೆಗಳನ್ನು ಇತ್ಯರ್ಥಪಡಿಸಬಹುದು. ಹಿಂದಿನ ವರ್ಷದ ಡಿಸೆಂಬರ್ 31ರ ವರೆಗಿನ ಚಲನ್‌ಗಳನ್ನು ಪರಿಗಣಿಸಲಾಗುತ್ತದೆ. ಏ.26 ರಿಂದ 30 ರ ವರೆಗೆ ನಡೆಯಲಿರುವ ಅದಾಲತ್ ಬೆಳಗ್ಗೆ 10 ರಿಂದ ಸಂಜೆ 4 ರ ವರೆಗೆ ಕರಂದಕ್ಕಾಡಿನ ಬಿಎಸ್‌ಎನ್‌ಎಲ್ ಕೋ-ಆಕ್ಸಿಯಲ್ ಕಟ್ಟಡದ ಮೊದಲ ಮಹಡಿಯಲ್ಲಿರುವ ಆರ್‌ಟಿಒ ಜಾರಿ ಕಚೇರಿಯಲ್ಲಿ ಜರಗಲಿದೆ. ದಂಡವನ್ನು ಶೇಕಡಾ 50 ರಷ್ಟು ರಿಯಾಯಿತಿಯೊಂದಿಗೆ ಪಾವತಿಸಬಹುದು.

ಮಧ್ಯಪ್ರಾಚ್ಯದಲ್ಲಿ ಯುದ್ಧದ ಬಿಸಿ | ನಿರ್ಮಾಣ ವಲಯದಲ್ಲಿ ಸಂದಿಗ್ಧ ಪರಿಸ್ಥಿತಿ ಮುಂದುವರಿಕೆ

ಸಂಕಷ್ಟದಲ್ಲಿ ಕಾಸರಗೋಡು ಜಿಲ್ಲೆಯ ಕಾರ್ಮಿಕರು, ವ್ಯಾಪಾರಿಗಳು

ಕಾಸರಗೋಡು: ಮಧ್ಯಪ್ರಾಚ್ಯದಲ್ಲಿ ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಭೀತಿ ಮುಂದುವರಿಯುತ್ತಿರುವ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ ನಿರ್ಮಾಣ ವಲಯವು ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದೆ. ಮಾತ್ರವಲ್ಲದೆ ಇದರಿಂದಾಗಿ ಈ ಕ್ಷೇತ್ರದ ಕಾರ್ಮಿಕರು, ವ್ಯಾಪಾರಿಗಳು ಹಾಗೂ ಸಂಬಂಧಪಟ್ಟ ಇತರರು ಅಪಾರ ಸಮಸ್ಯೆ ಅನುಭವಿಸುತ್ತಿದ್ದಾರೆ.
ಇದೇ ವೇಳೆ ಯುದ್ಧದ ಬಿಕ್ಕಟ್ಟಿನಿಂದಾಗಿ ನಿರ್ಮಾಣ ಸಾಮಗ್ರಿಗಳ ಬೆಲೆಯು ದುಪ್ಪಟ್ಟು ಆಗಿ ಕೆಲವು ಸಂದರ್ಭಗಳಲ್ಲಿ ಅದಕ್ಕಿಂತಲೂ ಹೆಚ್ಚಳಗೊಂಡಿದೆ. ಒಂದು ರೋಲ್ ವಯರಿಂಗ್ ಕೇಬಲ್‌ನ ದರ ಇಮ್ಮಡಿಯಾಗಿ ವೃದ್ಧಿಯಾಗಿದೆ. ಪಿವಿಸಿ ಪೈಪ್ ಹಾಗೂ ಫಿಟ್ಟಿಂಗ್‌ಗಳ ಬೆಲೆಯಲ್ಲಿ ಶೇಕಡಾ 27ರಷ್ಟು ಏರಿಕೆಯಾಗಿದೆ.
ನಿರ್ಮಾಣ ವಲಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳೊಂದಿಗೆ ಎಲ್ಲಾ ಗೃಹ ಮತ್ತು ಕಟ್ಟಡ ನಿರ್ಮಾಣ ಸಾಮಗ್ರಿ ಬೆಲೆ ಹೆಚ್ಚಳಗೊಳ್ಳುತ್ತಿವೆ. 1000 ರೂ. ಇದ್ದ 1 ರೋಲ್ ವಯರಿನ ಬೆಲೆಯು 1850ರೂ.ಗೆ ತಲುಪಿದೆ. ತಾಮ್ರದ ತಂತಿಯ ಬೆಲೆಯಲ್ಲಿಯೂ 850 ರೂ.ನಷ್ಟು ಹೆಚ್ಚಳವಾಗಿದೆ. ಟೈಲ್ಸ್, ಸ್ಯಾನಿಟರಿ ಉತ್ಪನ್ನಗಳ ಉತ್ಪಾದನೆಯಲ್ಲಿ ಸಂಭವಿಸಿದ ಕುಸಿತವು ಮಾರುಕಟ್ಟೆಯಲ್ಲಿ ಪ್ರತಿಫಲಿಸಲು ಆರಂಭವಾಗಿದೆ. ವಯರಿಂಗ್, ಪ್ಲಂಬಿಂಗ್, ಸ್ಯಾನಿಟರಿ ನಿರ್ಮಾಣ ಸಾಮಗ್ರಿಗಳು ಹೆಚ್ಚಿನವು ಗುಜರಾತ್ ಸಹಿತ ಉತ್ತರ ಭಾರತದ ರಾಜ್ಯಗಳಿಂದ ಕಾಸರಗೋಡು ಜಿಲ್ಲೆಗೆ ಪೂರೈಕೆಯಾಗುವುದಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಕೊರತೆಯಿಂದಾಗಿ ಉತ್ತರ ಭಾರತದ ಹಲವಾರು ನಿರ್ಮಾಣ ಕಂಪೆನಿಗಳು ತಾತ್ಕಾಲಿಕವಾಗಿ ಮುಚ್ಚುಗಡೆಗೊಂಡಿವೆ.
ಸಾಮಗ್ರಿಗಳ ಆವಕ ಇಳಿಕೆಯಾದ ನಿಟ್ಟಿನಲ್ಲಿ ಬೆಲೆ ದಿಢೀರನೆ ಹೆಚ್ಚಳಗೊಂಡಿರುವುದು ನಿರ್ಮಾಣ ಕಾಮಗಾರಿಗಳನ್ನು ಆರಂಭಿಸಿದವರನ್ನು ಮತ್ತು ಚಿಲ್ಲರೆ ವ್ಯಾಪಾರಿಗಳನ್ನು ಅತಂತ್ರ ಸ್ಥಿತಿಗೆ ತಂದೊಡ್ಡಿದೆ. ಇನ್ನೊಂದೆಡೆ ಯುದ್ಧ ಆರಂಭಗೊಂಡ ಬಳಿಕ ಜಿಲ್ಲೆಯ ನಿರ್ಮಾಣ ಕ್ಷೇತ್ರದಲ್ಲಿ ಕಾಮಗಾರಿಗಳು ಕುಸಿತಗೊಂಡು ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ.

ಮೆಟಲ್ ಶಿಟ್ ಬೆಲೆ ಹೆಚ್ಚಳ

ಮೇಲ್ಛಾವಣಿ ನಿರ್ಮಾಣಕ್ಕೆ ವ್ಯಾಪಕವಾಗಿ ಉಪಯೋಗಿಸುವ ಮೆಟಲ್ ಶಿಟ್‌ಗಳ ಹಾಗೂ ಸಂಬಂಧಪಟ್ಟ ಸಾಮಗ್ರಿಗಳ ಆವಕ ಗಣನೀಯವಾಗಿ ಕುಸಿದಿರುವುದು ಬೆಲೆ ಹೆಚ್ಚಳಕ್ಕೆ ಇನ್ನೊಂದು ಕಾರಣವಾಗಿದೆ. ಇವುಗಳ ನಿರ್ಮಾಣ ಹಂತದಲ್ಲಿ ಅಡುಗೆ ಅನಿಲ ಸಿಲಿಂಡರ್ ಮತ್ತು ಇತರ ಸಂಬಂಧಿತ ಉತ್ಪನ್ನಗಳ ಆವಶ್ಯಕತೆಯೂ ಹೆಚ್ಚಿದೆ.

ಈ ನಿಟ್ಟಿನಲ್ಲಿ ಅನೇಕ ಕುಟುಂಬಗಳು ಬದುಕು ನಿರ್ವಹಣೆಗೆ ಸಂಕಷ್ಟಪಡುವಂತಾಗಿದೆ.

ಸಾಮಗ್ರಿಗಳನ್ನು ಹಣ ನೀಡಿ ಪಡೆಯಬೇಕು
ಕಾಸರಗೋಡು ಜಿಲ್ಲೆಯಲ್ಲಿ ಸಾಮಗ್ರಿಗಳ ಬೆಲೆಯೇರಿಕೆಯಿಂದಾಗಿ ಏನು ಮಾಡುವುದು ಎಂದು ತಿಳಿಯದೆ ಚಿಲ್ಲರೆ ವ್ಯಾಪಾರಿಗಳು ಕಂಗಾಲಾಗಿದ್ದಾರೆ. ಈ ಹಿಂದಿನ ವರ್ಷಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಖರೀದಿಸಿದರೆ ಒಂದರಿಂದ ಆರು ತಿಂಗಳ ವರೆಗೆ ಸಮಯಾವಕಾಶ ಪಡೆದು ಹಣ ನೀಡಿದರೆ ಸಾಕಾಗುತ್ತಿತ್ತು. ಆದರೆ ಅತಂತ್ರತೆ ತೀವ್ರಗೊಂಡ ಹಿನ್ನೆಲೆಯಲ್ಲಿ ಕಂಪೆನಿಗಳು ಈ ವಿನಾಯಿತಿಯನ್ನು ಸಂಪೂರ್ಣವಾಗಿ ಹಿಂಪಡೆದಿವೆ. ಹಣ ಪಾವತಿಸಿದರೆ ಮಾತ್ರವೇ ಸಾಮಗ್ರಿಗಳನ್ನು ಕೊಂಡೊಯ್ಯಬಹುದು ಎಂಬುದು ಪ್ರಸ್ತುತ ಸ್ಥಿತಿಯಾಗಿದೆ.

ಗ್ರಾಹಕರಿಗೆ ನೀಡುತ್ತಿದ್ದ ಸೌಲಭ್ಯ ಹಿಂತೆಗೆತ
ಸಾಮಗ್ರಿಗಳು ಮಾರಾಟಗಾರರಿಗೆ ಸಾಲದ ರೂಪದಲ್ಲಿ ಲಭಿಸುತ್ತಿದ್ದಾಗ ವ್ಯಾಪಾರಿಗಳು ಕೂಡಾ ಪೂರ್ಣ ಮೊತ್ತ ನೀಡದಿದ್ದರೂ ಗ್ರಾಹಕರಿಗೆ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ಆದರೆ ಇದೀಗ ಪೂರ್ಣ ಮೊತ್ತ ನೀಡಿದರೆ ಮಾತ್ರ ಗ್ರಾಹಕರಿಗೆ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.
ಯುದ್ಧ ಕೊನೆಗೊಂಡ ನಂತರವೂ ಈ ವಲಯದ ಸಮಸ್ಯೆಗಳನ್ನು ಪರಿಹರಿಸಲು ತಿಂಗಳುಗಳು ಬೇಕಾಗಬಹುದು. ಈ ನಡುವೆ ಸಂದಿಗ್ಧತೆಯನ್ನು ಮುಂದಿಟ್ಟುಕೊಂಡು ಚೈನೀಸ್ ಉತ್ಪನ್ನಗಳನ್ನು ಜಿಲ್ಲೆಯಲ್ಲಿ ವ್ಯಾಪಕವಾಗಿ ಮಾರುಕಟ್ಟೆಗೆ ಇಳಿಸಿ ಲಾಭ ಗಿಟ್ಟಿಸಿಕೊಳ್ಳುವ ತಂಡಗಳು ಕೂಡಾ ಸಕ್ರಿಯವಾಗುತ್ತಿವೆ.

ಚಂದ್ರಗಿರಿ ಕೋಟೆಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಕ್ರಮ: ಭರವಸೆ

ಪ್ರವಾಸಿಗರನ್ನು ಆಕರ್ಷಿಸಲು ಯೋಜನೆ: ಪಾಂಡ್ಯನ್

ಕಾಸರಗೋಡು: ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ ಚಂದ್ರಗಿರಿ ಕೋಟೆಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಶನಿವಾರ ಭೇಟಿ ನೀಡಿ ಮೌಲ್ಯಮಾಪನ ನಡೆಸಿದರು.
ಕೇರಳ ಪುರಾತತ್ವ ಇಲಾಖೆಯು ತಿಳುವಳಿಕೆ ಒಪ್ಪಂದದಡಿ ನಿರ್ವಹಣೆಗಾಗಿ ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿಗೆ ಹಸ್ತಾಂತರಿಸಿದೆ. ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಚಂದ್ರಗಿರಿ ಕೋಟೆಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಗತ್ಯದ ಕ್ರಮಗಳನ್ನು ಕೈಗೊಳ್ಳುವಂತೆ ಅವರು ನಿರ್ದೇಶಿಸಿದರು.
ರಾಜ್ಯ ಪುರಾತತ್ವ ಇಲಾಖೆಯು ಚಂದ್ರಗಿರಿ ಕೋಟೆಯನ್ನು ನಿರ್ವಹಣೆಗಾಗಿ ಡಿಟಿಪಿಸಿ (ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ)ಗೆ ಹಸ್ತಾಂತರಿಸಿದ ನಂತರ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಯಿತು. ಪುರಾತತ್ವ ಪರಂಪರೆಯ ಸೌಂದರ್ಯಕ್ಕೆ ಹಾನಿಯಾಗದಂತೆ ಕೋಟೆಯೊಳಗಿನ ನಡಿಗೆ ದಾರಿಗಳು ಮತ್ತು ಆಸನ ಪ್ರದೇಶಗಳ ದುರಸ್ತಿಯನ್ನು ತಕ್ಷಣವೇ ಪೂರ್ಣಗೊಳಿಸಬೇಕು ಮತ್ತು ಕೋಟೆ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಮಗ್ರ ಶುಚಿಗೊಳಿಸುವ ಕಾರ್ಯವನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಆದೇಶಿಸಿದರು.



ಕೊಳ ನವೀಕರಣ
ಕೋಟೆಯೊಳಗಿನ ಐತಿಹಾಸಿಕವಾಗಿ ಮಹತ್ವದ ಕೊಳವನ್ನು ಸಂರಕ್ಷಿಸಿ ನವೀಕರಿಸಲಾಗುವುದು. ಪ್ರವಾಸಿಗರು ವಿಶ್ರಾಂತಿ ಪಡೆಯಲು ಮತ್ತು ನೈಸರ್ಗಿಕ ಸೌಂದರ್ಯವನ್ನು ಆನಂದಿಸಲು ಆಸನ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಶೌಚಾಲಯಗಳನ್ನು ಅಳವಡಿಸಲಾಗುವುದು. ಕೋಟೆಯೊಳಗಿನ ಕಾಡುಪೊದೆಗಳನ್ನು ತೆರವುಗೊಳಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.
● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ, ಕಾಸರಗೋಡು

ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡ ನಂತರ ಚಂದ್ರಗಿರಿ ಕೋಟೆಯನ್ನು ಮದುವೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಒಂದು ತಾಣವನ್ನಾಗಿ ಪರಿವರ್ತಿಸುವ ಗುರಿ ಇರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.
ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಉಪನಿರ್ದೇಶಕ ಎಂ.ಎ.ನಸೀಬ್, ಡಿಟಿಪಿಸಿ ಕಾರ್ಯದರ್ಶಿ ಜೆ.ಕೆ.ಜಿಜೇಶ್ ಕುಮಾರ್, ಚೆಮ್ನಾಡು ಗ್ರಾಮ ಪಂಚಾಯತ್ ಅಧ್ಯಕ್ಷೆ ಆಯೇಷಾ ಅಬೂಬಕ್ಕರ್, ಉಪಾಧ್ಯಕ್ಷ ದಿಲೀಪ್ ಕುಮಾರ್, ಜಿಲ್ಲಾ ವಾರ್ತಾಧಿಕಾರಿ ಎಂ.ಮಧುಸೂದನನ್, ಕುಟುಂಬಶ್ರೀ ಎಡಿಎಂಸಿ ಡಿ.ಹರಿದಾಸ್, ಜಿಲ್ಲಾ ನಿರ್ಮಿತಿ ಕೇಂದ್ರದ ಪ್ರತಿನಿಧಿ ಪಿ.ಎಂ.ಹೃಷಿತ್ ಶಿವನ್ ಮತ್ತಿತರರು ಭಾಗವಹಿಸಿದ್ದರು.

ಮಿದುಳಿನ ಆರೋಗ್ಯ ಉಪಕ್ರಮ | ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಸಭೆ

ಅವೈಜ್ಞಾನಿಕ ಚಿಕಿತ್ಸಾ ವಿಧಾನದಿಂದ ರೋಗ ತೀವ್ರತೆ ವೃದ್ಧಿ

ಕಾಸರಗೋಡು: ಜಿಲ್ಲೆಯಲ್ಲಿ ಜಾರಿಗೆ ತರಲಾಗುತ್ತಿರುವ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಯೋಜನೆಯ ಭಾಗವಾಗಿ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ಸಭೆಯನ್ನು ಶನಿವಾರ ಆಯೋಜಿಸಲಾಗಿತ್ತು.
ಕಾಞಂಗಾಡು ರಾಷ್ಟ್ರೀಯ ಆರೋಗ್ಯ ಮಿಷನ್ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಜಿಲ್ಲಾ ವೈದ್ಯಾಧಿಕಾರಿ ಡಾ.ಬಿ.ಸಂತೋಷ್ ಉದ್ಘಾಟಿಸಿದರು. ಕಾಞಂಗಾಡಿನ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕಿ ಡಾ.ಎಂ.ಪಿ. ಜೀಜಾ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗಾಗಿ ಹಮ್ಮಿಕೊಳ್ಳಲಾದ ತರಬೇತಿ ಕಾರ್ಯಕ್ರಮದಲ್ಲಿ ಉಪ ಡಿಎಂಒ ಡಾ.ಕೆ. ಸಂತೋಷ್ (ಮೆದುಳಿನ ಆರೋಗ್ಯ ಉಪಕ್ರಮ ಜಿಲ್ಲಾ ನೋಡಲ್ ಅಧಿಕಾರಿ) ತರಗತಿ ನಡೆಸಿದರು.

ಸಾರ್ವಜನಿಕರಲ್ಲಿ ಅರಿವಿನ ಕೊರತೆ
ನರವೈಜ್ಞಾನಿಕ ಅಸ್ವಸ್ಥತೆಗಳು ನರಮಂಡಲದ ಕಾರ್ಯ ನಿರ್ವಹಣೆಯನ್ನು ಮೂಲಭೂತವಾಗಿ ಅಡ್ಡಿಪಡಿಸುವ ವೈದ್ಯಕೀಯ ಪರಿಸ್ಥಿತಿಗಳ ಸಂಕೀರ್ಣ ಗುಂಪನ್ನು ಪ್ರತಿನಿಧಿಸುತ್ತವೆ. ಸಾರ್ವಜನಿಕರಲ್ಲಿ ಅರಿವಿನ ಕೊರತೆ, ಲಕ್ಷಣಗಳು ಕಂಡುಬಂದಾಗ ಮಾಟಮಂತ್ರದಂತಹ ಅವೈಜ್ಞಾನಿಕ ಚಿಕಿತ್ಸಾ ವಿಧಾನಗಳ ಬಳಕೆಯಿಂದಾಗಿ ರೋಗಗಳನ್ನು ಮೊದಲೇ ಪತ್ತೆಹಚ್ಚುವುದು ಮತ್ತು ಅಸಮರ್ಪಕ ಉಲ್ಲೇಖ ವ್ಯವಸ್ಥೆಗಳು ಅವುಗಳ ತೀವ್ರತೆಗೆ ಕಾರಣವಾಗುತ್ತಿವೆ ಎಂದು ಡಾ.ಕೆ.ಸಂತೋಷ್ ಅವರು ಖೇದ ವ್ಯಕ್ತಪಡಿಸಿದರು.

ಪಾರ್ಶ್ವವಾಯು ಪ್ರಕರಣ ಹೆಚ್ಚಳ
ಯುವಕರಲ್ಲಿ ಹೆಚ್ಚುತ್ತಿರುವ ಪಾರ್ಶ್ವವಾಯು ಪ್ರಕರಣಗಳು ಹೆಚ್ಚುತ್ತಿವೆ. ಈ ನಿಟ್ಟಿನಲ್ಲಿ ರೋಗಿಗಳಿಗೆ ಸೂಕ್ತ ಚಿಕಿತ್ಸೆಗಳು ನೀಡುವ ಅತ್ಯಗತ್ಯ ಎಂದು ಅವರು ತಿಳಿಸಿದರು.
ಕಾರ್ಯಕ್ರಮದಲ್ಲಿ ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್ ರಾಜನ್, ಕಿರಿಯ ಆಡಳಿತ ವೈದ್ಯಾಧಿಕಾರಿ ಡಾ.ಕೆ.ಪಿ.ಅನುಶ್ರೀ, ತಾಂತ್ರಿಕ ಸಹಾಯಕ ಎಂ.ಚಂದ್ರನ್, ಉಪ ಜಿಲ್ಲಾ ಶಿಕ್ಷಣ ಮತ್ತು ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್ ಮಾತನಾಡಿದರು. ಜಿಲ್ಲಾ ಶಿಕ್ಷಣ ಮತ್ತು ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್ ಸ್ವಾಗತಿಸಿದರು. ಮಿದುಳಿನ ಆರೋಗ್ಯ ವಿಭಾಗದ ಸಂಯೋಜಕಿ ಮರಿಯಂ ಅನ್ಸ್ವರಾ ಶೈಮಾ ವಂದಿಸಿದರು.



ಕಾಸರಗೋಡು ಸಹಿತ ದೇಶದ 12 ಜಿಲ್ಲೆಗಳ ಆಯ್ಕೆ

ನೀತಿ ಆಯೋಗದ ನೇತೃತ್ವದಲ್ಲಿ ಭಾರತದ 12 ಆಕಾಂಕ್ಷೆ ಜಿಲ್ಲೆಗಳಲ್ಲಿ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಎಂಬ ವಿಶೇಷ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಉಪಕ್ರಮದಲ್ಲಿ ಕೇರಳದ ಏಕೈಕ ಜಿಲ್ಲೆ ಕಾಸರಗೋಡು ಆಗಿದೆ. ನೀತಿ ಆಯೋಗ, ಜಿಲ್ಲಾಡಳಿತ ಮತ್ತು ಜಿಲ್ಲಾ ವೈದ್ಯಕೀಯ ಕಚೇರಿ ಜಂಟಿಯಾಗಿ ಬ್ರೈನ್ ಹೆಲ್ತ್ ಇನಿಶಿಯೇಟಿವ್ ಕಾಸರಗೋಡು ಎಂಬ ಅಭಿಯಾನವನ್ನು ಜಾರಿಗೊಳಿಸುತ್ತಿವೆ.

ಕಾಸರಗೋಡು ಜಿಲ್ಲಾ ಮಟ್ಟದ ಮಲೇರಿಯಾ ದಿನಾಚರಣೆ ಉದ್ಘಾಟನೆ



ಕಾಸರಗೋಡು: ಮಲೇರಿಯಾ ವಿರುದ್ಧ ಸಾರ್ವಜನಿಕ ಜಾಗೃತಿಯನ್ನು ಬಲಪಡಿಸಲು ಪ್ರತಿ ವರ್ಷ ಏಪ್ರಿಲ್ 25ರಂದು ನಡೆಯುವ ಮಲೇರಿಯಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಕಾಲಿಕ್ಕಡವು ಫ್ರೆಂಡ್ಸ್ ಕ್ಲಬ್ ಸಭಾಂಗಣದಲ್ಲಿ ನಡೆಯಿತು.
ಜಿಲ್ಲಾ ರೋಗವಾಹಕ ಆಶ್ರಿತ ರೋಗ ನಿಯಂತ್ರಣ ಅಧಿಕಾರಿ ಕೆ.ವಿ.ಗಿರೀಶ್ ಉದ್ಘಾಟಿಸಿ ಮಾತನಾಡಿದರು. ಉದ್ಘಾಟನಾ ಸಮಾರಂಭದ ಅಂಗವಾಗಿ ಮಲೇರಿಯಾ ಮತ್ತು ಕ್ಷಯರೋಗವನ್ನು ಪತ್ತೆಹಚ್ಚಲು ಅತಿಥಿ ಕಾರ್ಮಿಕರು ಮತ್ತು ಸ್ಥಳೀಯ ಜನರನ್ನು ಒಳಗೊಂಡ ರಕ್ತ ಪರೀಕ್ಷಾ ಶಿಬಿರ ಆಯೋಜಿಸಲಾಗಿತ್ತು. ಜೀವನಶೈಲಿ ರೋಗ ನಿರ್ಣಯ, ಕ್ಷಯರೋಗ ನಿರ್ಣಯಕ್ಕಾಗಿ ಕಫ ಪರೀಕ್ಷೆ, ಚರ್ಮ ರೋಗ ನಿರ್ಣಯ ಪರೀಕ್ಷೆಗಳನ್ನು ಆಯೋಜಿಸಲಾಗಿತ್ತು.
ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ) ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್, ಪಿಲಿಕೋಡ್ ಗ್ರಾ.ಪಂ. ಮತ್ತು ಓಲಟ್ ಕುಟುಂಬ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಮಲೇರಿಯಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಓಲಟ್ ಕುಟುಂಬ ಆರೋಗ್ಯ ಕೇಂದ್ರದ ವೈದ್ಯಕೀಯ ಅಧಿಕಾರಿ ಡಾ.ಲಿನಿ ಜೋಯ್ ಅಧ್ಯಕ್ಷತೆ ವಹಿಸಿದ್ದರು. ಪಬ್ಲಿಕ್ ಹೆಲ್ತ್ ನರ್ಸ್ ಬೀನಾ ಕೆ.ವಿ. ಮತ್ತು ಫ್ರೆಂಡ್ಸ್ ಕ್ಲಬ್ ಕಾರ್ಯದರ್ಶಿ ಎಂ.ವಿನೋದ್ ಕುಮಾರ್ ಶುಭಹಾರೈಸಿದರು. ಕುಂಬಳೆ ಸಿಎಚ್‌ಸಿ ಆರೋಗ್ಯ ನಿರೀಕ್ಷಕ ಸಿ.ಕೆ.ಅರುಣ್‌ಕುಮಾರ್ ಜಾಗೃತಿ ತರಗತಿ ನಡೆಸಿದರು. ಓಲಟ್ ಕುಟುಂಬ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕ ಪಿ.ವಿ.ಮಹೇಶ್ ಕುಮಾರ್ ಸ್ವಾಗತಿಸಿ, ಕಿರಿಯ ಆರೋಗ್ಯ ನಿರೀಕ್ಷಕ ಜಾವಿದ್ ಹುಸೇನ್ ವಂದಿಸಿದರು.

ಬಿಜೆಪಿಯಿಂದ ಕೆ.ಜಿ.ಮಾರಾರ್ ಸಂಸ್ಮರಣೆ



ಕಾಸರಗೋಡು: ಬಿಜೆಪಿ ಕೇರಳ ರಾಜ್ಯ ವರಿಷ್ಠರಾಗಿದ್ದ ಕೆ.ಜಿ.ಮಾರಾರ್ ಅವರ ಪುಣ್ಯತಿಥಿಯ ಅಂಗವಾಗಿ ಬಿಜೆಪಿ ಕಾಸರಗೋಡು ಜಿಲ್ಲಾ ಕೇಂದ್ರವಾದ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಶನಿವಾರ ಪುಷ್ಪ ನಮನ ಸಲ್ಲಿಸಲಾಯಿತು.
ಬಿಜೆಪಿ ರಾಜ್ಯ ಸಮಿತಿ ಸದಸ್ಯ ವಿ.ರವೀಂದ್ರನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ಆರ್.ಸುನೀಲ್, ಎನ್.ಬಾಬುರಾಜ್, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಕಾರ್ಯದರ್ಶಿ ಪ್ರಮೀಳಾ ಮಜಲ್, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಕಾಸರಗೋಡು ಮಂಡಲ ಅಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಉದುಮ ಮಂಡಲ ಸಮಿತಿ ಅಧ್ಯಕ್ಷೆ ಶೈನಿ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯ್ಕ್ ಇದ್ದರು.



ಬದಿಯಡ್ಕ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶ ಸಂದರ್ಭ ಪದ್ಮಶ್ರೀ ಪುರಸ್ಕೃತ ಸತ್ಯನಾರಾಯಣ ಬೆಳೇರಿ ಅವರನ್ನು ಗೌರವಿಸಲಾಯಿತು.

ಕುತ್ತಿಕೋಲ್ ಕ್ಷೇತ್ರದ ಬ್ರಹ್ಮಕಲಶ: ಸಭೆ

ಕಾಸರಗೋಡು: ಕುತ್ತಿಕೋಲ್ ಶ್ರೀ ತಂಬುರಾಟ್ಟಿ ಭಗವತಿ ದೈವಸ್ಥಾನದ ಪುನರ್ ಪ್ರತಿಷ್ಠಾಪನೆ, ಬ್ರಹ್ಮಕಲಶ ಮಹೋತ್ಸವದ ಅಂಗವಾಗಿ ಸಂಸ್ಕೃತಿ ಉತ್ಸವ ವೇದಿಕೆಯಲ್ಲಿ ದೇಶದ ಮರೆತುಹೋದ ಇತಿಹಾಸವನ್ನು ಮರಳಿ ಪಡೆಯುವ ಉದ್ದೇಶದಿಂದ ಸ್ಥಳೀಯ ಇತಿಹಾಸಗಳ ಕುರಿತು ಸಭೆಯನ್ನು ಆಯೋಜಿಸಲಾಯಿತು.
ಹಳೆಯ ತಲೆಮಾರಿನ ಅನುಭವಗಳು ಮತ್ತು ಜ್ಞಾನವನ್ನು ಯುವ ಪೀಳಿಗೆಗೆ ರವಾನಿಸುವ ವೇದಿಕೆಯಾಗಿ ಇದು ಗುರುತಿಸಲ್ಪಟ್ಟಿತು. ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್ ಉದ್ಘಾಟಿಸಿದರು. ತಂಬಾನ್ ಮಾಸ್ಟರ್ ಮೋಡರೇಟರ್ ಆಗಿದ್ದ ಸಭೆಯಲ್ಲಿ ಕುತ್ತಿಕೋಲ್ ಶಂಕರನ್ ಎಂಬ್ರಾಂದಿರಿ, ಪಿ.ಮಾಧವನ್ ವೆಳ್ಳಾಲ, ಕೆ.ಬಾಲಕೃಷ್ಣನ್ ಕುತ್ತಿಕೋಲ್, ಸುಕುಮಾರನ್ ಕರ್ಣಮೂರ್ತಿ, ಕೆ.ವಿ.ಕೃಷ್ಣನ್ ಮಾಸ್ಟರ್, ರಾಜು ಕಳೆಪ್ಪಾಡಿ, ಕಾರ್ತ್ಯಾಯಿನಿ ಕಲ್ಲತ್, ಅಮ್ಮಾಳು ಅಮ್ಮ ಪಾಣೂರು ಪರಯಂಪಳ್ಳ, ಕೆ.ತಂಬಾನ್ ತುಂಡಂಬಟ್ಟಿ, ಬಾಲಕೃಷ್ಣನ್ ಮಾಸ್ತರ್ ಪಯ್ಯಂಗಾನಂ, ಎ.ಮಾಧವನ್ ನಾಯರ್ ಕಳಕ್ಕರ ಉಪಸ್ಥಿತರಿದ್ದರು. ಕೆ.ಅರವಿಂದನ್ ಸ್ವಾಗತಿಸಿ, ಪ್ರಭಾಕರ ಕುಂಡುಚ್ಚಿ ವಂದಿಸಿದರು.

ಅಸಮರ್ಪಕ ತ್ಯಾಜ್ಯ ನಿರ್ವಹಣೆ: ದಂಡ

ಕಾಸರಗೋಡು: ಚೆರುವತ್ತೂರಿನ ಶರಫ್ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಅಜೈವಿಕ ತ್ಯಾಜ್ಯವನ್ನು ಸಂಪೂರ್ಣವಾಗಿ ಹಸಿರು ಕ್ರಿಯಾ ಸೇನೆಗೆ ಹಸ್ತಾಂತರಿಸದೆ ಸುಟ್ಟಿದ್ದಕ್ಕಾಗಿ ಮತ್ತು ನಿಷೇಧಿತ ಏಕ ಬಳಕೆಯ ವಸ್ತು ಬಳಸಿದ್ದಕ್ಕಾಗಿ ಚೆರುವತ್ತೂರಿನ ಕಟ್ಟಡದ ಬಳಿ ರಾಶಿ ಹಾಕಿರುವುದು ಕಂಡುಬಂದ ನಂತರ ಕಾಲೇಜು ಪ್ರಾಂಶುಪಾಲರಿಗೆ 10,000 ರೂ. ದಂಡ ವಿಧಿಸಲಾಗಿದೆ. ಕಾಸರಗೋಡಿನ ಬಿಇಎಂ ಹೈಯರ್ ಸೆಕೆಂಡರಿ ಶಾಲೆಗೆ ವಿಶೇಷವಾಗಿ ಸಿದ್ಧಪಡಿಸಿದ ಗುಂಡಿಯಲ್ಲಿ ಅಜೈವಿಕ ತ್ಯಾಜ್ಯವನ್ನು ರಾಶಿ ಹಾಕಿದ್ದಕ್ಕಾಗಿ ದಂಡ ವಿಧಿಸಲಾಯಿತು. ತೃಕ್ಕರೀಪುರದ ಹೋಟೆಲ್ ಮಾಲಕರಿಗೆ ಆಹಾರ ತ್ಯಾಜ್ಯದ ಜೊತೆಗೆ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೇರ್ಪಡಿಸದೆ ರಾಶಿ ಹಾಕಿದ್ದಕ್ಕಾಗಿ 5,000 ರೂ. ದಂಡ ಹೇರಲಾಯಿತು.
ಜಿಲ್ಲಾ ಜಾರಿ ದಳದ ತಪಾಸಣೆಯಲ್ಲಿ ಸ್ಕ್ವಾಡ್ ಲೀಡರ್ ಕೆ.ವಿ.ಮುಹಮ್ಮದ್ ಮದನಿ, ವಿ.ಎಂ.ಜೋಸ್ ಮತ್ತು ಆರೋಗ್ಯ ನಿರೀಕ್ಷಕ ಟಿ.ಕೆ.ಅಭಿಜಿತ್ ಕುಮಾರ್ ಭಾಗವಹಿಸಿದ್ದರು.

ಇಂದಿನಿಂದ ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ, ಪರಿವಾರ ದೈವ ದೇವರಪ್ರತಿಷ್ಠೆ

ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಹಾಗೂ ಪರಿವಾರ ದೈವ ದೇವರುಗಳ ಪ್ರತಿಷ್ಠೆ ಶ್ರೀ ಗುಳಿಗ ಹಾಗೂ ಶ್ರೀ ಕೊರಗ ತನಿಯ ದೈವದ ಜೋಡುಕೋಲ, ವಿವಿಧ ವೈದಿಕ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಏ.26ರಿಂದ ಮೇ 2ರ ತನಕ ತಂತ್ರಿವರ್ಯ ಶ್ರೀ ಶ್ರೀಕೃಷ್ಣ ಗುರೂಜಿ ನೇತೃತ್ವದಲ್ಲಿ ಜರಗಲಿದೆ.
ಈ ಬಗ್ಗೆ ಬ್ರಹ್ಮಕಲಶೋತ್ಸವ ಸಮಿತಿ ಪದಾಧಿಕಾರಿಗಳು ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಏ.26ರಂದು ಬೆಳಗ್ಗೆ ಗಂಟೆ 5 ಗಂಟೆಗೆ ಗಣಪತಿ ಹೋಮ ಗಂಟೆ 5.45ಕ್ಕೆ ಶ್ರೀ ಸರಸ್ವತಿ ಮಂಟಪದಲ್ಲಿ ದೀಪ ಪ್ರಜ್ವಲನೆಯೊಂದಿಗೆ ಭಜನಾ ಸಂಕೀರ್ತನೆಗೆ ವಿದ್ಯುಕ್ತ ಚಾಲನೆ, ಸರಸ್ವತಿ ಮಂಟಪದಲ್ಲಿ ಬೆಳಗ್ಗೆಯಿಂದ ಸಂಜೆಯ ವರೆಗೆ ನಿತ್ಯ ಭಜನೆ ಮಧ್ಯಾಹ್ನ ಮತ್ತು ರಾತ್ರಿ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 4.30ಕ್ಕೆ ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಿಂದ ವಾದ್ಯಘೋಷ ಹಾಗೂ ಕುಣಿತ ಭಜನೆ ಸಹಿತ ಕರಂದಕ್ಕಾಡು ಮೂಲಕ ಕಾಳ್ಯಂಗಾಡು ಶ್ರೀ ಕ್ಷೇತ್ರಕ್ಕೆ ತಲುಪುವುದು. ನಂತರ ಉಗ್ರಾಣ ಮುಹೂರ್ತ, ರಾತ್ರಿ 9ಕ್ಕೆ ನೃತ್ಯ ಕಾರ್ಯಕ್ರಮ ನಡೆಯಲಿದೆ.
ಏ.27ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, 11ಕ್ಕೆ ಶ್ರೀ ಕ್ಷೇತ್ರದ ತಂತ್ರಿವರ್ಯ ಶ್ರೀಕೃಷ್ಣ ಗುರೂಜಿ ಕುಕ್ಕಾಜೆ ಅವರಿಗೆ ಪೂರ್ಣಕುಂಭ ಸ್ವಾಗತ, ಸಂಜೆ ದೀಪಾರಾಧನೆ, ಸಾಮೂಹಿಕ ಪ್ರಾರ್ಥನೆ, ಶಿಲ್ಪಿಗಳಿಂದ ದೇವಾಲಯ ಪರಿಗ್ರಹ ರಾತ್ರಿ 7ರಿಂದ ವೈದಿಕ ಕಾರ್ಯಕ್ರಮಗಳು, ಶ್ರೀ ಸರಸ್ವತಿ ಮಂಟಪದಲ್ಲಿ ನಿತ್ಯ ಭಜನೆ, ಹರಿಕಥಾ ಸತ್ಸಂಗ, ಸಂಜೆ 5 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ, ಬಳಿಕ ಧಾರ್ಮಿಕ ಸಭೆ, ರಾತ್ರಿ ಸಾಂಸ್ಕೃತಿಕ ವೈಭವ ಜರಗಲಿದೆ ಎಂದರು.
ಏ.28ರಂದು ಮುಂಜಾನೆ 3.30ಕ್ಕೆ ಗಣಪತಿ ಹೋಮ 3.50ರಿಂದ 4.21ರ ವರೆಗಿನ ಬ್ರಾಹ್ಮ ಮುಹೂರ್ತದಲ್ಲಿ ನಾಗರಾಜ, ಪರಿವಾರ ದೈವ ದೇವರುಗಳ ಪ್ರತಿಷ್ಠೆ, ಜೀವಕಲಶಾಭಿಷೇಕ, ಉದಯಪೂಜೆ ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ರಾತ್ರಿ 7ರಿಂದ ವೈದಿಕ ಕಾರ್ಯಕ್ರಮಗಳು, ಶ್ರೀ ಮೂಕಾಂಬಿಕಾ ವೇದಿಕೆಯಲ್ಲಿ ಮಧ್ಯಾಹ್ನ 1ರಿಂದ ಭಕ್ತಿನಾದ ತರಂಗಿಣಿ, ಸಂಜೆ ಗಂಟೆ 5ಕ್ಕೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಸಾಧ್ವಿ ಶ್ರೀ ಮಾತಾನಂದಮಯಿ ಅವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಮಾತೃ ಸಂಗಮ ಕಾರ್ಯಕ್ರಮದಲ್ಲಿ ಸಾಧ್ವಿ ಶ್ರೀ ಮಾತಾನಂದಮಯಿ ಅವರಿಂದ ಆಶೀರ್ವಚನ ನಡೆಯಲಿದೆ. ರಾತ್ರಿ ಗಂಟೆ 7.30ಕ್ಕೆ ನಾಟ್ಯೋತ್ಸವ, ಏ.29ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ಬೆಳಗ್ಗೆ ಗಂಟೆ 9.48ರಿಂದ 11.25 ವರೆಗಿನ ಮಿಥುನ ಲಗ್ನ ಸುಮುಹೂರ್ತದಲ್ಲಿ ಶ್ರೀ ದೇವಿಯ ಪ್ರತಿಷ್ಠೆ ಜೀವ ಕಲಶಾಭಿಷೇಕ, ಮಹಾಪೂಜೆ, ಮಂಗಳಾರತಿ, ಕವಾಟ ಬಂಧನ, ಸರಸ್ವತಿ ಮಂಟಪದಲ್ಲಿ ನಿತ್ಯ ಭಜನೆ, ಹರಿಕಥ, 5 ಗಂಟಗೆ ಸಾಂಸ್ಕೃತಿಕ ಕಲಾ ವೈಭವ, ಹನುಮಗಿರಿ ಶ್ರೀ ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.
ಏ.30ರಂದು ಬೆಳಗ್ಗೆ 6ಕ್ಕೆ ಗಣಪತಿಹೋಮ, ಸಾಮೂಹಿಕ ಪ್ರಾರ್ಥನೆ, ಕವಾಟೋದ್ಘಾಟನೆ ಶ್ರೀ ದೇವಿ ಹಾಗೂ ಪರಿವಾರ ದೈವ ದೇವರುಗಳಿಗೆ 9.30ರಿಂದ 11.00 ಗಂಟೆಯ ತನಕ ಒದಗುವ ಶುಭ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ ನಿತ್ಯ ನೈಮಿತ್ತಿಕ ಕಾರ್ಯಗಳ ನಿರ್ಣಯ ನಡೆಯಲಿದೆ. ಶ್ರೀ ಸರಸ್ವತಿ ಮಂಟಪದಲ್ಲಿ ನಿತ್ಯ ಭಜನೆ, ಯಕ್ಷಗಾನ ತಾಳಮದ್ದಳೆ, ರಾತ್ರಿ ಗಂಟೆಗೆ ಅಂಟೀ ಬೊಕ್ಕ ಅಂಕಲ್ ಎಂಬ ತುಳು ಹಾಸ್ಯಮಯ ನಾಟಕ ಪ್ರದರ್ಶನಗೊಳ್ಳಲಿದೆ.
ಮೇ 1ರಂದು ಬೆಳಗ್ಗೆ 9 ಗಂಟೆಗೆ ಚಂಡಿಕಾ ಹೋಮ, ಶ್ರೀ ಸರಸ್ವತಿ ಮಂಟಪದಲ್ಲಿ ನಿತ್ಯ ಭಜನೆ, ಶ್ರೀ ಮೂಕಾಂಬಿಕಾ ವೇದಿಕೆ ಸಮಾರೋಪ ಸಮಾರಂಭ, ಸಂಜೆ 5 ಗಂಟೆಗೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಧಾರ್ಮಿಕ ಸಭೆಯಲ್ಲಿ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಂದ ಆಶೀರ್ವಚನ, ರಾತ್ರಿ ಗಂಟೆ 7.30ಕ್ಕೆ ನೃತ್ಯ ವೈಭವ ನಡೆಯಲಿದೆ.
ಮೇ 2ರಂದು ಸಂಜೆ ಗಂಟೆ 5 ಗಂಟೆಗೆ ಭಂಡಾರ ಮನೆಯಿಂದ ಭಂಡಾರ ಆಗಮನ, 6ಕ್ಕೆ ಶ್ರೀ ಗುಳಿಗ ದೈವದ ಕೋಲ, ರಾತ್ರಿ 8ಕ್ಕೆ ಶ್ರೀ ಕೊರಗ ತನಿಯ ದೈವದ ಜೋಡುಕೋಲ ನೆರವೇರಲಿದೆ.
ಸುದ್ದಿಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ರು ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಶ್ರೀ ಕ್ಷೇತ್ರದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಯಾನಂದ ಕೊಕ್ಕೆಬೈಲ್, ಸಮಿತಿ ಪದಾಧಿಕಾರಿಗಳಾದ ಶಾಂತಕುಮಾರ್ ವಿಷ್ಣುನಗರ ಮುಂಡಿತ್ತಡ್ಕ, ಮೋಹನ್‌ರಾಜ್ ಕಾಳ್ಯಂಗಾಡು, ರಂಜಿತ್ ಮನ್ನಿಪ್ಪಾಡಿ, ಗೋವಿಂದ ನಾಯ್ಕ್ ಕಾಳ್ಯಂಗಾಡು, ಕೆ.ಜಗದೀಶ್ ಕೂಡ್ಲು ಮೊದಲಾದವರು ಉಪಸ್ಥಿತರಿದ್ದರು.



ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಭಾನುವಾರ 26, ಏಪ್ರಿಲ್ 2026

ಸುತ್ತಮುತ್ತ

ಇಂದು ಭರತನಾಟ್ಯ ರಂಗ ಪ್ರವೇಶ

ಬಂಟ್ವಾಳ: ಗಾನ ನೃತ್ಯ ಅಕಾಡೆಮಿ ಪ್ರಸ್ತುತಿಯಲ್ಲಿ ಗುರು ವಿದ್ಯಾಶ್ರೀ ರಾಧಾಕೃಷ್ಣ ಅವರ ಶಿಷ್ಯೆಯರಾದ ನಿವೇದಿತಾ ಕಾರಂತ ಮತ್ತು ಶಮಿತಾ ಕಾರಂತ



ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ಏ.26ರಂದು ಸಂಜೆ 5.30ಕ್ಕೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಸುರತ್ಕಲ್ ಶ್ರೀ ನಾಟ್ಯಾಂಜಲಿ ಕಲಾ ಅಕಾಡೆಮಿ ನಿರ್ದೇಶಕ ಕಲಾಶ್ರೀ ಗುರು ಚಂದ್ರಶೇಖರ ನಾವಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಪುತ್ತೂರು ವಿಶ್ವಕಲಾ ನಿಕೇತನ ನಿರ್ದೇಶಕ ವಿದುಷಿ ನಯನಾ ವಿ. ರೈ ಕುದ್ಮಾಡಿ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಹಿಮ್ಮೇಳದಲ್ಲಿ ನಟುವಾಂಗದಲ್ಲಿ ಗುರು ವಿದ್ಯಾಶ್ರೀ ರಾಧಾಕೃಷ್ಣ, ಹಾಡುಗಾರಿಕೆಯಲ್ಲಿ ಚೆನ್ನೈನ ವಿದ್ವಾನ್ ಶ್ರೀಕಾಂತ್ ಗೋಪಾಲಕೃಷ್ಣನ್, ಮೃದಂಗದಲ್ಲಿ ವಿದ್ವಾನ್ ವಿನಯ್ ನಾಗರಾಜನ್, ವೀಣೆಯಲ್ಲಿ ವಿದ್ವಾನ್ ಸೌಂದರ ರಾಜನ್, ಕೊಳಲಿನಲ್ಲಿ ವಿದ್ವಾನ್ ರಘುನಂದನ್ ಭಾಗವಹಿಸುವವರು. ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ನಿವೃತ್ತ ಮುಖ್ಯೋಪಾಧ್ಯಾಯ ರಮೇಶ್ ಎನ್ ಹಾಗೂ ನಿವೃತ್ತ ಅಧ್ಯಾಪಕಿ ವರಮಹಾಲಕ್ಷ್ಮೀ ದಂಪತಿ ಪುತ್ರಿಯರಾದ ನಿವೇದಿತಾ ಕಾರಂತ ಮತ್ತು ಶಮಿತಾ ಕಾರಂತ ಸಹೋದರಿಯರು ಬಾಲ್ಯದಲ್ಲಿ ವಿದುಷಿ ನಯನ ಸತ್ಯನಾರಾಯಣ ಅವರಲ್ಲಿ ಭರತನಾಟ್ಯ ಅಭ್ಯಾಸ ಪ್ರಾರಂಭಿಸಿ ಸೀನಿಯರ್ ಹಂತದ ಪರೀಕ್ಷೆ ಪೂರೈಸಿದ್ದಾರೆ. ಮಂಗಳೂರಿನಲ್ಲಿ ವಿದುಷಿ ವಿದ್ಯಾಶ್ರೀ ರಾಧಾಕೃಷ್ಣ ಅವರಲ್ಲಿ ಭರತನಾಟ್ಯ ಅಭ್ಯಾಸ ಮುಂದುವರಿಸಿದ್ದು ಶಮಿತಾ ಕಾರಂತ್ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಮಂಗಳೂರು ಕೇಂದ್ರಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಬಂಟ್ವಾಳದಲ್ಲಿ ಜನಸಂಪರ್ಕ ಸಭೆ



ಬಂಟ್ವಾಳ: ಮೆಸ್ಕಾಂ ಬಂಟ್ವಾಳ 1 ಹಾಗೂ ಬಂಟ್ವಾಳ 2 ಉಪವಿಭಾಗಗಳಿಗೆ ಸಂಬಂಧಿಸಿದ ಜನರ ಅಹವಾಲು ಆಲಿಸುವ ಜನಸಂಪರ್ಕ ಸಭೆ ಬಿ.ಸಿ ರೋಡ್ ನಲ್ಲಿರುವ ಮೆಸ್ಕಾಂ ಕಚೇರಿಯಲ್ಲಿ ನಡೆಯಿತು. ಮಳೆಗಾಲದ ಸಮಯದಲ್ಲಿ ಮೆಸ್ಕಾಂ ವತಿಯಿಂದ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಚರ್ಚಿಸಲಾಯಿತು. ವಿದ್ಯುತ್ ಮೀಟರ್ ರೀಡಿಂಗ್ ಹಾಗೂ ವಿದ್ಯುತ್ ಬಿಲ್ ನೀಡುವಾಗ ವಿಳಂಬದ ಬಗ್ಗೆ ಕೆಲವರು ಸಭೆಯಲ್ಲಿ ಆಕ್ಷೇಪಿಸಿದರು. ಹೊಸ ವಿದ್ಯುತ್ ಸಂಪರ್ಕ ಪಡೆಯುವ ವೇಳೆಯಲ್ಲಿ ಸರ್ವರ್ ಸಮಸ್ಯೆ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾವವಾಯಿತು. ಕೆಲವು ವಿದ್ಯುತ್ ಗುತ್ತಿಗೆದಾರರು ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಮಂಡಿಸಿದರು. ರಾಜ್ಯ ಮಟ್ಟದಲ್ಲಿ ಆಗಬೇಕಾದ ಪರಿಹಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಲಾಗುವುದು ಹಾಗೂ ಸ್ಥಳೀಯವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶೀಘ್ರದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವ ಬಗ್ಗೆ ಅಧಿಕಾರಿಗಳು ತಿಳಿಸಿದರು. ಮೆಸ್ಕಾಂ ಎಕ್ಸಿಕ್ಯೂಟಿವ್ ಎಂಜಿನಿಯರ್ ಸಂತೋಷ್ ನಾಯಕ್, ಎಇಇಗಳಾದ ನಾರಾಯಣ ಭಟ್, ಸುಬ್ರಹ್ಮಣ್ಯ ಪ್ರಸಾದ್ ಉಪಸ್ಥಿತರಿದ್ದರು.

ನೀರು ಸರಬರಾಜು: ಬೆಂಗಳೂರು ಮೂಲದ ಕಂಪೆನಿಗೆ ಗುತ್ತಿಗೆ

ಮುಲ್ಕಿ: ಕೇಂದ್ರ ಪುರಸ್ಕೃತ ಅಮೃತ್-2.0 ಯೋಜನೆಯಡಿ ಮುಲ್ಕಿ ಪಟ್ಟಣಕ್ಕೆ ಮರವೂರು ಡ್ಯಾಂ ಬಜ್ಪೆಯಿಂದ ಕಿನ್ನಿಗೋಳಿ ಮೂಲಕ ನೀರು ಸರಬರಾಜು ಮಾಡಲು ಹಾಲಿ ಇರುವ ವಿತರಣಾ ಕೊಳವೆಗಳಿಗೆ ಗೃಹ ಸಂಪರ್ಕ ನೀಡಲು ಶ್ರೀ ಶುಭ ಸೇಲ್ಸ್ ಬೆಂಗಳೂರು ರವರಿಗೆ ಗುತ್ತಿಗೆ ನೀಡಲಾಗಿದೆ. ಸಂಸ್ಥೆಯ ಸಿಬ್ಬಂದಿ ವರ್ಗದವರು ಸಾರ್ವಜನಿಕ ಮನೆಗಳಿಗೆ ನೀರಿನ ಸಂಪರ್ಕ ಹಾಗೂ ಮೀಟರ್ ಅಳವಡಿಸಲು ಭೇಟಿ ನೀಡಿದಾಗ ಸಾರ್ವಜನಿಕರು ಸಹರಿಸಬೇಕೆಂದು ಮುಲ್ಕಿ ನಗರ ಪಂಚಾಯತ್‌ನ ಮುಖ್ಯಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ನಾಳೆ ಸೀಯಾಳಭಿಷೇಕ

ಪುತ್ತೂರು: ನಗರದ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥವಾಗಿ ಏ.27ರ ಸೋಮವಾರ ಬೆಳಗ್ಗೆ 9 ಗಂಟೆಯಿಂದ 11ರ ರತನಕ ಸೀಯಾಳಭಿಷೇಕ ಜರುಗಲಿರುವುದು. ಈ ಸಂದರ್ಭ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ಹಾಗೂ ಸೇವಾ ರೂಪದಲ್ಲಿ ಸೀಯಾಳ ನೀಡಲಿಚ್ಛಿಸುವವರು ಅದೇ ದಿನ ಬೆಳಗ್ಗೆ 9.30ರೊಳಗೆ ತಂದೊಪ್ಪಿಸಬಹುದೆಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ತಿಳಿಸಿದ್ದಾರೆ.

ಕಿಕ್ ಬಾಕ್ಸಿಂಗ್: ರಿಧನ್ಯ ಡಿ. ಗಾಣಿಗಾ ದ್ವಿತೀಯ

ಬಂಟ್ವಾಳ: ಚೆನ್ನೈನ ವಿನಾಯಕ ಮಿಷನ್ ರಿಸರ್ಚ್



ಅಸ್ಮಿತಾ ಮಹಿಳೆಯರ ಕಿಕ್ ಬಾಕ್ಸಿಂಗ್ ಲೀಗ್ 2025 -26ರಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಮಂಗಳೂರಿನ ರಿಧನ್ಯ.ಡಿ ಗಾಣಿಗಾ ಅವರು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಇವರು ಮಂಗಳೂರಿನ ಧನರಾಜ್ ಹಾಗೂ ಸೌಮ್ಯ ಅವರ ಸುಪುತ್ರಿಯಾಗಿದ್ದು ಪಾಣೆಮಂಗಳೂರು ಮರ್ದೋಳಿ ವೆಂಕಪ್ಪ ಸಪಲ್ಯರ ಮೊಮ್ಮಗಳು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಭಕ್ತಿಯಿದ್ದರೆ ದೇವರ ಶ್ರೀರಕ್ಷೆ: ಶಾಸಕಿ ಮುರುಳ್ಯ

ಉಪ್ಪಿನಂಗಡಿ: ಭಕ್ತಿ ಭಾವದಿಂದ ಮನಸಾರೆ ನೆನೆದರೆ ದೇವರು ನಂಬಿದವರಿಗೆ ಶ್ರೀರಕ್ಷೆಯಾಗಲು ಸಾಧ್ಯ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಧಾರ್ಮಿಕ ಉಪನ್ಯಾಸ ನೀಡಿದ ಉಡುಪಿ ನ್ಯಾಯವಾದಿ ಸಹನಾ ಕುಂದರ್ ಸೂಡ, ಸಂಸ್ಕಾರಯುತ ಮೌಲ್ಯಾಧಾರಿತ ಶಿಕ್ಷಣ ಮಕ್ಕಳಿಗೆ ನೀಡಬೇಕು, ಸಮಾಜದಲ್ಲಿ ಹಿರಿಯರನ್ನು ಗೌರವದಿಂದ ಕಾಣುವ ಶ್ರದ್ಧೆ ಹೊಂದಿರ ಬೇಕು, ಅದರಲ್ಲೂ ತನ್ನ ಹೆತ್ತ ತಾಯಿ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಬೇಕು. ಜಗತ್ತಿನಲ್ಲಿ ಟೀಕೆಗಳು ಎಂದೂ ಉಳಿಯುವುದಿಲ್ಲ, ಸತ್ಯ ಮತ್ತು ಮಾನವೀಯತೆಗೆ ಬೆಲೆ ಕಟ್ಟಲು ಅಸಾಧ್ಯ ಜೀವನದಲ್ಲಿ ಹುಟ್ಟು ಸಾವಿನ ನಡುವೆ ಮಾಡಿದ ಪುಣ್ಯ ಕರ್ಮಗಳನ್ನು ಎಲ್ಲರು



ನೆನೆಯುವಂತೆ ಬದುಕು ನಡೆಸಬೇಕು ಎಂದರು.

ಮುಖ್ಯ ಅತಿಥಿ ಡಾ. ರಮ್ಯ ಕೆ.ಬಿ. ಉಪ್ಪಿನಂಗಡಿ ಮಾತನಾಡಿ, ಸಂಪ್ರದಾಯಗಳ ಆಚಾರ ವಿಚಾರ ತಿಳಿದು ಬಾಳಬೇಕು. ತುಳುನಾಡು ದೈವ, ದೇವರ ಪಾವಿತ್ರತೆವುಳ್ಳ ನಾಡು ಇಲ್ಲಿ ಜನ್ಮವೆತ್ತ ನಾವು ಧನ್ಯರು, ಗ್ರಾಮ ದೇವರ ದರ್ಶನ ಪಡೆಯುವ ಮೂಲಕ ಸಾನಿಧ್ಯ ವೃದ್ಧಿಗೆ ಸಾಧ್ಯ ಎಂದರು.

ಪ್ರಮುಖರಾದ ಬಬಿತಾ ಆತುಲ್ ಕುಮಾರ್ ಕೆ.ಎನ್. ಹಲೇಜಿ, ಬೆಳ್ತಂಗಡಿಯ ಬಿನುತಾ ಬಂಗೇರ, ಪೂರ್ಣಿಮಾ, ಸುಪ್ರಿತಾ ರೈ, ನಂದಿನಿ ತುಕರಾಮ, ಚಂಚಲಾಕ್ಷಿ ಖಂಡಿಗ, ಅರುಣಾ ನಿರಂಜನ್, ಗೀತಾ ಕುದ್ದಣ್ಣಾಯ, ಸವಿತಾ ದುರ್ಗೇಶ್ ಕೆದಿಲಾಯ, ಜಯಂತಿ ಪಾಲೇದು, ತೇಜಸ್ವಿನಿ ಜಯರಾಮ, ಮಿನಾಕ್ಷಿ ಡಿ. ಬಂಗೇರ, ಸಂಧ್ಯಾ ಪ್ರಶಾಂತ್ ಶಿವಗಿರಿ, ವಾಸಮ್ಮ, ಪ್ರಿಯಾ ಕುಶಾಲಪ್ಪ ಗೌಡ, ಗೀತಾ ಗೋಪಾಲಕೃಷ್ಣ ಪೈ, ಸಾವಿತ್ರಿ ಸಾಂತಪ್ಪ ಹಾಕೋಟೆ, ಲೀಲಾವತಿ ನೂಜಿರೆ ಇದ್ದರು. ಪ್ರಮೀಳಾ ಸುದರ್ಶನ್ ಕೊಲ್ಲಿ ಸ್ವಾಗತಿಸಿ, ಸುಜಾತ ದೇವರಕಾಡು ವಂದಿಸಿದರು. ರಕ್ಷಿತ್ ಭಂಡಾರಿ ಪೆರ್ನೆ ಹಾಗೂ ಯುವರಾಜ ಅನಾರ್ ನಿರ್ವಹಿಸಿದರು. ವಿಶೇಷವೆಂದರೆ ಇಂದಿನ ಧಾರ್ಮಿಕ ಸಭಾ ಕಾರ್ಯ ಕ್ರಮದ ವೇದಿಕೆಯಲ್ಲಿ ಮಹಿಳೆಯರೇ ಸಂಪೂರ್ಣ ತೊಡಗಿಸಿಕೊಂಡಿದ್ದರು. ಸ್ವಾಗತ, ಧನ್ಯವಾದ ಸಹಿತ ಧಾರ್ಮಿಕ ಉಪನ್ಯಾಸಕ್ಕೂ ಮಹಿಳೆಯರನ್ನೇ ಭಾಗವಹಿಸಿದ್ದರು.

ಗವಿನ್ ರೇಶಿಮೆಗೆ ಇನ್ನೋವೇಟರ್ ಪ್ರಶಸ್ತಿ

ಉಪ್ಪಿನಂಗಡಿ: ಥ್ಯೂಡಸ್ ಲೈಫ್ ಸಯನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಗುಜರಾತಿನ ಅಹಮದಾಬಾದಿನಲ್ಲಿ ನಡೆದ 'ನವಾಚರ-26 ಐರಿಸ್ ಜೂನಿಯರ್' ಸ್ಪರ್ಧೆಯಲ್ಲಿ ಉಪ್ಪಿನಂಗಡಿಯ ಇಂದ್ರಪ್ರಸ್ಥ ವಿದ್ಯಾಲಯದ 7ನೇ ತರಗತಿಯ ಗವಿನ್ ರೇಶಿಮೆ ತಯಾರಿಸಿದ



'ಹೈವ್ ಗಾಡ್ 360' ಸ್ಮಾರ್ಟ್ ಇಲೆಕ್ಟ್ರಿಕ್ ಸ್ಮೋಕರ್ ವಿತ್ ಹೈವ್ ಮಾನಿಟರಿಂಗ್ ಸಿಸ್ಟಮ್ ಎಂಬ ವಿಜ್ಞಾನ ಮಾದರಿಗೆ ಟಾಪ್ ತ್ರಿ ಇನ್ನೋವೇಟರ್ ಅವಾರ್ಡ್ ಲಭಿಸಿದೆ. ಗವಿನ್ ರೇಶಿಮೆ ಅವರು ಮನಮೋಹನ್ ಅರಂಭ್ಯ ಅವರ ನಿರ್ದೇಶನಡಿ ಜೇನು ಕೃಷಿಕರಿಗೆ ಉಪಯುಕ್ತವಾಗುವ, ಜೇನು ನೊಣಗಳ ಸುರಕ್ಷತೆಯನ್ನಾಧರಿಸಿದ ಜೇನು ಗೂಡಿನೊಳಗಿನ ವಿದ್ಯಾಮಾನಗಳನ್ನು ತಿಳಿಯುವ ಸಾಧನ ಸಂಶೋಧಿಸಿದ್ದಾರೆ. ವಿದ್ಯಾಲಯದ ವಿಜ್ಞಾನ ಶಿಕ್ಷಕಿ ನಿಶಿತಾ ಕೆ.ಕೆ. ಹಾಗೂ ರೇಣುಕಾ ಕೆ. ಮಾರ್ಗದರ್ಶನ ನೀಡಿದ್ದಾರೆ ಎಂದು ಮುಖ್ಯೋಪಾಧ್ಯಾಯಿನಿ ವೀಣಾ ಆರ್. ಪ್ರಸಾದ್ ತಿಳಿಸಿದ್ದಾರೆ.

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಶ್ವಭೂಮಿ ದಿನಾಚರಣೆ

ಪುತ್ತೂರು: ಹಗಲಿರುಳೆನ್ನದೆ ಭೂಮಿಯ ಮೇಲೆ ಮಾನವನ ದಬ್ಬಾಳಿಕೆ ಅವಿರತವಾಗಿ ನಡೆಯುತ್ತಲೇ ಇದೆ. ತನ್ನ ದುರಾಸೆ ತ್ಯಜಿಸಿ ತಾನು ಬದುಕುವ ನೆಲ ಜಲಕ್ಕೆ ಒಂದಿಷ್ಟು ಗೌರವವನ್ನು ನೀಡಿದರೆ ಮಾತ್ರ ಮುಂದಿನ ಜನಾಂಗಕ್ಕೂ ಇಲ್ಲಿ ಬದುಕಲು ಎಡೆಯಾಗಬಹುದು ಎಂದು ಬೆಂಗಳೂರಿನ ಎಬಿ ಡಾಷ್ ಸಂಸ್ಥೆಯ ತಂತ್ರಜ್ಞ ಸೂರಜ್ ರಾಜ್ ಎಸ್. ಹೇಳಿದರು.



ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಆಶ್ರಯದಲ್ಲಿ ನಡೆದ ವಿಶ್ವ ಭೂಮಿ ದಿನಾಚರಣೆಯಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತಾಡಿದರು.

ಜಾಗತಿಕ ತಾಪಮಾನ ಹೆಚ್ಚಳ

ಕೈಗಾರಿಕೀಕರಣ, ಅಡವಿಗಳ ನಾಶ, ಕಾಂಕ್ರೀಟು ಕಾಡುಗಳ ನಿರ್ಮಾಣದಿಂದ ಭೂಮಿಯು ಫಲವತ್ತತೆಯನ್ನು ಕಳೆದು ಕೊಳ್ಳುತ್ತಿದೆ. ಜಾಗತಿಕ ತಾಪಮಾನವು ಹೆಚ್ಚುತ್ತಿದೆ. ನೀರಿನ ಮೂಲಗಳು ಬತ್ತಿ ಹೋಗುತ್ತಿವೆ. ಹವಾಮಾನ ವೈಪರೀತ್ಯಗಳು ಉಂಟಾಗುತ್ತಿವೆ. ವಿಷಪೂರಿತ ತ್ಯಾಜ್ಯಗಳು ಪರಿಸರವನ್ನು ಸೇರುತ್ತಿದೆ. ಇದು ಹೀಗೆಯೇ ಮುಂದುವರಿದರೆ ಮುಂದೊಂದು ದಿನ ಈ ಭೂಮಿಯಲ್ಲಿ ವಾಸಿಸುವುದು ಅಸಾಧ್ಯ ಎನ್ನುವ ಪರಿಸ್ಥಿತಿ ಉಂಟಾಗಬಹುದು ಎಂದರು.

ನವೀಕರಿಸಬಹುದಾದ ಇಂದನಗಳ ಬಳಕೆಯ ಅಗತ್ಯತೆಯನ್ನು ವಿವರಿಸಿದ ಸೂರಜ್‌ರಾಜ್, ಯುವ ಜನತೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಅರಿತುಕೊಂಡು ನೆಲ ಜಲದ ಸಂರಕ್ಷಣೆಯಲ್ಲಿ ತೊಡಗಿಕೊಳ್ಳಬೇಕು ಎಂದರು.

ಸಿವಿಲ್ ಇಂಜಿನಿಯರಿಂಗ್ ವಿಭಾಗ ಮುಖ್ಯಸ್ಥ ಪ್ರೊ. ಪ್ರಶಾಂತ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಶ್ವ ಭೂಮಿ ದಿನದ ಅಂಗವಾಗಿ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮ ಸಂಯೋಜಕ ಡಾ. ರಾಜೇಶ್ ಆರ್. ಸ್ವಾಗತಿಸಿ, ಶ್ಯಾಮ್ ಕುಮಾರ್ ವಂದಿಸಿದರು. ಸ್ವಾತಿ ಕಾರ್ಯಕ್ರಮ ನಿರ್ವಹಿಸಿದರು.

ಇಳಂತಿಲ ಶ್ರೀ ಕೇಶವ ಶಿಶುಮಂದಿರದ ವಾರ್ಷಿಕೋತ್ಸವ: ವಿಶೇಷ ಕುಂಕುಮಾರ್ಚನೆ



ಉಪ್ಪಿನಂಗಡಿ: ಇಳಂತಿಲ ಶ್ರೀ ಕೇಶವ ಶಿಶುಮಂದಿರದಲ್ಲಿ 15ನೇ ವರ್ಷದ ವಾರ್ಷಿಕೋತ್ಸವ, ಶಿಶು ಮಂದಿರದ ಮಕ್ಕಳ ಸಾಮೂಹಿಕ ಹುಟ್ಟು ಹಬ್ಬ ಹಾಗೂ ಮಾತೃ ಸಂಹಿತ ವಿಶೇಷ ಕುಂಕುಮಾರ್ಚನೆ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ವಿವೇಕಾನಂದ ವಿದ್ಯಾ ವರ್ಧಕ ಸಂಘದ ಸಹ ಕಾರ್ಯ ನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಾತನಾಡಿ, ನಮ್ಮ ಶಿಕ್ಷಣ ಸಂಸ್ಥೆಗಳಿಂದ ಧಾರ್ಮಿಕನಂಬಿಕೆ, ಆಚರಣೆಸಂಸ್ಕೃತಿಯನ್ನು ಜೀವಂತ ಇರಿಸುವ ಮಹತ್ವವಾದ ಕಾರ್ಯ ನಡೆಯುತ್ತಿದೆ ಎಂದರು.

ಅತಿಥಿಗಳಾಗಿದ್ದ ಜ್ಞಾನ ರತ್ನ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಮುಲ್ಕಿ ಕಟೀಲ್ ಇದರ ಅಧ್ಯಕ್ಷ ಭಾಸ್ಕರ್ ದೇವಸ್ಯ ಮಾತನಾಡಿ, ಇಂತಹ ಸಂಸ್ಕಾರಯುತ ಶಿಕ್ಷಣದಿಂದಾಗಿ ನಮ್ಮ ಮನೆಗಳು ನಮ್ಮ ಸಂಸ್ಕೃತಿ ಉಳಿಯಲಿದೆ ಎಂದರು.

ಗಣಪತಿ ಭಟ್ ಮುಡಾಜೆ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಇಂಜಿನಿಯರ್ ಬಾಲಕೃಷ್ಣ ಭಟ್ ಹಾಗೂ ಪದ್ಮನಾಭ ಶಿಲ್ಪಿ ಚಾಮುಂಡೇಶ್ವರಿ ಪಿಲಿಗೂಡು ಉಪಸ್ಥಿತರಿದ್ದರು. ಶಾಸಕ ಹರೀಶ್ ಪೂಂಜ ಶುಭ ಹಾರೈಸಿದರು. ಜನಾರ್ದನ ಗೌಡ ಅಣ್ಣಾಜೆ, ಲಕ್ಷ್ಮೀಶ ಪಾಡೆಂಕಿ, ತಿಮ್ಮಪ್ಪ ಗೌಡ ಇಳಂತಿಲ, ಗಿನಿತ್ ಅರ್ಬಿ ಮಾತೃ ಮಂಡಳಿ ಅಧ್ಯಕ್ಷೆ ಭವ್ಯ ಉಮೇಶ್ ಉಪಸ್ಥಿತರಿದ್ದರು. ಶಿಶು ಮಂದಿರದ ಕಾರ್ಯದರ್ಶಿ ರವಿ ಇಳಂತಿಲ ಸ್ವಾಗತಿಸಿ, ಸುಂದರ ಶೆಟ್ಟಿ ಎಂಜಿರಪಳಿಕೆ ವಂದಿಸಿದರು ಗಿರೀಶ್ ಅರ್ಬಿ ನಿರ್ವಹಿಸಿದರು. ಬಾಲಗೋಕುಲ ಹಾಗೂ ಮಾತೃ ಮಂಡಳಿ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.

ತಲಪಾಡಿ ಶಾರದಾ ಕಾಲೇಜಿನಲ್ಲಿ 7 ದಿನಗಳ ಎನ್ನೆಸ್ಸೆಸ್ ಶಿಬಿರ ಉದ್ಘಾಟನೆ



ಮಂಗಳೂರು: ತಲಪಾಡಿ ಶಾರದಾ ಕಾಲೇಜಿನ ಎನ್‌ಎಸ್‌ಎಸ್ ಘಟಕ ದಿಂದ ಆಯೋಜಿಸಲಾಗಿದ್ದ 7 ದಿನಗಳ ವಿಶೇಷ ಶಿಬಿರದ ಉದ್ಘಾಟನೆಯು ಶುಕ್ರವಾರ ನಡೆಯಿತು.

ಉಳ್ಳಾಲ ಬಗರ್ ಹುಕುಂ ಸಮಿತಿ, ಅಧ್ಯಕ್ಷ ಚಂದ್ರಹಾಸ ಕರ್ಕೇರ ಶಿಬಿರ ಉದ್ಘಾಟಿಸಿ, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣದ ಕುರಿತು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು.

ಶಾರದಸಮೂಹಸಂಸ್ಥೆಯ ನಿರ್ದೇಶಕ ಸಮೀರ್ ಪುರಾಣಿಕ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ವ್ಯಕ್ತಿತ್ವ ವಿಕಸನದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ತಾಳಿತ ಬೆಟ್ಟು ಪ್ರಾಥಮಿಕ ಶಾಲೆಯ, ಮುಖ್ಯೋಪಾಧ್ಯಾಯಿನಿ ಸೋನಿತಾ ಕೆ. ಶಿಬಿರವು ಯುವ ವ್ಯಕ್ತಿಗಳಲ್ಲಿ ಸಮುದಾಯದ ತೊಡಗಿಸಿಕೊಳ್ಳುವಿಕೆ ತಂಡದ ಕೆಲಸ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ವೇದಿಕೆಯಾಗಿದೆ ಎಂದರು.

ತಲಪಾಡಿ ಶಾರದಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಮೀನಾ ಜಿ. ಪಣಿಕ್ಕರ್, ಶಿಬಿರದಿಂದ ವ್ಯಕ್ತಿತ್ವದಲ್ಲಿ ಯಶಸ್ಸು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಅತಿಥಿಗಳಾದ ಇರಾ ಗ್ರಾ.ಪಂ.ನ ಮಾಜಿ ಅಧ್ಯಕ್ಷ ಉಮ್ಮರ್ ಎಂ.ಬಿ., ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ಇಸ್ಮಾಯಿಲ್, ಶಾಲೆ ಹಿರಿಯ ಶಿಕ್ಷಕ ಮಹಮ್ಮದ್ ಐ ಹಾಗೂ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಚೆನ್ನಯ್ಯ ಹಾಗೂ ರೇಷ್ಮಾ ಪಿ. ವಿ. ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಧ್ಯಾನ್ ನಿರೂಪಿಸಿ, ಮನ್ವಿತ ಹಾಗೂ ದೀಕ್ಷಾ ವಂದಿಸಿರು.

ಶಾಸಕ ಕಾಮತ್ ನೇತೃತ್ವದಲ್ಲಿ ಮುಂಗಾರು ಪೂರ್ವ ಸಿದ್ಧತಾ ಕ್ರಮಗಳ ಕುರಿತು ಸಭೆ



ಮಂಗಳೂರು: ಮುಂಬರಲಿರುವ ಮಳೆಗಾಲದಲ್ಲಿ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಅವಘಡಕ್ಕೆ ಆಸ್ಪದವಿಲ್ಲದಂತೆ ಸಕಲ ಸಿದ್ಧತೆ ಹಾಗೂ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಪಾಲಿಕೆಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಕಳೆದ ಮಳೆಗಾಲದಲ್ಲಿ ಮ.ನ.ಪಾ ವ್ಯಾಪ್ತಿಯ ಹಲವೆಡೆ ಅಪಾರ ಪ್ರಮಾಣದ ಹಾನಿಯುಂಟಾಗಿದ್ದನ್ನು ಗಮನದಲ್ಲಿಟ್ಟುಕೊಂಡು ನೆರೆ ಪರಿಸ್ಥಿತಿಗೆ ಕಾರಣ, ಪ್ರವಾಹ ಮರುಕಳಿಸದಂತೆ ತುರ್ತಾಗಿ ನಡೆಯಬೇಕಿರುವ ಕಾರ್ಯ ಇತ್ಯಾದಿ ವಿಷಯಗಳ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ರಾಜಕಾಲುವೆಗಳಲ್ಲಿ ಸರಾಗವಾಗಿ ನೀರು ಹರಿದು ಹೋಗುವಂತೆ ಕ್ರಮ ವಹಿಸುವುದು, ಅಗತ್ಯವಿರುವೆಡೆ ಹೂಳೆತ್ತುವುದು, ವಿಶೇಷವಾಗಿ ಪಂಪ್ ವೆಲ್ ಹಾಗೂ ಪಡೀಲ್ ರೈಲ್ವೆ ಅಂಡರ್ ಪಾಸ್ ಬಳಿ ನೀರು ಶೇಖರಣೆಗೊಳ್ಳದಂತೆ ಮತ್ತು ಸಂಭಾವ್ಯ ಗುಡ್ಡಕುಸಿತದ ಭಾಗಗಳನ್ನು ಗುರುತಿಸಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶಾಸಕರು ಸೂಚನೆ ನೀಡಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಉಪ ಆಯುಕ್ತ ನರೇಶ್ ಶೆಣೈ, ತಹಶೀಲ್ದಾರ್ ರಮೇಶ್ ಬಾಬು ಸೇರಿದಂತೆ ಪಾಲಿಕೆಯ ಹಿರಿಯ ಅಧಿಕಾರಿಗಳು, ಮೆಸ್ಕಾಂ, ಅರಣ್ಯ, ಕಂದಾಯ, ಅಗ್ನಿಶಾಮಕ ಮೊದಲಾದ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆವಿಜಿ: ಆಡಿಟೋರಿಯಂ ಉದ್ಘಾಟನೆ



ಸುಳ್ಯ: ಸುಳ್ಯದಲ್ಲಿ ಕೆ.ವಿ.ಜಿ.ಯವರು ತಾವು ಬೆಳಗುವುದರ ಜೊತೆಗೆ ಇತರರನ್ನು ಬೆಳಗಿಸಿದರು. ಅವರು ಮಾಡಿದ ಸಾಧನೆಗಳಿಂದ ಅವರ ಉಸಿರು ನಿಂತರೂ ಅವರ ಹೆಸರು ಶಾಶ್ವತವಾಗಿ ಉಳಿದಿದೆ. ಡಾ.ಕೆ.ವಿ. ಚಿದಾನಂದರ ನಡೆ, ನುಡಿ, ರೀತಿ, ನೀತಿ ಅವರು ನೀಡುತ್ತಿರುವ ಸೇವೆ ಮೆಡಿಕಲ್ ವಿದ್ಯಾರ್ಥಿಗಳಿಗೆ ಮೋಡೆಲ್ ಎಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನದ ಮಂಗಳೂರು ಶಾಖಾ ಮಠದ ಸ್ವಾಮೀಜಿ ಡಾ. ಧರ್ಮಪಾಲನಾಥ ಸ್ವಾಮೀಜಿ

ಡಾ. ಕುರುಂಜಿ ವೆಂಕಟ್ರಮಣ ಗೌಡರ ಛಲ ಮತ್ತು ಪರಿಶ್ರಮದ ಫಲವಾಗಿ ಕೆವಿಜಿ ಮೆಡಿಕಲ್ ಕಾಲೇಜ್ ಸ್ಥಾಪನೆಯಾಗಿ ಇದೀಗ 25 ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ಕೆವಿಜಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸಭಾಂಗಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಒಎಲ್‌ಇ ಅಧ್ಯಕ್ಷ ಡಾ.ಕೆ.ವಿ. ಚಿದಾನಂದ ಅಧ್ಯಕ್ಷತೆ ವಹಿಸಿದ್ದರು. ಎಒಎಲ್‌ಇ ಉಪಾಧ್ಯಕ್ಷೆ ಶೋಭಾ ಚಿದಾನಂದ, ಪ್ರಧಾನ ಕಾರ್ಯದರ್ಶಿ ಆರ್ಕಿಟೆಕ್ಟ್ ಅಕ್ಷಯ್ ಕೆ.ಸಿ., ಕಾರ್ಯದರ್ಶಿ ಡಾ. ಐಶ್ವರ್ಯ ಕೆ.ಸಿ., ಕೋಶಾಧಿಕಾರಿ ಡಾ. ಗೌತಮ್ ಗೌಡ, ಕಾಲೇಜಿನ ಡೀನ್ ಡಾ. ನೀಲಾಂಬಿಕೈ ನಟರಾಜನ್ ಶುಭ ಹಾರೈಸಿದರು. ಎಒಎಲ್‌ಇ ನಿರ್ದೇಶಕ ಕೆ.ವಿ. ಹೇಮನಾಥ್ ಕುರುಂಜಿ ಇದ್ದರು. ಡಾ. ವೈಷ್ಣವಿ ಸ್ವಾಗತ ಗೀತೆ ಹಾಡಿದರು. ದೇವಿಕಾ ಸ್ವಾಗತ ನೃತ್ಯ ಮಾಡಿದರು. ಕೃಪನಿಧಿ ಮತ್ತು ರಕ್ಷಿತ್ ಶ್ಲೋಕ ಹೇಳಿದರು. ಪ್ರೊ. ಡಾ. ನಮ್ರತಾ ಕೆ.ಜಿ. ಮುಖ್ಯ ಅತಿಥಿಯನ್ನು ಪರಿಚಯಿಸಿದರು. ಡಾ. ಪ್ರೀತಿರಾಜ್ ಬಲ್ಲಾಳ್ ಪ್ರಸ್ತಾವಿಸಿದರು. ಡಾ. ಗೀತಾ ದೊಪ್ಪ ಸ್ವಾಗತಿಸಿ, ಡಾ. ನವ್ಯ ಬಿ.ಎನ್. ವಂದಿಸಿದರು. ಡಾ. ಅಂಜಲಿ ರಾವ್, ರಕ್ಷಿತಾ ರಮೇಶ್ ಮತ್ತು ತೀರ್ಥೇಶ್ ಪಾರೆಪ್ಪಾಡಿ ಕಾರ್ಯಕ್ರಮ ನಿರ್ವಹಿಸಿದರು.

ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ವಿರುದ್ಧ ಅಪಪ್ರಚಾರ: ರಮಾನಾಥ



ಬಂಟ್ವಾಳ: 2023ರ ಮಹಿಳಾ ಮೀಸಲಾತಿ ಬಿಲ್ ಜಾರಿಗೆ ತರದೇ ದೇಶದ ಮಹಿಳೆಯರಿಗೆ ಸುಳ್ಳು ಹೇಳಿ ದ್ರೋಹ ಮಾಡಿದೆ ಎಂದು ಆರೋಪಿಸಿ ಬಿಜೆಪಿ ವಿರುದ್ಧ ದ.ಕ. ಗ್ರಾಮೀಣ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಬಂಟ್ವಾಳಮತ್ತು ಪಾಣೆಮಂಗಳೂರು ಬ್ಲಾಕ್ ಮಹಿಳಾ ಕಾಂಗ್ರೆಸ್ ವತಿಯಿಂದ ಬಿ.ಸಿ.ರೋಡಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಾಜಿ ಸಚಿವ ಬಿ.ರಮಾನಾಥ ರೈ ಮಾತನಾಡಿ, ಬಿಜೆಪಿ ಮಹಿಳೆಯರ ಮೀಸಲಾತಿ ವಿಚಾರವನ್ನು ಜನರ ಮುಂದಿಟ್ಟು ಕಾಂಗ್ರೆಸ್ ಮೇಲೆ ಗೂಬೆ ಕೂರಿಸುತ್ತಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಪಕ್ಷದ ವಿಚಾರಗಳಿಲ್ಲದೆ ಕೊರತೆಗಳನ್ನು ಎದುರುಸುತ್ತಿದ್ದು ಇದನ್ನು ನಿವಾ ರಿಸಲು ಮಹಿಳಾ ಮೀಸಲಾತಿ ತಂತ್ರ ಮಾಡಿದೆ. ಕಾಂಗ್ರೆಸ್‌ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದೆ ಎಂದರು.

ಎಂಎಲ್ಸಿ ಐವನ್ ಡಿಸೋಜ, ಗೇರು ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಜಿಲ್ಲಾಧ್ಯಕ್ಷೆ ಉಷಾ ಅಂಚನ್, ಪಕ್ಷದ ಪ್ರಮುಖರಾದ ಆರ್. ಪದ್ಮರಾಜ್, ಲಾವಣ್ಯ ಬಲ್ಲಾಳ್, ಶಾಲೆಟ್ ಪಿಂಟೊ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂಗ್ರೆಸ್ ನಾಯಕ ಡಾ. ಸುರೇಶ್, ಅಮಿತಾ ಭಂಡಾರಿ, ಆಸ್ಮಾ ಹಸ್ನೈನಾರ್,ಎ.ಬಿ. ಅಬ್ದುಲ್ಲಾ ಕೊಳ್ನಾಡು,ಬೇಬಿ ಕುಂದರ್, ಚಂದ್ರಪ್ರಕಾಶ್ ಶೆಟ್ಟಿ ಧನಲಕ್ಷ್ಮೀ ಸಿ.ಬಂಗೇರ, ಜೆಸಿಂತಾ ಡಿಸೋಜ, ಶಬನಾ ಕಾವಳಕಟ್ಟೆ ಎಂ.ಎಸ್. ಮಹಮ್ಮದ್, ಸಾರಿಕಾ ಪೂಜಾರಿ, ಮಂಜುಳಾ ಕುಶಲ ಪೆರಾಜೆ,ಸುದೀಪ್ ಶೆಟ್ಟಿ ಬಾಲಕೃಷ್ಣ ಅಂಚನ್, ಝೀನತ್ ಬೆಳ್ತಂಗಡಿ, ಚಂದ್ರಶೇಖರ ಭಂಡಾರಿ, ಜಯಂತಿ ಪೂಜಾರಿ,ಸುದರ್ಶನ ಜೈನ್, ಪಿ.ಬಿ.ವರ್ಗೀಸ್, ಮೋಹನ ಶೆಟ್ಟಿ ಸುಭಾಶ್ಚಂದ್ರ ಶೆಟ್ಟಿ ಶೋಭಾ ಶೆಟ್ಟಿ ಸಿರಾಜ್ ಮದಕ, ಸಿದ್ದೀಕ್ ಸರವು, ಮಹಮ್ಮದ್ ನಂದಾವರ ಮತ್ತಿತರರಿದ್ದರು.

ನಗರದ ಅವ್ಯವಸ್ಥೆ ತೆರೆದಿಟ್ಟ ನಗರವಾಸಿಗಳು | ಫೋನ್ ಇನ್ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಮಾಹಿತಿ

ಮನಪಾ ವ್ಯಾಪ್ತಿಯಲ್ಲಿ 66,000 ಎಲ್‌ಇಡಿ ಬೀದಿ ದೀಪ ಅಳವಡಿಸುವ ಗುರಿ

ಮಂಗಳೂರು: ನಗರದ ರಾಜಾಕಾಲುವೆ, ಒಳಚರಂಡಿ ವ್ಯವಸ್ಥೆ ಕಾಮಗಾರಿ ಶುರುವಾಗದೆ ಗಬ್ಬುನಾರುತ್ತಿವೆ. ಕುಡಿಯುವ ನೀರಿನ ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಬೀದಿ ದೀಪಗಳು ಇದ್ದರೂ ಉರಿಯುತ್ತಿಲ್ಲ....

ಇತ್ಯಾದಿ ದೂರುಗಳು ಶುಕ್ರವಾರ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅವರ ಅಧ್ಯಕ್ಷತೆಯಲ್ಲಿ ನಡೆದ ಫೋನ್ ಇನ್ ಕಾರ್ಯಕ್ರಮದಲ್ಲಿ ವ್ಯಕ್ತವಾಯಿತು. ಬಹುತೇಕವಾಗಿ ಒಳಚರಂಡಿ ಅವ್ಯವಸ್ಥೆಗಳ ಕುರಿತಂತೆಯೇ ದೂರುಗಳು ಸಾರ್ವಜನಿಕರಿಂದ ವ್ಯಕ್ತವಾಯಿತು. ಸಾರ್ವಜನಿಕರೊಬ್ಬರ ಫೋನ್ ಕರೆಗೆ ಉತ್ತರಿಸಿದ ಜಿಲ್ಲಾಧಿಕಾರಿಗಳು, ಸ್ಮಾರ್ಟ್ ಸಿಟಿಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜೂನ್ ಅಂತ್ಯದೊಳಗೆ ಎಲ್ಲಾ ವಾರ್ಡ್‌ಗಳಲ್ಲಿ



ಎಲ್‌ಇಡಿ ಬೀದಿ ದೀಪ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ. ಬಳಿಕ ಪಾಲಿಕೆ ಕಮಾಂಡ್ ಕಂಟ್ರೋಲ್ ವ್ಯವಸ್ಥೆಯ ಮೂಲಕ ಏಕಕಾಲದಲ್ಲಿ ಸ್ವಯಂಚಾಲಿತವಾಗಿ (ಆಟೋಮ್ಯಾಟಿಕ್) ಆಗಿ ಉರಿಸುವ ಮತ್ತು ನಂದಿಸುವ ಕಾರ್ಯ ನಡೆಯಲಿದೆ ಎಂದರು.

ನೀರಿನ ಬಿಲ್ ಇಲ್ಲ!

ಬಂಗ್ರಕೂಳೂರಿನ ಪ್ರವೀಣ್ ಕುಮಾರ್ ಎಂಬವರು ಕರೆ ಮಾಡಿ ನೀರಿನ ಬಿಲ್ ಬಾರದೆ ಒಂದು ವರ್ಷವಾಗಿದೆ ಎಂದಾಗ, ಬಿಲ್ ಕಟ್ಟಲು ಸಿದ್ಧವಿದ್ದರೂ ಯಾಕೆ ಬಿಲ್ ನೀಡುವುದಿಲ್ಲ ಎಂದು ಜಿಲ್ಲಾಧಿಕಾರಿ ಅಧಿಕಾರಿಗಳನ್ನು ಪ್ರಶ್ನಿಸಿದರು.

66 ಸಾವಿರ ಬೀದಿದೀಪ

ಪಾಲಿಕೆ ವ್ಯಾಪ್ತಿಯಲ್ಲಿ 66000 ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಬೇಕಾಗಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ ಆರಂಭದಲ್ಲಿ ಪಾಲಿಕೆಯ ಅರ್ಧದಷ್ಟು ವಾರ್ಡ್‌ಗಳನ್ನು ಕಂಟ್ರೋಲ್ ರೂಂನಡಿ ಸಮಗ್ರ ವ್ಯವಸ್ಥೆಗೊಳಪಡಿಸಿ ಬೀದಿ ದೀಪಗಳ ಉರಿಸುವ ಮತ್ತು ನಂದಿಸುವ ಪ್ರಕ್ರಿಯೆ ಸ್ವಯಂಚಾಲಿತವಾಗಿ ನಡೆಯಲಿದೆ. ಲೈನ್‌ಮೆನ್‌ಗಳ ಕೊರತೆಯಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆರಳಬೇಕಾದ ಕಾರಣ ಕೆಲವೆಡೆ ಬೆಳಗ್ಗಿನ ಹೊತ್ತು ಬೀದಿ ದೀಪ ಉರಿಯುವ ಸಮಸ್ಯೆ ಇದೆ. ಈ ಸ್ವಯಂಚಾಲಿತ ವ್ಯವಸ್ಥೆಯಿಂದ ಈ ಸಮಸ್ಯೆ ನಿವಾರಣೆ ಆಗಲಿದೆ ಎಂದು ಅವರು ತಿಳಿಸಿದರು. ಇಗ್ನೇಶಿಯಸ್ ಡಿಸೋಜಾ ಮಳೆ ನೀರು ಚರಂಡಿಯಲ್ಲಿ ಕೊಳಚೆ ನೀರು ಬಿಡಲಾಗುತ್ತಿದೆ ಎಂದು ಆಕ್ಷೇಪಿಸಿದರೆ, ಎಕ್ಕೂರಿನಿಂದ ಬಜಾಲ್ ರಸ್ತೆಯಲ್ಲಿ ಸಂಜೆ ಬೀದಿ ಬದಿ ವ್ಯಾಪಾರ ನಡೆಯುತ್ತಿದ್ದು ಇಲ್ಲಿ ದಾರಿ ಬ್ಲಾಕ್ ಮಾಡಿ ವಾಹನಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ರಾಮಚಂದ್ರ ಎಕ್ಕೂರು ಎಂಬವರು ದೂರಿದರು.

ಸುತ್ತಮುತ್ತ

ಕುದ್ರುಗೋಡು ಶಿಲಾಮಯ ದೇಗುಲ ಲೋಕಾರ್ಪಣೆ

ಬೈಂದೂರು: ನಾವುಂದ ಗ್ರಾಮದ ಕುದ್ರುಕೋಡು ಶ್ರೀ ಶಾನ್ತಾರ ಶ್ರೀ ಸೀತಾರಾಮಚಂದ್ರ ಮತ್ತು ಶ್ರೀ ಭದ್ರಕಾಳಿ ದೇವರ ಪುನರ್ ಪ್ರತಿಷ್ಠೆ ಹಾಗೂ ನೂತನ ಶಿಲಾಮಯ ದೇವಸ್ಥಾನ ಹಾಗೂ ಸುತ್ತುಪೌಳಿಯ ಲೋಕಾರ್ಪಣೆ ಸಮಾರಂಭವು ಏ.28ರಿಂದ 30ರ ತನಕ ನಡೆಯಲಿದೆ. ಏ.28ರಂದು ಬೆಳಗ್ಗೆ ಉಳ್ಳೂರು ವಾಸುದೇವ ಐತಾಳ್ ಮತ್ತು ಶರ್ಕಿ ಶಂಕರ ಭಟ್ ಇವರುಗಳ ಆಚಾರ್ಯತ್ವದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನ ನೆರವೇರಲಿದೆ. ಏ.29ರಂದು ಬೆಳಗ್ಗೆ 11ಕ್ಕೆ ಒದಗುವ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ದೇವರ ಸನ್ನಿಧಾನದಲ್ಲಿ ನೂತನವಾಗಿ ನಿರ್ಮಿಸಲಾದ ಶಿಲಾಮಯ ದೇವಾಲಯ ಹಾಗೂ ಸುತ್ತ ಪೌಳಿಯ ಲೋಕಾರ್ಪಣೆ, ಸಂಜೆ 108 ಪರಿಕರ ಕಲಶಸಹಿತ ಬ್ರಹ್ಮಕುಂಭ ಸ್ನಾನ, ಅಗ್ನಿಜನಸವುರಸ್ಕರ, ಅಧಿವಾಸಹೋಮಾದಿಗಳು ಜರುಗಲಿದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ನಂತರ ದೇವರದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಎನ್. ಐ. ಶೆಟ್ಟಿ ಕುದ್ರುಕೋಡು ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ಏ.30ರಂದು ಬೆಳಗ್ಗೆ ಬ್ರಹ್ಮಕುಂಭಾಭಿಷೇಕ, ಮಹಾಪೂಜೆ ನಡೆಯಲಿದೆ. ಸಂಜೆ ದೇವರದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಎನ್. ಐ. ಶೆಟ್ಟಿ ಕುದ್ರುಕೋಡು ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು ನಂದಗೋಕುಲ ಶಿಶುಮಂದಿರದ ವ್ಯವಸ್ಥಾಪಕ ಕಟ್ಟೆ ಪ್ರೇಮಾನಂದ ಶೆಟ್ಟಿ ಧಾರ್ಮಿಕ ಪ್ರವಚನ ನೀಡಲಿದ್ದಾರೆ. ರಾತ್ರಿ ಬೆನಕ ಆರ್ಟ್ಸ್ ಕುಡ್ಲ ಕಲಾವಿದರಿಂದ ಪೊರಿಪಿನ ಮಾತೆ ಜಲದುರ್ಗ ನಟಕ ಪ್ರದರ್ಶನಗೊಳ್ಳಲಿದೆ ಎಂದು ಜೀರ್ಣೋದ್ಧಾರ ಸಮಿತಿ ಸದಸ್ಯ ಎನ್. ಐ. ಶೆಟ್ಟಿ ಹಾಗೂ ಕಾರ್ಯಾಧ್ಯಕ್ಷ ಕೆ. ಆನಂದ ಶೆಟ್ಟಿ ತಿಳಿಸಿದ್ದಾರೆ.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತರಾಗಿ ಅಧಿಕಾರ ಸ್ವೀಕಾರ

ಉಡುಪಿ: ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಆಯುಕ್ತರಾಗಿ ಮಂಜುನಾಥ್ ಆರ್.



(ಕೆಎಎಸ್) ಅವರು ಬುಧವಾರ ಅಧಿಕಾರ ಸ್ವೀಕರಿಸಿದರು. ಅವರು ಈ ಹಿಂದೆ ಕಾರವಾರ, ಹಾವೇರಿ, ಯಾದಗಿರಿ, ಮಂಗಳೂರು, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು ಖಾಲಿಯಿದ್ದ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಹುದ್ದೆಗೆ ವರ್ಗಾವಣೆಗೊಂಡಿದ್ದಾರೆ.

ಮೊದಲನೇ ಪುಟದಿಂದ

ಬೀಗ!

ಈ ನಡುವೆ ಜಿಲ್ಲಾಧಿಕಾರಿ ಮುಂದಿನ ತಿಂಗಳಿನಿಂದ ರೇಷನಿಂಗ್ ಮೂಲಕ ಎರಡು ದಿನಕ್ಕೊಮ್ಮೆ ನೀರು ಪೂರೈಸುವ ಮುನ್ಸೂಚನೆ ನೀಡಿದ್ದಾರೆ. ಎಂಎಲ್ ನಿಯಮಗಳಿಗೆ ಅನುಸಾರವಾಗಿ ನೀರಿನ ಶೇಖರಣೆ ಬಳಕೆ ಮತ್ತು ನೀರನ್ನು ಹೊರಗೆ ಬಿಡುವ ಕಾರ್ಯವನ್ನು ಮಾಡಲಾಗುತ್ತಿದೆ. ಇದರ ಹೊರತಾಗಿ ತುಂಬೆ ವೆಂಟೆಡ್ ಡ್ಯಾಂನಲ್ಲಿ ನೀರಿನ ಕೊರತೆಯಾದಾಗ ಅಥವಾ ಇತರ ಯಾವುದೇ ಸಂದರ್ಭದಲ್ಲಿ ನೀರನ್ನು ಹೊರಗೆ ಬಿಡಬೇಕಾದಾದರೆ ಜಿಲ್ಲಾಧಿಕಾರಿ ಆದೇಶ ಬೇಕಾಗುತ್ತದೆ. ಆಕಸ್ಮಾತ್ ತುಂಬೆ ಡ್ಯಾಂನಲ್ಲಿ ನೀರಿನ ಕೊರತೆ ಕಂಡುಬಂದರೆ ಶಂಭೂರು ಎಎಂಆರ್, ಸರಪಾಡಿ ಹಾಗೂ ಬಿಳಿಯೂರು ಡ್ಯಾಂನಲ್ಲಿ ಸಂಗ್ರಹವಾಗುವ ಹೆಚ್ಚುವರಿ ನೀರನ್ನು ತುಂಬೆ ಡ್ಯಾಂನತ್ತ ಹರಿಸಿ ಮಂಗಳೂರಿನ ಜನತೆ ನೀರು ಪೂರೈಸುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಮುಂದಿನ ಆದೇಶಕ್ಕಾಗಿ ಕಾಯಬೇಕಾಗುತ್ತದೆ. ಬಿಸಿಲಿನ ಝಳಕ್ಕೆ ಸದ್ಯದ ಮಟ್ಟಿಗೆ ತುಂಬೆ ವೆಂಟೆಡ್ ಡ್ಯಾಂನಲ್ಲಿ ನೀರಿನ ಸಂಗ್ರಹದಲ್ಲಿ ಏರಿಳಿತವಾಗುತ್ತಲೇ ಇದೆ.

ಬಜೆ

ಸದ್ಯ ಇಲ್ಲಿ ನೀರಿನ ಮಟ್ಟ 3.3 ಮೀಟರ್‌ಗೆ ಇಳಿಕೆಗಿದೆ. ಸದ್ಯ ವಾರಾಹಿಯಿಂದ ನೀರು ಪೂರೈಕೆಯಾಗುತ್ತಿದೆಯಾದರೂ ಇದೇ ಮಾದರಿಯಲ್ಲಿ ಬೇಸಿಗೆ ಮಳೆ ಕೊರತೆಯಾದಲ್ಲಿ ಮುಂದಿನ ದಿನಗಳಲ್ಲಿ ಸಂಕಷ್ಟದ ಸ್ಥಿತಿ ನಿರ್ಮಾಣವಾಗುವ ಅಪಾಯವಿದೆ.

ಮುಕ್ತಿ

ಕಾಶಾವರ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಚಂದ್ರ ಪೂಜಾರಿ ಕಾಶಾವರ, ಕುಂದಾಪುರ ವಲಯಾರಣ್ಯಾಧಿಕಾರಿ ರಾಘವೇಂದ್ರ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಉಪ ಅರಣ್ಯಾಧಿಕಾರಿಗಳಾದ ವಿನಯ್, ಗುರು ನಾಯ್ಕ್, ಸಿಬ್ಬಂದಿಗಳಾದ ಮಾಲತಿ, ರಂಜಿತ್, ಸುನೀಲ್ ಮತ್ತು ಅಶೋಕ್ ಪಾಲ್ಗೊಂಡಿದ್ದರು.

ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಮಹೋತ್ಸವ | ಶಾಸಕ ಯಶ್‌ಪಾಲ್ ಸುವರ್ಣ ಮಾಹಿತಿ

ಮೀನುಗಾರಿಕೆ ಅಭಿವೃದ್ಧಿಗೆ ಅವಶ್ಯ ಬೇಡಿಕೆ ಸರ್ಕಾರಕ್ಕೆ ಸಲ್ಲಿಕೆ



ಉಡುಪಿ: ಪರ್ಸಿನ್ ಮೀನುಗಾರರ ಸಂಘ ಕರಾವಳಿ ಮೀನುಗಾರಿಕೆಗೆ ಅತಿದೊಡ್ಡ ಕೊಡುಗೆ ನೀಡಿದ್ದಾರೆ. ಅವರನ್ನು ಗುರುತಿಸುವ ಕಾರ್ಯವನ್ನು ನಾವು ಮಾಡುವುದು ನಮ್ಮ ಕರ್ತವ್ಯ. ಮೀನುಗಾರಿಕೆ ಅಭಿವೃದ್ಧಿಗೆ ಅವಶ್ಯಕವಾದ ಬೇಡಿಕೆಗಳನ್ನು ನಾವು ಈಗಾಗಲೇ ಸಲ್ಲಿಸಿದ್ದೇವೆ ಎಂದು ಶಾಸಕ ಯಶ್ ಪಾಲ್ ಸುವರ್ಣ ಹೇಳಿದರು.

ಮಲ್ಪೆ ಬೀಚ್‌ನಲ್ಲಿ ನಡೆಯುತ್ತಿರುವ ಪರ್ಸಿನ್ ಮೀನುಗಾರರ ಸಂಘದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಮೀನುಗಾರರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಮುಖಂಡ ಪ್ರಸಾದ್‌ರಾಜ್ ಕಾಂಚನ್ ಮಾತನಾಡಿ, ನಾವು ನಮ್ಮ ಸಮುದಾಯದ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕು. ಅವರನ್ನು ಸಾಮಾಜಿಕವಾಗಿ ಬೆಳೆಸಬೇಕು ಎಂಬ ನೆಲೆಯಲ್ಲಿ ಕಷ್ಟಪಟ್ಟು ಅವರನ್ನು ಬೆಳೆಸುವ ಕಾರ್ಯವನ್ನು ಪರ್ಸಿನ್ ಮೀನುಗಾರರು ಮಾಡುತ್ತಿದ್ದಾರೆ. ತಾಂಡೇಲರ ದೂರದೃಷ್ಟಿಯ ಪರಿಣಾಮ ನಮ್ಮ ಕರಾವಳಿಯ ಆರ್ಥಿಕತೆಗೆ ಉತ್ತಮ ಚೈತನ್ಯ ದೊರೆತಿದೆ ಎಂದರು.

ಈ ಸಂದರ್ಭದಲ್ಲಿ ಪರ್ಸಿನ್ ಮೀನುಗಾರರ ಸಂಘದ ಅಧ್ಯಕ್ಷ ನಾಗರಾಜ್ ಸುವರ್ಣ, ಕಡ್ತಲಾಡಿ ಜಯ ದುರ್ಗಾ ಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಆಚಾರ್ಯ, ಪರ್ಸಿನ್ ಮೀನುಗಾರರ ಸಂಘದ ಗೌರವ ಸಲಹೆಗಾರ ಗುರುದಾಸ ಬಂಗೇರ, ಗೌರವಾಧ್ಯಕ್ಷ ಯಶೋಧರ ಅಮೀನ್, ಪ್ರಮುಖರಾದ ಉದಯ್ ಕುಮಾರ್, ಯಾಕುಬ್ ಸಾಹೇಬ್, ದೇವದಾಸ್ ಪುತ್ರನ್, ಸುಧಾಕರ್ ತಿಂಗಳಾಯ, ರಾಮ ಸುವರ್ಣ, ರಮೇಶ್ ಮೆಂಡನ್, ರಾಮದಾಸ್ ಸುವರ್ಣ ಸೇರಿ ಹಲವರು ಉಪಸ್ಥಿತರಿದ್ದರು.

ಸುಮಿತ್ರಾ ಪ್ರಾರ್ಥಿಸಿದರು. ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಸಂಭ್ರಮದ ಪ್ರಧಾನ ಕಾರ್ಯದರ್ಶಿ ಕೃಷ್ಣ ಸುವರ್ಣ ಸ್ವಾಗತಿಸಿದರು. ಸತೀಶ್ ಚಂದ್ರಶೆಟ್ಟಿ ಚಿತ್ರಪ್ಪಾಡಿ ನಿರೂಪಿಸಿ ವಂದಿಸಿದರು.

36 ಮಂದಿ ಪರ್ಸಿನ್ ಮೀನುಗಾರರಿಗೆ ಸನ್ಮಾನ

ಪರ್ಸಿನ್ ಮೀನುಗಾರರಾದ ಶೇಖರ ಅಮೀನ್, ನಾರಾಯಣ ಸಾಲ್ಯಾನ್, ಗೋಪಾಲ ಬಂಗೇರ, ನಾಗೇಶ್ ಬಂಗೇರ, ನಾರಾಯಣ ಕೋಟ್ಯಾನ್, ಶಂಕರ ಸಾಲ್ಯಾನ್, ರತ್ನಾಕರ ಕೋಟ್ಯಾನ್, ಗೋಪಾಲ ತಿಂಗಳಾಯ, ಅಚ್ಚುತ್ ಸುವರ್ಣ, ಶೇಖರ ಸುವರ್ಣ, ಸುಂದರ ಸುವರ್ಣ, ಶಂಕರ ಕೋಟ್ಯಾನ್, ಕೃಷ್ಣಪ್ಪ ಕುಂದರ್, ಶೇಖರ ಮೈಂದನ್, ತಿಮ್ಮ ಬಂಗೇರ, ವೋಟ ಕೋಟ್ಯಾನ್, ಮಂಜಪ್ಪ ಸುವರ್ಣ, ಗುರುರಾಜ್, ರವೀಶ್ ಕಾಂಚನ್, ಕೃಷ್ಣಪ್ಪ ಅಮೀನ್, ಪಾಂಡುರಂಗ ಜಿ. ಕೋಟ್ಯಾನ್, ರೋಹಿತ್ ಶ್ರೀಯಾನ್, ಶೇಷಪ್ಪ ಸಾಲ್ಯಾನ್, ಧನಂಜಯ್ ಆರ್. ಕರ್ಕೇರ, ರಮೇಶ್ ಮೈಂದನ್, ಪುರಂದರ ಅಮೀನ್, ವಿಠಲ ತಿಂಗಳಾಯ, ಸಂಜೀವ ಕುಂದರ್, ವಾಸುದೇವ ಕುಂದರ್, ಪ್ರಕಾಶ್, ವಾಸು ಬಂಗೇರ, ಶೇಖರ ಟಿ. ಸುವರ್ಣ, ಶಿವರಾಮ ಪುತ್ರನ್, ರಮೇಶ್ ಸಾಲ್ಯಾನ್, ಚಂದ್ರಕಾಂತ್ ಕುಂದರ್, ಶೇಖರ ಕಾಂಚನ್ ಅವರನ್ನು ಸನ್ಮಾನಿಸಲಾಯಿತು.

ಉಡುಪಿ ಜಿಲ್ಲೆಯ ದಾನಿ ಆನಂದ್ ಸಿ ಕುಂದರ್ 78ನೇ ಹುಟ್ಟುಹಬ್ಬದ ಸಂಭ್ರಮ

ಬೃಹತ್ ರಕ್ತದಾನ, ನೇತ್ರ, ಅಂಗಾಂಗ ದಾನ ಶಿಬಿರ





ಕೋಟ: ಗೀತಾನಂದ ಟ್ರಸ್ಟ್ ಪ್ರವರ್ತಕ ಆನಂದ್ ಸಿ ಕುಂದರ್ ರವರ 78 ನೇ ಹುಟ್ಟು ಹಬ್ಬದ ಅಂಗವಾಗಿ ಜನತಾ ಆವರಣದಲ್ಲಿ ಶನಿವಾರ ಗೀತಾನಂದ ಫೌಂಡೇಶನ್ ಹಾಗೂ ಜನತಾ ಸಮೂಹ ಸಂಸ್ಥೆಗಳ ನೇತೃತ್ವದಲ್ಲಿ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಈ ಹಿನ್ನಲ್ಲೆಯಲ್ಲಿ ಬೃಹತ್ ರಕ್ತದಾನ,ನೇತ್ರದಾನ,ಅಂಗಾಂಗದಾನ,ಆರೋಗ್ಯ ಶಿಬಿರಗಳನ್ನು ಆಯೋಜಿಸಿತು.

ಆಶ್ರಮಕ್ಕೆ ನೆರವು

ಆನಂದ್ ಸಿ. ಕುಂದರ್ ಹುಟ್ಟು ಹಬ್ಬದ ಅಂಗವಾಗಿ ಪ್ರತಿವರ್ಷ ಜಿಲ್ಲೆಯ ಹತ್ತಾರು ಆಶ್ರಮಗಳಿಗೆ ಸುಮಾರು 20 ಲಕ್ಷ ರೂ ಅಧಿಕ ನೆರವು ನೀಡಲಾಗುತ್ತಿದ್ದು ಅದರಂತೆ ತಮ್ಮ 78ನೇ ಹುಟ್ಟುಹಬ್ಬಕ್ಕೆ ಸಮಾರು 15ಕ್ಕೂ ಅಧಿಕ ಆಶ್ರಮಗಳಿಗೆ ಆರ್ಥಿಕ ಸಹಾಯದ ಚೆಕ್‌ನ್ನು ಹಸ್ತಾಂತರಿಸಿದರು. ಇಲ್ಲಿನ ಕೋಟತಟ್ಟು ಗ್ರಾ.ಪಂ. ಹಾಗೂ ಸನಿಹದ ಸಾಲಿಗ್ರಾಮ ಪಟ್ಟಣ ಪಂಚಾಯತ್‌ಗೆ ಶವ ಶೀತಲಿಕೃತ ಯಂತ್ರ (ಡೆಡ್ ಬಾಡಿ ಫ್ರೀಜರ್) ಅನ್ನು ಕೋಟತಟ್ಟು ಗ್ರಾ.ಪಂ. ಪಿಡಿಒ ರವೀಂದ್ರ ರಾವ್ ಹಾಗೂ ಮಾಜಿ ಅಧ್ಯಕ್ಷ ಸತೀಶ್ ಕುಂದರ್ ಅವರಿಗೆ ಹಸ್ತಾಂತರಿಸಿದರು. ಆಂಜನೇಯ ಸೇವಾ ಟ್ರಸ್ಟ್ ಪರವಾಗಿ ಶ್ರೀನಿವಾಸ ಅಮೀನ್, ಶೇಖರ್ ಮರಕಾಲ, ನರಹರಿ ಪೈ ಮತ್ತವರ ತಂಡ ನೆರವು ಪಡೆದುಕೊಂಡರು.

ರೆಡ್ ಕ್ರಾಸ್ ಸಂಸ್ಥೆಗೆ ನೆರವು

ಕುಂದಾಪುರದ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಕ್ಯಾನ್ಸರ್ ಪೀಡಿತರ ಆರೈಕೆ ಕೇಂದ್ರದ ಕಟ್ಟಡ ಕಾಮಗಾರಿಗೆ ಆನಂದ್ ಸಿ. ಕುಂದರ್ 5 ಲಕ್ಷ ರೂ. ನೆರವು ನೀಡಿದರು. ಇದರ ಚೆಕ್‌ನ್ನು ರೆಡ್ ಕ್ರಾಸ್ ಸಂಸ್ಥೆಯ ಜಯಕರ ಶೆಟ್ಟಿ ನೇತೃತ್ವದ ತಂಡಕ್ಕೆ ಹಸ್ತಾಂತರಿಸಿದರು. ಬೃಹತ್ ರಕ್ತದಾನದಲ್ಲಿ ಸಂಸ್ಥೆಯ ಕಾರ್ಮಿಕರು ಭಾಗಿ,ಗಣ್ಯರಿಂದ ಶುಭಾಶಯಗಳ ಮಹಾಪೂರ ಕುಂದರ್ ಅವರ 78ನೇ ಹುಟ್ಟುಹಬ್ಬದ ಅಂಗವಾಗಿ ಜನತಾ ಆವರಣದಲ್ಲಿ ತಮ್ಮ ಸಂಸ್ಥೆಯ ಕಾರ್ಮಿಕರು ಬೃಹತ್ ರಕ್ತದಾನದಲ್ಲಿ ಭಾಗಿಯಾದರು. ಮಣಿಪಾಲ ಮಾಹೆ ಸಂಸ್ಥೆ ಸಿಬ್ಬಂದಿಯನ್ನು ಅಭಿನಂದಿಸಲಾಯಿತು. ಕಾರ್ತಿಕ್ ಆಚಾರ್, ಕುಂದರ್ ಅವರ ಭಾವಚಿತ್ರವನ್ನು ತಮ್ಮ ಕೈಚಳಕದ ಮೂಲಕ ಅನಾರವಣಗೊಳಿಸಿದರು.

ಗೀತಾನಂದ ಫೌಂಡೇಶನ್ ಟ್ರಸ್ಟಿ ಗೀತಾ ಎ. ಕುಂದರ್, ನಿರ್ದೇಶಕರಾದ ಪ್ರಶಾಂತ್ ಎ ಕುಂದರ್, ರಕ್ಷಿತ್ ಎ. ಕುಂದರ್,ವೈಷ್ಣವಿ ಆರ್ ಕುಂದರ್, ದಿವ್ಯಲಕ್ಷ್ಮೀ ಪಿ. ಕುಂದರ್, ಮಣಿಪಾಲ ಆಸ್ಪತ್ರೆಯ ನೇತ್ರ ಚಿಕಿತ್ಸಾ ತಜ್ಞ ಡಾ.ಆಯುಷ್ ಇದ್ದರು. ಸಂಸ್ಥೆಯ ಹಿರಿಯ ಪ್ರಬಂಧಕ ಶ್ರೀನಿವಾಸ ಕುಂದರ್ ಸ್ವಾಗತಿಸಿದರು. ಮಿಥುನ್ ಸಹಕರಿಸಿದರು. ರವಿಕಿರಣ್ ಕೋಟ ನಿರೂಪಿಸಿದರು.

ಕೆಮ್ಮಣ್ಣು ಸರಕಾರಿ ಕಾಲೇಜ್‌ನಲ್ಲಿ 'ಬೇಸಿಗೆಗೊಂದು ಚಾಮರ -2026' ಶಿಬಿರ

ವಿಷಮ ಪರಿಸ್ಥಿತಿಯಲ್ಲೂ ಧನಾತ್ಮಕ ಚಿಂತನೆ ಅಗತ್ಯ



ಕುಂದಾಪುರ: ಮಕ್ಕಳು ಜೀವನದಲ್ಲಿ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿಯೂ ಧನಾತ್ಮಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಇಂತಹ ಶಿಬಿರದಿಂದ ವಂಚಿತ ಸರ್ಕಾರಿ ಶಾಲೆಯ ಮಕ್ಕಳು ಭಾಗವಹಿಸುವುದರಿಂದ ಹೊಸ ಅನುಭವ ದೊರಕುತ್ತದೆ. ಇಲ್ಲಿ ಕಲಿತಂತಹ ವಿಷಯವನ್ನು ಮುಂದುವರಿಸಿಕೊಂಡು ಹೋಗಬೇಕು. ಮುಂದಿನ ದಿನಗಳಲ್ಲಿ ಜೀವನದಲ್ಲಿ ಉತ್ತಮ ಸಾಧನೆ ಮಾಡಿ ಸಂಪನ್ಮೂಲ ವ್ಯಕ್ತಿಯಾಗಿ ಇಂತಹ ಶಿಬಿರದಲ್ಲಿ ಪಾಲ್ಗೊಳ್ಳಬೇಕು ಎಂದು ಸಾಂದೀಪನಿ ಸಾಧನಾಶ್ರಮ ಶ್ರೀ ಕ್ಷೇತ್ರ ಕೇಮಾರಿನ ಶ್ರೀ ಈಶ ವಿಠಲದಾಸ ಸ್ವಾಮೀಜಿ ನುಡಿದರು.

ಯತೀಶ್ ವೈ. ಶೆಟ್ಟಿ ಅವರ ಸ್ಮರಣಾರ್ಥವಾಗಿ ಚಾಮರ ಫೌಂಡೇಶನ್ ವತಿಯಿಂದ ಉಡುಪಿಯ ರೋಬೋಸಾಫ್ಟ್ ಟೆಕ್ನಾಲಜೀಸ್ ಸಹಕಾರದೊಂದಿಗೆ ಉಡುಪಿಯ ಕೆಮ್ಮಣ್ಣು ಸರಕಾರಿ ಕಾಲೇಜ್‌ನಲ್ಲಿ ನಡೆದ ಉಚಿತ ಬೇಸಿಗೆ ಶಿಬಿರ 'ಬೇಸಿಗೆಗೊಂದು ಚಾಮರ -2026'ರ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಓಂ ಶಕ್ತಿ ತೋಕೂರು ಮಂಗಳೂರು ಇದರ ಉಪಾಶ್ರೀ ವಿಶ್ವನಾಥ್ ಭಟ್, ರೋಬೋಸಾಫ್ಟ್ ಕಾನೂನು ವಿಭಾಗದ ಸಹಾಯಕ ವ್ಯವಸ್ಥಾಪಕಿ ಶೀಲಾ ಅರುಣ್ ಶೆಟ್ಟಿ, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಹರಿಣಾಕ್ಷಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಸತೀಶ್ ಶೆಟ್ಟಿ ಮಮತಾ ವೈ. ಶೆಟ್ಟಿ ಯಶೋಧರ್ ಶೆಟ್ಟಿ ಚಾಮರ ಫೌಂಡೇಶನ್ ಖಜಾಂಚಿ ರಾಜೀವ್ ಕಾಂಚನ್ ಉಪಸ್ಥಿತರಿದ್ದರು.

ಅವನೀಶ್ ಸ್ವಾಗತಿಸಿದರು. ಫೌಂಡೇಷನ್ ಮ್ಯಾನೇಜಿಂಗ್ ಟ್ರಸ್ಟಿ ರಚನಾ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಚಾರುಶಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಟ್ರಸ್ಟಿ ಮನೀಶ್ ಸಾಲಿಯಾನ್ ವಂದಿಸಿದರು. ಟ್ರಸ್ಟಿಗಳಾದ ರಮೇಶ ಭಟ್, ಪ್ರಶಾಂತ್, ಶಿರೀಶ್, ದಿವ್ಯ ಸಹಕರಿಸಿದರು.

ಚಟುವಟಿಕೆ ಮೂಲಕ ಸಮಗ್ರ ಮಾಹಿತಿ

ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಕರಣ್ ಆಚಾರ್ಯ, ಸ್ವಸ್ತಿಕ್ ಆಚಾರ್ಯ, ಜನಾರ್ಧನ್ ರಾವ್ ಹಾವಂಜೆ, ತ್ರಿಷಾ ಶೆಟ್ಟಿ ಮಹೇಶ್ ಮಾರ್ನೆ, ವಿಸ್ಮಯ್ ವಿನಾಯಕ್, ಕಾರ್ತಿಕ್ ಕುಂಜೂರ್, ರಕ್ಷಾ ಪೂಜಾರಿ, ಶರ್ಮಿಳಾ, ರಾಕೇಶ್ ಹೊಸಬೆಟ್ಟು, ರಾಜೇಶ್, ನಾಗೇಶ್ ದೊಂಡ್ಯಾ ಮುಂತಾದ ಸಂಪನ್ಮೂಲ ವ್ಯಕ್ತಿಗಳು ಯೋಗ, ಕಲೆ, ಕ್ರಾಫ್ಟ್ ಮುಖವರ್ಣಿಕೆ, ಮೊಸಾಯ್ಕ್ ಕಲೆ, ನೃತ್ಯ, ಗಾಯನ, ನಟನೆ, ವ್ಯಕ್ತಿತ್ವ ವಿಕಸನ, ಭಾಷಣ, ನಾಯಕತ್ವ ಮುಂತಾದ ವಿಷಯದ ಕುರಿತು ಚಟುವಟಿಕೆಯ ಮೂಲಕ ಮಕ್ಕಳಿಗೆ ಸಮಗ್ರ ಮಾಹಿತಿ ನೀಡಿದರು.


132 ವಿದ್ಯಾರ್ಥಿಗಳು ಭಾಗಿ

ಶಿಬಿರಕ್ಕೆ ಸ್ಥಳೀಯ ಒಟ್ಟು 132 ಮಕ್ಕಳು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಸರ್ಟಿಫಿಕೇಟ್, ಬ್ಯಾಗ್, ನೋಟ್ ಪುಸ್ತಕ ಒಳಗೊಂಡ ಉಚಿತ ಕಿಟ್‌ನ್ನು ವಿತರಿಸಲಾಯಿತು.

ಜೆಇಇ ಮೈನ್ಸ್: ಸುಣ್ಣಾರಿಯ ಎಕಲೆಂಟ್ ಕಾಲೇಜು ಕುಂದಾಪುರ ತಾಲೂಕಿಗೆ ಪ್ರಥಮ



ಕುಂದಾಪುರ: ಜೆಇಇ ಮೈನ್ಸ್ ಪರೀಕ್ಷೆಯಲ್ಲಿ ಸುಣ್ಣಾರಿಯ ಎಕ್ಸಲೆಂಟ್ ಕಾಲೇಜು ಮತ್ತೊಮ್ಮೆ ಉತ್ತಮ ಫಲಿತಾಂಶವನ್ನು ದಾಖಲಿಸಿದ್ದು ಜೆಇಇ ಮೈನ್ಸ್‌ನ ಫಲಿತಾಂಶದಲ್ಲಿ ಇಡೀ ಕುಂದಾಪುರ ತಾಲೂಕಿಗೆ ಪ್ರಥಮ ಸ್ಥಾನವನ್ನು ಪಡೆದು ಅದ್ಭುತ ಸಾಧನೆ ಮಾಡಿದೆ. 90.539 ರಿಂದ 98.235 ಪರ್ಸಂಟೈಲ್‌ವರೆಗೆ ಒಟ್ಟು 20 ಕ್ಕೂ ಅಧಿಕ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.



ಸಂಸ್ಥೆಯ ವಿದ್ಯಾರ್ಥಿಗಳಾದ ಸತ್ಯಪ್ರಸಾದ ಪ್ರಭು 98.235 ಪರ್ಸಂಟೈಲ್, ಮಾನಿಂಗ್ ಶ್ರೀಕಾಂತ್ ಎಂ. 97.441, ಜೆ. ಎನ್. ಜ್ಞಾನಪುತ್ರನ್ 97.177, ಬಾಲ ಗೌಡ 97.075, ತನ್ವಿಶ್ರೀ 94.272, ಕೆ. ಶ್ರೀಶ ಶೆಟ್ಟಿ 93.599, ಕೆ. ಆರ್. ಹೇಮಂತ್ 96.269, ಪ್ರಣವ 94.619, ವಡ್ಡೆ ಮನೋಹರ್ 94.272, ಚರಣ್ ಭಾರದ್ವಜ್ 93.843, ಪರಿಣಿತ್ ಶೆಟ್ಟಿ 93.502, ಶಾಧನ ದೇವಾಡಿಗ 93.502, ವಿಕಾಸ್ ಪೂಜಾರಿ 93.795, ಚಿರಾಗ್ ರಮೇಶ್ 93.637, ರಾಕೇಶ್ ವಿ. 92.890, ಶ್ರೀಶ ವಿ. 92.424, ನಿಶಾಂತ್ 92.351, ದಿಲೀಪ್ ಡಿ. ಶೆಟ್ಟಿ 92.122, ಭಗತ್ ನಾಯಕ್ 91.339, ಅನುಪ್ ನಾಯ್ಕ್ 90.539 ಪರ್ಸಂಟೈಲನ್ನು ಪಡೆದಿದ್ದಾರೆ.

ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ 'ಸಾವಿಷ್ಕರ್'ಗೆ ಚಾಲನೆ



ಕುಂದಾಪುರ: ತಂತ್ರಜ್ಞಾನದ ಇಂದಿನ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಆತ್ಯಗತ್ಯ. ಹೊಸತನದ ಅನ್ವೇಷಣೆಗೆ ಹಳೆದಾದ ಸಂಗತಿಗಳನ್ನು ಜೋಡಿಸಲು ಪ್ರಯತ್ನಿಸಿ. ಕಲೆ, ತಂತ್ರಜ್ಞಾನ ಹಾಗೂ ಕ್ರೀಡಾ ಸಮ್ಮಿಲನವೇ ಜೀವನದ ನಿಜವಾದ ಸಂಭ್ರಮ. ಹಳ್ಳಿಯಲ್ಲಿ ಮೂಡಿಬಂದ ಈ ಸಂಸ್ಥೆ ಜಗತ್ತಿಗೆ ಮಾದರಿಯಾಗುವುದರಲ್ಲಿ ಅನುಮಾನವಿಲ್ಲ ಎಂದು ಪ್ರಸಿದ್ಧ ಯಕ್ಷಗಾನ ಕಲಾವಿದ ಡಾ. ಶಿವಾನಂದ ಹೆಗ್ಡೆ ಕೆರೆಮನೆ ಹೇಳಿದರು.

ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎಂಐಟಿ) ರಾಷ್ಟ್ರಮಟ್ಟದ ಅಂತರ್ ಕಾಲೇಜು ತಾಂತ್ರಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಹಬ್ಬ 'ಸಾವಿಷ್ಕರ್-2026'ಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು. ಐ.ಎಂ.ಜೆ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ನಿರ್ದೇಶಕ ಡಾ. ಎಸ್. ಎನ್. ಭಟ್ ಅವರು ಮಾತನಾಡಿದರು. ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಐ.ಎಂ.ಜೆ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಶ್ರೀ ಸಿದ್ಧಾರ್ಥ ಜೆ. ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಹಲವಾರು ಕಾಲೇಜುಗಳ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಾವಿಷ್ಕಾರ್ ಪ್ರಮುಖ ಸಂಯೋಜಕ ಡಾ. ವರುಣ್ ಕುಮಾರ್ ಉಪಸ್ಥಿತರಿದ್ದರು. ಸ್ಟುಡೆಂಟ್ ವೆಲ್ಫೇರ್ ಡೀನ್ ಅಕ್ಷತ ನಾಯಕ್ ಸ್ವಾಗತಿಸಿ, ಸಾಂಸ್ಕೃತಿಕ ವಿಭಾಗದ ಸಂಯೋಜಕಿ ಪ್ರೊ.ಸೂಕ್ಷ್ಮ ಅಡಿಗ ವಂದಿಸಿದರು. ಐಕ್ಯೂಎಸಿ ಹೆಡ್ ಡಾ.ನಿಖಿಲ ಪೈ ಸಂಯೋಜಿಸಿದರು. ವಿದ್ಯಾರ್ಥಿನಿ ಎಲಿಫಾ ಬಿಷಪ್ ನಿರೂಪಿಸಿದರು.

ಚಿಟ್ಪಾಡಿ ಶ್ರೀ ಶ್ರೀನಿವಾಸ ದೇಗುಲ ಮನ್ಮಹಾರಥೋತ್ಸವ ಸಂಪನ್ನ



ಉಡುಪಿ: ಸ್ಥಳೀಯ ಚಿಟ್ಪಾಡಿ ಬೀಡು ಶ್ರೀ ದೇವಿ ಭೂದೇವಿ ಸಹಿತ ಶ್ರೀ ಶ್ರೀನಿವಾಸ ದೇವಸ್ಥಾನದ ಶ್ರೀಮನ್ಮಹಾರಥೋತ್ಸವವು ಏ.23ರಂದು ಸಂಪನ್ನಗೊಂಡಿತು.

ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಿತು.

ಪ್ರಧಾನ ಅರ್ಚಕ ಅರವಿಂದ ಭಟ್ ಶ್ರೀದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಿದ್ದರು. ಆಡಳಿತ ಮೊಕ್ತೇಸರ ಚಿಟ್ಪಾಡಿ ಡಾ. ಗೋಪಾಲಕೃಷ್ಣ ಬಲ್ಲಾಳ್, ಚಿಟ್ಪಾಡಿ ಬೀಡು ಪಾಲ್ಗೊಂಡಿದ್ದರು.



ಕೋಟ ಸಾಸ್ತಾನ ಚಡಗರ ಅಗ್ರಹಾರದ ಶ್ರೀ ವಿನಾಯಕ ದೇವಸ್ಥಾನದ ವರ್ಧಂತ್ಯೋತ್ಸವದ ಅಂಗವಾಗಿ 120 ಕಾಯಿ ಗಣಹೋಮ , ಉಪನಿಷತ್ ಹೋಮ ನೆರವೇರಿತು. ಈ ಬಾರಿಯ ಸೇವಾಕರ್ತ ವಿಶ್ವೇಶ್ವರ ಚಡಗರ ನೇತೃತ್ವದಲ್ಲಿ ಬಾರಕೂರು ವೇದಮೂರ್ತಿ ಋಷಿಕೇಶ ಬಾಯರಿ ಮುಂದಾಳತ್ವದಲ್ಲಿ ಪೂಜೆ ಸಂಪನ್ನವಾಯಿತು.


ಇಂದು ರಾಜಾಪುರ ಸಾರಸ್ವತ ಕ್ರೆಡಿಟ್ ಸೊಸೈಟಿಯ 'ಸಹಕಾರ ಸಿಂಧೂರ' ಸಂಕೀರ್ಣ ಲೋಕಾರ್ಪಣೆ

ಕಾರ್ಕಳ: ಮೂರು ದಶಕಗಳ ಹಿಂದೆ ಸಣ್ಣ ಬಾಡಿಗೆ ಕಟ್ಟಡದಲ್ಲಿ ಮೊಳಕೆಯೊಡೆದ ಕಾರ್ಕಳದ ರಾಜಾಪುರ ಸಾರಸ್ವತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಇಂದು ಸಹಕಾರಿ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದೆ.

ಕಾರ್ಕಳದ ಜೋಡುರಸ್ತೆಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಈ ಸಂಸ್ಥೆ ಪ್ರಸ್ತುತ ಎಂಟು ಶಾಖೆಗಳ ಮೂಲಕ ಜನಸೇವೆಯಲ್ಲಿ ನಿರಂತರವಾಗಿದೆ. ಈ ಪೈಕಿ ನಾಲ್ಕು ಶಾಖೆಗಳು ಸ್ವಂತ ಕಟ್ಟಡಗಳನ್ನು ಹೊಂದಿರುವುದು ಸಂಸ್ಥೆಯ ಭದ್ರತೆಗೆ ಸಾಕ್ಷಿಯಾಗಿದೆ.

ಪೇಜಾವರ ಶ್ರೀಗಳಿಂದ ಚಾಲನೆ

1996ರಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಹಸ್ತದಿಂದ ಚಾಲನೆ ಪಡೆದ ಈ ಸಹಕಾರಿಯು ಅಂದು ಕೇವಲ 3 ಲಕ್ಷ ಬಂಡವಾಳ ಮತ್ತು 400 ಸದಸ್ಯರನ್ನು ಹೊಂದಿತ್ತು. ಇಂದು ಇದು 8 ಹವಾನಿಯಂತ್ರಿತ ಶಾಖೆಗಳೊಂದಿಗೆ ವಿಸ್ತರಿಸಿದ್ದು 2026ರ ಮಾರ್ಚ್ ಅಂತ್ಯಕ್ಕೆ 1,150 ಕೋಟಿ ರೂ.ಗೂ ಅಧಿಕ ವ್ಯವಹಾರ ನಡೆಸಿ, 5.02 ಕೋಟಿ ರೂ.ಗಳ ದಾಖಲೆ ನಿವ್ವಳ ಲಾಭ ಗಳಿಸಿದೆ.



ಮೂಲಸೌಕರ್ಯ ಮತ್ತು ಪ್ರಗತಿ

ಸಂಸ್ಥೆಯು ಮೂಲಸೌಕರ್ಯಕ್ಕೆ ಸದಾ ಆದ್ಯತೆ ನೀಡುತ್ತಾ ಬಂದಿದ್ದು, 2016ರಲ್ಲಿ ನಿರ್ಮಿಸಿದ 600 ಆಸನಗಳ ಸುಸಜ್ಜಿತ ಸಭಾಭವನವು ಇದಕ್ಕೆ ಪೂರಕವಾಗಿದೆ. ಇದೀಗ ಪ್ರಗತಿಯ ಮತ್ತೊಂದು ಮೈಲಿಗಲ್ಲಾಗಿ, ಸಂಸ್ಥೆಯ 30ನೇ ವರ್ಷದ ಸಂಭ್ರಮದ ಅಂಗವಾಗಿ ನಿರ್ಮಿಸಲಾದ 'ಸಹಕಾರ ಸಿಂಧೂರ' ವಾಣಿಜ್ಯ ಸಂಕೀರ್ಣವು ಇಂದು (ಏ. 26) ಬೆಳಗ್ಗೆ 10:30ಕ್ಕೆ ಲೋಕಾರ್ಪಣೆಗೊಳ್ಳಲಿದೆ.

ಅಪಾರ ಕೊಡುಗೆ ನೀಡಿದೆ



ಸಮಾಜಮುಖಿ ಕಾರ್ಯಗಳು ಕೇವಲ ಲಾಭ ಗಳಿಕೆಯಷ್ಟೇ ಉದ್ದೇಶವಲ್ಲದೆ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಂಸ್ಥೆ ಅಪಾರ ಕೊಡುಗೆ ನೀಡಿದೆ. ಕೋವಿಡ್ ಸಂದರ್ಭದಲ್ಲಿ 12 ಲಕ್ಷ ರೂ.ಗಳನ್ನು ಆರೋಗ್ಯ ಪರಿಕರಗಳಿಗಾಗಿ ವಿನಿಯೋಗಿಸಿದೆ. ಕಾರ್ಕಳ ಸರಕಾರಿ ಆಸ್ಪತ್ರೆ ಆಮ್ಲಜನಕ ಘಟಕಕ್ಕೆ 7 ಲಕ್ಷ ರೂ. ದೇಣಿಗೆ ನೀಡಿದೆ. ತಾಲೂಕಿನ ಶಾಲಾ ಮಕ್ಕಳಿಗೆ 34 ಲಕ್ಷ ರೂ. ವೆಚ್ಚದಲ್ಲಿ ಸ್ಕೂಲ್ ಬ್ಯಾಗ್ ವಿತರಿಸಿದೆ. ಸಂಸ್ಥೆಯ ಈ ಎಲ್ಲಾ ಸಾಧನೆ ಗುರುತಿಸಿ ಸರ್ಕಾರವು 'ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

● ರವೀಂದ್ರ ಪ್ರಭು ಕಡಾರಿ,
ಅಧ್ಯಕ್ಷರು, ರಾಜಾಪುರ ಸಾರಸ್ವತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಕಾರ್ಕಳ

ಸಭಾ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗಿ

ಕಾರ್ಯಕ್ರಮವು ಬೆಳಗ್ಗೆ 10:30ಕ್ಕೆ ಸೊಸೈಟಿಯ ಆವರಣದಲ್ಲಿ ನಡೆಯಲಿದೆ. ಉದ್ಘಾಟನೆಯನ್ನು ಕೈವಲ್ಯ ಮಠದ ಶ್ರೀಮದ್ ಶಿವಾನಂದ ಸರಸ್ವತಿ ಸ್ವಾಮೀಜಿ, ಪೇಜಾವರ ಅದೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ನೆರವೇರಿಸಲಿದ್ದು, ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಹಾಗೂ ಗಣ್ಯರು ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ

ಬೆಳಗ್ಗೆ 9:30ರಿಂದ ಪುತ್ತೂರು ಜಗದೀಶ್ ಆಚಾರ್ಯ ಬಳಗದಿಂದ ಸಂಗೀತ ಕಾರ್ಯಕ್ರಮ ಹಾಗೂ ಮಧ್ಯಾಹ್ನ 3ರಿಂದ 'ಕರ್ಣಾರ್ಜುನ - ಸುಧನ್ವಾರ್ಜುನ' ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ. ಸಮಾರಂಭಕ್ಕೆ ಆಗಮಿಸುವ 7 ಸಾವಿರಕ್ಕೂ ಅಧಿಕ ಜನರಿಗೆ ಊಟೋಪಚಾರ ಹಾಗೂ ವಾಹನ ನಿಲುಗಡೆಯ ವ್ಯವಸ್ಥೆ ಮಾಡಲಾಗಿದೆ.

ಸಹಕಾರ ಸಿಂಧೂರ' ವಾಣಿಜ್ಯ ಸಂಕೀರ್ಣ

ಜೋಡುರಸ್ತೆಯ ಪ್ರಧಾನ ಕಚೇರಿ ಪಕ್ಕದ 62 ಸೆಂಟ್ಸ್ ನಿವೇಶನದಲ್ಲಿ ಸುಮಾರು 55,000 ಚದರ ಅಡಿ ವಿಸ್ತೀರ್ಣದ ಈ ಬೃಹತ್ ಸಂಕೀರ್ಣ ತಲೆ ಎತ್ತಿದೆ. ಇಲ್ಲಿ ಕಾರ್ಕಳದ ಆರ್ಥಿಕತೆಗೆ ಪೂರಕವಾಗುವಂತಹ ಹೊಸ ಉದ್ಯಮಗಳಿಗೆ ಅವಕಾಶ ನೀಡಲಾಗಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನ

ಅಂಚೆ: ಪೆರಡಾಲ 671551, ಕಾಸರಗೋಡು ತಾಲೂಕು ಮತ್ತು ಜಿಲ್ಲೆ, ಕೇರಳ ರಾಜ್ಯ., ಮೊ. : 9496610794

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ | ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ||

ಕಾಸರಗೋಡು ತಾಲೂಕಿನ ಕುಂಬಳೆ ಸೀಮೆಯ ಅರಸರ ಮುಖ್ಯ ನಾಲ್ಕು ಕ್ಷೇತ್ರಗಳಾದ ಅಡೂರು, ಮಧೂರು, ಕಣಿಯಾರ ಮತ್ತು ಕಾವುಗಳಂತೆಯೇ ಐದನೆಯ ಸ್ಥಾನ ಪೆರಡಾಲದ ಪರಮ ಪಾವನೆಯಾದ ವರದಾ ನದಿಯ ಪಶ್ಚಿಮ ದಂಡೆಯಲ್ಲಿ ಹಚ್ಚ ಹಸುರಾದ ಪ್ರಕೃತಿ ರಮಣೀಯ, ಪ್ರಶಾಂತ ತಾಣದಲ್ಲಿ ಕಂಗೊಳಿಸುತ್ತಿರುವ ಶ್ರೀ ಉದನೇಶ್ವರ ದೇವಾಲಯಕ್ಕಿದೆ ಎಂಬುದು ಊರ ಹಿರಯರ ಅಭಿಪ್ರಾಯವಾಗಿದೆ. ಈ ಕ್ಷೇತ್ರವು ಕಾಸರಗೋಡಿನಿಂದ ಸುಮಾರು 25ಕಿ. ಮೀ ಈಶಾನ್ಯದಲ್ಲಿ ಬದಿಯಡ್ಕ ಬಸ್ ನಿಲ್ದಾಣದಿಂದ 2ಕಿ.ಮೀ ದೂರದಲ್ಲಿದೆ. ಕಾಸರಗೋಡು – ಪುತ್ತೂರು ರಸ್ತೆಯಲ್ಲಿ ಬದಿಯಡ್ಕ ಬಸ್ ನಿಲ್ದಾಣಕ್ಕೆ ತಲಪಲು ಒಂದು ಕಿಲೋ ಮೀಟರು ಇರುವಾಗಲೇ ಪಶ್ಚಿಮಕ್ಕೆ ಒಂದು ಕಿರುರಸ್ತೆ ಇದೆ. ಇದರಲ್ಲಿ ಒಂದು ಕಿಲೋಮೀಟರು ಪ್ರಯಾಣ ಮಾಡಿದರೆ ಶ್ರೀ ಕ್ಷೇತ್ರಕ್ಕೆ ತಲಪಬಹುದು. ಮಂಗಳೂರು – ಕಾಸರಗೋಡು ಹೆದ್ದಾರಿಯಲ್ಲಿರುವ ಕುಂಬಳೆಯಿಂದ ರಸ್ತೆ ಮೂಲಕ ಬದಿಯಡ್ಕಕ್ಕೆ ಪ್ರಯಾಣ ಮಾಡುವಾಗ ಕನ್ಯಪಾಡಿ ಎಂಬಲ್ಲಿಳಿದು 3ಕಿಲೋ ಮೀಟರು ಪೂರ್ವಕ್ಕೆ ಪ್ರಯಾಣಿಸಿದರೂ ಇಲ್ಲಿಗೆ ತಲಪಬಹುದು. ಕಾಸರಗೋಡು, ಕುಂಬಳೆ, ಸುಳ್ಯ, ಪುತ್ತೂರು, ಕಣ್ಣೂರು ಮೊದಲಾದ ಕಡೆಗಳಿಂದ ಬದಿಯಡ್ಕಕ್ಕೆ ಸರಕಾರಿ ಮತ್ತು ಖಾಸಗಿ ಬಸ್ಸುಗಳು ಓಡಾಡುತ್ತವೆ. ಈಗ ವರದಾನದಿ (ಪೆರಡಾಲ ಹೊಳೆ)ಗೆ ದೇವಾಲಯದ ಸಮೀಪವೇ ಸೇತುವೆ ನಿರ್ಮಾಣವಾಗಿರುವುದರಿಂದ ಒಂದು ಮಿನಿ ಬಸ್ಸು ಕಾಸರಗೋಡಿನಿಂದ ಬದಿಯಡ್ಕದ ಮೂಲಕ ಈ ದೇವಾಲಯದ ವರೆಗೆ ದಿನಕ್ಕೆ ನಾಲ್ಕು ಬಾರಿ ಬಂದು ಹೋಗುತ್ತದೆ. ಬದಿಯಡ್ಕದಲ್ಲಿ ಆಟೋರಿಕ್ಷಾ, ಜೀಪು, ಟ್ಯಾಕ್ಸಿ ಮುಂತಾದ ವಾಹನಗಳು ಬಾಡಿಗೆಗೆ ಧಾರಾಳವಾಗಿ ಸಿಗುತ್ತವೆ.

ಕ್ರಿ. ಶ. 13ನೇ ಶತಮಾನದಲ್ಲಿ ಈ ಕ್ಷೇತ್ರ ಅಸ್ತಿತ್ವದಲ್ಲಿತ್ತೆಂದು ಹೇಳಲಾಗುತ್ತಿದ್ದು, ಕ್ಷೇತ್ರದ ಅಧೀನದಲ್ಲಿ ಸುಮಾರು 9ಎಕ್ರೆ ಜಮೀನಿದೆ. ಶ್ರೀ ಕ್ಷೇತ್ರದ ಮುಂಭಾಗದಲ್ಲಿ ವರದಾ ನದಿಯು ಉತ್ತರಾಭಿಮುಖವಾಗಿ ಪ್ರವಹಿಸುತ್ತದೆ. ಕಾರಡ್ಕ ಗ್ರಾಮದ ಮುಂಡೋಡು ಅಂಬಿಕಾ ದೇವಾಲಯದ ಸಮೀಪ ಹುಟ್ಟಿ ಅಂಕು ಡೊಂಕಾಗಿ ಹರಿಯುತ್ತಾ ಕೊನೆಗೆ ಸೀರೆ ಹೊಳೆಯನ್ನು ಸೇರುತ್ತದೆ. ವರದಾ ನದಿಯ ಇಕ್ಕಡೆಗಳಲ್ಲಿ ಸುಮಾರು ಒಂದು ಮೈಲು ದಕ್ಷಿಣೋತ್ತ ರವಾಗಿ ಪಟ್ಟಾಜೆಯಿಂದ ಮಲಿಡಿವು ವರೆಗೆ ವ್ಯಾಪಿಸಿರುವ ಸ್ಥಳವೇ ಪೆರಡಾಲ ವೆಂದು ಕರೆಯಲ್ಪಡುತ್ತದೆ. ಈ ಹೊಳೆಯು ಜಲ ಸಮೃದ್ಧವಾಗಿದ್ದು ಭತ್ತ, ಕಂಗು, ತೆಂಗುಗಳು ಕೃಷಿಗೆ ಆಧಾರವಾಗಿದ್ದುದರಿಂದ ಟಿವರದಾಟಿ ಎಂದೂ ಶ್ರೀ ಉದನೇಶ್ವರ ದೇವಾಲಯದ ನೈಋತ್ಯಕ್ಕಿರುವ ಗುಡ್ಡವನ್ನು ಶಿವನ ವಾಹನವಾದ ವೃಷಭಕ್ಕೆ ಹೋಲಿಸಿ 'ವೃಷಭಾದ್ರಿ' ಎಂದೂ ಒಬ್ಬರು ಕವಿ ತಾವು ರಚಿಸಿದ ಸಂಸ್ಕೃತ ಕಾವ್ಯದಲ್ಲಿ ವರ್ಣಿಸಿರುತ್ತಾರೆ 'ವರದಾಲ' ವರದಾನದಿಯು ಅಲಂಕಾರ ಪ್ರಾಯವಾದ ಪ್ರದೇಶವಾಗಿದೆ. 'ವರದಾಲ' ಎಂಬ ಹೆಸರು ಕ್ರಮೇಣ ಜನರ ಬಾಯಲ್ಲಿ 'ಪೆರಡಾಲ' ಆಗಿರಬೇಕೆಂದು ಊಹಿಸಲಾಗಿದೆ. ಆಂಗ್ಲ ಭಾಷೆಯ ಪ್ರಭಾವವೂ ಈ ಮಾರ್ಪಾಡಿಗೆ ಒಂದು ಕಾರಣವಾಗಿರ ಬಹುದು. ಈ ನದಿಯ ಇಕ್ಕಡೆಗಳಲ್ಲಿಯೂ ಭತ್ತದ ಬಯಲುಗಳೂ, ಕಂಗು ತೆಂಗುಗಳ ತೋಟಗಳೂ ಕಂಗೊಳಿಸುತ್ತಾ ಆ ಪ್ರದೇಶಕ್ಕೆ ಶೋಭೆಯನ್ನು ಕೊಡುತ್ತವೆ.

ಇಲ್ಲಿನ ಶಿವ ಲಿಂಗವು ಶಿಲ್ಪಿಗಳಿಂದ ರಚಿತ ವಾದದ್ದಲ್ಲ. ಈ ಕಡೆಯಿಂದ ಕಾಶಿಗೆ ತೀರ್ಥಯಾತ್ರೆಗೆಂದು ಹೋಗಿದ್ದ ಮಹಾ ತಪಸ್ವಿಯೊಬ್ಬರು ಪವಿತ್ರವಾದ ಗಂಗಾನದಿಯಲ್ಲಿ ಇಳಿದು ಪ್ರಾರ್ಥಿಸಿ ಮುಳುಗಿದಾಗ ಅವರ ಕೈಗೆ ಒಂದು ಶಿವಲಿಂಗ ದೊರೆಯಿತು. ಆದರೆ ಅದು ಸರಿಯಾದ ವೃತ್ತಾ ಕಾರದಲ್ಲಿರದೆ ಎಡ ಬದಿ ಸ್ವಲ್ಪ ಉಬ್ಬಿಕೊಂಡಿದ್ದ ರಿಂದ ನೋಡಲು ಅಷ್ಟು ಸುಂದರವಾಗಿಲ್ಲವೆಂದು ಅವರು ಅದನ್ನು ಪುನಃ ಗಂಗೆಗೆ ಅರ್ಪಿಸಿ ಮತ್ತೊಮ್ಮೆ ಮುಳುಗಿ ದಾಗಲೂ ಅದೇ ಲಿಂಗ ದೊರೆಯಿತು. ಹಲವು ಸಲ ಇದೇ ಪುನರಾವರ್ತನೆ ಯಾದಾಗ ಪೆರಡಾಲಿಗೆ ಈ ಲಿಂಗವೇ ಯೋಗ್ಯವೆಂದು ದೇವರ ಇಚ್ಛೆಯಾಗಿರಬೇಕೆಂದು ಅರಿತು ಆ ತಪಸ್ವಿಗಳೇ ಅದನ್ನು ತಂದು ಇಲ್ಲಿ ಪ್ರತಿಷ್ಠಾಪಿಸಿದರೆಂದೂ, ಅನಂತರ ಊರ ಭಕ್ತ ಜನರೆಲ್ಲರೂ ಒಟ್ಟು ಸೇರಿ ಆದೇ ಸ್ಥಳದಲ್ಲಿ ದೇವಾಲಯವನ್ನು ನಿರ್ಮಿಸಿದರೆಂದೂ ಶ್ರೀ ಉದನೇಶ್ವರನನ್ನು ಆಗಮೋಕ್ತ ರೀತಿಯಿಂದ ಪ್ರತಿಷ್ಠಿಸಿ ಪೂಜಿಸುತ್ತಾ ಬಂದರೆಂದೂ ಹೇಳಲಾಗುತ್ತದೆ.

ಇಲ್ಲಿನ ಶಿವಲಿಂಗವು ಎಡಭಾಗದಲ್ಲಿ ಸ್ವಲ್ಪ ಉಬ್ಬಿದ್ದು ಅರ್ಧನಾರೀಶ್ವರ ಲಕ್ಷಣಗಳಿಂದ ಕೂಡಿರುವುದರಿಂದ ಉಮಾಸಹಿತನಾದ ಈಶ್ವರ ಅಥವಾ ಉದನೇಶ್ವರ (ಉದನೇಶ್ವರ) ಎಂಬ ಹೆಸರು ಬಂತೆಂದೂ ಜನರು ಆಡಿಕೊಳ್ಳುತ್ತಾರೆ. ಉದನೇಶ್ವರ ಎಂಬ ಹೆಸರು ಬೇರೆಲ್ಲಿಯೂ ಕೇಳಿ ಬರುವುದಿಲ್ಲ. ಶಿವಲಿಂಗದ ಈ ವಿಶೇಷತೆಯಿಂದಾಗಿ ಈ ಕ್ಷೇತ್ರವನ್ನು ಶಿವ ಪಾರ್ವತಿಯರ ವಿವಾಹ ಮಂಟಪವೆಂದು ಪರಿಗಣಿಸುತ್ತಾರೆ.

ಉದನೇಶ್ವರ ಎಂಬ ಶಬ್ದಕ್ಕೆ ವಿದ್ವಾಂಸರು ಹಲವಾರು ಅರ್ಥಗಳನ್ನು ಹೇಳುತ್ತಾರೆ. ಮೇಲಕ್ಕೆತ್ತಿ ಮುನ್ನಡೆಸುವ ಈಶ್ವರ ಜೀವಾತ್ಮವನ್ನು ದೇಹವೆಂಬ ಪಂಜರದಿಂದ ಮೇಲಕ್ಕೆತ್ತಿ ಪರಮಾತ್ಮನಲ್ಲಿ ಐಕ್ಯಗೊಳಿಸುವಂತಹ ಮಹಾಶಕ್ತಿಯುಳ್ಳ ದೇವ, ಯೋಗಿ, ಯೋಗೀಶ್ವರ, ಭಕ್ತರನ್ನು ತಾಪತ್ರಯಗಳಿಂದ ಮೇಲಕ್ಕೆತ್ತಿ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವವ, ಪಶುಪತಿ – ಹೀಗೆ ಹಲವಾರು ಅರ್ಥ ಗಳನ್ನು ಕೊಡುತ್ತಾರೆ.ಇಲ್ಲಿನ ಶಿವಲಿಂಗವು ಎಡಭಾಗದಲ್ಲಿ ಸ್ವಲ್ಪ ಉಬ್ಬಿದ್ದು ಅರ್ಧನಾರೀಶ್ವರ ಲಕ್ಷಣಗಳಿಂದ ಕೂಡಿರು ವುದರಿಂದ ಉಮಾ ಸಹಿತನಾದ ಈಶ್ವರ ಅಥವಾ ಉದನೇಶ್ವರ (ಉದನೇಶ್ವರ) ಎಂಬ ಹೆಸರು ಬಂತೆಂದೂ ಜನರು ಆಡಿಕೊಳ್ಳುತ್ತಾರೆ. ಇಂದು ದೇವರಿಗೆ ಬ್ರಹ್ಮಕಲಶೋತ್ಸವ ನಡೆಯಲಿದೆ.





ಆತ್ಮೀಯ ಭಗವದ್ಭಕ್ತರೇ,
ಕಾಸರಗೋಡು ತಾಲೂಕು
ಕುಂಬಳೆ ಸೀಮೆಯ ಇತಿಹಾಸ ಪ್ರಸಿದ್ಧ
ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ
ನವೀಕರಣ ಪುನಃಪ್ರತಿಷ್ಠಾ ಅಷ್ಟಬಂಧ
ಬ್ರಹ್ಮಕಲಶೋತ್ಸವ ಹಾಗೂ
ವರ್ಷಾವಧಿ ಉತ್ಸವವು
ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್ ಶ್ರೀಮದ್ ಎಡನೀರು ಮಠ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಪೂರ್ಣಾನುಗ್ರಹದೊಂದಿಗೆ, ಶ್ರೀಕ್ಷೇತ್ರ ಆಚಾರ್ಯ ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಇವರ ನೇತೃತ್ವದಲ್ಲಿ ಪರಮಪೂಜ್ಯ ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಾಧಿಕಾರಿ ಶ್ರೀಕ್ಷೇತ್ರ ಧರ್ಮಸ್ಥಳ ಇವರ ಮಾರ್ಗದರ್ಶನದಲ್ಲಿ ಸ್ವಸ್ತಿ! ಶ್ರೀ ಪರಾಭವ ನಾಮ ಸಂವತ್ಸರದ ವೈಶಾಖ ಮಾಸ 3ರಿಂದ 14ರ ತನಕ **ದಿನಾಂಕ 17-04-2026 ಶುಕ್ರವಾರ ಮೊದಲ್ಗೊಂಡು 28-04-2026 ಮಂಗಳವಾರದ** ತನಕ ವಿವಿಧ ವೈದಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಶ್ರೀ ಕ್ಷೇತ್ರದ ಸಾನ್ನಿಧ್ಯ ವೃದ್ಧಿ, ಲೋಕಕಲ್ಯಾಣಾರ್ಥವಾಗಿ ಜರಗಲಿರುವ ಈ ಪುಣ್ಯ ಕಾರ್ಯದಲ್ಲಿ ಭಗವದ್ಭಕ್ತರಾದ ತಾವೆಲ್ಲರೂ ಆಗಮಿಸಿ, ಪ್ರಸಾದ ಸ್ವೀಕರಿಸಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಆದರಪೂರ್ವಕ ಆಮಂತ್ರಿಸುತ್ತಿದ್ದೇವೆ.

ಏಪ್ರಿಲ್ 27 ಸೋಮವಾರ ಮತ್ತು ಏಪ್ರಿಲ್ 28 ಮಂಗಳವಾರ
ವರ್ಷಾವಧಿ ಜಾತ್ರಾ ಮಹೋತ್ಸವ

ಕಾರ್ಯಕ್ರಮಗಳು

ತಾ. 26-04-2026ನೇ ರವಿವಾರ : ಪೂರ್ವಾಹ್ನ 5ರಿಂದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಗಳವರ ದಿವ್ಯ ಉಪಸ್ಥಿತಿಯಲ್ಲಿ 'ಸಹಸ್ರ ಕಲಶಾಭಿಷೇಕ-ಬ್ರಹ್ಮ ಕಲಶಾಭಿಷೇಕ'. ಪೂರ್ವಾಹ್ನ 11-30ಕ್ಕೆ ಆಶೀರ್ವಚನ : ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಶ್ರೀ ಸಂಸ್ಥಾನ ಗೋಕರ್ಣ, ಶ್ರೀರಾಮಚಂದ್ರಪುರ ಮಠ. ಸಂಜೆ 4.30ರಿಂದ ಧಾರ್ಮಿಕ ಸಭೆ: ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನಮ್, ಶ್ರೀಮದ್ ಎಡನೀರು ಮಠ. ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಶ್ರೀ ಗುರುದೇವದತ್ತ ಸಂಸ್ಥಾನಮ್, ಶ್ರೀಕ್ಷೇತ್ರ ಒಡಿಯೂರು. ಸಂಜೆ 7ರಿಂದ ದೇವರ ಉತ್ಸವ ಬಲಿ. ರಾತ್ರಿ ಮಹಾಪೂಜೆ, ಪ್ರಸಾದ ವಿತರಣೆ. ರಾತ್ರಿ 9ರಿಂದ 'ವಯೋಲಿನ್ ಫ್ಯೂಷನ್-ಗಂಗಾ ತರಂಗಂ' ಕು। ಗಂಗಾ ಶಶಿಧರನ್ ತ್ರಿಶೂರು ಮತ್ತು ಬಳಗದವರಿಂದ.

ವರ್ಷಾವಧಿ ಉತ್ಸವ : ತಾ. 27-04-2026ನೇ ಸೋಮವಾರ : ಮಧ್ಯಾಹ್ನ 12ರಿಂದ ತುಲಾಭಾರ, ರಾತ್ರಿ 9ರಿಂದ ಶ್ರೀ ಭೂತಬಲಿ ಉತ್ಸವ, ಬೆಡಿಸೇವೆ. ಅಪರಾಹ್ನ 5ರಿಂದ : ವಯಲಿನ್ – ಖ್ಯಾತ ಅಂತರಾಷ್ಟ್ರೀಯ ವಯಲಿನ್ ವಾದಕರು, ಕೆ.ಜೆ. ದಿಲೀಪ್ ಜೇನುಮೂಲೆ, ಚೆನ್ನೈ ಮತ್ತು ಬಳಗದವರಿಂದ. ರಾತ್ರಿ 7.30ರಿಂದ ಶ್ರೀ ಪೆರ್ಡೂರು ಮೇಳದವರಿಂದ ಯಕ್ಷಗಾನ ಬಯಲಾಟ – 'ಶ್ರೀ ಶನೀಶ್ವರ ಮಹಾತ್ಮೆ' ತಾ. 28-04-2026ನೇ ಮಂಗಳವಾರ : ಬೆಳಿಗ್ಗೆ 10ರಿಂದ ಶ್ರೀ ದೇವರ ಬಲಿ ಉತ್ಸವ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಮಧ್ಯಾಹ್ನ 12.30ರಿಂದ : ಶ್ರೀ ಪಿಲಿಚಾಮುಂಡಿ ದೈವದ ಕೋಲ.

■ ಸಂಯೋಜನೆ : ರಾದೇಶ ಕಿದೂರ್, ಚಿತ್ರ : ವರ್ಣ ಸ್ಟುಡಿಯೋ, ನೀರ್ಚಾಲು, ಅಶ್ವಿನಿ ಸ್ಟುಡಿಯೋ, ಬದಿಯಡ್ಕ

ಶ್ರೀ ಉದನೇಶ್ವರ ದೇವರ ಚರಣಾರವಿಂದಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು



ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು
ಶ್ರೀ ಕ್ಷೇತ್ರ ತಂತ್ರಿವರ್ಯರು



ಶ್ರೀ ಜಗನ್ನಾಥ ರೈ ಮತ್ತು ಶ್ರೀಮತಿ ವಿನಯ ಪೆರಡಾಲಗುತ್ತು
ಮೊಕ್ತೇಸರರು ಹಾಗೂ ಕಾರ್ಯಾಧ್ಯಕ್ಷರು
ಬ್ರಹ್ಮಕಲಶೋತ್ಸವ ಸಮಿತಿ ಹಾಗೂ ಮಹಿಳಾ ಸಮಿತಿ ಅಧ್ಯಕ್ಷೆ
ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ
ಶಾಶ್ವತ್ ಮತ್ತು ಶ್ರೇಯಸ್



ಶ್ರೀ ಗಣಪತಿ ಪ್ರಸಾದ್ ಮತ್ತು ಶ್ರೀಮತಿ ವಸಂತಿ ಕೆ.
ಅಧ್ಯಕ್ಷರು, ಪೆರಡಾಲ ಸೇವಾ ಸಹಕಾರಿ ಬ್ಯಾಂಕ್
ಸಹಕಾರ ಭಾರತೀ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ



ಶ್ರೀ ಕೃಷ್ಣಮೂರ್ತಿ ಪುದುಕೋಳಿ (ಜ್ಯೋತಿಷ್ಯರು)
ಅಧ್ಯಕ್ಷರು ಬ್ರಹ್ಮ ಕಲಶೋತ್ಸವ
ಹೊರೆ ಕಾಣಿಕೆ ಸಮಿತಿ, ಪೆರಡಾಲ



ಶ್ರೀ ಶಂಕರನಾರಾಯಣ ಮಯ್ಯ
ಉಪಾಧ್ಯಕ್ಷರು
ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ



ಡಾ.ಶ್ರೀನಿಧಿ ಸರಳಾಯ ಬದಿಯಡ್ಕ
ಉಪಾಧ್ಯಕ್ಷರು,
ಬ್ರಹ್ಮಕಲಶೋತ್ಸವ ಸಮಿತಿ, ಪೆರಡಾಲ



ಶ್ರೀ ಜಯಪ್ರಕಾಶ್ ಶೆಟ್ಟಿ ಕಡಾರುಬೀಡು ಮನೆಯವರು
ಉಪಾಧ್ಯಕ್ಷರು
ಬ್ರಹ್ಮಕಲಶೋತ್ಸವ ಸಮಿತಿ ಪೆರಡಾಲ





ಶ್ರೀ ವೀರಾಂಜನೇಯ ಕಳರೀ ವ್ಯಾಯಾಮ ಶಾಲೆ
ಹನುಮಾನ್ ನಗರ, ಏಣಿಯರ್ಪು ನೀರ್ಚಾಲು, ಬೇಳ



ರಾಜೇಶ್ ಮಾಸ್ಟರ್ ಅಗಲ್ಪಾಡಿ
ಪ್ರಧಾನ ಸಂಚಾಲಕರು, ಸಾಂಸ್ಕೃತಿಕ ಸಮಿತಿ
ಪೆರಡಾಲ ಬ್ರಹ್ಮಕಲಶೋತ್ಸವ ಸಮಿತಿ



ಶ್ರೀ ಹರಿನಾರಾಯಣ ಮಾಸ್ಟರ್ ಶಿರಂತಡ್ಕ
ಪ್ರಧಾನ ಕಾರ್ಯದರ್ಶಿ, ಶ್ರೀ ಕ್ಷೇತ್ರ ನಾರಂಪಾಡಿ



ಶ್ರೀ ನಿರಂಜನ್ ರೈ, ಶ್ರೀಮತಿ ದಿವ್ಯಾಶ್ರೀ ಪೆರಡಾಲಗುತ್ತು
ಮಾ। ಧ್ಯಾನ್ ರೈ
ಪ್ರಧಾನ ಕಾರ್ಯದರ್ಶಿ ಪೆರಡಾಲ ಬ್ರಹ್ಮಕಲಶೋತ್ಸವ ಸಮಿತಿ



ಶ್ರೀಮತಿ ಅಶ್ವಿನಿ ಕೆ ಎಂ
ಸ್ವಾಗತ ಸಮಿತಿ ಸದಸ್ಯರು,
ಬ್ರಹ್ಮಕಲಶೋತ್ಸವ ಸಮಿತಿ
ಉಪಾಧ್ಯಕ್ಷರು ಬದಿಯಡ್ಕ ಗ್ರಾಮ ಪಂಚಾಯತ್



ಶ್ರೀ ವೆಂಕಟರಮಣ ಭಟ್ ಪುದ್ಯೋಡು
ಶ್ರೀಮತಿ ಸಂಧ್ಯಾಪಾರ್ವತಿ ಪುದ್ಯೋಡು
M/s Sri DurgaDinner Sol
Parekar Complex, Badiadka
Paradala, Kasaragod
M: 9446283251
ನಮ್ಮಲ್ಲಿ ಎಲ್ಲಾ ಸಮಾರಂಭಗಳಿಗೆ ಬೇಕಾದ ಪಾತ್ರೆಗಳು ಲಭ್ಯವಿವೆ (ಸ್ವಾಹಾರ ತಯಾರಿಗೆ ಮಾತ್ರ) ಗ್ಯಾಸ್ ಸ್ಟೌವ್ ಗ್ರೈಂಡರ್, ಕುರ್ಚಿ, ಮೇಜು, ಶಾಮಿಯಾನ, ಮತ್ತು ಚಪ್ಪರದ ಟಿನ್‌ಶೀಟ್‌ಗಳು ಬಾಡಿಗೆಗೆ ದೊರೆಯುತ್ತವೆ.



ಶ್ರೀ ಗೋಪಾಲ ಭಟ್ ಪಟ್ಟಾಜೆ
ಮಾಜಿ ಆಡಳಿತ ಮೊಕ್ತೇಸರರು
ಶ್ರೀ ಕ್ಷೇತ್ರ ಕಾರ್ಮಾರು



ಜಲಜಾಕ್ಷಿ ಪಿ.
ಬ್ರಹ್ಮಕಲಶೋತ್ಸವ ಸಮಿತಿ ಸದಸ್ಯರು, ಪೆರಡಾಲ



ಶ್ರೀಮತಿ ಹೇಮಾ ಮತ್ತು ಶ್ರೀ ಸದಾಶಿವ ಬಂಗೇರ ಮುರಿಯಂಕೋಡ್ಲು
ಅಧ್ಯಕ್ಷರು, ಉಗ್ರಾಣ ಸಮಿತಿ ಬ್ರಹ್ಮ ಕಲಶೋತ್ಸವ ಸಮಿತಿ ಪೆರಡಾಲ



ಶ್ರೀ ಶ್ಯಾಮಪ್ರಸಾದ ಸರಳಿ
ಬದಿಯಡ್ಕ ಗ್ರಾಮ ಪಂಚಾಯಿತಿ ಸದಸ್ಯರು
(ಕಾರ್ಯದರ್ಶಿ, ಪ್ರಚಾರ ಸಮಿತಿ ಪೆರಡಾಲ)